ಹೊಸತು

ನೆಮ್ಮದಿಯ ನಾಳೆ ನಮ್ಮದು



ಮೇ ೨೦೦೦
ಬೆಲೆ : ರೂ. ೧೦



ಶ್ರಮಿಕರ ಸಂಭ್ರಮದ
ಮೇ ದಿನ

ಕಾಯಕವೇ ಕೈಲಾಸ



ಹೊಸತು

ಒಳಗೇನಿದೆ.....

ಚಿತ್ರಗಳು : ಗುಜ್ಜಾರ್, ಮೋಹನ, ಹಾದಿಮನಿ, ರವಿಕುಮಾರ್ ಅಜ್ಜೀಪುರ, ಹರಿಣಿ
ಮುಖಪುಟ ಚಿತ್ರ : ಶ್ರೀ ದೇವಿಪ್ರಸಾದ್ ರಾಯ್ ಚೌಧುರಿಯವರ 'ಶ್ರಮದ ವಿಜಯ' ಶಿಲ್ಪ. ಛಾಯಾಚಿತ್ರ : ಕೆ.ಪಿ. ಸ್ವಾಮಿ
ವಿನ್ಯಾಸ : ನವಕರ್ನಾಟಕ ವಿನ್ಯಾಸ ಕಚೇರಿ ಸಹಕಾರ : ಜಿ. ವಿ. ತೇಜೋವತಿ

ಪ್ರಜಾಪ್ರಭುತ್ವದಲ್ಲಿ ಮುಕ್ತ ವ್ಯವಹಾರ, ಪಾರದರ್ಶಕತೆ, ಇತ್ಯಾದಿಗಳ ಮಹತ್ವದ ಬಗ್ಗೆ ಮಾತನಾಡದಿರುವ ಮಂತ್ರಿಗಳು ದುರ್ಲಭ. ಇತ್ತೀಚೆಗೆ ಅದರ ಬಗ್ಗೆ ವಿಚಾರಗೋಷ್ಠಿಯಲ್ಲಿ ರಾಜ್ಯದ ವಾರ್ತಾ ಸಚಿವರು ಅನೇಕ ಪ್ರಸ್ತಾವಗಳನ್ನು ಮುಂದಿಟ್ಟರು. ನಮ್ಮ ಮುಖ್ಯ ಮಂತ್ರಿಯವರು ಕೂಡ ಇದರಲ್ಲಿ ಹಿಂದೆ ಬಿದ್ದವರಲ್ಲ, ಅವರ ಹಾರ್ವರ್ಡ್ ಹಿನ್ನೆಲೆಯ ಫಲ ಇದು ಎನ್ನೋಣವೆ?

ಮಾತು ಬೇರೆ, ವ್ಯವಹಾರ ಬೇರೆ. ಇದೇ ಫೆಬ್ರವರಿ ೨೧ರಂದು ಲೋಕೋಪಯೋಗಿ ಇಲಾಖೆ ಸಚಿವರಾದ ಮಾನ್ಯ ಶ್ರೀ ಧರ್ಮಸಿಂಗ್ ಅವರಿಗೆ 'ಹೊಸತು' ಒಂದು ಪತ್ರ ಬರೆಯಿತು. ಪತ್ರವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ:

ಮಾನ್ಯರೆ,

ಶ್ರೀ ಎಸ್. ಎಂ. ಕೃಷ್ಣ ಅವರನ್ನು ಮುಖ್ಯಮಂತ್ರಿಗಳಾಗಿ ಕಾಂಗ್ರೆಸ್ ಶಾಸಕಾಂಗ ಪಕ್ಷವು ಆಯ್ಕೆ ಮಾಡಿದ ಮೇಲೆ, ಮುಖ್ಯಮಂತ್ರಿಗಳ ಅಧಿಕೃತ ನಿವಾಸ ಸರ್ಕಾರಿ ಕಟ್ಟಡ "ಅನುಗ್ರಹ"ವನ್ನು ಮುಖ್ಯಮಂತ್ರಿಗಳ 'ವಾಸ್ತು' ನಂಬುಗೆಗೆ ಅನುಗುಣವಾಗಿ ಕಿತ್ತು ಕಟ್ಟಿಸುತ್ತಿರುವುದಾಗಿ ಪತ್ರಿಕೆಗಳಲ್ಲಿ ದೊಡ್ಡ ಸುದ್ದಿಯಾಗಿತ್ತು. ಹಾಗೆ ಸರ್ಕಾರಿ ಕಟ್ಟಡವನ್ನು ಕಿತ್ತು ಕಟ್ಟಿಸಲು 50-60 ಲಕ್ಷ ರೂ.ಗಳು ಸರ್ಕಾರಿ ಖಜಾನೆಯಿಂದ ಖರ್ಚಾಗಿರಬಹುದೆಂದೂ ವ್ಯಾಪಕವಾದ ಸುದ್ದಿ ಹಬ್ಬಿತ್ತು.

ಮುಖ್ಯಮಂತ್ರಿಗಳು 'ಅನುಗ್ರಹ'ದಲ್ಲಿ ವಾಸಿಸಲು ಪ್ರಾರಂಭಿಸಿದ ತರುವಾಯ ಅವರು ಒಂದು ಪತ್ರಿಕಾ ಸಂದರ್ಶನದಲ್ಲಿ ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರವಾಗಿ, ತಮಗೆ ವಾಸ್ತುವಿನಲ್ಲಿ ನಂಬುಗೆ ಇರುವುದಾಗಿಯೂ, ಆ ನಂಬುಗೆಗೆ ಅನುಗುಣವಾಗಿ 'ಅನುಗ್ರಹ'ವನ್ನು "ರಿಪೇರಿ" ಮಾಡಲಾಯಿತೆಂದೂ, ಅದಕ್ಕಾಗಿ ಕೇವಲ ಹದಿನಾರು ಲಕ್ಷ ರೂ.ಗಳು ಮಾತ್ರ ಸರ್ಕಾರಿ ಖಜಾನೆಯಿಂದ ಖರ್ಚಾಗಿದೆಯೆಂದೂ ಹೇಳಿದ್ದು ಪತ್ರಿಕೆಗಳಲ್ಲಿ ಪ್ರಕಟವಾಯಿತು. ದೂರದರ್ಶನದಿಂದಲೂ ಬಿತ್ತರಿಸಲಾಯಿತು. ಈ ವಿಚಾರವಾಗಿ ನಾಡಿನ ವಿಚಾರವಂತರು ಪತ್ರಿಕೆಗಳಿಗೆ ಹೇಳಿಕೆಗಳನ್ನು ಕೊಟ್ಟಿದ್ದಾರೆ, ಲೇಖನ ಬರೆದಿದ್ದಾರೆ.

ಈ ಸರ್ಕಾರಿ ಕಟ್ಟಡದ 'ರಿಪೇರಿ', 'ನವೀಕರಣ', 'ಉಚಿತ ಬದಲಾವಣೆ' ಇತ್ಯಾದಿ ಬಾಬುಗಳಿಗಾಗಿ ಸರ್ಕಾರಿ ಖಜಾನೆಯಿಂದ ಎಷ್ಟು, ಹೇಗೆ ಮತ್ತು ಏಕೆ ವೆಚ್ಚವಾಯಿತು ಎಂಬುದನ್ನು ರಾಜ್ಯಕ್ಕೆ ತೆರಿಗೆ, ಕರ, ಸುಂಕ, ಕಂದಾಯ..... ಇತ್ಯಾದಿಗಳನ್ನು ಕೊಡುವ ಪ್ರಜೆಗಳಿಗೆ ಸರಿಯಾದ ಮಾಹಿತಿಯನ್ನು ಪ್ರಕಟಿಸಿ ತಿಳಿಸುವುದು ಪತ್ರಿಕಾ ನೀತಿ ಮತ್ತು ಕರ್ತವ್ಯ. ಪ್ರಜೆಗಳಿಗೆ ತಿಳಿಯುವ ಹಕ್ಕೂ ಇದೆ. ನಮ್ಮ ಪತ್ರಿಕೆ ಈ ವಿಚಾರವಾಗಿ ತನ್ನ ಕರ್ತವ್ಯ (Discharge the duty to inform) ನಿರ್ವಹಣೆಯ ದೃಷ್ಟಿಯಿಂದ ಸಾರ್ವಜನಿಕರಿಗೆ, ಪ್ರಜೆಗಳಿಗಿರುವ ತಿಳಿಯುವ ಹಕ್ಕನ್ನು (Right to know) ಎತ್ತಿ ಹಿಡಿಯುವುದಕ್ಕಾಗಿ ಲೇಖನವನ್ನು ಪ್ರಕಟಿಸುವ ಉದ್ದೇಶ ಹೊಂದಿದೆ.

ಆದ್ದರಿಂದ ನೀವು ದಯವಿಟ್ಟು ಈ ಕೆಳಗಿನ ಮಾಹಿತಿಯನ್ನು ಸಾರ್ವಜನಿಕರ ಹಿತಕ್ಕಾಗಿ, ನಮ್ಮ ಪತ್ರಿಕಾ ಕರ್ತವ್ಯ ನಿರ್ವಹಣೆಗಾಗಿ ನಮಗೆ ಒದಗಿಸಬೇಕೆಂದು ವಿನಂತಿ.

1. 'ಅನುಗ್ರಹ' ವಸತಿಗೃಹದಲ್ಲಿ ಮೊದಲಿದ್ದ ಅನುಕೂಲತೆಗಳೇನು? ಅವುಗಳಲ್ಲಿದ್ದ ಕೊರತೆಯೇನು? ಅದನ್ನು ಕಿತ್ತು ಕಟ್ಟಿಸುವ ವರದಿಯನ್ನು ಏಕೆ ಮತ್ತು ಯಾರು ತಯಾರಿಸಿದರು? ಅದರ ನೀಲ ನಕ್ಷೆ ಸಹಿತ ಒದಗಿಸಿರಿ. 2. 1999ರ ಅಕ್ಟೋಬರ್‌ನಿಂದ 2000 ಇಸ್ವಿ ಜನವರಿವರೆಗೆ ಸದರಿ 'ಅನುಗ್ರಹ' ಕಟ್ಟಡವನ್ನು ಕಿತ್ತು ಕಟ್ಟಿಸುವಾಗ 'ರಿಪೇರಿ', 'ನವೀಕರಣ', 'ಬದಲಾವಣೆ'ಗಳಿಗಾಗಿ ವೆಚ್ಚವಾಗಿರುವ ಮೊತ್ತವೆಷ್ಟು? ಯಾವ ಯಾವ ಬಾಬುಗಳಿಗಾಗಿ ಎಷ್ಟೆಷ್ಟು? 'ರಿಪೇರಿ'ಗಿಂತ ಮೊದಲಿದ್ದ ನೀಲ ನಕ್ಷೆ ಮತ್ತು ಬದಲಾವಣೆ ಮಾಡಿದ ಮೇಲೆ ನೀಲ ನಕ್ಷೆಯನ್ನು ಒದಗಿಸಲು ವಿನಂತಿ. 3. ಈ ರಿಪೇರಿ, ಬದಲಾವಣೆ, ನವೀಕರಣ ಮಾಡಿದ ಕಂಟ್ರಾಕ್ಟರ್ ಯಾರು? 4. ಸಂಬಂಧಿಸಿದ ದಸ್ತಾವೇಜುಗಳ ಪ್ರತಿಗಳನ್ನು ಕೊಡಿ ಅಥವಾ ನೋಡಲು ಅವಕಾಶ ಕೊಡಿ.

ಇದರ ಪ್ರತಿಯನ್ನು ಅವಗಾಹನೆಗಾಗಿ ಮತ್ತು ಸೂಕ್ತ ನಿರ್ದೇಶನವನ್ನು ಕೋರಿ ಮಾನ್ಯ ಮುಖ್ಯಮಂತ್ರಿ ಶ್ರೀ ಎಸ್. ಎಂ. ಕೃಷ್ಣ ಅವರಿಗೆ ಕಳಿಸಲಾಗಿತ್ತು. ಅಂತೆಯೇ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶ್ರೀ. ಬಿ. ಕೆ. ಭಟ್ಟಾಚಾರ್ಯರಿಗೂ ಕಳಿಸಲಾಗಿತ್ತು. ಈವರೆಗೆ ಯಾರಿಂದಲೂ ನಮ್ಮ ಪತ್ರಕ್ಕೆ ಉತ್ತರ ಬಂದಿಲ್ಲ. ಮಾರ್ಚ್ ೧೩ರಂದು ಈ ಬಗ್ಗೆ ಸಂಬಂಧಪಟ್ಟ ಸಚಿವರಿಗೆ ಹಾಗೂ ಇತರರಿಗೆ ಜ್ಞಾಪನಾಪತ್ರವನ್ನು ಕಳಿಸಲಾಗಿದೆ. ಆದರೂ ಗಾಢನಿದ್ರೆಯಲ್ಲಿರುವ ಸರ್ಕಾರ ಉತ್ತರ ಅನುಗ್ರಹಿಸಿಲ್ಲ. ಇದು ಎಚ್ಚರವಾಗಿರುವಾಗಿನ ನಿದ್ರೆಯಾಗಿಲ್ಲದಿದ್ದರೆ ಅವರು ಎದ್ದು ಉತ್ತರ ಕೊಡುತ್ತಿದ್ದರೆಂದು ಭಾವಿಸಬಹುದಾಗಿದೆ.

ಮಾಹಿತಿ ಸ್ವಾತಂತ್ರ್ಯವನ್ನು ಹಾಡಿ ಹೊಗಳುವ ನಮ್ಮ ನಾಯಕಮಣಿಗಳ ನಿಜವಾದ ವ್ಯಕ್ತಿತ್ವ ಇದರಿಂದ ಗೊತ್ತಾಗುತ್ತದೆ. ಹಾಗೆಂದು ನಾವು ಸುಮ್ಮನಿರುವಂತಿಲ್ಲ, ಸಾರ್ವಜನಿಕರೂ ಅಷ್ಟೆ.



ಸಂಪುಟ-೧ ಸಂಚಿಕೆ - ೧೦ ಮೇ ೨೦೦೦

ಪ್ರಧಾನ ಸಂಪಾದಕ

ಜಿ. ರಾಮಕೃಷ್ಣ

ಸಂಪಾದಕ ಮಂಡಲಿ

ಸಿ. ಆರ್. ಕೃಷ್ಣರಾವ್
ಎನ್. ಗಾಯತ್ರಿ
ಬಿ. ಜಿ. ಗುಜ್ಜಾರಪ್ಪ
ಎಸ್. ಗುರುದತ್
ಮಲ್ಲೇಪುರಂ ಜಿ. ವೆಂಕಟೇಶ್
ಬಿ. ವಿ. ವೀರಭದ್ರಪ್ಪ
ಕೆ. ಪಿ. ಸ್ವಾಮಿ

ವ್ಯವಸ್ಥಾಪಕರು

ಎಸ್. ಸುರೇಂದ್ರ
ಎ. ಆರ್. ಉಡುಪ


ಮುದ್ರಕ-ಪ್ರಕಾಶಕ

ಆರ್. ಎಸ್. ರಾಜಾರಾಮ್
ವ್ಯವಸ್ಥಾಪಕ ನಿರ್ದೇಶಕ
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿ.

ಮುದ್ರಣ

ನವಕರ್ನಾಟಕ ಪ್ರಿಂಟರ್ಸ್
೧೬೭ ಮತ್ತು ೧೬೮, ೧೦ನೇ ಮುಖ್ಯ ರಸ್ತೆ
೩ನೇ ಘಟ್ಟ, ಪೀಣ್ಯ ಕೈಗಾರಿಕಾ ಪ್ರದೇಶ
ಬೆಂಗಳೂರು - ೫೬೦ ೦೫೮
ದೂರವಾಣಿ : ೮೩೯೭೪೬೭

ಹೊಸತು ಕಚೇರಿಯ ವಿಳಾಸ



ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
೧೫, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಅಂ. ಪೆ. ೫೧೫೯
ಕುಮಾರ ಪಾರ್ಕ್ ಪೂರ್ವ, ಬೆಂಗಳೂರು - ೫೬೦ ೦೦೧
ದೂರವಾಣಿ / ಫ್ಯಾಕ್ಸ್ : ೨೨೦೩೫೮೦ / ೮೧ / ೮೨
e-mail : nkp@bgl.vsnl.net.in

ಕಾರ್ಲ್ ಮಾರ್ಕ್ಸ್

೧೮೧೮ರಲ್ಲಿ ಜನಿಸಿ, ತನ್ನ ಮೂವತ್ತನೆಯ ವರ್ಷದಲ್ಲಿ ಫ್ರೆಡರಿಕ್ ಏಂಗಲ್ಸ್ ಒಡಗೂಡಿ ಕಮ್ಯುನಿಸ್ಟ್ ಘೋಷಣಾ ಪತ್ರವನ್ನು ರೂಪಿಸಿದ ಕಾರ್ಲ್ ಮಾರ್ಕ್ಸ್‌ನನ್ನು ಯಾರೂ ಸರ್ವಜ್ಞ ಅಥವಾ ಆರಾಧ್ಯಮೂರ್ತಿ ಎಂದು ಭಾವಿಸಿಲ್ಲ. ಅಂತಹ ಪಟ್ಟ ಗೀತಾಚಾರ್ಯನಂತಹವರಿಗೆ ಮಾತ್ರ ಮೀಸಲು. ''ಭವಿಷ್ಯ ಪುರಾಣ''ವನ್ನು ವರ್ತಮಾನದಲ್ಲಿ ಬರೆಯಲು ಹವಣಿಸುವ ಅಚಾತುರ್ಯ ಮಾರ್ಕ್ಸ್ ತೋರಿಸಲಿಲ್ಲ. ಆದರೆ ಆಯಾಕಾಲದ ಸತ್ಯವನ್ನು ತಿಳಿಯಲು ಬೇಕಾದ ಪರಿಕರಗಳನ್ನು ಒದಗಿಸಿಕೊಟ್ಟ ಕೀರ್ತಿ ಆತನದು.

ಬದಲಾಗುತ್ತಿರುವ ಅಥವಾ ವಿಕಾಸ ಹೊಂದುತ್ತಿರುವ ಸಮಾಜದಲ್ಲಿ ಬದಲಾವಣೆಯ ಸೂತ್ರವು ನಿಯಮ ಬದ್ಧವಾಗಿರುತ್ತದೆಯೆ, ಆ ನಿಯಮ ಯಾವುದು, ಅದನ್ನು ತಿಳಿಯಲು ಸಾಧ್ಯವೆ, ತಿಳಿದರೆ ಅದನ್ನು ಬಳಸಿಕೊಂಡು ಮಧ್ಯಪ್ರವೇಶ ಮಾಡುವುದು ಹೇಗೆ, ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರ ಕೊಡಲು ಯತ್ನಿಸಿದ ಅರ್ಥಶಾಸ್ತ್ರಜ್ಞ- ಸಮಾಜಶಾಸ್ತ್ರಜ್ಞ ಮಾರ್ಕ್ಸ್. ಸೂಕ್ಷ್ಮವಾಗಿ ಗಮನಿಸಬೇಕಾದ ಅಂಶವೆಂದರೆ ಯಾವ ಪರಿಸ್ಥಿತಿಯೂ ಸಾರ್ವಕಾಲಿಕವಲ್ಲ; ಆದ್ದರಿಂದ ಸಾರ್ವಕಾಲಿಕ ವಿವೇಚನೆ ನೀಡಬಹುದೆಂಬ ನಿರೀಕ್ಷೆ ಹುಸಿಯಾದುದು. ಆದರೆ ಯಾವುದೇ ಪರಿಸ್ಥಿತಿಯನ್ನು ಅವಲೋಕಿಸುವ ವಿಧಾನವೊಂದಿದ್ದರೆ ಅದು ಮಹತ್ಸಾಧನೆಯಾಗುತ್ತದೆ.

ರಸಾಯನಶಾಸ್ತ್ರದಂತಹ ಶಿಸ್ತಿನಲ್ಲಿ ವಿಶ್ಲೇಷಣೆಗೆ ಗುರಿಯಾಗುವ ಪದಾರ್ಥ ಅಥವಾ ಪದಾರ್ಥಗಳು ಜೀವಿಗಳಲ್ಲ. ಅವಕ್ಕೆ ತಮ್ಮದೇ ಆದ ಒಂದು ವಿಶಿಷ್ಟ ಮನಸ್ಸಿಲ್ಲ. ಆದ್ದರಿಂದ ಅವುಗಳ ವಿಶ್ಲೇಷಣೆ ಮಾಡಿ ನಿಯಮಗಳನ್ನು ನಿರೂಪಿಸುವುದು ಸಾಧ್ಯವಿದೆ. ಸುಲಭವಲ್ಲ, ಆದರೆ ಸಾಧ್ಯವಿದೆ. ಆ ಶಾಸ್ತ್ರದ ಬೆಳವಣಿಗೆಯೇ ಇದಕ್ಕೆ ನಿದರ್ಶನ. ಸಮಾಜವೆಂಬ ಪದಾರ್ಥದ ವಿಶ್ಲೇಷಣೆ ಇದಕ್ಕೆ ಸಮಾನವಾದುದು; ಆದರೆ ಹೆಚ್ಚು ಸಂಕೀರ್ಣವಾದುದು. ಏಕೆಂದರೆ ಇಲ್ಲಿ ಪಾಲ್ಗೊಳ್ಳುವ ಜೀವಿಗಳಿಗೆ ಒಂದು ಮನಸ್ಸಿದೆ, ವಿಭಿನ್ನ ಆಕಾಂಕ್ಷೆಗಳಿವೆ, ವಿಚಿತ್ರ ವ್ಯಕ್ತಿತ್ವಗಳಿವೆ, ಆಗಾಧ ಕೌಶಲ್ಯಗಳಿವೆ, ಮೂರ್ತ ಮತ್ತು ಅಮೂರ್ತವಾದ ಇನ್ನಿತರ ನೂರಾರು ಅಂಶಗಳಿವೆ, ಭಾವನೆಗಳಿವೆ. ಆದ್ದರಿಂದ ಸಮಾಜದ ವಿಶ್ಲೇಷಣೆಯಿಂದ ಅದನ್ನು ರೂಪಿಸುವ ನಿಯಮಗಳನ್ನು ಇದಮಿತ್ಥಂ ಎಂದು ಕರಾರುವಾಕ್ಕಾಗಿ ಹೇಳಿ ಮುಗಿಸಲು ಸಾಧ್ಯವಿಲ್ಲ. ಅಂತಹ ಸಂಕೀರ್ಣವಾದ ಪ್ರಶ್ನೆಯನ್ನು ಎದುರಿಸ ಹೊರಟಿದ್ದೇ ಬಹುಶಃ ಮಾರ್ಕ್ಸ್‌ನ ಕೀರ್ತಿ.

ಮಾರ್ಕ್ಸ್‌ವಾದಿ ಸಿದ್ಧಾಂತದ ನೆರಳಿನಲ್ಲಿ ರಾಜಕೀಯ ಮಾಡುವುದೆಂದರೆ ಮೂಲತಃ ಅದು ವರ್ಗ ವಿಂಗಡಣೆ ಮತ್ತು ವರ್ಗ ಸಮರಗಳನ್ನು ಆತುಕೊಂಡಿರಬೇಕಾಗುತ್ತದೆ. ಅದನ್ನು ತಳ್ಳಿಹಾಕಿ ಸಮಾಜದ ವೀಕ್ಷಣೆಯನ್ನಾಗಲಿ ಬದಲಾವಣೆಯ ಯತ್ನವನ್ನಾಗಲಿ ಮಾಡಲು ಆಗದೆಂದೇನೂ ಇಲ್ಲ. ಆದರೆ ಹಾಗೆ ಮಾಡಿದಾಗ ಆರ್ಥಿಕ ಸಂರಚನೆಯು ಮಹತ್ವವಿಲ್ಲದ ಅಂಶವಾಗಿಬಿಡುತ್ತದೆ. ಸಮಾಜದಲ್ಲಿ ವ್ಯಕ್ತಿಯ ಹಾಗೂ ವ್ಯಕ್ತಿಗಳ ಗುಂಪುಗಳ ಆಕಾಂಕ್ಷೆಯು ಆರ್ಥಿಕ ಸಂರಚನೆಗೆ ನೇರವಾಗಿ ಸಂಬಂಧಿಸಿರುವಂತಹ ವಿಷಯ. ಹಾಗಿದ್ದಾಗ ಅದನ್ನು ಗೌಣವಾಗಿಸಿ ನಡೆಸಿದ ವಿಮರ್ಶೆ ಸಮಗ್ರವಾಗಲು ಸಾಧ್ಯವಿಲ್ಲ.

ಪ್ರಸ್ತುತ ನಮ್ಮ ಆರ್ಥಿಕ ಸನ್ನಿವೇಶವು ಸ್ವಾವಲಂಬನೆಯ ಕಲ್ಪನೆಗೆ ತೀರಾ ವಿರುದ್ಧವಾಗಿದೆ. ನಮ್ಮ ಕೃಷಿ ಕೈಗಾರಿಕೆಗಳಿಗೆ ಕುತ್ತುಂಟಾಗುವ ಸಂಭವವನ್ನು ಮಾರ್ಕ್ಸ್‌ವಾದವನ್ನು ದೂರದಿಂದಲೂ ಮುಟ್ಟದ ಅನೇಕ ಖ್ಯಾತ ಅರ್ಥಶಾಸ್ತ್ರಜ್ಞರು ಇಂದು ಆತಂಕದಿಂದ ಮನವರಿಕೆ ಮಾಡಿಕೊಡುತ್ತಿದ್ದಾರೆ. ''ಸರ್ವಂ ಕಂಪ್ಯೂಟರ್‌ಮಯಂ ಜಗತ್'' ಎನ್ನುವ ರೀತಿಯಲ್ಲಿ ನಮ್ಮ ವ್ಯವಹಾರಗಳು ಬಾಲಿಶವಾಗತೊಡಗುತ್ತಿವೆ. ಇದರಲ್ಲಿ ಕಡೆಗೆ ಮನುಷ್ಯನಿಗೇ ಸ್ಥಾನವಿಲ್ಲದಂತಹ ಸಂದರ್ಭ. ಅಲ್ಲದೆ, ಎಲ್ಲ ಉತ್ಪಾದನೆಯನ್ನು ಈ ಕಂಪ್ಯೂಟರ್‌ಗಳಿಂದ ನಡೆಸುವ ದಿನಗಳು ನಮ್ಮೆದುರಿನಲ್ಲಿವೆಯೆ? ಬೇರೆ ದೇಶಗಳಿಗೆ ಸಾಫ್ಟ್‌ವೇರ್ ಮಾಡಿಕೊಡುವ ಅಥವಾ ಅವರು ನಿರ್ದೇಶಿಸಿದ ಮಾಹಿತಿಗಳನ್ನು ತುಂಬಿಕೊಡುವ ಉದ್ಯೋಗಗಳು ಸ್ಥಿರ ಉದ್ಯೋಗಗಳಾಗಲಾರವು. ಇಷ್ಟು ಪ್ರಾಥಮಿಕ ಜ್ಞಾನವನ್ನೂ ಹೊಂದದೆ ಆರ್ಥಿಕ ಯೋಜನೆಗಳನ್ನು ರೂಪಿಸಹೊರಟರೆ ಮುಂದಿನ ಪೀಳಿಗೆಯು ನಮ್ಮನ್ನು ಶಪಿಸದೆ ಬಿಡದು.

ರಾಜಕೀಯ ಸನ್ನಿವೇಶವನ್ನು ನೋಡಿದರೆ ಅದು ಆರ್ಥಿಕ ಪರಿಪ್ರೇಕ್ಷ್ಯಕ್ಕೆ ಹೊಂದಿಕೊಂಡಿರುವುದು ಸ್ಪಷ್ಟವಾಗಿದೆ. ಕ್ಲಿಂಟನ್ ಮಹಾಶಯನ ನೇತೃತ್ವವನ್ನು ಮಾನ್ಯಮಾಡುವ ರಾಜಕೀಯವು ನಮ್ಮ ದೇಶದ ಎರಡು ದೊಡ್ಡ ಪಕ್ಷಗಳ ರಾಜಕೀಯವಾಗಿದೆ ಮತ್ತು ಆತನು ಆಜ್ಞಾಪಿಸುವ ಅರ್ಥನೀತಿಯನ್ನು ಈ ಎರಡೂ ಪಕ್ಷಗಳು ಅನ್ವಯಿಸಲು ಹಾತೊರೆಯುತ್ತವೆ. ಇದರಿಂದ ಉಂಟಾಗಿರುವ ಹಾಗೂ ಮುಂದೆ ಉಂಟಾಗುವ ಎಲ್ಲ ಅನರ್ಥಗಳಿಗೂ ಈ ಎರಡೂ ಪಕ್ಷಗಳು ಹೊಣೆಯಾಗುತ್ತವೆ. ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಅಷ್ಟೇನೂ ಭಿನ್ನವಲ್ಲದ ಈ ಎರಡೂ ಪಕ್ಷಗಳನ್ನು ವಿರೋಧಿಸಬೇಕಾದ್ದು ವರ್ಗಸಿದ್ಧಾಂತ ಮತ್ತು ವರ್ಗಹೋರಾಟಗಳಿಗೆ ಅನುಗುಣವಾಗಿರುತ್ತದೆ. ಇಂತಹ ಪ್ರಮುಖ ಚಾರಿತ್ರಿಕ ಸಂಗತಿಯನ್ನು ಮೂಲಭೂತ ಆಶಯವನ್ನಾಗಿಸಿಕೊಳ್ಳಲು ಅಡಚಣೆಯ ರೀತಿಯಲ್ಲಿ ಕೋಮುವಾದೀ ಪ್ರಶ್ನೆಗಳು ಪೆಡಂಭೂತವಾಗಿ ನಿಂತಿವೆ. ಮತಧರ್ಮಗಳ ಜಡ್ಡುತನವನ್ನು ವರ್ಗ ಹೋರಾಟದ ಭಾಗವಾಗಿ ಎದುರಿಸಬೇಕೋ ಅಥವಾ ಅದಕ್ಕೆ ಪರ್ಯಾಯವಾಗಿಯೋ ಎಂಬ ಪ್ರಶ್ನೆ ಇಂದು ಭಾರತದ ಮಾರ್ಕ್ಸ್‌ವಾದಿಗಳ ಮುಂದಿದೆ. ಅಂದರೆ, ಆ ಪ್ರಶ್ನೆ ದುಡಿಯುವ ಜನರ ಪ್ರಶ್ನೆಯಾಗಿದೆ ಎಂದರ್ಥ. ಎರಡನೆಯದಾಗಿ, ಮತೀಯವಾದವೆಂದರೆ ಯಾವುದೋ ಒಂದು ಮತ ದವರ ಮತೀಯತೆಯೋ ಅಥವಾ ಎಲ್ಲ ಮತಗಳವರ ಮತೀಯತೆಯೋ ಎಂಬ ಪ್ರಶ್ನೆಯೂ ಅಷ್ಟೇ ಪ್ರಮುಖವಾದದ್ದು.

ಬೌದ್ಧಿಕ ಪ್ರಪಂಚದಲ್ಲಿ ಕಳೆದ ನೂರೈವತ್ತು ವರ್ಷಗಳಿಂದ ಪ್ರತಿ ದಶಕದಲ್ಲೂ ಮಾರ್ಕ್ಸ್‌ವಾದ ಸತ್ತಿತು, ಅದು ಅಪ್ರಸ್ತುತವಾಯಿತು ಎಂದು ಹೇಳಿಕೊಂಡೇ ಬಂದಿರುವುದು ಸ್ವಾರಸ್ಯದ ಆದರೆ ನಗೆಪಾಟಲಿನ ಮಾತಾಗಿದೆ. ಸತ್ತಿತಾದರೆ ಮತ್ತೆ ಮತ್ತೆ ಏಕೆ ಅದನ್ನು ಬಡಿಯುವ ಹುಚ್ಚು ಎಂಬುದು ಅರ್ಥವಾಗದ ವಿಷಯ. ಅಥವಾ, ಸತ್ತಿತೆನ್ನುವುದು ನಿಜಕ್ಕೂ ಅದು ಇನ್ನೂ ಸತ್ತಿಲ್ಲ, ಬಹುಶಃ ಸಾಯಲಾರದೇನೋ ಎಂಬ ತವಕದಿಂದ ಕಸಿವಿಸಿಗೊಳ್ಳುತ್ತಿದ್ದಾರೆ ಎನ್ನಬಹುದೆ? ಪ್ರತಿ ದಶಕದಲ್ಲೂ ಮಾರ್ಕ್ಸ್‌ವಾದಕ್ಕೆ ಎಂಥದೋ ಪರ್ಯಾಯ ಕಾಣಿಸಿಕೊಂಡಿದೆ, ಆಮೇಲೆ ಹೇಳ ಹೆಸರಿಲ್ಲದೆ ಮರೆಯಾಗಿದೆ. ಈಗ ಅದು ''ಆಧುನಿಕೋತ್ತರತೆ'' ಎಂಬ ಹೆಸರಿನಿಂದ ವಿಜೃಂಭಿಸುತ್ತಿದೆ. ಅದರ ಎಲ್ಲ ಆಯಾಮಗಳನ್ನೂ ಗುರುತಿಸುವ ಗುರುತರ ಕೆಲಸ ಇನ್ನೂ ನಡೆಯಬೇಕಾಗಿದೆ. ಆದರೆ, ಚರಿತ್ರೆಯಿಂದ ನಾವು ಕಲಿಯಬಹುದಾದ್ದೇನೂ ಇಲ್ಲ, ಏಕೆಂದರೆ ಅದು ಸಾರ್ವತ್ರಿಕವಾಗಿ

ಅನ್ವಯವಾಗುವ ಘಟನೆಯಲ್ಲ, ಎಂಬ ಉದ್ಗಾರ ಆಧುನಿಕೋತ್ತರತೆಯ ತಿರುಳಿನಂತೆ ಆಗಾಗ್ಗೆ ನಮ್ಮ ಮುಂದೆ ಬರುತ್ತಿದೆ. ಅಂದರೆ ವಿಜ್ಞಾನವು ಸತ್ಯಕ್ಕೆ ಆಕರವಲ್ಲವೆಂಬ ಸಿದ್ಧಾಂತವೂ ಒಂದರ್ಥದಲ್ಲಿ ಈ ಪ್ರತಿಭೆಯ ಕೊಡುಗೆಯೇ ಆಗಿದೆ. ಸಾಂಪ್ರದಾಯಿಕ ಮೌಢ್ಯಕ್ಕೆ ಆದ್ಯತೆ ನೀಡುವುದು ಪ್ರಮಾದವಲ್ಲ ಎಂಬ ಗ್ರಹಿಕೆ.

ಬೌದ್ಧಿಕ ಸಂಘರ್ಷವೂ ಸೇರಿದಂತೆ ವರ್ಗಸಿದ್ಧಾಂತದ ನೈಜ ಆಧಾರದ ಮೇಲಿನ ವಿಚಾರಮಂಥನ ನಮ್ಮಲ್ಲಿ ಇನ್ನೂ ಗಾಢವಾಗಿ ಬೆಳೆಯಬೇಕಾಗಿದೆ. ಮೇ ೫ ಮಾರ್ಕ್ಸ್‌ನ ಜನ್ಮದಿನ. ಆ ಸಂದರ್ಭದಲ್ಲಿ ಇದನ್ನೆಲ್ಲಾ ಮನನ ಮಾಡೋಣ.

-ಜಿ. ಆರ್.

ಹನುಮಂತ ಹಗ್ಗ ತಿನ್ನುತ್ತಿರುವಾಗ

ಎಲ್ಲ ಶಾಲೆಗಳಲ್ಲಿ ಸಂಸ್ಕೃತ ಕಲಿಕೆಯನ್ನು ಕಡ್ಡಾಯ ಮಾಡಬೇಕೆಂದು ಇತ್ತೀಚೆಗೆ ಸಂಸ್ಕೃತ ಶಿಕ್ಷಕರ ಸಮ್ಮೇಳನದಲ್ಲಿ ಬೇಡಿಕೆ ಮಂಡಿಸಲಾಯಿತಂತೆ. ಸಮ್ಮೇಳನದ ಉದ್ಘಾಟಕರಾಗಿದ್ದ ಡಾ|| ಎಚ್. ನರಸಿಂಹಯ್ಯನವರು ಈ ಸಂದರ್ಭಕ್ಕೆ ಹೊಂದುವ ಹಳೆಯ ಗಾದೆಯೊಂದನ್ನು ಉದಾಹರಿಸಿ ಮಾತನಾಡಿದರೆಂದು ವರದಿಯಾಗಿದೆ (ಪ್ರಜಾವಾಣಿ, ಮಾರ್ಚ್ ೨೭): ''ಹನುಮಂತನೇ ಹಗ್ಗ ತಿನ್ನುತ್ತಿರುವಾಗ ಪೂಜಾರಿ ಶಾವಿಗೆ ಕೇಳಿದ'' ಎಂಬ ಈ ಗಾದೆ, ಸ್ವಲ್ಪ ಬದಲಾವಣೆಯೊಂದಿಗೆ ''ಹನುಮಂತ ಕದ ತಿನ್ನುತ್ತಿರುವಾಗ ಪೂಜಾರಿ ಹಪ್ಪಳ ಕೇಳಿದ'' ಎಂದೂ ಪ್ರಚಾರದಲ್ಲಿದೆ. ಬಹುಶಃ ಮುಂದೆ ಹಪ್ಪಳದ ಜಾಗದಲ್ಲಿ ಚಪಾತಿ ಸೇರಿಸಿ ಪ್ರಚಾರ ಮಾಡಿದರೂ ಮಾಡಬಹುದು. ಶಾವಿಗೆ, ಹಪ್ಪಳ, ಚಪಾತಿಗಳೆಲ್ಲ ಪೂಜಾರಿಗೆ; ಹನುಮಂತನಿಗೆ ಮಾತ್ರ ಹಗ್ಗ ಅಥವಾ ಕದವೇ ಗತಿ.

ಕಂಪ್ಯೂಟರ್, ಇಂಜಿನಿಯರಿಂಗ್, ವೈದ್ಯಕೀಯ ಮುಂತಾದ ಹಣ ದೋಚುವ ವಿದ್ಯೆಯತ್ತ ತರುಣ ಪೀಳಿಗೆ ಆಸಕ್ತಿ ವಹಿಸುತ್ತಿರುವಾಗ ಸಂಸ್ಕೃತ ಯಾರಿಗೆ ಬೇಕು? ಎಂದು ಎಚ್. ಎನ್. ಪ್ರಶ್ನೆ. ಇದು ಶಿಕ್ಷಣ ತಜ್ಞರು ಎತ್ತಲೇಬೇಕಾದ್ದು. 'ಕೋಟಿ ವಿದ್ಯೆಗಳಿಗಿಂತ ಮೇಟಿ ವಿದ್ಯೆಯೇ ಮೇಲು' ಎಂದು ಆಗ ಸರ್ವಜ್ಞ ಹೇಳಿದ. ಎರಡನೆ ಸಹಸ್ರಮಾನದಲ್ಲಿ ನವವಸಾಹತು ಯುಗದಲ್ಲಿ ಅದನ್ನೇ ಸ್ವಲ್ಪ ಬದಲಾವಣೆ ಮಾಡಿ ''ಕೋಟಿ ವಿದ್ಯೆಗಳಿಗಿಂತ ಲೂಟಿ ವಿದ್ಯೆಯೇ ಮೇಲು'' ಎಂದು ಕಂಪ್ಯೂಟರ್ ತಜ್ಞರು ಹೇಳಬಹುದು.

ಶಾವಿಗೆ ಅಥವಾ ಹಪ್ಪಳ ಬಯಸುವ ಪೂಜಾರಿ, ಸಂಸ್ಕೃತವೆಂಬ ಅರ್ಥವಿರುವ ಎಚ್. ಎನ್. ಉವಾಚದಲ್ಲಿ ಹನುಮಂತ ಯಾರು? ಎಂಬುದು ನಿಗೂಢವಾಗಿಯೇ ಉಳಿದಿದೆ. ಈ ಹನುಮಂತ - ಕನ್ನಡ, ಇಂಗ್ಲಿಷ್, ಹಿಂದಿ, ಉರ್ದು ಮುಂತಾದ ಭಾಷೆಗಳಿರಬಹುದು; ಅಥವಾ ಮೂಲ ವಿಜ್ಞಾನಕ್ಕೆ ಸಂಬಂಧಿಸಿದ ಭೌತಶಾಸ್ತ್ರ, ರಸಾಯನ ಶಾಸ್ತ್ರ, ಜೀವವಿಜ್ಞಾನವಿರಬಹುದು; ಅಥವಾ ಚರಿತ್ರೆ, ಭೂಗೋಳ, ಸಮಾಜಶಾಸ್ತ್ರವಿರಬಹುದು. ಏನಿದ್ದರೂ ಇವುಗಳಿಗೆಲ್ಲ ಹನುಮಂತನಿಗೆ ಒದಗಿದ ಹಗ್ಗ ತಿನ್ನುವ ದುರ್ಗತಿ ಒದಗಿದೆ ಎಂಬುದೇನೋ ಸತ್ಯ. ಈ ಹನುಮಂತನ ದುಃಸ್ಥಿತಿಯನ್ನು ಹೋಗಲಾಡಿಸುವ ಜಾಣ ಉಪಾಯವನ್ನು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ|| ಸಿದ್ದಪ್ಪ ಕಂಡು ಹಿಡಿದುಬಿಟ್ಟಿದ್ದಾರೆ. ವಿಶ್ವವಿದ್ಯಾಲಯದ ಎಲ್ಲ ಸ್ನಾತಕೋತ್ತರ ವಿಭಾಗಗಳಲ್ಲಿಯೂ ಕಂಪ್ಯೂಟರ್ ಕಲಿಕೆ ಕಡ್ಡಾಯವಾಗಿಸುವ ಸಿದ್ಧತೆ ಈಗಾಗಲೇ ತರಾತುರಿಯಿಂದ ನಡೆಯುತ್ತಿದೆ. 'ಸರ್ವ ರೋಗಾನಿಕಿ ಸಾರಾಯಿ ಮದ್ದು' ಎಂಬಂತೆ ಶಿಕ್ಷಣ ಕ್ಷೇತ್ರದ ಎಲ್ಲ ಕೊರತೆಗಳನ್ನು ಕಂಪ್ಯೂಟರೆಂಬ ಸಾರಾಯಿ ಕುಡಿದು ಬಗೆಹರಿಸಿಕೊಳ್ಳಬಹುದೆಂಬ ವಿಚಾರ ಅವರದು. ರೋಗ ವಾಸಿಯಾಗದಿದ್ದರೂ ತಾತ್ಕಾಲಿಕವಾಗಿ ಸಾರಾಯಿ ಮತ್ತಿನಿಂದ ನೋವು ಕಡಿಮೆಯಾಗುತ್ತದೆ ತಾನೇ? ಅಲ್ಲದೆ, ಇನ್ನು ಮುಂದೆ ವಿಶ್ವವಿದ್ಯಾಲಯಗಳಲ್ಲಿ ವೈವಿಧ್ಯತೆಗಳೇನೂ ಉಳಿಯುವುದಿಲ್ಲವೆಂದಂತಾಯಿತು. ಅಡುಗೆ ಮನೆಯಲ್ಲಿ ಎಲ್ಲ ಖಾದ್ಯ ತಯಾರಿಕೆಯನ್ನೂ ನಿಲ್ಲಿಸಿ ಕೇವಲ ಶಾವಿಗೆಯನ್ನು ಮಾತ್ರ ಬೇಯಿಸಿದಂತೆ; ಅಥವಾ ಏನು ಅಡುಗೆ ಮಾಡಿದರೂ ಅದರೊಂದಿಗೆ ಶಾವಿಗೆ ಬೆರೆಸುವುದನ್ನು ಕಡ್ಡಾಯ ಮಾಡಿದಂತೆ.

ಇನ್ನು ಸಂಸ್ಕೃತದ ವಿಚಾರಕ್ಕೆ ಬರೋಣ. ಉದ್ದೇಶಪೂರ್ವಕವಾಗಿಯೋ ಆಕಸ್ಮಾತ್ತಾಗಿಯೋ ಎಚ್. ಎನ್. ರವರು ಸಂಸ್ಕೃತವನ್ನು ಪೂಜಾರಿಗೆ ಹೋಲಿಸಿಬಿಟ್ಟಿದ್ದಾರೆ. ಸಂಸ್ಕೃತ ಮತ್ತು ಪೂಜಾರಿಗಳಿಗಿರುವ ಸಂಬಂಧ ಸಾವಿರಾರು ವರ್ಷಗಳಿಂದಲೂ ಬೆಸೆದುಕೊಂಡು ಬಂದಿದೆಯಲ್ಲವೇ? ಕನ್ನಡ, ತೆಲುಗು, ತಮಿಳು, ಮಲೆಯಾಳ ಮುಂತಾದ ದೇಸಿ ಭಾಷೆಗಳು ಮೂಲದೇವರಾದ ಹನುಮಂತನಂತೆ ಎಂದಿನಿಂದಲೂ ಹಗ್ಗ ತಿನ್ನುತ್ತಲೇ ಕಾಲ ಕಳೆದಿವೆ. ಪೂಜಾರಿ ಮತ್ತು ಅವನ ಭಾಷೆಯಾದ ಸಂಸ್ಕೃತಕ್ಕೆ ಶಾವಿಗೆ, ಖೀರು, ತುಪ್ಪ, ಮುಂತಾದವು ದಕ್ಕಿವೆ. ದೇವರಿಗೆ ತೋರಿಸಿ ತಾನೇ ತಿನ್ನುತ್ತಿದ್ದ ಪೂಜಾರಿಯ ಹಕ್ಕಿಗೆ ಚ್ಯುತಿ ಬಂದದ್ದು ಈ ದೇಶಕ್ಕೆ ಇಂಗ್ಲಿಷ್ ಬಂದ ಮೇಲೆ. ಹೊಸ ವೇಷ ಭೂಷಣಗಳೊಂದಿಗೆ ಪಶ್ಚಿಮದಿಂದ ಆಗಮಿಸಿದ ಈ ನೂತನ ಪೂಜಾರಿಯ ವಂಶಸ್ಥರು ಹಳೆ ಪೂಜಾರಿಯನ್ನು ಪದಚ್ಯುತಗೊಳಿಸಿ ಅಥವಾ ಗುಡಿಯೊಳಗೆ ಕೂಡಿ ಹಾಕಿ ಎಲ್ಲ ಅಧಿಕಾರವನ್ನೂ ತಾವೇ ವಹಿಸಿಕೊಂಡರು. ಹಳೇ ಪೂಜಾರಿಗೆ ಗುಡಿಯೊಳಗೇ ಅಲ್ಪ ಸ್ವಲ್ಪ ಶಾವಿಗೆ ತಿನ್ನುವ ಅಧಿಕಾರವಿದ್ದರೂ ಹೊರಗೆ ಬಜಾರಿನಲ್ಲಿ, ಆಫೀಸಿನಲ್ಲಿ, ಕಾಫಿ ತೋಟ, ಗದ್ದೆ - ಎಲ್ಲೆಲ್ಲಿಯೂ ಶಾವಿಗೆ ಮುಕ್ಕುತ್ತಿದ್ದವರು ಹೊಸ ಪೂಜಾರಿಯ ವಾರಸುದಾರರು ಮತ್ತು ಅವನ ಬಳಗಕ್ಕೆ ಸೇರಿದವರು. ಆದರೆ ಮೂಲ ದೇವರಾದ ಹನುಮಂತ ಮಾತ್ರ ಅಂದು, ಇಂದು ಎಂದೆಂದಿಗೂ ಹಗ್ಗ ತಿಂದು ಹಸಿವೆ ನೀಗಿಕೊಳ್ಳುವುದೇ ಅವನ ಕರ್ಮವಾಗಿಬಿಟ್ಟಿದೆ.

ಈಗ ಮತ್ತೊಂದು ವಿಚಾರ ನೆನಪಿಗೆ ಬರುತ್ತಿದೆ. 'ಹನುಮನುದಿಸಿದ ನಾಡು' ಎಂದು ಕನ್ನಡ ನಾಡನ್ನು ಕವಿಗಳು ಬಣ್ಣಿಸಿದ್ದಾರೆ. ಕನ್ನಡ ನಾಡು ಮತ್ತು ಭಾಷೆ ಹನುಮಂತನ ಪರಂಪರೆಗೆ ಸೇರಿದವರೇ ಇರಬೇಕು. ಏಕೆಂದರೆ ಈಗಲೂ ವಿಧಾನಸೌಧವೂ ಸೇರಿಕೊಂಡಂತೆ ಅಧಿಕಾರ, ಸಂಪತ್ತುಗಳಿರುವ ಎಲ್ಲೆಡೆ ಕನ್ನಡ ಹನುಮಂತನಂತೆ ಹಗ್ಗ ತಿನ್ನುತ್ತ ಬಿದ್ದಿದೆ. ಹಿಂದೆ ನಾವು ಗಮನಿಸಿದ ಹೊಸ ಪೂಜಾರಿ ಅರ್ಥಾತ್ ಇಂಗ್ಲಿಷ್ ಭಾಷೆಯ ವಾರಸುದಾರರಾದ ಐ.ಎ.ಎಸ್. ಅಧಿಕಾರಿಗಳು ಮತ್ತು ಬಹುರಾಷ್ಟ್ರೀಯ ಕಂಪೆನಿಗಳು ಶಾವಿಗೆ ಖೀರುಗಳ ಸಮಾರಾಧನೆ ನಡೆಸಿದ್ದಾರೆ. ಕನ್ನಡ ಚಳವಳಿಯ ಮತ್ತು ರೈತಸಂಘದ 'ಹನುಮ ಪರಿವಾರ' ಆಗೀಗ ಹೊಸ ಪೂಜಾರಿಯ ಬಳಗವನ್ನು ಸ್ವಲ್ಪ ಹೆದರಿಸಿದರೂ ಅವನನ್ನು ಮುಟ್ಟುವ ಧೈರ್ಯ ಯಾರಿಗೂ ಇಲ್ಲ. ದೇವರಿಗಿಂತ ಭಕ್ತರಿಗಿಂತ ಪೂಜಾರಿಯ ಶಕ್ತಿ ಹೆಚ್ಚಿನದಲ್ಲವೇ? ಅಲ್ಲದೆ ದೇವರಿಗೆ ಸ್ತುತಿಯೆಂಬ ಹೊಗಳಿಕೆ ಸಾಕು, ಹಗ್ಗವೋ ಕದವೋ ತಿನ್ನುತ್ತಾ ತೆಪ್ಪಗೆ ಬಿದ್ದಿರುತ್ತದೆ. ದೇವರ ಈ ಸತ್ಯ ಎಲ್ಲರಿಗೂ ಗೊತ್ತಾಗಿ ಎಲ್ಲೆಲ್ಲಿಯೂ ಕನ್ನಡದ ಹೊಗಳಿಕೆ, ಸ್ತುತಿ, ಕೀರ್ತನೆಗಳು ರಾಜಕಾರಣಿ, ಶಿಕ್ಷಣ ತಜ್ಞ, ಸಾಹಿತಿ ಮುಂತಾದ ಭಕ್ತರಿಂದ ಅನವರತ ನಡೆಯುತ್ತಿದೆ.

-ಡಾ|| ಕೆ. ಮರುಳಸಿದ್ದಪ್ಪ

ತಿಂಗಳ ಪತ್ರಿಕೆ
ಹೊಸತು
ನೆಮ್ಮದಿಯ ನಾಳೆ ನಮ್ಮದು
ನವಕರ್ನಾಟಕ ಪ್ರಕಾಶನ

ಸಮಾಲೋಚಕ ಮಂಡಲಿ

ಟಿ. ಆರ್. ಅನಂತರಾಮು
ಸಿ. ಆರ್. ಚಂದ್ರಶೇಖರ್
ಕೆ. ಎಲ್. ಗೋಪಾಲಕೃಷ್ಣ ರಾವ್
ಎಚ್. ಎಸ್. ಗೋಪಾಲ ರಾವ್
ಜಿ. ಕೆ. ಗೋವಿಂದ ರಾವ್
ಎಂ. ಸಿ. ನರಸಿಂಹನ್
ನೇಮಿಚಂದ್ರ
ಪ್ರಕಾಶ್ ಸಿ. ರಾವ್
ಪಾರ್ಥಸಾರಥಿ
ಬರಗೂರು ರಾಮಚಂದ್ರಪ್ಪ
ಬಸವರಾಜ ಕಲ್ಗುಡಿ
ಕೆ. ಮರುಳಸಿದ್ದಪ್ಪ
ಮಹಾಬಲೇಶ್ವರ ರಾವ್
ವ್ಯಾಸರಾಯ ಬಲ್ಲಾಳ
ವಿಜಯಾ
ಟಿ. ವೆಂಕಟೇಶ ಮೂರ್ತಿ
ಯು. ಎಸ್. ಶ್ರೀನಿವಾಸನ್
ಟಿ. ಶ್ರೀನಿವಾಸರಾಜು
ಸಿದ್ದನಗೌಡ ಪಾಟೀಲ
ಎಂ. ಎ. ಸೇತುರಾವ್
ಎಲ್. ಹನುಮಂತಯ್ಯ
ಹಾಲಾಡಿ ಮಾರುತಿರಾವ್

ಚಂದಾ ವಿವರಗಳು

ಬಿಡಿ ಸಂಚಿಕೆ	ರೂ. ೧೦/-
ವಾರ್ಷಿಕ ಚಂದಾ	ರೂ. ೧೦೦/-
ಎರಡು ವರ್ಷಗಳಿಗೆ	ರೂ. ೧೮೦/-
ಮೂರು ವರ್ಷಗಳಿಗೆ	ರೂ. ೨೫೦/-

ನವಕರ್ನಾಟಕ ಶಾಖೆಗಳು

೫ನೇ ಮುಖ್ಯ ರಸ್ತೆ, ಗಾಂಧಿನಗರ
ಬೆಂಗಳೂರು-೫೬೦ ೦೦೯ ☎ : ೨೨೫೧೩೮೨
ಕೆಂಪೇಗೌಡ ವೃತ್ತದ ಬಳಿ
ಬೆಂಗಳೂರು - ೫೬೦ ೦೦೯ ☎: ೨೮೭೨೩೮೫
ಕೆ. ಎಸ್. ಆರ್. ರಸ್ತೆ
ಮಂಗಳೂರು - ೫೭೫೦೦೧ ☎ : ೪೪೧೦೦೬
ರಾಮಸ್ವಾಮಿ ವೃತ್ತ
ಮೈಸೂರು - ೫೭೦೦೨೪ ☎ : ೪೪೪೦೯೪
ಸ್ಟೇಷನ್ ರಸ್ತೆ
ಗುಲ್ಬರ್ಗಾ - ೫೮೫೧೦೨ ☎ : ೨೪೩೦೨

ಏಪ್ರಿಲ್ ಸಂಚಿಕೆ

ಸಂಪಾದಕೀಯ ನಿಜಕ್ಕೂ ಚೆನ್ನಾಗಿತ್ತು.

ದೇಶವನ್ನು ಮಾರಲು ಹೊರಟಿರುವ ಅದ್ವಾನಿ, ಚಂದ್ರಬಾಬುರಂತಹ ದೊಡ್ಡ ನಾಯಕರ ದಾಂಧಲೆಗಳ ಬಗ್ಗೆ ಹೇಳುತ್ತಾ, ಮಧ್ಯೆ ಮಧ್ಯೆ ಲೆನಿನ್‌ರ ತತ್ವಗಳನ್ನು ಅಳವಡಿಸಿಕೊಳ್ಳುತ್ತಾ ಸಾಗುವ ಸಂಪಾದಕೀಯ ಲೇಖನ ನಿಜಕ್ಕೂ ಸಂಗ್ರಹ ಯೋಗ್ಯ.

ಹುಲಿಕುಂಟೆ — *ಹುಲಿಕುಂಟೆ ಮೂರ್ತಿ*

ಹೆಮ್ಮೆಯ ನಾಟಕಕಾರ, ಗುಬ್ಬಿ ವೀರಣ್ಣ ಪ್ರಶಸ್ತಿ ವಿಜೇತ, ಅಪ್ಪಟ ಗ್ರಾಮೀಣ ಕಲಾ ಪ್ರತಿಭೆ ಪಿ. ಬಿ. ಧುತ್ತರಗಿ ಅವರ ಕಲಾ ಸೇವೆ ಕುರಿತಾದ ಲೇಖನ ಮಾರ್ಮಿಕವಾಗಿತ್ತು. ಬಡತನದ ಭೂತದಲ್ಲಿ ಬಳಲುತ್ತಿರುವ ರಂಗಭೂಮಿ ಕಲಾವಿದರ ಅಭಿವೃದ್ಧಿ ಕಡೆಗೆ ಸರ್ಕಾರ ಗಮನ ಹರಿಸಬೇಕೆಂದು ಅವರು ಮನವಿ ಮಾಡಿಕೊಂಡಿರುವುದು ಸ್ತುತ್ಯಾರ್ಹ.

ಹೂವಿನ ಹಡಗಲಿ — *ಸುರೇಶ ಅಂಗಡಿ*

'ಹೊಸತು' ಪತ್ರಿಕೆಯ ಏಪ್ರಿಲ್ ತಿಂಗಳ ಸಂಚಿಕೆ ಕೈ ಸೇರಿತು. ವಂದನೆಗಳು

'ಕಾಫಿ ಪುರಾಣಂ' 'ಹೊಸತು' ಪತ್ರಿಕೆಯ ಹೆಮ್ಮೆಯ ಪ್ರಕಟಣೆಯೇ?

ಬೆಂಗಳೂರು — *ಎಲ್. ಎಸ್. ಶೇಷಗಿರಿರಾವ್*

ನೆನಪು

ತಾತ್ವಿಕ ಸೈದ್ಧಾಂತಿಕ ಕ್ಷೇತ್ರವಲ್ಲದೇ ಪ್ರಾಯೋಗಿಕ ಕ್ಷೇತ್ರದಲ್ಲೂ ಲೆನಿನ್ ಹೆಸರು ಅಜರಾಮರ. ನವ ಸಮಾಜದ ಜೊತೆಗೆ ಶ್ರಮಿಕವರ್ಗದ ಕ್ರಾಂತಿಯ ನೇತಾರನಾದ ಲೆನಿನ್‌ನನ್ನು ಪ್ರಸ್ತುತ ನೆನಪು ಮಾಡಿಕೊಳ್ಳುವುದು ಅಗತ್ಯವಾಗಿತ್ತು. ಲೇಖನ ಸಾಂದರ್ಭಿಕವಾಗಿತ್ತು. ಜೊತೆಗೆ, ಪೂರ್ಣ ಮಾಹಿತಿ ದೊರಕಿತು.

ಹೊಸನಗರ — *ಸೀತು ಹೊಸನಗರ*

ಮೌಲಿಕ ಲೇಖನ ಗುಚ್ಛ

ಬಡವರ ಭಾಗ್ಯವಿಧಾತ ಲೆನಿನ್ ಮತ್ತು ಕವಿಗಳು ಕಂಡ ಅಂಬೇಡ್ಕರ ಲೇಖನಗಳು ತುಂಬಾ ಮೌಲಿಕವಾಗಿವೆ. ಅರ್ಥಪೂರ್ಣ ಬರಹಗಳು ಓದುಗರನ್ನು ಸೆಳೆಯುತ್ತಿವೆ. ಯುವ ಬರಹಗಾರರ ಬರಹಗಳಿಗೆ ಆದ್ಯತೆ ನೀಡಿ ಪ್ರೋತ್ಸಾಹಿಸಿರಿ.

ಹುಕನೂರು — *ಶಿವಕುಮಾರ*

ಏಪ್ರಿಲ್ ತಿಂಗಳ 'ಹೊಸತು' ಸಂಗ್ರಹ ಯೋಗ್ಯವಾದ ಲೇಖನಗಳಿಂದ ಕೂಡಿತ್ತು. ಲೆನಿನ್, ಅಂಬೇಡ್ಕರ್, ಕೋಸಂಬಿಯವರಂತಹ ಮೇರು ವ್ಯಕ್ತಿಗಳ ಬಗೆಗಿನ ಲೇಖನ ಕಂಡು ತುಂಬಾ ಸಂತೋಷವಾಯಿತು. 'ಹೊಸತು'ವಿಗೆ ಧನ್ಯವಾದಗಳು.

ಬೈಕಂಪಾಡಿ, ನವಮಂಗಳೂರು — *ಆಶಾ ಜಿ.*

ಸಾಧುಗಳ ಅಸ್ತಿತ್ವ

'ಇವರೆಂತಹ ಸಾಧುಗಳು?' ಲೇಖನ ಅರ್ಥಪೂರ್ಣವಾದುದು. ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸಿರುವ ಮುಗ್ಧರು ಮೂಢನಂಬಿಕೆಗಳಿಗೆ ಬಲಿಯಾಗಿ, ಕೊನೆಗೆ ಇಂತಹ ಅಸಾಧಾರಣ ಸಾಧುಗಳಿಗೆ ಶರಣು ಹೋಗಿದ್ದಾರೆ. ೨೧ನೇ ಶತಮಾನಕ್ಕೆ ಕಾಲಿಟ್ಟರೂ ಈ ಮೂಢ ನಂಬಿಕೆಗಳು ಶಾಶ್ವತವಾಗಿ ತಮ್ಮ ಅಸ್ತಿತ್ವವನ್ನು ಕಾಪಾಡಿಕೊಂಡು ಬರಲು ಈ ಸಾಧುಗಳೇ ಮೂಲ ಕಾರಣೀಭೂತರು ಎಂಬುದನ್ನು ತಿಳಿಸುವ ನಿಟ್ಟಿನಲ್ಲಿ ಶೋಭಾ ಪ್ರಮೋದ್‌ರವರ ಪ್ರಯತ್ನ ಸಾರ್ಥಕ ಎನಿಸುತ್ತದೆ.

ಸಾಸ್ವೆಹಳ್ಳಿ — *ಡಿ. ಪ್ರವೀಣ್‌ಕುಮಾರ್*

ಏಪ್ರಿಲ್ ಸಂಚಿಕೆ ತುಂಬ ಮುದ ನೀಡಿತು. ರೋಮಾಂಚನ ಬದುಕಿನಲ್ಲಿ ಬೆಳೆದ ಕೋಸಂಬಿ ಜೀವನ ನನ್ನನ್ನು ನಿಬ್ಬೆರಗುಗೊಳಿಸಿತು. ನಂಗಲಿಯವರ ಲೇಖನ ಅಂತಃಸತ್ವವಿಲ್ಲದ ಬುದ್ಧಿಜೀವಿಗಳಲ್ಲಿ ಮಾರ್ಗದರ್ಶನ ನೀಡುತ್ತದೆ. ದಲಿತ ಸಾಹಿತ್ಯವನ್ನು ಲಲಿತ ಬದುಕಿಗೆ ಬಳಸಿಕೊಳ್ಳುವ ಪೌರೋಹಿತ್ಯದ ಪ್ರಸಾರ-ಪ್ರಚಾರ ಅರ್ಥವಾಗದ ಲೇಖಕರನ್ನು ಚನ್ನಾಗಿ ಕಣ್ಣು ತೆರೆಸಿದ್ದಾರೆ. ಗೀತಾ ಮುಖರ್ಜಿಯವರ ರಾಜಕೀಯ ವ್ಯಕ್ತಿತ್ವದ ಮಹತ್ವ ಅವರು ತೀರಿದ ನಂತರ ತಿಳಿದಂತಾಯಿತು.

ಜಮಖಂಡಿ — *ಅರ್ಜುನ ಕೋರಟಕರ*



ಆಕರ್ಷಕ ಮುಖಪುಟ

ಏಪ್ರಿಲ್ ಸಂಚಿಕೆಯ ಮುಖಪುಟ ಆಕರ್ಷಕವಾಗಿದೆ. ಮಗುವಿನ ಮುಗ್ಧಭಾವವು ವರ್ಣಚಿತ್ರದಲ್ಲಿ ತುಂಬಾ ಅಂದವಾಗಿ ಪ್ರತಿಬಿಂಬಿತವಾಗಿದೆ. ಛಾಯಾಗ್ರಾಹಕರಿಗೂ ಮುದ್ರಣಕಾರರಿಗೂ ಅಭಿನಂದನೆಗಳು.

ಬೆಂಗಳೂರು — *ಎಸ್. ಸುಂದ್ರಮ್ಮ*

ಏಪ್ರಿಲ್ ತಿಂಗಳ 'ಹೊಸತು' ಸಂಚಿಕೆ ವೈವಿಧ್ಯಮಯ ಲೇಖನಗಳನ್ನೊಳಗೊಂಡು ಉತ್ತಮವಾಗಿ ಮೂಡಿ ಬಂದಿದೆ. ಅಸ್ಗರ್ ಆಲಿ ಇಂಜಿನಿಯರ್‌ರವರ ಮೇಲೆ ಹಲ್ಲೆ ನಡೆಸಿದ್ದು ಖಂಡನೀಯ. ಕಾರ್ಲ್ ಮಾರ್ಕ್ಸ್‌ರವರು ಆ ಕಾಲದಲ್ಲೇ ಧರ್ಮ ಎನ್ನುವುದು ಒಂದು ಅಫೀಮು ಎಂದು ತಿಳಿಸಿದ್ದರೂ ಜನಗಳು ಇನ್ನೂ ಈ ಧರ್ಮ ಎನ್ನುವ ಅಫೀಮಿನ ಅಮಲಿನಲ್ಲಿರುವುದು ವಿಷಾದನೀಯ.

ಬೋಳೂರು — *ಗಣೇಶ್ ಕುಮಾರ್*

ಈ ಸಲ ಸಂಚಿಕೆ (ಏಪ್ರಿಲ್)ಯಲ್ಲಿ ಮುಖಪುಟವು ಪುಟ್ಟ ಬಾಲಕನದ್ದು. ಬಾಲಪ್ರತಿಭೆ ಪುಟ್ಟ ಪೋರಿಯದು. ನಮ್ಮೂರಿನ ಪ್ರತಿಭೆಯ ಬಗ್ಗೆ ಬರೆದದ್ದು ಹೆಮ್ಮೆ ಎನಿಸಿತು. ತುಂಬಾ ಸಂತೋಷ.

ಪತ್ರಿಕೆಯ ಭಾಷೆ, ವಾಕ್ಯಗಳು ಕಠಿಣವೆನಿಸುತ್ತಿದೆ.

ಆನೆಗುಂಡಿ — *ಎ. ಆರ್. ಸಾಲಿಯಾನ್*

ದೋಷಗಳು

ನನ್ನ ಲೇಖನದಲ್ಲಿ ಕೆಲವು ಮುದ್ರಣ ದೋಷಗಳು ನುಸುಳಿದ್ದು ವಿಪರೀತಾರ್ಥಕ್ಕೆ ಕಾರಣವಾಗುವಂತಿದೆ:

೧) ಅಲ್ಲಮನ ವಚನದ ಸಾಲು ''ಹಿಂದಣ ಅನಂತ ಏನೂ ಮುಂದಣ ಅನಂತ ಏನೂ'' ಎಂದಿದೆ. ಇದನ್ನು ''ಅನಂತವನೂ' ಎಂದು ಎರಡೂ ಕಡೆಗಳಲ್ಲಿ ಓದಿಕೊಳ್ಳಬೇಕು.

೨) ೧೨ನೇ ಪುಟದ ಮೊದಲ ಕಾಲಂನಲ್ಲಿ 'ಪ್ರತ್ಯೇಕ ದ್ವೇಷವಾಗಿ' ಎಂದಿದೆ. ಇದನ್ನು 'ಪ್ರತ್ಯೇಕ ದ್ವೀಪವಾಗಿ' ಎಂದು ಓದಿಕೊಳ್ಳಬೇಕು.

೩) Think globally, act locally ಎಂಬುದನ್ನು ಕನ್ನಡದಲ್ಲಿ ''ಜಾಗತಿಕವಾದ ಆಲೋಚನೆ ಮತ್ತು ಕ್ರಿಯೆ'' -ಎಂದು ಅನುವಾದಿಸಿ ಪ್ರಕಟಿಸಲಾಗಿದೆ. ಇಲ್ಲಿ 'ಸ್ಥಳೀಯ' ಪದವು ಬಿಟ್ಟುಹೋಗಿದೆ. ಇದನ್ನು ''ಆಲೋಚನೆ ಜಾಗತಿಕವಾಗಿರಲಿ, ಕ್ರಿಯೆ ಸ್ಥಳೀಯವಾಗಿರಲಿ'' ಎಂದು ಅನುವಾದಿಸಿದ್ದರೆ ಚೆನ್ನಾಗಿರುತ್ತಿತ್ತು. ಉಳಿದಂತೆ ಲೇಖನ ಅಚ್ಚುಕಟ್ಟಾಗಿ ಪ್ರಕಟವಾಗಿದೆ. ಮುಖಪುಟದ ಚಿತ್ರ ಅತ್ಯಾಕರ್ಷಕವಾಗಿದೆ. 'ಹೊಸತು' ಸದಾ ಹೊಸತಾಗಿರಲೆಂದು ಹಾರೈಸುತ್ತೇನೆ.

ಕೋಲಾರ — *ವಿ. ಚಂದ್ರಶೇಖರ ನಂಗಲಿ*

ವಿನೋದ ಗಣಿತ

ಮಾರ್ಚ್- ೨೦೦೦ ದ 'ಹೊಸತು' ಸಂಚಿಕೆಯಲ್ಲಿ ಕೊಟ್ಟ ವಿನೋದ ಗಣಿತದ ಸಮಸ್ಯೆಗೆ ನೀವು ಹುಡುಕಿದ ೩ ಉತ್ತರಗಳು ಹಾಗೂ ಮೈಸೂರಿನ ಓದುಗ ಮಿತ್ರರೊಬ್ಬರು ಕಳುಹಿಸಿದ ೨ ಉತ್ತರಗಳನ್ನು ನೋಡಿದೆ. ಈಗಾಗಲೇ ೨ ಉತ್ತರಗಳನ್ನು ಹುಡುಕಿ ೩ನೆಯದು ಸಿಗದೆ ನಿಮಗೆ ತಿಳಿಸುವುದು ಬೇಡವೆಂದು ಸುಮ್ಮನಾಗಿದ್ದೆ. ಆದರೆ ಏಪ್ರಿಲ್ ಸಂಚಿಕೆಯಲ್ಲಿ ಬಂದ ೫ ಉತ್ತರಗಳಿಗಿಂತಲೂ ನನಗೆ ಬಂದ ಉತ್ತರಗಳು ಭಿನ್ನವಾಗಿವೆ!

ನನಗೆ ಸಿಕ್ಕಿರುವ ಉತ್ತರಗಳು ಈ ರೀತಿ ಇವೆ.

೧)	೨೫೯x೧೮ ;	೬೩x೭೪
	೪೬೬೨	೪೬೬೨
೨)	೧೩೮x೨೭;	೬೯x೫೪
	೩೭೨೬	೩೭೨೬

ನಾನೀ ಉತ್ತರವನ್ನು ಗಣಕಯಂತ್ರದ ಸಹಾಯ ಪಡೆಯದೇ ಲೆಕ್ಕ ಮಾಡಿ ಕಂಡುಹಿಡಿದೆ. ವಿಧಾನ ನೀವು ಹೇಳಿದ್ದೇ!

ವಾಮದ ಪದವು — *ಕೆ. ಶ್ರೀಧರ ಶೆಟ್ಟಿ*

ಬರಗೂರು ಸಂದರ್ಶನ

''.....ಕನ್ನಡದಲ್ಲಿ ಓದಿದವರಿಗೆ
ಭವಿಷ್ಯದ ಭದ್ರತೆಯಿದೆಯೆಂಬ ಭರವಸೆಯೇ
ಇಲ್ಲದಿರುವಾಗ ನಾವು ಜನರನ್ನಾದರೂ ಯಾಕೆ
ತೆಗಳಬೇಕು?''

ಬರಗೂರರು ನುಡಿದ ಈ ಮಾತು ನಿತ್ಯಸತ್ಯ. ಈ ಮಾತು *ಕಾರ್ಯರೂಪ ತಳೆದಾಗ ತಾನೇ ತಾನಾಗಿ ಕನ್ನಡ* ಪ್ರಜ್ವಲಿಸುವುದರಲ್ಲಿ ಎರಡು ಮಾತಿಲ್ಲ. ಈ ನುಡಿ ನುಡಿದ ಪ್ರಾಧಿಕಾರಾಧ್ಯಕ್ಷರು ಪ್ರಶಂಸಾರ್ಹರು.

ನಾಗರಹಾಳು — ಎಂ. ವಿರೂಪಾಕ್ಷಯ್ಯ

ಕಂಬಾಲಪಲ್ಲಿ ದೌರ್ಜನ್ಯ

ಜಿ. ಎಸ್. ತಾರಾನಾಥ

ಬೆಂಗಳೂರಿನ ಸಮತಾ ಒಕ್ಕೂಟವು ಇದೇ ಏಪ್ರಿಲ್ ೧ ರಂದು ಗಾಂಧೀಜಿ ಪ್ರತಿಮೆ ಎದುರಿನಲ್ಲಿ ''ಹಿಂದೂ ಸಮಾಜದ ಪಾಪ ನಿವೇದನೆ ಮತ್ತು ದಲಿತರೊಂದಿಗಿನ ಬಂಧುತ್ವ ಸಭೆ''ಯೊಂದನ್ನು ನಡೆಸಿತು. ಆ ಸಂದರ್ಭದಲ್ಲಿ ಹೊರಡಿಸಲಾಗಿದ್ದ ಹೇಳಿಕೆ ಹೀಗಿದೆ :

ಆತ್ಮೀಯರೇ, ಕೋಲಾರ ಜಿಲ್ಲೆಯ ಕಂಬಾಲಪಲ್ಲಿಯಲ್ಲಿ ಏಳು ಜನ ದಲಿತರನ್ನು ಬೆಂಕಿ ಇಟ್ಟು ಕೊಂದ ವಿಷಯ ತಮಗೆ ತಿಳಿದೇ ಇದೆ. ಕೊಂದವರು ಮೇಲ್ಜಾತಿಯವರು. ಈ ಬರ್ಬರ ಕೃತ್ಯ ಹಿಂದೂ ಸಮಾಜದ ಭಾಗವಾಗಿದ್ದು, ಹಿಂದೂ ಧರ್ಮದೊಳಗಿನ ಅಮಾನವೀಯ ಅಂಶಗಳನ್ನು ಪ್ರಶ್ನಿಸುವ ದಲಿತೇತರರಾದ ನಮ್ಮನ್ನು ಅವಮಾನದಿಂದ ತಲೆ ತಗ್ಗಿಸುವಂತೆ ಮಾಡಿದೆ, ಪಾಪ ಪ್ರಜ್ಞೆಯಿಂದ ನರಳುವಂತೆ ಮಾಡಿದೆ. ಹಿಂದೂ ಸಮಾಜದ ಮೇಲ್ಜಾತಿಯ ಹಲವರು ದಲಿತರ ಮನೆಗಳಿಗೆ ಬೆಂಕಿ ಇಟ್ಟು, ಒಳಗೆ ಸುಟ್ಟು ಹೋಗುತ್ತಿದ್ದ ದಲಿತರನ್ನು ನೋಡುತ್ತಾ, ವಿಕಟವಾಗಿ ಗಹಗಹಿಸುತ್ತಾ ಕೇಕೆ ಹಾಕುತ್ತಿದ್ದುದು ಊಹಿಸಲೂ ಅಸಾಧ್ಯವಾದ ಚಿತ್ರ. ಆದರೆ ಇದು ನಡೆದ ಘಟನೆ. ಇಂಥದ್ದು ೨೧ನೇ ಶತಮಾನದ ಕಂಪ್ಯೂಟರ್ ಯುಗದಲ್ಲೂ ನಡೆಯುತ್ತಿದೆ ಎಂಬುದು ಹಿಂದೂ ಸಮಾಜ ಎಂಥ ಹೀನ, ಅಮಾನವೀಯ ಸ್ಥಿತಿಯಲ್ಲಿದೆ ಎಂಬುದಕ್ಕೆ ನಗ್ನ ಉದಾಹರಣೆಯಾಗಿದೆ.

ಈ ಹೀನ ಕೃತ್ಯವು ಹಿಂದೂ ಸಮಾಜದ ಯಾವ ಮಠಾಧೀಶರನ್ನೂ ಕಲಕಿಲ್ಲ; ಯಾವ ಧರ್ಮಾಧಿಕಾರಿಗಳನ್ನೂ ತಟ್ಟಲಿಲ್ಲ; ಯಾರೂ ಪ್ರತಿಭಟಿಸಲಿಲ್ಲ. ಸಮಾಜಕ್ಕೆ ಬೋಧನೆ ಮಾಡುವ ಇಂಥವರ ಮನಃಸಾಕ್ಷಿಯನ್ನು ಈ ಅಮಾನುಷ ಘಟನೆ ಚುಚ್ಚಲಿಲ್ಲ ಎಂಬುದು ಲಜ್ಜಾಸ್ಪದವೇ ಸೈ.

ಹಿಂದೂ ಸಮಾಜ ಈಗಲಾದರೂ ತನ್ನ ಅಂತರಾತ್ಮವನ್ನು ಒಳಹೊಕ್ಕು ನೋಡಿಕೊಳ್ಳಬೇಕಿದೆ. ಸಹಸ್ರಾರು ವರ್ಷಗಳಿಂದ ಸಮುದಾಯಗಳನ್ನೇ ಸಮಾಜದ ಹೊರಗಿಟ್ಟು, ಬರ್ಬರವಾಗಿ ನಡೆಸಿಕೊಳ್ಳುತ್ತಾ, ದೌರ್ಜನ್ಯ ಎಸಗುತ್ತಾ, ಮುಟ್ಟಿಸಿಕೊಳ್ಳಲೂ ಸಿದ್ಧವಿಲ್ಲದೆ ನಡೆದು ಬಂದ ಹಿಂದೂ ಸಮಾಜ ಈ ಕಂಪ್ಯೂಟರ್ ಯುಗದಲ್ಲೂ ಅಮಾನುಷವಾಗಿ ಉಳಿದಿರುವುದು ಮೇಲ್ಜಾತಿಗಳಲ್ಲಿ ಹುಟ್ಟಿದ ನಮ್ಮೆಲ್ಲರನ್ನೂ ದಟ್ಟವಾಗಿ ಕಲಕಬೇಕಿದೆ.

ಆತ್ಮೀಯರೇ, ಇತ್ತೀಚೆಗೆ ಅತ್ಯುನ್ನತ ಕ್ರೈಸ್ತ ಧರ್ಮ ಗುರುಗಳಾದ ಪೋಪ್ ಪಾಲ್‌ರವರು ತಪ್ಪೊಪ್ಪಿಗೆಯ ನಿವೇದನೆ ಮಾಡಿದರು. ಇದೊಂದು ಐತಿಹಾಸಿಕ ಪ್ರಸಂಗ. ಕ್ಯಾಥೋಲಿಕ್ ಧರ್ಮ ಸಮುದಾಯವು ಕಳೆದ ಸಹಸ್ರಮಾನದಲ್ಲಿ ಕೆಲವು ಜನಾಂಗಗಳ ವಿರುದ್ಧ, ಇತರ ಧರ್ಮೀಯರ ವಿರುದ್ಧ ಹಾಗೂ ವ್ಯಕ್ತಿಗಳ ವಿರುದ್ಧ ಎಸಗಿದ ದೌರ್ಜನ್ಯ ಮತ್ತು ಹಿಂಸಾಚಾರದ ಕಾರ್ಯಚಟುವಟಿಕೆಗಳಿಗಾಗಿ ಪೋಪ್ ಕ್ಷಮೆ ಕೇಳಿದರು. ತಮ್ಮ ಧರ್ಮೀಯರೇ ನಡೆಸಿದ್ದ ಕೆಲವೊಂದು ಪಾಪಕೃತ್ಯಗಳಿಂದಾಗಿ ಕ್ರೈಸ್ತ ಚರ್ಚಿನ ಮುಖವೇ ವಿಕೃತಗೊಂಡಿತ್ತೆಂದು ಅವರು ಕ್ರೈಸ್ತ ಸಮುದಾಯದ ಪರವಾಗಿ ಕ್ಷಮೆ ಯಾಚಿಸಿದರು. ಅದೂ ಸಾರ್ವಜನಿಕವಾಗಿ.

ಇಂದು, ಹಿಂದೂ ಮಠಗಳು ಹಾಗೂ ಜಾತೀಯ ಸಂಸ್ಥೆಗಳು ಕೂಡ ಸಾರ್ವಜನಿಕವಾಗಿ ಪಾಪ ನಿವೇದನೆ ಮಾಡಿಕೊಳ್ಳುವ ಹಾಗೂ ತಪ್ಪು ಒಪ್ಪಿಕೊಳ್ಳುವ, ಮಾನವೀಯ ನಡೆವಳಿಕೆ ತೋರುವ ಪ್ರಮಾಣ ಮಾಡಬೇಕೆಂದು ನಾವು ಒತ್ತಾಯಿಸುತ್ತೇವೆ. ಸಹಸ್ರಾರು ವರ್ಷಗಳಿಂದಲೂ ಹಿಂದೂ ಮೇಲ್ಜಾತಿಗಳವರು ದಲಿತರ ಮೇಲೆ ನಡೆಸಿದ ದೌರ್ಜನ್ಯ ಮತ್ತು ಆಚರಿಸಿದ ಅಸ್ಪೃಶ್ಯತೆಗಾಗಿ ಎಲ್ಲ ಮಠಗಳು ಹಾಗೂ ಜಾತೀಯ ಸಂಸ್ಥೆಗಳು ದಲಿತರ ಕ್ಷಮೆ ಯಾಚಿಸಬೇಕು; ಅಸ್ಪೃಶ್ಯತೆ, ಪ್ರತ್ಯೇಕತೆ ಮತ್ತು ದೌರ್ಜನ್ಯಗಳನ್ನು ತಮ್ಮ ಆಚರಣೆಯಲ್ಲಿ ಕೊನೆಗೊಳಿಸಿರುವುದಾಗಿ ಘೋಷಿಸಬೇಕು ಮತ್ತು ಇದನ್ನು ಅವರುಗಳು ಚಾಚೂ ತಪ್ಪದೇ ಕಾರ್ಯ ರೂಪಕ್ಕೆ ತರುವ ಪ್ರಾಮಾಣಿಕತೆಯನ್ನು ತೋರಬೇಕು. ಎಲ್ಲಾ ದಲಿತೇತರ ಮಠಾಧಿಪತಿಗಳು ಹಾಗೂ ಧರ್ಮಾಧಿಕಾರಿಗಳು ಕಂಬಾಲಪಲ್ಲಿಯಲ್ಲಿ ನಡೆದ ದಲಿತರ ಬರ್ಬರ ಸಜೀವ ದಹನ ಪ್ರಕರಣದ ಹಿನ್ನೆಲೆಯಲ್ಲಿ ಹಿಂದೂ ಸಮಾಜದ ಪ್ರತಿನಿಧಿಗಳಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಒಂದು ದಿನದ ಸಾರ್ವಜನಿಕ ಉಪವಾಸ ಮಾಡಬೇಕೆಂದೂ ನಾವು ಒತ್ತಾಯಿಸುತ್ತೇವೆ.

ಆತ್ಮೀಯರೇ, ಕರ್ನಾಟಕ ಸರ್ಕಾರವು ತತ್ವನಿಷ್ಠೆ ಮತ್ತು ಇಚ್ಛಾಶಕ್ತಿಗಳ ಅಭಾವದಿಂದಾಗಿ ಹಾಗೂ ಬೇಜವಾಬ್ದಾರಿತನದಿಂದಾಗಿ ಕಂಬಾಲಪಲ್ಲಿಯ ದಲಿತರ ಜೀವ ರಕ್ಷಿಸುವಲ್ಲಿ ವಿಫಲವಾಗಿದ್ದನ್ನು ಕಂಡು ನಾವು ಕ್ರೋಧಗೊಂಡಿದ್ದೇವೆ. ಆದರೆ, ಇದು ಒಂದು ಪಕ್ಷ ಅಥವಾ ಸರ್ಕಾರದ ಪ್ರಶ್ನೆಯಲ್ಲ. ದಲಿತರ ಮೇಲೆ ಬರ್ಬರ ದೌರ್ಜನ್ಯ, ಪ್ರಾಣಹಾನಿ, ಅತ್ಯಾಚಾರ ಪ್ರಕರಣಗಳು ಎಲ್ಲಾ ಸರ್ಕಾರಗಳ ಕಾಲದಲ್ಲಿ ನಡೆದಿವೆ. ವಾಸ್ತವವಾಗಿ ಇದು ರಾಜಕಾರಣಿ, ಅಧಿಕಾರಸ್ಥ, ಜಾತೀಯ, ಉಳ್ಳವರ ಹಿತಾಸಕ್ತಿಯ ರಕ್ಷಣೆ ಮಾತ್ರವೇ ನಡೆಯುತ್ತಿರುವುದರ ಪ್ರತಿಫಲನವಾಗಿದೆ. ಇದೊಂದು ಅನೈತಿಕ ಅಮಾನವೀಯ ಹಾಗೂ ಸ್ವಹಿತಾಸಕ್ತ ಸಂಬಂಧ ಕಾಪಾಡಿಕೊಳ್ಳುವ ದುಷ್ಟಕೂಟದ ಕಾರ್ಯಾಚರಣೆಯಾಗಿದೆ. ಈಗಲಾದರೂ ರಾಜಕಾರಣಿಗಳು, ಅಧಿಕಾರಸ್ಥರು, ಜಾತಿವಾದಿಗಳು, ಉಳ್ಳವರು ಆತ್ಮ ನಿರೀಕ್ಷಣೆಗೆ ಮುಂದಾಗಬೇಕಿದೆ. ಆದರೆ, ಅವರುಗಳು ಸಿದ್ಧರಿದ್ದಾರೆಯೇ?

ಇಂದು ಸಾಮಾಜಿಕ ನ್ಯಾಯ ಹಾಗೂ ಜನತಾಂತ್ರಿಕ ಹಕ್ಕುಗಳನ್ನು ಗಟ್ಟಿಗೊಳಿಸುವುದಕ್ಕಾಗಿ ವಿಧಾನಸೌಧದಿಂದ ಮೊದಲುಗೊಂಡು ಹಳ್ಳಿಗಳವರೆಗೆ ಅನೇಕ ಜನತಾಂತ್ರಿಕ, ಸಾರ್ವಜನಿಕ ಸಂಸ್ಥೆಗಳಿವೆ. ಆದರೆ ಇವೆಲ್ಲವೂ ಬಹುತೇಕವಾಗಿ ಭ್ರಷ್ಟಗೊಂಡಿವೆ. ತತ್ಪರಿಣಾಮವಾಗಿಯೇ ಕಂಬಾಲಪಲ್ಲಿಯಂಥ ಬರ್ಬರ ಘಟನೆಗಳು ಒಂದರ ನಂತರ ಒಂದರಂತೆ ನಡೆಯುತ್ತಿವೆ. ಜನತಾಂತ್ರಿಕ ಹಾಗೂ ಸಾರ್ವಜನಿಕ ಸಂಸ್ಥೆಗಳ ನೈತಿಕತೆಯನ್ನು ಕಾಪಾಡುವ ಇಚ್ಛಾಶಕ್ತಿಯನ್ನು ಸರ್ಕಾರ ಮತ್ತು ಸಾರ್ವಜನಿಕರು ಮೊದಲು ಆದ್ಯತೆಯಾಗಿ ತೋರಬೇಕೆಂದು ನಾವು ಒತ್ತಾಯಿಸುತ್ತೇವೆ.

ಆತ್ಮೀಯರೇ, ಕಂಬಾಲಪಲ್ಲಿಯಲ್ಲಿ ಘಟನೆಗೆ ತತ್ವ ಹಾಗೂ ನೈತಿಕ ನಿಷ್ಠೆಯಿಲ್ಲದ, ದಾರಿ ತಪ್ಪಿದ ಕೆಲವು ದಲಿತ ಕಾರ್ಯಕರ್ತರೂ ಕಾರಣ ಎಂದು ಪತ್ರಿಕಾ ವರದಿಗಳು ಸೂಚಿಸುತ್ತಿವೆ. ದಲಿತರ ಸ್ವಾಭಿಮಾನದ ಎಚ್ಚರಕ್ಕೆ ಕಾರಣವಾದ ದಲಿತ ಚಳವಳಿಯು ತಾನು ದಾರಿತಪ್ಪದಂತೆ ಉಪಕ್ರಮಗಳನ್ನು ಕೈಗೊಳ್ಳಬೇಕೆಂದೂ ನಾವು ಒತ್ತಾಯಿಸುತ್ತೇವೆ. ಐತಿಹಾಸಿಕ ಪ್ರಗತಿಪರ ಚಳುವಳಿಗಳು ತಮ್ಮಲ್ಲಿ ಮೊಳೆಯುವ ಭ್ರಷ್ಟತೆ ಹಾಗೂ ವಕ್ರತೆಗಳಿಗೆ ತಾವೇ ಬಲಿಯಾಗಬಾರದಲ್ಲವೇ?

ದಲಿತರ ಮೇಲಿನ ದೌರ್ಜನ್ಯಗಳಿಗೆ ಮೂಲ ಕಾರಣಗಳೇನು ಎಂಬುದನ್ನು ಜನಪರ ಕಾಳಜಿಯುಳ್ಳವರು, ಸಮಾಜ ಹಾಗೂ ಸರ್ಕಾರ ಗುರುತಿಸಿ, ಅವುಗಳ ಬಗ್ಗೆ ಅಧ್ಯಯನ, ವಿಶ್ಲೇಷಣೆ ಹಾಗೂ ಸಂಘಟಿತ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಿಕ್ಕೆ ಎಲ್ಲರೂ ಕಾರ್ಯಪ್ರವೃತ್ತರಾಗಬೇಕು. ಇಲ್ಲದಿದ್ದಲ್ಲಿ ಕಂಬಾಲಪಲ್ಲಿಯಂಥ ಘಟನೆಗಳು ಮರುಕಳಿಸುತ್ತವೆಂಬುದನ್ನೂ ನಾವು ನೆನಪಿಸಬಯಸುತ್ತೇವೆ.

ಆತ್ಮೀಯರೇ, ಕಂಬಾಲಪಲ್ಲಿಯ ಬರ್ಬರ ಘಟನೆ ಬಗ್ಗೆ ಪ್ರಗತಿಪರರಾದ ನಾವು ಪ್ರತಿಭಟನೆಯ ದನಿಯನ್ನು ದೊಡ್ಡದಾಗೇನೋ ಎತ್ತುತ್ತೇವೆ, ಆದರೆ ಆ ಬರ್ಬರತೆಗೆ ಬಲಿಯಾದ ದಲಿತರು ನಿರ್ವಸಿತರಾಗಿಯೇ, ಭಯದ ನೆರಳಲ್ಲಿ ಮುಂದುವರೆಯುತ್ತಾರೆ. ಅವರು ತಮ್ಮ ಜೀವನವನ್ನು ಪುನಃ ಪ್ರಾರಂಭಿಸಲು ಸಾಧ್ಯವಾಗುವಂತೆ ಮಾಡುವ ಜವಾಬ್ದಾರಿಯೂ ಪ್ರಗತಿಪರರ ಮೇಲಿದೆ. ಎಲ್ಲರೂ ಸೇರಿ, ಈ ಬಗ್ಗೆ ಚಿಂತನೆ ನಡೆಸಿ, ಕಾರ್ಯಪ್ರವೃತ್ತರಾಗುವ ನೈತಿಕ ಹೊಣೆಗಾರಿಕೆಯೂ ನಮ್ಮದೇ

(೮ನೇ ಪುಟ ನೋಡಿ)

ಜೂನ್ ತಿಂಗಳ ಸಂಚಿಕೆಯಲ್ಲಿ



ಮೇ ದಿನ ಮತ್ತು ಮುಂದಿನ ಸವಾಲುಗಳು

ಮೇ ದಿನದ ಆಚರಣೆ ಒಂದು ಯಾಂತ್ರಿಕ ಕ್ರಿಯೆಯಲ್ಲ. ಸದ್ಯದ ಪರಿಸ್ಥಿತಿಯ ವೀಕ್ಷಣೆ ಮಾಡಿ, ಆತ್ಮಾವಲೋಕನ ಮಾಡಿಕೊಂಡು, ಬದಲಾವಣೆಗಾಗಿ ನಡೆದಿರುವ ಹೋರಾಟಗಳ ಪರಂಪರೆಯನ್ನು ಮುಂದುವರಿಸುವ ಕ್ರಿಯಾತ್ಮಕ ಆಶಯ ಇದರಲ್ಲಿದೆ. ಈ ನಿಟ್ಟಿನಲ್ಲಿ ಒಂದು ವಿಶ್ಲೇಷಣೆ.

ಪ್ರತಿ ವರ್ಷ ವಿಶ್ವದಾದ್ಯಂತ ಕಾರ್ಮಿಕ ಸಂಘಟನೆಗಳು ಮೇ ದಿನವನ್ನು ಆಚರಿಸುತ್ತವೆ. ಈ ಆಚರಣೆಗೆ ಒಂದು ಇತಿಹಾಸ ಮತ್ತು ಮಹತ್ವ ಎರಡೂ ಇವೆ. ಎಂಟು ಗಂಟೆ ಕೆಲಸ, ಎಂಟು ಗಂಟೆ ವಿಶ್ರಾಂತಿ, ಎಂಟು ಗಂಟೆ ಮನರಂಜನೆಯ ಬೇಡಿಕೆಯ ಈಡೇರಿಕೆಗೆ ೧೮೮೬ನೇ ಮೇ ಒಂದರಂದು ಅಮೇರಿಕ ದೇಶದ ಚಿಕಾಗೊ ನಗರದಲ್ಲಿ ಸಹಸ್ರಾರು ಕಾರ್ಮಿಕರು ಮುಷ್ಕರದ ರ್‍ಯಾಲಿ ನಡೆಸಿದರು. ಈ ಶಾಂತಿಯುತ ಪ್ರತಿಭಟನೆ ಮುಂದುವರೆಯಿತು. ಮೇ ಮೂರರಂದು ಪೊಲೀಸರು ಕಾರ್ಮಿಕರ ಮೇಲೆ ಗೋಲಿಬಾರು ಮಾಡಿದಾಗ ಆರು ಮಂದಿ ಕಾರ್ಮಿಕರು ಮೃತರಾಗಿ ಇನ್ನೂ ಹಲವಾರು ಮಂದಿ ಗಾಯಗೊಂಡರು. ಮೇ ನಾಲ್ಕರಂದು ಈ ದೌರ್ಜನ್ಯದ ವಿರುದ್ಧ ಹೇಮಾರ್ಕೆಟ್ ಚೌಕದಲ್ಲಿ ಬಹಳ ದೊಡ್ಡ ಪ್ರತಿಭಟನಾ ಸಭೆ ನಡೆಯಿತು. ಈ ಸಭೆಯಲ್ಲಿ ನಡೆದ ಬಾಂಬ್ ಸ್ಫೋಟದಲ್ಲಿ ಒಬ್ಬ ಪೊಲೀಸನೂ ಸೇರಿದಂತೆ ಕೆಲವು ಕಾರ್ಮಿಕರು ಮಡಿದರು. ಈ ಘಟನೆಗೆ ಸಂಬಂಧಿಸಿದಂತೆ ಎಂಟು ಮಂದಿ ನಿರಪರಾಧಿ ಕಾರ್ಮಿಕ ಮುಖಂಡರನ್ನು ಬಂಧಿಸಿ ಅವರಿಗೆ ಶಿಕ್ಷೆ ವಿಧಿಸಲಾಯಿತು. ಅವರಲ್ಲಿ ಐದು ಜನ ಮುಖಂಡರನ್ನು ಮರಣದಂಡನೆಗೆ ಗುರಿ ಮಾಡಲಾಯಿತು. ಅವರು ಇಡೀ ಕಾರ್ಮಿಕ ವರ್ಗದ ಪರವಾಗಿ ಧ್ವನಿ ಎತ್ತಿ ಅನ್ಯಾಯದ ವಿರುದ್ಧ ಪ್ರತಿಭಟಿಸಿ ವೀರ ಮರಣವನ್ನಪ್ಪಿದರು. ''ನೀವು ನನ್ನ ಧ್ವನಿಯನ್ನು ಹತ್ತಿಕ್ಕಬಹುದು. ಆದರೆ ಒಂದು ದಿನ ಬರುತ್ತದೆ, ಆಗ ನಮ್ಮ ಮೌನ ನೀವಿಂದು ಹತ್ತಿಕ್ಕುವ ಧ್ವನಿಗಿಂತ ಶಕ್ತಿಶಾಲಿಯಾಗಿರುತ್ತದೆ'' ಎಂದು ಗಲ್ಲಿಗೇರುವ ಮುನ್ನ ಸ್ಪೈಸ್ ಎಂಬ ವೀರ ಹೇಳಿದ. ಪಾರ್ಸನ್ಸ್ ಎಂಬ ಮತ್ತೊಬ್ಬ ತ್ಯಾಗಿ ಹೀಗೆ ಹೇಳಿದ :''ಓ ಅಮೇರಿಕದ ಜನರೇ, ಜನತೆಯ ಧ್ವನಿ ಕೇಳುವಂತಾಗಲಿ.'' ಒಟ್ಟಿನಲ್ಲಿ ಬಂಡವಾಳಶಾಹಿ ವರ್ಗ ದಬ್ಬಾಳಿಕೆಯಿಂದ ಕಾರ್ಮಿಕರ ಪ್ರತಿಭಟನೆಯನ್ನು ಹತ್ತಿಕ್ಕಲು ಪ್ರಯತ್ನಿಸಿತು. ಆದರೆ ಇಂತಹ ಪಾಶವೀ ಕೃತ್ಯವನ್ನು ವಿಶ್ವದಾದ್ಯಂತ ಕಾರ್ಮಿಕರು ಸಭೆ, ಮೆರವಣಿಗೆ, ಮುಷ್ಕರಗಳನ್ನು ನಡೆಸಿ ಖಂಡಿಸಿದ್ದಲ್ಲದೆ ಪ್ರತಿ ವರ್ಷ ಮೇ ಒಂದರಂದು ಹುತಾತ್ಮರ ತ್ಯಾಗ ಬಲಿದಾನಗಳನ್ನು ಸ್ಮರಿಸಿ, ಅದರಿಂದ ಸ್ಫೂರ್ತಿ ಪಡೆದು ತಮ್ಮ ಕರ್ತವ್ಯಗಳ ಕಡೆ ಗಮನ ಹರಿಸುತ್ತಾರೆ. ಚಿಕಾಗೋ ಹೇಮಾರ್ಕೆಟ್ ಚೌಕದ ಘಟನೆ ಅಂತರರಾಷ್ಟ್ರೀಯ ಮೇ ದಿನಾಚರಣೆಗೆ ನಾಂದಿ ಯಾಯಿತು. ಈ ಹೋರಾಟಗಳ ಕೊಡುಗೆಯಾಗಿ ಕೆಂಬಾವುಟ ಉದಯವಾಯಿತು. ಅಂತರರಾಷ್ಟ್ರೀಯವಾಗಿ ವರ್ಗ ಜಾಗೃತಿಯ ಸಂಘಟನೆಗಳು ಸಮಾನತೆಗೆ ಮತ್ತು ಸಮಾಜವಾದದ ಮೂಲಕ ಶೋಷಣೆಯನ್ನು ಕೊನೆಗಾಣಿಸಲು ಹುಟ್ಟಿದವು. ೧೮೮೯ರ ಜುಲೈ ೧೪ರಂದು ಸ್ಥಾಪನೆಯಾದ ಎರಡನೇ ಇಂಟರ್‌ನ್ಯಾಷನಲ್ ಮೇ ಒಂದರಂದು ಅಂತರರಾಷ್ಟ್ರೀಯ ಕಾರ್ಮಿಕರ ದಿನವನ್ನು ಆಚರಿಸುವ ಕರೆ ನೀಡಿತು.

ನಮ್ಮ ದೇಶದಲ್ಲೂ ಕಾರ್ಮಿಕರ ಶೋಷಣೆ ನಿರಂತರವಾಗಿ ಯಾವ ಲಂಗೂಲಗಾಮಿಲ್ಲದೆ ನಡೆಯುತ್ತಿತ್ತು. ಕೆಲಸದ ಅವಧಿ ಎಂದರೆ ಮಾಲೀಕವರ್ಗ ಹೊರೆಸಿದಷ್ಟು. ಅನೇಕ ಕಾರ್ಮಿಕ ಸಂಘಟನೆಗಳು ಹಲವಾರು ಕಾರ್ಖಾನೆಗಳಲ್ಲಿ ಸ್ಥಾಪನೆ ಆಗಿದ್ದರೂ ಅವುಗಳಿಗೆ ರಾಷ್ಟ್ರೀಯ ಚೌಕಟ್ಟು ಇರಲಿಲ್ಲ. ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ನಡೆಯುತ್ತಿದ್ದ ಸ್ವಾತಂತ್ರ್ಯ ಹೋರಾಟ ಹಾಗೂ ೧೯೧೭ರಲ್ಲಿ ನಡೆದ ರಷ್ಯಾ ಕ್ರಾಂತಿಯ ಹಿನ್ನೆಲೆಯಲ್ಲಿ ೧೯೨೦ರ ಅಕ್ಟೋಬರ್ ೩೧ರಂದು ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎಐಟಿಯುಸಿ) ಜನಿಸಿತು. ೧೯೨೩ರಲ್ಲಿ ಅಂದಿನ ಮದ್ರಾಸ್ ನಗರದಲ್ಲಿ ಕಾಮ್ರೇಡ್ ಸಿಂಗಾರ ವೇಲು ಚೆಟ್ಟಿಯಾರ್ ಅಧ್ಯಕ್ಷತೆಯಲ್ಲಿ ಮೇ ದಿನಾಚರಣೆ ನಡೆಯಿತು. ೧೯೨೭ರಿಂದ ಎಐಟಿಯುಸಿ ಕರೆಯ ಮೇರೆಗೆ ಪ್ರತಿ ವರ್ಷ ದೇಶಾದ್ಯಂತ ಮೇ ದಿನಾಚರಣೆ ನಡೆಯುತ್ತಿದೆ. ಭಾರತ ದೇಶದಲ್ಲಿ ಮಾಲೀಕವರ್ಗದ ಶೋಷಣೆಯ ವಿರುದ್ಧ ತಮ್ಮ ಬೇಡಿಕೆಗಳಿಗಾಗಿ ಹೋರಾಟವನ್ನು ನಡೆಸುವುದರ ಜೊತೆಗೆ ಸ್ವಾತಂತ್ರ್ಯ ಚಳುವಳಿಯಲ್ಲೂ ಕಾರ್ಮಿಕ ವರ್ಗ ಧುಮುಕಿತು. ೧೯೪೭ರಲ್ಲಿ ಸ್ವಾತಂತ್ರ್ಯ ಬಂದ ನಂತರವೂ ಕಾರ್ಮಿಕ ವರ್ಗವು ತನ್ನ ಹೋರಾಟವನ್ನು ಮುಂದುವರೆಸಿದೆ. ಸ್ವಾವಲಂಬನೆಗಾಗಿ, ಕಾರ್ಮಿಕರ ಹಕ್ಕುಗಳ ಒತ್ತಾಯಕ್ಕಾಗಿ, ದುಡಿಯುವ ಮಹಿಳೆಯರ ಸಮಸ್ಯೆಗಳ ಬಗ್ಗೆ, ವೇತನ, ಬೋನಸ್, ತುಟ್ಟಿಭತ್ಯೆ, ಗ್ರಾಚುಟಿ, ಇ.ಎಸ್.ಐ., ಭವಿಷ್ಯ ನಿಧಿ, ಪಿಂಚಣಿ, ಕೆಲಸದ ಭದ್ರತೆ ಇತ್ಯಾದಿಗಳ ಬಗ್ಗೆ ಅಸಂಖ್ಯಾತ ಯಶಸ್ವಿ ಹೋರಾಟಗಳನ್ನು ನಡೆಸಿದೆ.

ಪ್ರತಿ ವರ್ಷ ಮೇ ದಿನಾಚರಣೆಯ ಸಂದರ್ಭದಲ್ಲಿ ಕಾರ್ಮಿಕ ವರ್ಗವು ತಾನು ನಡೆಸಿರುವ ಹೋರಾಟಗಳ ಬಗ್ಗೆ ಸಿಂಹಾವಲೋಕನ ನಡೆಸಿ ಮುಂದಿನ ಕಾರ್ಯಕ್ರಮಗಳ ರೂಪ ರೇಷೆಗಳನ್ನು ಹಾಕಿಕೊಳ್ಳುತ್ತದೆ. ದೇಶದ ಮುಂದಿರುವ ಸವಾಲುಗಳ ಬಗ್ಗೆ ಗಂಭೀರವಾಗಿ ಚಿಂತಿಸುವುದು ಈ ಸಂದರ್ಭದಲ್ಲಿ ಅನಿವಾರ್ಯ ಹಾಗೂ ಆವಶ್ಯಕ. ಈ ಹೊಸ ಶತಮಾನದ ಮೊದಲ ಮೇ ದಿನಾಚರಣೆ ಹೊಸ ಜವಾಬ್ದಾರಿಯನ್ನು ತನ್ನ ಬೆನ್ನಿನಲ್ಲಿ ಹೊತ್ತುಕೊಂಡೇ ಬರುತ್ತಿದೆ.

ಎಚ್. ವಿ. ಅನಂತಸುಬ್ಬರಾವ್

ಕಳೆದ ಶತಮಾನದಲ್ಲಿ ಕಾರ್ಮಿಕ ವರ್ಗವು ಮಾರ್ಕ್ಸಿಸ್ಟ್ ತತ್ವದ ಆಧಾರದ ಮೇಲೆ ತನ್ನ ಸಂಘಟನೆಯನ್ನು ಸ್ಥಾಪಿಸಿಕೊಂಡು ಬಂಡವಾಳಶಾಹಿಯ ವಿರುದ್ಧ ಹೋರಾಟ ನಡೆಸಿ ಅನೇಕ ರಿಯಾಯಿತಿಗಳನ್ನು ಪಡೆದಿರುವುದು ನಿರ್ವಿವಾದವಾದ ಅಂಶ. ಆದರೆ ತನ್ನ ಸಾಧನೆಗಳ ಬಗ್ಗೆ ಗೋಪುರಗಳನ್ನು ಕಟ್ಟಿಕೊಂಡು ಕನವರಿಸುತ್ತಿದ್ದರೆ ಸಾಲದು. ಸಾಮ್ರಾಜ್ಯಶಾಹಿಗಳು ತಮಗೆ ಬೇಕಾದ ಆರ್ಥಿಕ ಮತ್ತು ಕೈಗಾರಿಕಾ ನೀತಿಗಳನ್ನು ನಮ್ಮ ದೇಶದ ಮೇಲೆ ಹೊರೆಸಿ, ಹೆಚ್ಚಿನ ಲಾಭಾಂಶವನ್ನು ತಮ್ಮ ದೇಶಗಳಿಗೆ ಸಾಗಿಸಿ ಶೋಷಣೆಯನ್ನು ಮುಂದುವರೆಸು ತ್ತಿದ್ದಾರೆ. ತಾಂತ್ರಿಕ ಪ್ರಗತಿಯನ್ನು ಸಮಾಜದ ಬಳಕೆಗೆ ಉಪಯೋಗಿಸುವ ಬದಲು, ತಮ್ಮ ಲಾಭವನ್ನು ಹೆಚ್ಚಿಸಿಕೊಳ್ಳಲು ಬಳಸಿಕೊಳ್ಳುತ್ತಾರೆ. ೧೯೯೦ರ ದಶಕದಲ್ಲಿ ವಿಶ್ವ ಬ್ಯಾಂಕ್, ಐ.ಎಂ.ಎಫ್., ಗ್ಯಾಟ್‌ಗಳ ನಿರ್ದೇಶನಗಳಂತೆ ''ಆರ್ಥಿಕ ಸುಧಾರಣಾ'' ಕಾರ್ಯಕ್ರಮಗಳನ್ನು ಜಾರಿಗೆ ತರಲಾಯಿತು. ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ಹೆಸರಿನಲ್ಲಿ ನಮ್ಮ ದೇಶದ ಸಂವಿಧಾನದಲ್ಲಿ ಅಡಕವಾಗಿರುವ ತತ್ವಗಳನ್ನೇ ಬುಡಮೇಲು ಮಾಡುವ ನೀತಿಗಳನ್ನು ಕೇಂದ್ರ ಸರಕಾರ ಅನುಸರಿಸಿತು. ಇದೆಲ್ಲದರ ಪರಿಣಾಮ, ಹೆಚ್ಚಿದ ನಿರುದ್ಯೋಗ ಮತ್ತು ಬಡತನ, ಬೆಲೆ ಏರಿಕೆ ಮತ್ತು ದೇಶೀಯ ತಂತ್ರಜ್ಞಾನದ ಮೇಲೆ ಅವಲಂಬಿಸಿರುವ ಕಾರ್ಖಾನೆಗಳ ಮುಚ್ಚುವಿಕೆ ಇತ್ಯಾದಿಗಳು. ಸರ್ಕಾರಗಳು ವಿದೇಶಿ ಬಂಡವಾಳ ಮತ್ತು ತಂತ್ರಜ್ಞಾನದ ಗುಲಾಮರುಗಳಾಗಿವೆ. ಇಷ್ಟೊಂದು ವಿಪುಲವಾದ ಪ್ರಕೃತಿ ಮತ್ತು ಶ್ರಮ ಸಂಪತ್ತುಳ್ಳ ದೇಶವು ದಿವಾಳಿಯಾಗಿದೆಯೆಂಬ ಸಂಶಯ ಮೂಡುತ್ತದೆ. ಏಕೆಂದರೆ ವಿದೇಶೀ ಬಂಡವಾಳವಿಲ್ಲದೆ ಬದುಕಲು ಸಾಧ್ಯವಿಲ್ಲವೆಂಬ ವಾತಾವರಣ ನಮ್ಮ ದೇಶದಲ್ಲಿ ನಿರ್ಮಾಣವಾಗಿದೆ. ಹಾಗೆ ಬಂದ ಬಂಡವಾಳದಿಂದ ಎಷ್ಟು ಹೊಸ ಉದ್ಯೋಗಗಳು ಸೃಷ್ಟಿ ಆಗಿವೆ ಎಂಬ ಅಂಶ ಎಲ್ಲೂ ಸಿಗುವುದಿಲ್ಲ. ಸರ್ಕಾರದ ಅಂಕಿ ಅಂಶಗಳನ್ನು ನಂಬುವ ಸ್ಥಿತಿಯಲ್ಲಿ ಜನತೆಯೂ ಇಲ್ಲ. ಕಾರ್ಖಾನೆಗಳ ಮುಚ್ಚುವಿಕೆ ಇಲ್ಲವೇ ರೋಗಗ್ರಸ್ತವಾಗಿರುವುದರಿಂದ ಉದ್ಯೋಗಸ್ಥ ಜನರು ಬಹಳ ಹೆಚ್ಚಿನ ಪ್ರಮಾಣದಲ್ಲಿ ನಿರುದ್ಯೋಗಿಗಳಾಗಿದ್ದಾರೆ. ಸರ್ಕಾರಗಳೇ ಲಕ್ಷಾಂತರ

ಹುದ್ದೆಗಳನ್ನು ರದ್ದು ಮಾಡಿವೆ. ಸುಧಾರಣೆಯ ಹೆಸರಿನಲ್ಲಿ ''ಆಧುನಿಕ ದೇವಾಲಯ''ಗಳೆನಿಸಿದ್ದ ಸಾರ್ವಜನಿಕ ರಂಗದ ಉದ್ದಿಮೆ ದೇಶದ ಸಂಪತ್ತನ್ನು ಸೃಷ್ಟಿಸಲು, ಸ್ವಾವಲಂಬನೆಗೆ, ಉದ್ಯೋಗ ಸೃಷ್ಟಿಗೆ ಹಾಗೂ ಮೀಸಲಾತಿ ಪದ್ಧತಿಯಿಂದ ಸಾಮಾಜಿಕ ನ್ಯಾಯಕ್ಕೆ ಬುನಾದಿ ಯಾಗಿದ್ದವು. ಉತ್ಪಾದನಾ ಸಾಧನಗಳು ಸಮಾಜದ ಒಟ್ಟಾರೆ ಹಿಡಿತದಲ್ಲಿದ್ದ ಕಾರಣ, ದುಡಿಯುವ ಜನರ ಶೋಷಣೆಯ ಪ್ರಮಾಣ ಕಡಿಮೆ ಇದ್ದಿತು. ಬಂಡ ವಾಳವನ್ನು ಹಿಂದೆಗೆಯುವುದು, ಸಂಪೂರ್ಣವಾಗಿ ಖಾಸಗಿಯವರಿಗೆ ಮಾರುವುದು, ಸರ್ಕಾರಿ ಕಂಪೆನಿಗಳ ಆಸ್ತಿಗಳನ್ನು ಭೋಗ್ಯಕ್ಕೆ ಕೊಡುವುದು, ಭಾಗ ಭಾಗವಾಗಿ ಖಾಸಗಿಯವರ ಸ್ವಾಧೀನಕ್ಕೆ ಕೊಡುವುದು ಇವೇ ಮೊದಲಾದ ವಿಧಾನಗಳಲ್ಲಿ ಖಾಸಗೀಕರಣ ಆಗುತ್ತಿದೆ. ಸಮಾಜದ ಒಟ್ಟಾರೆ ಲಾಭಕ್ಕೆ ಉದ್ದಿಮೆಗಳು ಇರುವ ಬದಲು ಖಾಸಗಿಯವರ ಲಾಭಕ್ಕಾಗಿ ಉದ್ದಿಮೆಗಳನ್ನು ಮಾರಲಾಗುತ್ತಿದೆ. ಪೈಪೋಟಿ ಮತ್ತು ಮುಕ್ತ ಮಾರುಕಟ್ಟೆಯ ಹೆಸರಿನಲ್ಲಿ ಖಾಸಗಿಯವರ ಲಾಭಕ್ಕಾಗಿ ಇಡೀ ವ್ಯವಸ್ಥೆ ನಿಲ್ಲುತ್ತದೆ. ನಮ್ಮ ಸಂವಿಧಾನದಲ್ಲಿರುವ ''ಸಮಾಜವಾದಿ ಗಣಯಂತ್ರ''ದ ಆದರ್ಶಕ್ಕೆ ವಿರುದ್ಧವಾದ ಈ ವ್ಯವಸ್ಥೆಯಿಂದ ಭಾಷೆ, ಜಾತಿ, ಧರ್ಮಗಳ ಹೆಸರಿನಲ್ಲಿ ಶ್ರೇಣೀಕೃತವಾಗಿರುವ ನಮ್ಮ ಜನತೆ ನಿರಂತರ ಶೋಷಣೆಗೆ ಒಳಗಾಗುತ್ತಿದೆ. ಜೊತೆಗೆ ಈಗ ''ಸುಧಾರಣೆಯ ಎರಡನೆಯ ಹಂತಕ್ಕೆ'' ಸರ್ಕಾರ ಇಳಿದಿದೆ. ರಾಷ್ಟ್ರೀಕೃತ ವಿಮಾ ನಿಗಮಗಳು ಕ್ರಮೇಣ ಅತ್ಯಂತ ಕೃಶವಾಗುತ್ತವೆ. ಇಂಡಿಯನ್ ಏರಲೈನ್ಸ್, ವಿಮಾನ ನಿಲ್ದಾಣಗಳು, ರಸಗೊಬ್ಬರದ ಕಾರ್ಖಾನೆ, ವಿದ್ಯುತ್ ಉತ್ಪಾದನೆ, ಹಂಚುವಿಕೆ, ಪ್ರಯಾಣಿಕರ ರಸ್ತೆ ಸಾರಿಗೆ ಹೀಗೆ ಮೂಲಭೂತ ಸೌಲಭ್ಯ ಒದಗಿಸುವ ಎಲ್ಲ ಸಂಸ್ಥೆಗಳೂ ಈ ಎರಡನೆ ಹಂತದಲ್ಲಿ ದೇಶೀಯ ಮತ್ತು ವಿದೇಶೀಯ ಖಾಸಗಿ ತೋಳಗಳಿಗೆ ಬಲಿಯಾಗುತ್ತವೆ. ವಿಶ್ವ ವಾಣಿಜ್ಯ ಸಂಸ್ಥೆಯ ಷರತ್ತುಗಳಿಂದ ನಮ್ಮ ದೇಶದಲ್ಲಿ ಉತ್ಪಾದನೆಯಾಗುವ ಕೃಷಿ ಮತ್ತು ಕೈಗಾರಿಕಾ ವಸ್ತುಗಳನ್ನೂ, ನಾವು ಆಮದು ಮಾಡಿಕೊಳ್ಳಬೇಕಾಗುತ್ತದೆ. ಒಟ್ಟಾರೆ, ಈ ನೀತಿಗಳ ಪರಿಣಾಮವೆಂದರೆ ಮೇಲ್ವರ್ಗದ ಬೆರಳೆಣಿಸುವಷ್ಟು ಜನರಿಗೆ ಅವರ ವಿಲಾಸ ಜೀವನಕ್ಕೆ ಬೇಕಾದ ಎಲ್ಲ ಸಾಮಗ್ರಿಗಳು ವಿದೇಶದಿಂದ ದೊರೆಯುತ್ತವೆ. ಕಾರ್ಮಿಕ ವರ್ಗದ ಶ್ರಮಕ್ಕೆ ಅನುಗುಣವಾಗಿ ವೇತನ ಸಿಗುವುದಿಲ್ಲ. ಪೈಪೋಟಿಯ ಹೆಸರಿನಲ್ಲಿ ಕಾರ್ಮಿಕರು ಕಡಿಮೆ ಹಣವನ್ನು ಪಡೆಯಬೇಕಾಗುತ್ತದೆ. ಶೋಷಣೆ ಹೆಚ್ಚಾಗುತ್ತದೆ. ಅದನ್ನು ಪ್ರತಿಭಟಿಸುವ ಕಾರ್ಮಿಕರ ಶಕ್ತಿಯನ್ನು ಮೊಟಕು ಮಾಡಲು ಈಗಿರುವ ಕಾನೂನುಗಳನ್ನು ಮಾಲೀಕರಿಗೆ ಅನುಕೂಲವಾಗುವಂತೆ ತಿದ್ದುಪಡಿ ಮಾಡುವ ಪಿತೂರಿಗಳು ಈಗಾಗಲೇ ನಡೆಯುತ್ತಿವೆ. ಈ ನೀತಿಗಳಿಂದ ನಮ್ಮ ಬೇಸಾಯದ ಮೇಲೂ ದುಷ್ಪರಿಣಾಮ ಆಗುವ ಕಾರಣ ರೈತರೂ ಕೂಡ ಶೋಷಣೆಗೆ ಗುರಿಯಾಗುತ್ತಾರೆ.

ಮೇಲ್ಕಂಡ ಹಿನ್ನೆಲೆಯಲ್ಲಿ ಕಾರ್ಮಿಕ ವರ್ಗ ಮತ್ತು ಅದರ ಸಂಘಟನೆಗಳು ಮುಂಬರುವ ದಿನಗಳ ಬಗ್ಗೆ ಚಿಂತಿಸಬೇಕಾಗಿದೆ. ಮಾಲೀಕರ ವಿರುದ್ಧ ಬೇಡಿಕೆಗಳನ್ನು ಹಾಕಿ, ಮುಷ್ಕರ ಹೂಡಿ ಅಥವಾ ಇಲ್ಲದೆ, ಒಪ್ಪಂದಗಳನ್ನು ಸಹಿ ಮಾಡಿ ಕಾರ್ಮಿಕ ಸಂಘಟನೆಗಳನ್ನು ನಡೆಸಲು ಮುಂದೆ ಸಾಧ್ಯವಾಗುವುದಿಲ್ಲ.

ಖಾಸಗೀಕರಣದ ಸಿದ್ಧಾಂತವನ್ನು ಒಪ್ಪಿಕೊಂಡಿರುವ ಸರ್ಕಾರದ ವಿರುದ್ಧ ಹೋರಾಟ ಮುಂದುವರೆಯಬೇಕು : ಇಂತಹ ಕಾರ್ಯ ಕಾರ್ಮಿಕ ವರ್ಗಕ್ಕೆ ತನ್ನ ವರ್ಗ ಸಿದ್ಧಾಂತವಿಲ್ಲದಿದ್ದರೆ ಸಾಧ್ಯವಾಗುವುದಿಲ್ಲ. ಖಾಸಗೀ ಕರಣವೇ ಸಮಾಜದ ಎಲ್ಲ ಖಾಯಿಲೆಗಳಿಗೂ ಮದ್ದು ಎಂಬ ತಪ್ಪು ತಿಳುವಳಿಕೆಯನ್ನು ಸರ್ಕಾರವು ಮಾಧ್ಯಮಗಳ ಮೂಲಕ ಪರಿಣಾಮಕಾರಿಯಾಗಿ ಜನತೆಯಲ್ಲಿ ಬಿತ್ತುತ್ತಿದೆ.



೧೮೯೨ರಲ್ಲಿ ಲಂಡನ್‌ನಲ್ಲಿ ಜರುಗಿದ ಮೇ ದಿನದ ಸಭೆ. ಏಂಗೆಲ್ಸ್, ಎಲೆನೊರ್ ಮಾರ್ಕ್ಸ್ ಈ ಸಭೆಯಲ್ಲಿ ಭಾಗವಹಿಸಿದ್ದರು.

ಮುಂಬರುವ ದಿನಗಳಲ್ಲಿ ಸಂಘರ್ಷ ತೀವ್ರವಾಗುತ್ತದೆ.

ಈಗಾಗಲೇ ಸರ್ಕಾರವು 'ಸಂವಿಧಾನದ ವಿಮರ್ಶೆ'ಗೆ ಹೊರಟಿದೆ. ಜಾತ್ಯಾತೀತ, ಸಮಾಜವಾದಿ, ಗಣತಂತ್ರ ಕೇಂದ್ರ ಸರ್ಕಾರಕ್ಕೆ ಬೇಕಾಗಿಲ್ಲ. ಸಂವಿಧಾನವನ್ನು ಕೇಸರೀಕರಣಗೊಳಿಸಿ, 'ಹಿಂದುತ್ವ'ದ ಚೌಕಟ್ಟಿನಲ್ಲಿ ಸಂವಿಧಾನವನ್ನು ಕೂರಿಸಬೇಕಾಗಿದೆ. ಅಲ್ಪ ಸಂಖ್ಯಾತರ ಮತ್ತು ಹಿಂದುಳಿದವರ ರಕ್ಷಣೆ ಸರ್ಕಾರಕ್ಕೆ ಬೇಕಾಗಿಲ್ಲ. ಈಗಿರುವ ಸಂವಿಧಾನದ ಬದಲು ವರ್ಣಾಶ್ರಮ ಧರ್ಮವನ್ನು ಕಾಪಾಡುವ ಮನುಸ್ಮೃತಿ ಇವರಿಗೆ ಬೇಕಾಗಿದೆ. ನೇರವಾಗಿ ಈ ವಿಚಾರ ತಿಳಿಸುವ ಧೈರ್ಯ ಈಗ ಸದ್ಯಕ್ಕೆ ಸರ್ಕಾರಕ್ಕಿಲ್ಲ. ಅದರಿಂದ 'ಸಂವಿಧಾನದ ವಿಮರ್ಶೆ' ಆಯೋಗವೆಂಬ ನಾಟಕಕ್ಕೆ ಸರ್ಕಾರ ಹೊರಟಿದೆ. ಸಂವಿಧಾನವನ್ನು ಬುಡಮೇಲು ಮಾಡುವ ಈ ಪಿತೂರಿಯನ್ನು ದುಡಿಯುವ ವರ್ಗ ಬಯಲಿಗೆಳೆಯಬೇಕು.

ಈ ಸಂದರ್ಭದಲ್ಲಿ ಕಾರ್ಮಿಕ ಕಾಯಿದೆಗಳ ಬಗ್ಗೆಯೂ ಗಮನ ಹರಿಸಬೇಕು. ಈಗಿರುವ ಕಾಯಿದೆ ಗಳಿಂದ ಕಾರ್ಮಿಕರಿಗೆ ಸಂಪೂರ್ಣ ರಕ್ಷಣೆ ಸಿಕ್ಕಿಲ್ಲ. ಆದ್ದರಿಂದ ಕಾರ್ಮಿಕ ವರ್ಗದ ಹಕ್ಕುಗಳನ್ನು ರಕ್ಷಿಸುವ ದೃಷ್ಟಿಯಿಂದ ಹಲವಾರು ತಿದ್ದುಪಡಿಗಳು ಈಗಿರುವ ಕಾಯಿದೆಗಳಿಗೆ ಬೇಕಾಗಿದೆ. ಕಾನೂನಿನ ಬಲೆಯಿಂದ ತಪ್ಪಿಸಿಕೊಳ್ಳಲು ಮಾಲೀಕರಿಗೆ ಹೇರಳವಾದ ಅವಕಾಶ ಗಳಿವೆ. ಸ್ವಾತಂತ್ರ್ಯ ಬಂದು ೫೨ ವರ್ಷ ಕಳೆದಿದ್ದರೂ ಕಾರ್ಮಿಕ ಸಂಘಟನೆಗಳಿಗೆ ಸರಿಯಾದ ಸ್ಥಾನಮಾನಗಳಿಲ್ಲ. ಹಲವಾರು ಕಾರ್ಮಿಕ ಸಂಘಟನೆಗಳು ನಮ್ಮ ದೇಶದಲ್ಲಿವೆ. ಒಂದಕ್ಕಿಂತ ಹೆಚ್ಚು ಕಾರ್ಮಿಕ ಸಂಘಟನೆಗಳಿರುವ ಕಾರ್ಮಿಕರಿಗೆ ಮತದಾನದ ಹಕ್ಕು ಕೊಟ್ಟು ತಮಗೆ ಬೇಕಾಗಿರುವ ಸಂಘವನ್ನು ಚುನಾಯಿಸುವ ಕಾನೂನು ನಮ್ಮ ದೇಶದಲ್ಲಿ, ಎಡ ಪಕ್ಷಗಳು ಭಾಗವಹಿಸಿದ್ದ ಮತ್ತು ಬೆಂಬಲಿಸಿದ್ದ ಕೇಂದ್ರ ಸರ್ಕಾರ ಅಸ್ತಿತ್ವದಲ್ಲಿದ್ದಾಗಲೂ ಇಂತಹ ಕಾನೂನನ್ನು ಕಾರ್ಮಿಕ ವರ್ಗ ಕಾಣಲಿಲ್ಲ.

ನಮ್ಮ ದೇಶಕ್ಕೆ ಲಾಭಕ್ಕಾಗಿ ಬರುತ್ತಿರುವ ವಿದೇಶಿ ಬಂಡವಾಳಗಾರರು ಮತ್ತವರ ಪರಿವಾರಗಳು ಈಗಿರುವ ಕಾರ್ಮಿಕ ಕಾಯಿದೆಗಳನ್ನು ತಮಗೆ ಅನುಕೂಲವಾಗುವಂತೆ ತಿರುಚಲು ಸರ್ಕಾರದ ಮೇಲೆ ಒತ್ತಡವನ್ನು ತಂದಿವೆ. ಹೈರ್ ಅಂಡ್ ಫೈರ್ ನೀತಿ ಅವರಿಗೆ ಬೇಕಾಗಿದೆ. ಗುತ್ತಿಗೆ ಕಾರ್ಮಿಕರ ಸಂಖ್ಯೆ ಹೆಚ್ಚುತ್ತಿದೆ. ಒಂದು ರೀತಿಯ ಹೊಸ ದಾಸ್ಯ ಈಗಾಗಲೇ ರೂಢಿಗೆ ಬಂದಿದೆ. ಅಸಂಘಟಿತ ವಲಯದಲ್ಲಿರುವ ಅತೀ ಹೆಚ್ಚಿನ ಭಾಗದ ಕಾರ್ಮಿಕರನ್ನು ಸಂಘಟಿಸಲು ಮಾಲೀಕರು ಬಿಡುತ್ತಿಲ್ಲ. ಪೊಲೀಸರನ್ನು ಬಳಸಿ ಸಂಘಟನೆ ಆಗದಂತೆ ಮಾಡುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಕೇಂದ್ರವು ಕಾರ್ಮಿಕ ಸಂಘಟನೆ ಗಳೊಂದಿಗೆ ಯಾವುದೇ ರೀತಿಯ ಸಮಾಲೋಚನೆ ಯನ್ನೂ ನಡೆಸದೆ ಎರಡನೆ ರಾಷ್ಟ್ರೀಯ ಕಾರ್ಮಿಕ ಆಯೋಗವನ್ನು ಕೇಂದ್ರ ಸರ್ಕಾರ ರಚಿಸಿದೆ. ಇದರಲ್ಲಿ ಮಾಲೀಕರ ಪರವಾದ ಅಭಿಪ್ರಾಯವನ್ನು ಹೊಂದಿರುವ ವ್ಯಕ್ತಿಗಳನ್ನೇ ತುಂಬಲಾಗಿದೆ. ಅದರ ಶಿಫಾರಸ್ಸುಗಳು ಏನಿರಬಹು ದೆಂಬುದು ಊಹೆಗೆ ಬಿಟ್ಟಿದ್ದು.

ಇಂದು ಕಾರ್ಮಿಕವರ್ಗ ಹಲವಾರು ಜಟಿಲವಾದ ಸವಾಲುಗಳನ್ನು ಎದುರಿಸುತ್ತಿದೆ. ಭವಿಷ್ಯದಲ್ಲಿ ಇನ್ನೂ ಹೆಚ್ಚಿನ ಸವಾಲುಗಳನ್ನು ಎದುರಿಸಬೇಕಾಗಿದೆ. ಅದಕ್ಕೆ ಬೇಕಾದ ಸಂಘಟನಾ ಸಿದ್ಧತೆ, ವರ್ಗ ಪ್ರಜ್ಞೆ, ಸೈದ್ಧಾಂತಿಕ ದೃಢತೆ, ತ್ಯಾಗ ಮನೋಭಾವನೆ ಮತ್ತು ಪ್ರಬುದ್ಧತೆ



ಇದೆಯೇ ಎಂಬುದನ್ನು ನಾವು ಗಂಭೀರವಾಗಿ ಆಲೋಚಿಸಬೇಕಾಗಿದೆ. ತಂತ್ರಜ್ಞಾನ ಆಸ್ಫೋಟನೆಯಿಂದ ಮುಂದೆ ಕಾರ್ಮಿಕ ವರ್ಗವೇ ಇರುವುದಿಲ್ಲವೆಂಬ ವಾದವೂ ಇದೆ. ಶ್ರಮದಿಂದ ಬದುಕುವ ಎಲ್ಲರೂ ಶ್ರಮಜೀವಿಗಳೆಂದು ಹೇಳಬಹುದು. ಹೊಸ ತಂತ್ರಜ್ಞಾನ ಎಷ್ಟೇ ಬೆಳೆದರೂ, ಅದರಲ್ಲೂ ದುಡಿಯುವ ಜನ ಇರಲೇಬೇಕು. ಉತ್ಪಾದನಾ ಸಾಧನಗಳು, ಮಾಲೀಕರ ಕೈಯಲ್ಲಿರುವವರೆಗೆ ಈ ಕಾರ್ಮಿಕರು ಕೂಡ ವೇತನಕ್ಕೆ ಗುಲಾಮರಾಗಿರಲೇಬೇಕು. ಆದ್ದರಿಂದ ಹೊಸ ತಂತ್ರಜ್ಞಾನದಿಂದ ಕಾರ್ಮಿಕ ವರ್ಗ ನಾಶವಾಗಿ ಎಲ್ಲರೂ ಮಾಲೀಕರಾಗುತ್ತಾರೆಂಬ ವಾದದಲ್ಲಿ ಹುರುಳಿಲ್ಲ. ತಂತ್ರಜ್ಞಾನ ಎಷ್ಟೇ ಉತ್ತಮವಾದರೂ ಹಾಗೂ ಮಾಲೀಕರ ಲಾಭ ಎಷ್ಟೇ ಜಾಸ್ತಿ ಆದರೂ, ಯಾವುದೇ ಮಾಲೀಕನೂ ತಾನಾಗಿ ಕಾರ್ಮಿಕರಿಗೆ ಹೆಚ್ಚಿನ ಅನುಕೂಲಗಳನ್ನು ಕೊಟ್ಟಿಲ್ಲವೆಂಬುದು ಚಾರಿತ್ರಿಕ ಸತ್ಯ. ಮುಂದೆ ಮಾಲೀಕರೆಲ್ಲ ಸಂತರಾಗುತ್ತಾರೆಂಬುದು ಒಂದು ಮಿಥ್ಯ.

ವಾಸ್ತವ ಪರಿಸ್ಥಿತಿಯನ್ನು ಇಂದು ಗಣನೆಗೆ ತೆಗೆದುಕೊಳ್ಳಬೇಕು. ಎಡ ಕಾರ್ಮಿಕ ಸಂಘಟನೆಗಳು ಒಂದುಗೂಡಿ ರಾಷ್ಟ್ರಮಟ್ಟದಲ್ಲಿ ಒಂದು ದಶಕಕ್ಕೂ ಮೀರಿ ಸಂಯುಕ್ತ ಹೋರಾಟ ನಡೆಸುತ್ತಿವೆ. **ಮೇಲ್ಮಟ್ಟದ ಐಕ್ಯತೆ ಕಾರ್ಯಕರ್ತರ ಮತ್ತು ಕಾರ್ಮಿಕರವರೆಗೆ ಇನ್ನೂ ಹೋಗಿಲ್ಲ.** ಇದಕ್ಕೆ ಕಾರಣ ಕಾರ್ಮಿಕ ಸಂಘಗಳು ಕೆಲಸ ಮಾಡುತ್ತಿರುವ ಶೈಲಿ ಮತ್ತು ಕಾರ್ಮಿಕ ನಾಯಕರೆನಿಸಿಕೊಂಡವರಲ್ಲಿರುವ ಸ್ವಾರ್ಥ ಮತ್ತು ಸಂಕುಚಿತ ಭಾವನೆ. ಕೆಂಪು ಬಾವುಟಗಳನ್ನು ಹಿಡಿದಿರುವ ವಿವಿಧ ಸಂಘಟನೆಗಳಾದರೂ ಇಷ್ಟು ಹೊತ್ತಿಗೆ ಒಂದಾಗಬೇಕಾಗಿತ್ತು. ಬಹುಶಃ ಈ ನಾಯಕರು ಪರಿಸ್ಥಿತಿಯ ಬಗ್ಗೆ, ಮುಂದೆ ಒದಗಬಹುದಾದ ಸವಾಲುಗಳ ಬಗ್ಗೆ ಹಾಗೂ ಅದನ್ನು ಎದುರಿಸಲು ಗಂಭೀರವಾದ ಮತ್ತು ಪ್ರಾಮಾಣಿಕ ಚಿಂತನೆ ಮಾಡಿಲ್ಲ. ಒಂದು ಸಂಘಟನೆಯನ್ನು ಮುರಿದು ತಾವು ಬೆಳೆಯಬೇಕೆಂಬ ಪೈಪೋಟಿ ಮನೋಭಾವನೆ ಇದೆ.

ಐಕ್ಯತಾ ಹೋರಾಟವನ್ನು ನಡೆಸುವಾಗಲೇ ''ದೊಡ್ಡವರ'' ಸಣ್ಣತನ ಎದ್ದು ಕಾಣುತ್ತದೆ. ವರ್ಗ ಐಕ್ಯತೆಯನ್ನು ಸಾಧಿಸುವ ಬದಲು, ತಾನೊಂದು ಸಂಘದ ಅಧಿಕೃತ ಪ್ರತಿನಿಧಿ ಎಂಬ ರೀತಿ ನಡೆದುಕೊಳ್ಳುವುದರಿಂದ ಬೇಸರ ಮೂಡಿಸುತ್ತದೆ. ಸಮಾಜವಾದಿ ಸಿದ್ಧಾಂತವನ್ನು ಒಪ್ಪಿರುವ ಜನ ಒಂದೇ ಸಂಘಟನೆಯ ಅಡಿಯಲ್ಲಿ ಬರದಿದ್ದರೆ, ಭವಿಷ್ಯ ಶೂನ್ಯ. ಐಕ್ಯತಾ ಕಾರ್ಯಾಚರಣೆ ಎಂಬ ಕಸರತ್ತನ್ನು ಎಷ್ಟೇ ಮಾಡಿದರೂ ಅದು ಕೃತಕವಾಗಿ ಕಾಣುತ್ತದೆ ಮತ್ತು ವಿಭಜನಾ ಕಾರ್ಯಕ್ರಮವಾಗುತ್ತದೆ. ಕಾರ್ಮಿಕ ವರ್ಗದ ರಾಜಕೀಯ ಪ್ರಜ್ಞೆ ಜಾಗೃತಗೊಳ್ಳದಿದ್ದರೆ, ಅದು ದಾಸ್ಯ ಶೃಂಖಲೆಗಳಿಂದ ಬಿಡಿಸಿಕೊಳ್ಳಲು ಸಾಧ್ಯವಿಲ್ಲ. ರಾಜಕೀಯ ಸಂಕಲ್ಪವಿಲ್ಲದಿದ್ದರೆ, ಮುಂದಿನ ನಿರ್ಣಾಯಕ ಹೋರಾಟಗಳನ್ನು ನಡೆಸಲು ಅಡ್ಡಿ ಆತಂಕಗಳು ಜಾಸ್ತಿ ಆಗುತ್ತವೆ. ಸಂಘಟಿತ ಕಾರ್ಮಿಕರ ಜೀವನ ವಿಧಾನವೂ ಬದಲಾವಣೆ ಆಗಿದೆ. ಕೊಳ್ಳುಬಾಕ ಸಂಸ್ಕೃತಿ ಮನೆ ಮಾಡಿಕೊಂಡಿದೆ. ಸಮಾಜದ ಒಟ್ಟಾರೆ ಹಿತದ ಬಗ್ಗೆ ಕಾಳಜಿ ಮಾಡುತ್ತಿಲ್ಲ. ಸ್ವಾರ್ಥದಲ್ಲೇ ಮುಳುಗಿದ್ದು ತಮ್ಮ ವರ್ಗದ ಮೇಲೆ ಆಗುತ್ತಿರುವ ದಬ್ಬಾಳಿಕೆಗಳ ಬಗ್ಗೆ ಸ್ವಲ್ಪವೂ ತಲೆ ಕೆಡಿಸಿಕೊಂಡಿಲ್ಲ.

ಕಾರ್ಮಿಕರ ಸಮರಶೀಲ ಹೋರಾಟಗಳನ್ನು ತೆಗಳಿ, ಸಂಘಗಳನ್ನು ದುರ್ಬಲಗೊಳಿಸುವ ಶಕ್ತಿಗಳು ಬೆಳೆಯುತ್ತಿವೆ. ಅವುಗಳ ಬಗ್ಗೆ ಅಧ್ಯಯನ ಹಾಗೂ ಚರ್ಚೆಯ ಅವಶ್ಯಕತೆ ಇದೆ. ನ್ಯಾಯಾಲಯಗಳಲ್ಲೇ ಮೋಕ್ಷ ದೊರಕುವುದೆಂಬ ತಿಳುವಳಿಕೆ ಇರುವ ಸಂಘಗಳೂ ಇವೆ. ನ್ಯಾಯಾಲಯಗಳಿಗೆ ಹೋಗುವುದೇ ಸರಿ ಇಲ್ಲ ಎಂಬ ವಿಚಾರ ಅರ್ಥಹೀನ. ಆದರೆ ಇಂದಿನ ನ್ಯಾಯಾಂಗ ವ್ಯವಸ್ಥೆ, ಅದರಲ್ಲಾಗುವ ವಿಳಂಬ, ವ್ಯಾಪಕವಾಗಿರುವ ಕಾರ್ಮಿಕ ವಿರೋಧಿ ಭಾವನೆಗಳು, ಸರ್ಕಾರವೇ ಕಾನೂನನ್ನು ಉಲ್ಲಂಘಿಸುವುದು ಇವುಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಅಂತಿಮವಾಗಿ ಕಾರ್ಮಿಕರ ಸಂಘಟನಾ ಶಕ್ತಿ ಮತ್ತು ಹೋರಾಟಗಳೇ ಅವರ ಭವಿಷ್ಯವನ್ನು ನಿರ್ಧರಿಸಬೇಕು.

ಕಳೆದ ಕೆಲವು ತಿಂಗಳುಗಳಲ್ಲಿ ದೇಶಾದ್ಯಂತ ಕಾರ್ಮಿಕರ ಹೋರಾಟಗಳು ನಡೆಯುತ್ತಿವೆ. ಸಾರ್ವಜನಿಕ ಕ್ಷೇತ್ರದ ನೌಕರರು, ವಿಮಾ, ಬ್ಯಾಂಕ್ ನೌಕರರು ದೇಶವ್ಯಾಪಿ ಹೋರಾಟ ನಡೆಸುತ್ತಿದ್ದಾರೆ. ಬಂದರು, ಗಣಿಕಾರ್ಮಿಕರು, ಉತ್ತರ ಪ್ರದೇಶದ ವಿದ್ಯುಚ್ಛಕ್ತಿ ನೌಕರರೂ ಹೋರಾಟ ನಡೆಸಿದ್ದಾರೆ. ಈ ಹೋರಾಟಗಳಿಂದ ಸ್ಫೂರ್ತಿ ಪಡೆದು ಮುಂದಿನ ಸವಾಲುಗಳನ್ನು ಎದುರಿಸಲು ಮೇ ದಿನದಂದು ಪ್ರತಿಜ್ಞೆ ಮಾಡೋಣ.

ಎಚ್. ವಿ. ಅನಂತಸುಬ್ಬರಾವ್
ನಂ. ೩೭, ೧೬ನೇ ಮೇನ್, ಎಮ್. ಆರ್. ಸಿ. ಆರ್. ಲೇ ಔಟ್,
ವಿಜಯನಗರ, ಬೆಂಗಳೂರು- ೫೬೦ ೦೪೦

(೫ನೇ ಪುಟದಿಂದ)

ಎಂಬುದನ್ನು ಜ್ಞಾಪಿಸಬಯಸುತ್ತೇವೆ.

* * *

''ಹೊಸತು'' ಓದುಗರಲ್ಲಿ ಅನೇಕರು ಈ ಹೇಳಿಕೆಯನ್ನು ಕರಪತ್ರದ ಮೂಲಕ ಈಗಾಗಲೇ ತಿಳಿದಿದ್ದಾರೆ. ಇತರರ ಅವಗಾಹನೆಗೂ ಬರಬೇಕಾದ ಹೇಳಿಕೆ ಇದೆಂಬ ದೃಷ್ಟಿಯಿಂದ ಅದನ್ನು ಪೂರ್ಣವಾಗಿ ಇಲ್ಲಿ ಕೊಟ್ಟಿದೆ.

ನಮ್ಮ ಮಧ್ಯೆ ಎಂತಹ ವಾತಾವರಣವಿದೆ, ಅದೇಕೆ ಹೀಗೆ, ಎಂಬುದನ್ನು ಸರಳೀಕರಿಸುವುದು ಅಸ್ಪೃಶ್ಯತೆಯ ಸವಾಲನ್ನು ಎದುರಿಸಲು ಸಿದ್ಧವಿಲ್ಲದವರ ವಿಧಾನವಾಗಿದೆ. ಅವರಿಗೆ ಎಲ್ಲವೂ ಕೇವಲ ಜಾತಿ ಭಾವನೆಯ ಪ್ರಶ್ನೆಯಾಗಿ ಕಾಣುತ್ತದೆ. ಇಲ್ಲವೆ ಅಂತರಜಾತೀಯ ಮದುವೆಗಳಿಂದ ಪರಿಹರಿಸಬಹುದಾದ ಸಮಸ್ಯೆಗಳಾಗಿವೆ. ಆದರೆ ಮೂಲತಃ ಇದು ಉತ್ಪಾದನಾ ಸಂಬಂಧಗಳ ಪ್ರಶ್ನೆ. ಭೂಮಿಯ ಮಾಲಿಕರು ಭೂರಹಿತರನ್ನು ನಡೆಸಿಕೊಳ್ಳುವ ದರ್ಪಕ್ಕೆ ಇದೊಂದು ಬೃಹತ್ ನಿದರ್ಶನ. ಸಮಸ್ಯೆಯ ಪರಿಹಾರವೂ ಈ ನಿಟ್ಟಿನಲ್ಲೇ ಆಗಬೇಕಾಗುತ್ತದೆ. ಅಂದರೆ, ಭೂಮಿಯ ಒಡೆತನವು ಹಳ್ಳಿಯ ಸಮಸ್ತರದ್ದೂ ಆಗಬೇಕಾಗಿದೆ.

ಹಾಗೆ ಒಡೆತನ ದಕ್ಕದಿರುವಾಗ ಸಾಮಾಜಿಕ ಸಮಾನತೆ ಮತ್ತು ಭದ್ರತೆಗಳಿಗೆ ಇರುವ ಇನ್ನೊಂದು ವಿಧಾನ ವಿದ್ಯಾಭ್ಯಾಸ ಮತ್ತು ಉದ್ಯೋಗ. ಅದಕ್ಕಾಗಿ ಮೀಸಲಾತಿಯ ಕಲ್ಪನೆ ಮೂಡಿಬಂತು. ಅದನ್ನು ಲೇವಡಿ ಮಾಡಿದವರು, ವಿರೋಧಿಸಿದವರು, ಸಾಮಾಜಿಕ ವೈಪರೀತ್ಯವೆಂದು ಮೂಗು ಮುರಿದವರು ಹಿಂದೆಯೂ ಇದ್ದರು, ಈಗಲೂ ಇದ್ದಾರೆ. ಮೀಸಲಾತಿಯ ಪ್ರಯೋಜನ ಯಾರಿಗೆ ತಲುಪಬೇಕೋ ಅವರಿಗೆ ತಲುಪಿಲ್ಲದಿದ್ದರೆ ಅದಕ್ಕೆ ಪ್ರಾಥಮಿಕ ಶಿಕ್ಷಣದ ಮಟ್ಟದಲ್ಲಿ ಆಗಬೇಕಾದ್ದು ಆಗಿಲ್ಲವೆಂಬುದು ಮುಖ್ಯಾಂಶ. ಸಂವಿಧಾನದ ಪ್ರವೀಣರು ಮೀಸಲಾತಿಯ ಎಲ್ಲೆಯನ್ನು ಕ್ರಮೇಣ ಮೊಟಕುಗೊಳಿಸುತ್ತಿರುವುದು ಈಚಿನ ವಿದ್ಯಮಾನಗಳಲ್ಲೊಂದು. ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗವು ಇದೇ ಮಾರ್ಚ್ ೧೫ರಂದು ಸುತ್ತೋಲೆಯೊಂದನ್ನು ಹೊರಡಿಸಿ ಎಂ.ಫಿಲ್. ಮತ್ತು ಪಿಎಚ್.ಡಿ.ಗಾಗಿ ಪ್ರವೇಶ ಕೊಡುವಾಗ ಮೀಸಲಾತಿಯನ್ನು ಕೈಬಿಡಬೇಕೆಂದು ನಿರ್ದೇಶಿಸಿದೆ. ಮುರಳಿ ಮನೋಹರ ಜೋಶಿಯ ಬತ್ತಳಿಕೆಯಿಂದ ಬಂದಿರುವ ಬಾಣ ಇದು. ಸದ್ಯಕ್ಕೆ ಅದನ್ನು ರದ್ದುಗೊಳಿಸಲಾಗಿದೆ ಕೂಡ. ಆದರೆ ಮನೋಭೂಮಿಕೆಯ ಸ್ವರೂಪ ಸ್ಪಷ್ಟವಾಗಿದೆ.

ಕಂಬಾಲಪಲ್ಲಿ ದುರ್ಘಟನೆಗೆ ಎಷ್ಟು ವ್ಯಾಪಕವಾದ ಆಯಾಮಗಳಿವೆ ಎಂಬುದನ್ನು ವಿಚಾರ ಮಾಡಬೇಕಾದ ಅಗತ್ಯವಿದೆ. ಪರಿಹಾರ ಹುಡುಕಲು ಎಂತಹ ಕಠಿಣ ಕ್ರಮಗಳು ಬೇಕಾಗುತ್ತವೆಂದು ಆಗ ಗೋಚರಿಸುತ್ತದೆ.

- ಜಿ. ಎಸ್. ತಾರಾನಾಥ

ಕಲ್ಯಾಣ-ಬಸವಣ್ಣ

ಬಿ. ಆರ್. ಪೋಲಿಸ್ ಪಾಟೀಲ

ಜಗವ ಬೆಳಗಲು ಜ್ಯೋತಿಯಾಗಿ ನೀ
ಹೊತ್ತಿ ಉರಿದೆ ಬಸವಾऽ
ನಿನ್ನ ಬೆಳಕಿನ ದಾರಿ ತುಳಿದವಗ
ಕತ್ತಲಿಲ್ಲೊ ಬಸವಾऽ-ಕಗ್ಗತ್ತಲಿಲ್ಲೊ ಬಸವಾऽऽ

ಮಂತ್ರ, ತಂತ್ರಗಳ ಬಗಲು ಬಡಿಗಿ
ಮುರದ್ಹಾಕಿ ನೀನು ಬಸವಾऽ
ಕಾಯಕದಿಂದ ಕಲ್ಯಾಣ ಮಾಡಿದಿ
ನಿನ್ನ ಕೂಸೊ ಬಸವಾऽ

ಜಾತಿ ಹಾವಿನ ಹೆಡಿಯ ಮೆಟ್ಟಿ ನೀ
ಮುಗಲ ಮುಟ್ಟಿ ಬಸವಾऽ
ಕಂದಾಚಾರ ಹೆಣಮಾಡಿ ಚಟ್ಟಕಟ್ಟಿ
ಹೆಗಲಕೊಟ್ಟಿ ಬಸವಾऽऽ......(೧)

ಬಸವಣ್ಣಂದ್ರ ಏನು ಬಸವಣ್ಣ ಅಂವಾ, ಕಲ್ಯಾಣ ಬಸವಣ್ಣ, ತನ್ನ ತಾನು 'ಬಚ್ಚ, ಬರಿಬಸವ' ಅಂತ ಕರಕೊಂಡ್ರೂ, ಒಳಗ ಬರೇದಿಲ್ಲ, ತುಂಬಿದ ಕೊಡ ಬಸವಣ್ಣ.

ಬಸವಣ್ಣನ ತನು ಶುದ್ಧ, ಬಸವಣ್ಣನ ಮನ ಶುದ್ಧ
ಭಾವ ಬಟ್ಟೆಗೆಲ್ಲ ಶುದ್ಧಾತಿಶುದ್ಧ,
ಬದ್ಧರೊಳು ಬದ್ಧ ಕಲ್ಯಾಣಕೆ ಕಟಿಬದ್ಧ......(೨)

ಏನ ಸುದ್ದ, ಏನ ಶುದ್ಧ ಈ ಬದ್ಧ ಬಸವಣ್ಣ ! ತನಗ ತಾನಿऽ ಗುರು ಆಗಿ ಜಗಕೆಲ್ಲಾ ಗುರು ಆಗೂ ಯೋಗ್ಯತಾ ಪಡದಾಂವ. ತಾ ಮೊಳಕಿ (ಎಳಕ) ಇದ್ದಾಗನು ಕಂದಾ ಚಾರ ಅನ್ನೂ ರಣ ಹೆಂಟೀ ಚಿಮ್ಮಿ ಒಗದು ಹಿರ್‍ಯಾರು ಕಟ್ಟಿದ ಮನಿ ಒದ್ದು ಹೊರಗಬಂದ ಮಹಾ ಮೊಳಕಿ ಈ ಬಸವಣ್ಣ.

ಬಸವಣ್ಣಗ ಕಲ್ಯಾಣ ಒಂದು ಬಿಟ್ಟರ ಬ್ಯಾರೇ ಗ್ಯಾನऽ ಇರಲಿಲ್ಲ. ಕುಂತರ ಕಲ್ಯಾಣ, ನಿಂತರ ಕಲ್ಯಾಣ, ಎದ್ದರ ಕಲ್ಯಾಣ, ಬಿದ್ದರೂ ಕಲ್ಯಾಣ. 'ತನಗೆ ಮುನಿವರಿಗೆ ತಾ ಮುನಿಯಲೇಕಯ್ಯ' ಅನಕೊಂತ ತನ್ನ ಮ್ಯಾಲ ಕೆಂಡಾಕಾರೂ ಮಂದೀಗೂ ಸಂಗಮನಾಥ ಕಲ್ಯಾಣ ಮಾಡಲಿ ಅಂದು ಅಪಗೊಂಡ ಎಲ್ಲಾರ್‍ನೂ, ತೆಕ್ಕೆ ತುಂಬಿ ಹೊರಸೂಸಿದರೂ ತೆಕ್ಕಿ ಹಿಗ್ಗಿಸಿ ಕಲ್ಯಾಣಕ್ಕ ಹಂಬಲಿಸಿ ಯಾರು ಬಂದರೂ 'ಯಾರು ನೀವು?' ಅಂತ ಕೇಳಲಿಲ್ಲ.

ಇವನಾರವ, ಇವನಾರವ, ಇವನಾರವನೆಂದೆ ನಿಸದಿರಯ್ಯಾ,
ಇವನಮ್ಮವ, ಇವನಮ್ಮವ, ಇವನಮ್ಮವನೆಂದೆನಿಸಯ್ಯಾ,
ಕೂಡಲ ಸಂಗಮದೇವಾ, ನಿಮ್ಮ ಮನೆಯ ಮಗನೆಂದೆನಿಸಯ್ಯಾ....


ಅಂದು ಎಲ್ಲಾರ್‍ನೂ ಕಲ್ಯಾಣದ ಮರದ ನೆರಳಿಗೆ ಕರಕೊಂಡ. ಅಲ್ಲಿ ಮಟಾ ಕಟ್ಟಿ ಮೇಸಿದ ಜಾತಿ ಹಾವಿನ ಹೆಡಿಮೆಟ್ಟಿ ಮುಗಲ ಮುಟ್ಟಿ ಬೆಳೀಬೇಕು ಅನ್ನಾಂವಗ ಮುಗಲऽ ಮಿತಿ ಆಗಿರಬೇಕು, ಅಂತ ಕಲಿಸಿದ ಬಸವಣ್ಣ.

ಅಪ್ಪನು ನಮ್ಮ ಮಾದಾರ ಚೆನ್ನಯ್ಯ,
ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ
ಚಿಕ್ಕಯ್ಯನೆಮ್ಮಯ್ಯ ಕಾಣಿರೊ

ಅಂತ ನುಡದು ನುಡದಂಗ ನಡೆದಾಗ ಇದನ್ನೆಲ್ಲ ನೋಡಿ ಕೆಂಡಾ ಕಾರಿ ಹಾರೋರಿಗೆ, ನೀವೆಷ್ಟು ಹಾರಿದರು ನಾ ಹೋರಾಂವನऽ, ಈ ಜಾತಿ ಬೀಜಾ ಹುರ್‍ಯಾಂವನ ಅಂದು ಜಾತಿ ವಿಷ ಬೀಜ ಹುರದು 'ಎಲವೊ' ಅನ್ನೂ ಎಲುಬಿಲ್ಲದ ನಾಲಿಗಿನऽ ಸರಕದ ತಂದಿ, ಅದನ್ನಷ್ಟು ಹದ್ದುಬಸ್ತಿನ್ಯಾಗ ಇಟ್ಟು 'ಅಯ್ಯಾ' ಅನ್ನಾಕ ಕಲಸರಿ, ಅಲ್ಲೇ ಸ್ವರ್ಗ ಹುಟ್ಟಿಕೊಂತದ ಅಂತ ಹೇಳಿದ.

ಕೀಳಿಂಗಲ್ಲದೆ ಹಯನು ಕರೆವುದೇ?
ಕೀಳಾಗಲೊಲ್ಲದೆ ಮೇಲಾಗಲೊಲ್ಲೆ

ಅಂತಂದ. ಡುಬ್ಬದಮ್ಯಾಲ ಕುಂತು ಯಾರಾದರೂ ಎಮ್ಮಿ ಹಿಂಡಕೊಂಡಾರೇನ್ರಿ ಪಂಡಿತರ? ಎಲ್ಲಾರೂ ಬರೂದು, ಬಂದಿರೋದು ಈ ನಾರೋ ಮಡಕಿ ಒಳಗಿಂದನऽ ಅಂದ ಬಳಿಕ ಈ ಮ್ಯಾಲ ಕೀಳ ಅಂಬೂ ಭೇದ ಯಾಕ? ಮ್ಯಾಲ ಹಾರಬೇಕನ್ನುಂವನ ಕಾಲ ನೆಲಕ್ಕ ಹತ್ತಿರಬೇಕು ಅಂತ ನಂಬಿ ತನ್ನ ಪ್ರಧಾನ ಮಂತ್ರಿಗಿರಿ ತಲಿಗೇರಿಸಿಕೊಳ್ಳದ ಕೇರಿ ಕೇರಿ ತಿರಗಿ ಕೇರ್‍ಯಾನ ಮಂದೀಗೂ ಊರ ವಾಸನಾ ತೋರಿಸಿದ; ಅನುಭವ ಮಂಟಪದ ಕಟ್ಟೀಮ್ಯಾಲ ಸೂಳಿಸಂಕವ್ವ ಮೊದಲ ಮಾಡಿ ಎಲ್ಲಾರ್‍ನೂ ಕರಕೊಂಡು ಕುಂತ ಆಡಿದಾ, ಹಾಡಿದಾ; ಇದನ್ನ ಕಣ್ಣಾರೆಕಂಡ ದೊರಿ ಬಿಜ್ಜಳ ಬೆಕ್ಕಸ ಬೆರಗಾದ.



ಏನಜ್ಜಿ, ಎಲ್ಲ-ವಾಸ್ತು ಪ್ರಕಾರವೇ ಇದೆ ನಿನ್ನ ಭವ್ಯ ಸೌಧ; ಆದರೂ ಗೊಣಗುತ್ತಿದ್ದೀಯಲ್ಲ!!

ಎಲ್ಲೆಲ್ಲಿ ಕಲ್ಯಾಣದ ಮಳಿ ಆಗ್ತದನೊ ಅಲ್ಲಲ್ಲಿ ಮಂಚಣ್ಣ ಅನ್ನೋ ವಿಷಬೀಜ ಮೊಳೀಲ್ಯಾಕ [illegible] ಮಾಡ್ತದ. ಫಿತೂರಿ ಮೊಗ್ಗಾಗಿ, ಹೂವಾಗಿ, ಕಾಯಾಗಿ, ಬಾರಕ್ಕ ಬರೋದನ್ನ ನೋಡಿಕೊಂತ ಕುಂತಮಂದಿ ಅಡಿ ಹಾಕಿ ಹಣ ಮಾಡತಾರ. ಹಿಂಗऽ ಥೇಟ ಹಿಂಗऽ ಕಲ್ಯಾಣದಾಗೂ. ಆ ಹರಳಯ್ಯನ ಮಗಾ ಶೀಲವಂತಗ ಮತ್ತ ನಮ್ಮ ಮಧುವರಸನ ಮಗಳು ಮಾದೀಗೆ ಲಗ್ನಾ ಮಾಡತಾನಂತ ಬಸವಣ್ಣ, ಹೊರಗಿನ ಮಂದಿ ಕೊಳ್ಳಾಗ ಶಿವದಾರ ಹಾಕಿ ಒಳಗ ಕರಕೊಂತಾನಂತ, ಐದೂ ಬಳ್ಳ ಸಂವಾ ಮಾಡಾಕ ಹೊಂಟಾನ ಈ ಕಿರಾತ ಅಂತ ಜಿಗದು ನಿಂತ ಮ್ಯಾಲಿನ ಮಂದಿ ಕಿವಿ ಊದಿದರೂ ಮೊದ ಮೊದಲು ಬಿಜ್ಜಳರಾಯ ಕೇಳಲಿಲ್ಲ.

''ಬ್ಯಾಡ ಬಸವಣ್ಣ ಬಾಳೋ ಮಂದೀಗೆ ಬೇಕಾದಾಂವ, ಅಂವನ್ನ ತಡವ್ಯೂದಂದ್ರ ಮಲಕೊಂಡ ಪ್ರಳಯಾನ ಎಬ್ಬಿಸಿ ಕುಸ್ತಿ ಹಿಡದಂಗ. ಈ ಮದುವಿ ಆಗಬೇಕು ಅನ್ನೂದು ಆ ಭಗವಂತನ ಮನಸಿನ್ಯಾಗ ಇದ್ದರ ಆಗಲಿ ಬಿಡ್ರಿ, ಕಲ್ಯಾಣ ಆಗಿರೋದು ಬಸವಣ್ಣನಿಂದ, ಅಂವನ ಶಾಸನಾನೂ ಇಲ್ಲೀ ಜನಕ್ಕ ಬೇಕಾಗಿರೋದು, ನಾವು, ನೀವು ಹ್ವಾದ ಬಳಕೂ ಉಳಿಯೋದು ಬಸವ ಕಲ್ಯಾಣ. ಯಾಕಂದ್ರ ನಾವು ಬರೇ ಕಲ್ಯಾಣ ಕಟ್ಟಿಸಿರಬಹುದು ಆದರೆ ಅಂವಾ ಖರೆ ಕಲ್ಯಾಣ ಮಾಡಿದಾಂವ; ಕಲ್ಯಾಣ ಮಾಡಿದಾಂವ್ನ ನಿಲ್ಲಾಕ ಬಿಟ್ಟ ನಾವೂ ಗೆಲ್ಲೂಣು'' ಅಂದಾ. ಆದರ ಮಂಚಣ್ಣನ ಬಳಗ ಇದನ್ನ ಕೇಳಲಿಲ್ಲ.

''ನೀವು ಈ ಬಸವಣ್ಣನ್ನ ಬೆಳ್ಯಾಕ ಬಿಟ್ಟರ ಮ್ಯಾಲಿನೋರು ಬಂಡೇಳತಾರ, ಕಲ್ಯಾಣದಾಗ ರಕ್ತಪಾತ ಆಗತದ, ವಿಪ್ರರ ರಕ್ತ ನೆಲಕ್ಕ ಬಿದ್ದರ ಪ್ರಳಯ ಆಗ್ತದ, ಸಿಂಹಾಸನ ಅಳಿಗ್ಯಾಡತದ'' ಅಂತ ಬವ್‌ಬಿಟ್ಟಾ. ಬಿಜ್ಜಳ ರಾಜಾನ ತಲಿ ಮಸರಗಡಿಗ್ಯಾತು. ಆಮ್ಯಾಲೇನಾತು ಅಂತ ನಿಮಗೂ ಗೊತ್ತದ. ಬಿಜ್ಜಳ ಹ್ವಾದಾ, ಮಂಚಣ್ಣಗೋಳು ಹ್ವಾದರು, ಬಸವ ಕಲ್ಯಾಣ ಉಳೀತು.

'ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ' ಅಂದ ಬಸವಣ್ಣ ತಾ 'ಸಣ್ಣಾಂವ' ಅಂತ ತಿಳಕೊಂಡದ್ದರಿಂದऽ ಉಳಕೊಂಡ. ಹಿಂತಾ ಉಳದು ಬೆಳದ ಬಸವಣ್ಣನ್ನ ಉಳಸಿಗೊಬೇಕಾದರ, ಅಂವನ ಅನುಯಾಯಿಗಳಾಗಿರಬೇಕಾದರ ಅಂವನ ತತ್ವಾನ ಅರಗಿಸಿಕೋಬೇಕು. ಅಗದು, ಜಗಿದು ರಕ್ತಾ ಮಾಡಿಕೋಬೇಕು. ಅಂವಾ ಹ್ಯಾಂಗ ಕಷ್ಟದ ಜಡಿ ಮಳೀಗೆ ಎದಿ ಒಡ್ಡಿದನೊ ಹಾಂಗ ಅಂವನ ಬಳಗಾನೂ ಎದಿ ಒಡ್ಡಬೇಕು ಒಟ್ಟುಗೂಡಿ ಬೆಳೀಬೇಕು. ಕಲ್ಯಾಣ [illegible] ಬಾಳೂದು. ಒಡನು [illegible] ಕುಮ್ಮ ಹ್ಯಾಂಗ [illegible]

೧. ಸ್ವರಚಿತ ಲಾವಣಿಯ ನುಡಿಗಳು ೨. ಸ್ವರಚಿತ ವಚನ

ಮಾರ್ಕ್ಸ್ ಮತ್ತು ವಿಜ್ಞಾನ

''ನಮ್ಮ ಇಂದ್ರಿಯಗಳಿಗೆ ಗೋಚರವಾಗುವುದೆಲ್ಲ ವಿಜ್ಞಾನದ ವಸ್ತುವಾಗಬೇಕು. ವಾಸ್ತವಿಕ ಪ್ರಜ್ಞೆ ಮತ್ತು ಬದುಕಿನ ಅವಶ್ಯಕತೆಗಳೆರಡೂ ಸಮನ್ವಯವಾದಾಗ ಅದು ನಿಜವಾದ 'ವಿಜ್ಞಾನ'ವೆನಿಸಿಕೊಳ್ಳುತ್ತದೆ.'' - ಹೀಗೆಂದು ವ್ಯಾಖ್ಯಾನಿಸಿದ ಕಾರ್ಲ್ ಮಾರ್ಕ್ಸ್‌ಗೆ ವೈಜ್ಞಾನಿಕ ವಿಧಾನ ಹಾಗೂ ಅದರ ಪ್ರಯೋಜನಗಳ ಬಗ್ಗೆ ಸ್ಫುಟವಾದ ನಿಲುಮೆಯಿದ್ದಿತು.

ಸೋವಿಯತ್ ಒಕ್ಕೂಟ ವಿಭಜನೆಯಾದ ನಂತರ, ಸೋವಿಯತ್ ಕ್ರಾಂತಿಯ ಮಹತ್ವವನ್ನು ಚರಿತ್ರೆಕಾರರು ಅಲ್ಲಗಳೆಯುವುದು ಸಾಮಾನ್ಯವಾಗಿದೆ. ಆದರೆ, ಈ ಕ್ರಾಂತಿಯ ಬೆನ್ನೆಲುಬಾಗಿದ್ದ ತಾತ್ವಿಕ ದೃಷ್ಟಿಯನ್ನೂ ಸಾರಾಸಗಟಾಗಿ ತಳ್ಳಿ ಹಾಕುವ ಪ್ರವೃತ್ತಿಯನ್ನು ನಾವು ಗಮನಿಸುತ್ತಿದ್ದೇವೆ. ಸೋವಿಯತ್ ಕ್ರಾಂತಿಗೆ ಪುಷ್ಟಿಯನ್ನೊದಗಿಸಿದ ಮಾರ್ಕ್ಸ್‌ನ ಬರಹಗಳನ್ನು ಮೂಲೆಗುಂಪಾಗಿಸುವುದು ಸದ್ಯದಲ್ಲಿ ನಾವು ನೋಡುತ್ತಿರುವ ಅನಪೇಕ್ಷಣೀಯ ವರ್ತನೆ. ಮಾರ್ಕ್ಸ್ ಸಿದ್ಧಾಂತದ ಅನೇಕ ಮುಖಗಳಲ್ಲಿ ವಿಜ್ಞಾನದ ಬಗ್ಗೆ ಮಾರ್ಕ್ಸ್ ತಾಳಿದ ನಿಲುವು ಅತ್ಯಂತ ಸೂಕ್ಷ್ಮ ಹಾಗೂ ಪ್ರಬಲವೆಂದೆನಿಸುತ್ತದೆ. ಈ ನಿಲುವಿನ ಹಲವು ಸೂಕ್ಷ್ಮಗಳನ್ನು ಇಲ್ಲಿ ಉಲ್ಲೇಖಿಸಿದೆ.

ಕಾರ್ಲ್ ಮಾರ್ಕ್ಸ್‌ಗೆ ಜಗತ್ತಿನ ನಿಜಸ್ವರೂಪವನ್ನು ತಿಳಿಯಲು ವಿಜ್ಞಾನ ಸಾಧಕವಾಗಿದ್ದುದಲ್ಲದೆ ವಿಜ್ಞಾನ ಮತ್ತು ಕೈಗಾರಿಕೆಗೆ ಇರುವ ಸಂಬಂಧ, ಬಂಡವಾಳಶಾಹಿ ಕಾಲದಲ್ಲಿ ಇವೆರಡರ ಪರಸ್ಪರ ಹೊಂದಾಣಿಕೆ, ಇವುಗಳನ್ನು ಅರ್ಥೈಸಲು ನೆರವನ್ನು ನೀಡಿತ್ತು. ಮಾರ್ಕ್ಸ್ ಚಿಂತನೆಯಲ್ಲಿ ವಿಜ್ಞಾನದ ಮುನ್ನಡೆಯನ್ನು ಅರ್ಥಪೂರ್ಣವಾಗಿ ವಿವರಿಸುವುದಲ್ಲದೆ, ವಿಜ್ಞಾನವು ಸಮಾಜವಾದಿ ಸಮಾಜವನ್ನು ಕಟ್ಟುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸಬಲ್ಲದೆಂಬ ಆಶಾವಾದವೂ ಇದ್ದಿತು.

ತನ್ನ ವಾದವನ್ನು ಮಂಡಿಸುವಾಗ ಮಾರ್ಕ್ಸ್ ಹೆಗೆಲ್‌ನ ದ್ವಂದ್ವತಾ ಮಾರ್ಗವನ್ನೂ (ಡಯಲೆಕ್ಟಿಕ್) ವಿಜ್ಞಾನಿಗಳ ವಾಸ್ತವತಾವಾದವನ್ನು (ಮೆಟೀರಿಯಲಿಸ್ಟಿಕ್) ಮತ್ತು ರಿಕಾರ್ಡೊ, ಆಡಮ್ ಸ್ಮಿತ್ ಮತ್ತಿತರ ಆರ್ಥಿಕ ತಜ್ಞರ ಆರ್ಥಿಕ ವಾದಗಳನ್ನೂ ಸೂಕ್ತವಾಗಿ ಬಳಸಿಕೊಂಡಿದ್ದುಂಟು. ಹೀಗೆ ಮಾರ್ಕ್ಸ್ ತನ್ನ ಕ್ರಾಂತಿಕಾರಿ ಪ್ರಣಾಳಿಕೆಯನ್ನು ವಿಸ್ತರಿಸುವಾಗ ವಿಜ್ಞಾನದ ಮೂಲಭೂತ ಸಂದೇಶಗಳ ಆಸರೆ ಪಡೆದಿದ್ದ. ''ನಾನು ಮಾರ್ಕ್ಸಿಸ್ಟ್ ಅಲ್ಲ''ವೆಂದ ಮಾರ್ಕ್ಸ್ ವಿಜ್ಞಾನವನ್ನು ಒಂದು ತಾತ್ವಿಕ 'ಸಿಸ್ಟಮ್' ಅನ್ನಾಗಿ ಅರ್ಥೈಸಬಾರದೆಂದು ಎಚ್ಚರಿಕೆ ನೀಡಿದ್ದ. ವಿಜ್ಞಾನದ ಮುಖ್ಯ ತಿರುಳೆಂದರೆ ವಿಜ್ಞಾನದ ಮಾರ್ಗ. ವೈಜ್ಞಾನಿಕ ಸಂಶೋಧನೆಗಳಿಗೆ ಈ ವಿಧಾನವು ಹೇಗೆ ಸಹಕಾರ ನೀಡುತ್ತದೆಯೋ ಅದೇ ರೀತಿ ಸಮಾಜವಾದವನ್ನು ನಿರೂಪಿಸುವಾಗಲೂ ವಿಜ್ಞಾನ ನೆರವನ್ನು ನೀಡುತ್ತದೆಯೆಂದು ಮಾರ್ಕ್ಸ್ ಒತ್ತಿ ಒತ್ತಿ ಹೇಳಿದ್ದ. ಫ್ರೆಂಚ್ ಅರ್ಥಶಾಸ್ತ್ರಜ್ಞ ಪ್ರೂಧೋನ್ ಬರೆದ ''ಬಡತನದ ತಾತ್ವಿಕ ಜಿಜ್ಞಾಸೆ''ಗೆ ಉತ್ತರವಾಗಿ ಪ್ರಕಟಿಸಿದ ''ತಾತ್ವಿಕ ಜಿಜ್ಞಾಸೆಯ ಬಡತನ'' ಎಂಬ ಗ್ರಂಥದಲ್ಲಿ ಈ ವಿಷಯವನ್ನು ಮಾರ್ಕ್ಸ್ ಹೀಗೆ ಸುಸ್ಪಷ್ಟಪಡಿಸಿದ:

''ಕೇವಲ ಸೈದ್ಧಾಂತಿಕವಾಗಿ ಕನಸು ಕಾಣುವ ದಾರ್ಶನಿಕರು ವಿಜ್ಞಾನವನ್ನು ಎಲ್ಲಿಯವರೆಗೆ ಒಂದು 'ಸಿಸ್ಟಮ್' ಆಗಿ ಮನಗಾಣುತ್ತಾರೋ ಅಲ್ಲಿಯವರೆಗೆ ಅವರು 'ಬಡತನ'ದಲ್ಲಿ ಅಷ್ಟನ್ನೇ ನೋಡುತ್ತಾರೆಯೇ ವಿನಃ ತುಕ್ಕು ಹಿಡಿದ ಸಮಾಜ ವ್ಯವಸ್ಥೆಯನ್ನು ಕಿತ್ತೊಗೆಯುವ ಕ್ರಾಂತಿಕಾರಕ ಶಕ್ತಿ ಅದಾಗಬಲ್ಲದೆಂಬ ಅಂಶವನ್ನು ಗ್ರಹಿಸುವುದಿಲ್ಲ. ಚಾರಿತ್ರಿಕ ಸಂಘರ್ಷದಿಂದ ಜನಿಸಿದ ವಿಜ್ಞಾನ, ಸಾಮಾಜಿಕ ಬದಲಾವಣೆಯನ್ನು ತರುವುದರಲ್ಲಿ ಯಶಸ್ವಿಯಾಗಿ ಕೇವಲ ಸೈದ್ಧಾಂತಿಕ ಹಂತದಿಂದ ಕ್ರಾಂತಿಕಾರಕ ಪಥಕ್ಕೆ ಧಾವಿಸಿದೆ.''

ಡಾರ್ವಿನ್ನನ ವಿಕಾಸವಾದದ ಉಪಯುಕ್ತತೆಯನ್ನು ಮಾರ್ಕ್ಸ್ ಮನಗೊಂಡು ಈ ವಾದವನ್ನು ಬೆಂಬಲಿಸಿದ. ಪ್ರಕೃತಿಯ ಅಧ್ಯಯನ ವಿಜ್ಞಾನದ ಕ್ಷೇತ್ರ. ಪ್ರಕೃತಿಯನ್ನು ಪ್ರಕ್ರಿಯೆಗಳ ಮೂಲಕ ಅರ್ಥಮಾಡಿಕೊಳ್ಳಬೇಕೇ ವಿನಃ ಸ್ಥಾಯಿ ತತ್ವಗಳ ಮೂಲಕವಲ್ಲವೆಂಬ ನಿಲುವನ್ನು ಮಾರ್ಕ್ಸ್ ತಾಳಿದ. ಇದು ವಿಜ್ಞಾನಿಗಳು ಒಪ್ಪತಕ್ಕಂಥ ಅಭಿಪ್ರಾಯವೇ ಆಗಿದೆ. ಇದಲ್ಲದೆ, ಪ್ರಕೃತಿಯನ್ನೂ ಪರಿಸರವನ್ನೂ ಬದಲಾಯಿಸಲು ಸಹ ವಿಜ್ಞಾನ ಅಗತ್ಯವೆಂದು ಮಾರ್ಕ್ಸ್ ತನ್ನ ಲೇಖನಗಳಲ್ಲಿ ಮಂಡಿಸಿದ್ದುಂಟು.

ವಿಜ್ಞಾನದ ರೂಪರೇಷೆಗಳನ್ನು ಚರ್ಚಿಸುತ್ತಾ ''ನಮ್ಮ ಇಂದ್ರಿಯಗಳಿಗೆ ಗೋಚರವಾಗುವುದೆಲ್ಲ ವಿಜ್ಞಾನದ ವಸ್ತುವಾಗಬೇಕು. ವಾಸ್ತವಿಕ ಪ್ರಜ್ಞೆ ಮತ್ತು ಬದುಕಿನ ಅವಶ್ಯಕತೆಗಳೆರಡೂ ಸಮನ್ವಯವಾದಾಗ ಅದು ನಿಜವಾದ 'ವಿಜ್ಞಾನ'ವೆನಿಸಿಕೊಳ್ಳುತ್ತದೆ. ನೈಜವಾದ ವಿಜ್ಞಾನ ಪ್ರಕೃತಿಯ ಅಧ್ಯಯನದಿಂದ ಆರಂಭವಾಗುತ್ತದೆ. ನಿಸರ್ಗದ ಇತಿಹಾಸದ ಸ್ಪಷ್ಟ ವಿಭಾಗವೇ ಮಾನವನ ಇತಿಹಾಸ. ನಿಸರ್ಗದಲ್ಲಿ ವಿಕಾಸವಾಗಿ ಮಾನವನ ಬೆಳವಣಿಗೆಯಾಯಿತು. ಅಂದ ಮೇಲೆ, ಕ್ರಮೇಣ ಪ್ರಾಕೃತಿಕ ವಿಜ್ಞಾನ ಹಾಗೂ ಮಾನವ ವಿಜ್ಞಾನ ಪರಸ್ಪರ ಹಾಸು ಹೊಕ್ಕಾಗಿ ಸ್ಪಂದಿಸಿ, ಹೊಸೆದುಕೊಂಡು ಏಕೈಕ ವಿಜ್ಞಾನವೆನಿಸಿಕೊಳ್ಳುತ್ತದೆ'' (ಮಾರ್ಕ್ಸ್ - ಏಂಗೆಲ್ಸ್: ಪತ್ರಗುಚ್ಛ).

ವಿಜ್ಞಾನ ಕೇವಲ ಮಾನವನ ಮನಸ್ಸಿನ ಕೃತಿ ಮಾತ್ರವಲ್ಲ. ಸಾಮಾಜಿಕ ಮತ್ತು ಔದ್ಯೋಗಿಕ ಕ್ರಾಂತಿಯ ಸಂದರ್ಭದಲ್ಲಿ ವಿಜ್ಞಾನ ಹುಟ್ಟಿ ಅಂದಿನ ಸಮಾಜದ ಸೇವೆಯನ್ನು ಮಾಡುವ ಸಾಧನವಾಗಿ ಪರಿಣಮಿಸಿತೆಂದು ಮಾರ್ಕ್ಸ್ ಹೇಳಿದ. ಸಮಾಜಕ್ಕೆ ವಿಜ್ಞಾನ ಮತ್ತು ತಂತ್ರಜ್ಞಾನದ ಅವಶ್ಯಕತೆ ಇದ್ದರೆ, ವಿಜ್ಞಾನ ತಾನೇ ತಾನಾಗಿ ಮುಂದುವರಿಯುವುದು. ವಿಶ್ವವಿದ್ಯಾಲಯಗಳ ಸ್ಥಾಪನೆಯಿಂದ ಮಾತ್ರ ವಿಜ್ಞಾನ ಬೆಳೆಯುತ್ತದೆಯೆಂಬುದು ಭ್ರಮೆಯಷ್ಟೆ!

ಪ್ರೊ॥ ಎಂ. ಎ. ಸೇತುರಾವ್

೨೦ನೆಯ ಶತಮಾನದಲ್ಲಿ ವಿಜ್ಞಾನ ಒಂದು ಬೃಹತ್ ವ್ಯವಸ್ಥೆಯಾಗಿ ಬೆಳೆಯಿತಷ್ಟೆ. ಅಂತೆಯೇ ಈ ವ್ಯವಸ್ಥೆಗೆ ಸಾಕಷ್ಟು ಧನಸಹಾಯ ಅಗತ್ಯವಾಗಿದೆ. ಸರ್ಕಾರ ಅಥವಾ ಸರ್ಕಾರದಿಂದ ಪೋಷಿತವಾದ ಸಂಸ್ಥೆಗಳ ಮತ್ತು ವ್ಯವಸ್ಥೆಗಳ ಧನಸಹಾಯವಿಲ್ಲದೆ ವಿಜ್ಞಾನದ ಬೆಳವಣಿಗೆ ಕುಂಠಿತವಾಗುವುದು ಸಹಜ. ಈ ಕಾರಣಕ್ಕಾಗಿಯೇ ವಿಜ್ಞಾನ ಆಳುವ ಬಂಡವಾಳಶಾಹಿ ವರ್ಗದ ಒಂದು ಸಾಧನವಾಗಿದೆ. ಬಂಡವಾಳಶಾಹಿ ವರ್ಗವಾದರೋ ತನ್ನ ಅನುಕೂಲಕ್ಕೆ ಅಗತ್ಯವಾದ ವೈಜ್ಞಾನಿಕ ಸಂಶೋಧನೆಗಳನ್ನು ಮಾತ್ರ ಬಳಸಿಕೊಳ್ಳುವುದರಲ್ಲಿ ನಿರತವಾಗಿದೆ. ಜೀನ್‌ಗಳನ್ನು ಕುರಿತಾದ ಸಂಶೋಧನೆಗಳು ಜಗತ್ತನ್ನೇ ವಿಸ್ಮಯಗೊಳಿಸುವ ಹಂತವನ್ನು ಮುಟ್ಟಿದ್ದರೂ, ಆನುವಂಶಿಕ ಕಾಯಿಲೆಗಳನ್ನು ಗುಣಪಡಿಸುವ ''ಜೀನ್ ಥೆರಪಿ'' ಇನ್ನೂ ಶೈಶವಾವಸ್ಥೆಯಲ್ಲೇ ಇರುವುದು ಇದಕ್ಕೆ ಉದಾಹರಣೆಯಾಗಿದೆ. ಆದರೆ, ಪರಮಾಣು ಶಸ್ತ್ರಾಸ್ತ್ರಗಳನ್ನೂ, ಕ್ಷಿಪಣಿಗಳನ್ನೂ, ವಿಷವಾಯುಗಳನ್ನೂ, ಇನ್ನಿತರ ಮಾರಕ ಅಸ್ತ್ರಗಳನ್ನೂ ತಯಾರು ಮಾಡಲು ಎಲ್ಲೂ ಇಲ್ಲದ ಆತುರ. ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಎದ್ದು ಕಾಣುತ್ತಿರುವ ಆರ್ಥಿಕ ಮುಗ್ಗಟ್ಟಿನ ಒಂದು ಮುಖ ಇದು. ಈ ರಾಷ್ಟ್ರಗಳು ಆರ್ಥಿಕ ಮುಗ್ಗಟ್ಟನ್ನು ಎದುರಿಸಲಾರದೆ, ಸಮಾಜವಾದದ ಆಧಾರದ ಮೇಲೆ ಹೊಸ ವ್ಯವಸ್ಥೆಯಾಗುವುದೆಂಬುದು ಮಾರ್ಕ್ಸ್‌ನ ವಾದವಷ್ಟೆ. ಆದರೆ ಈ ಮುಗ್ಗಟ್ಟನ್ನು ಎದುರಿಸುವ ಮತ್ತು ಮುಂದೂಡುವ ತಂತ್ರವನ್ನು ಬಂಡವಾಳಶಾಹಿ ರಾಷ್ಟ್ರಗಳು ಕಂಡುಕೊಂಡಿವೆ. ಎರಡನೆಯ ಜಾಗತಿಕ ಯುದ್ಧವಾದ ನಂತರ ಯೂರೋಪಿನ ರಾಷ್ಟ್ರಗಳ ಮರು ವ್ಯವಸ್ಥೆಗೆಂದು ಅಮೆರಿಕ ಮಾರ್ಷಲ್ ಆರ್ಥಿಕ ಸಹಾಯ (ಏಡ್) ಮತ್ತಿತರ ಯೋಜನೆಗಳನ್ನು ಅನುಷ್ಠಾನಕ್ಕೆ ತಂದದ್ದು ಸರಿಯಷ್ಟೆ. ಈ ಮಾರ್ಷಲ್ ಯೋಜನೆಯಿಂದ ಐರೋಪ್ಯ ರಾಷ್ಟ್ರಗಳ ಪುನರುಜ್ಜೀವನ ಸಾಧ್ಯವಾಗಲಿಲ್ಲವೆಂಬುದು ಚರಿತ್ರೆಯ ಅಂಶವಾಗಿ ನಿಂತಿದೆ. ಬೂರ್ಜ್ವಾ ಅರ್ಥಶಾಸ್ತ್ರಜ್ಞರೇ ಮಾರ್ಷಲ್ ಏಡನ್ನು ''ಆರ್ಥಿಕ ಮುಗ್ಗಟ್ಟನ್ನು ಬೇರೆ ದೇಶಗಳಿಗೆ ರಫ್ತು ಮಾಡುವ ಉಪಾಯ'' ಎಂದು ವಿಶ್ಲೇಷಿಸಿದ್ದಾರೆ.

ಮಾರ್ಕ್ಸ್‌ನ ತಾತ್ವಿಕ ತೀರ್ಮಾನಗಳಿಗೂ ಭೌತಿಕ ವಾದದ ನಿಯಮಗಳಿಗೂ ವ್ಯತ್ಯಾಸವಿದೆ. ಮಾರ್ಕ್ಸ್ ವಾದವನ್ನು ಭೌತಿಕ ನಿಯಮದಂತೆ ಅರ್ಥೈಸಲು ಹೊರಟರೆ ಅದು ತಪ್ಪಾಗುತ್ತದೆ. ಮಾರ್ಕ್ಸ್‌ವಾದ ಮಾನವ ಸಮಾಜದ ಬದಲಾವಣೆಯನ್ನು ಕುರಿತಾಗಿದೆ. ಪ್ರಕೃತಿಯ ನಿಯಮಗಳಿಗೂ ಮಾರ್ಕ್ಸ್‌ವಾದದ ಆಧಾರದ ಮೇಲೆ ನಿರೂಪಿಸಿದ ತೀರ್ಮಾನಗಳಿಗೂ ಮೂಲಭೂತವಾದ

ವ್ಯತ್ಯಾಸವಿದೆ. ಭೌತಿಕ ನಿಯಮಗಳಿಗೆ ಅನಿವಾರ್ಯತೆ ಇರಬಹುದು. ಆದರೆ, ಮಾನವಸಮಾಜದ ಬದಲಾವಣೆಯಾಗುವುದರಲ್ಲಿ ಈ ರೀತಿಯ ಅನಿವಾರ್ಯತೆ ಇರಲಿಕ್ಕೆ ಸಾಧ್ಯವಿಲ್ಲ. ಕಮ್ಯೂನಿಸ್ಟ್ ಪ್ರಣಾಳಿಕೆಯಲ್ಲಿ (೧೮೪೮) ''ದುಡಿಮೆಯ ಫಲವನ್ನು ತಮ್ಮದಾಗಿಸಿಕೊಳ್ಳುವವರನ್ನು ಹಾಗೆ ಮಾಡಲು ಅಶಕ್ತರನ್ನಾಗಿಸಲಾಗುವುದು'' ಎಂದಿದೆ. ಇದು ಭೌತ ನಿಯಮಗಳಂತೆ ಕರಾರುವಾಕ್ಕಾಗಿರುತ್ತದೆಯೆಂದು ಹೇಳಲು ಸಾಧ್ಯವಿಲ್ಲ. ಕಾರಣ, ಈ ರೀತಿಯ ಸಾಮಾಜಿಕ ಬದಲಾವಣೆಗಳಿಗೆ ಮಾನವ ಪ್ರಯತ್ನ ಅನಿವಾರ್ಯ. ಮಾನವನ ಪ್ರಜ್ಞಾಪೂರ್ವಕ ಕ್ರಿಯಾಶೀಲತೆಯಿದ್ದರೆ ಮಾತ್ರ ಸಾಮಾಜಿಕ ಕ್ರಾಂತಿ ಫಲಿಸಬಹುದು. ಈ ಅಂಶವನ್ನು ಮರೆತು ಸಾಮಾಜಿಕ ಕ್ರಾಂತಿ ತಾನೇ ತಾನಾಗಿ ಫಲಿಸುವುದೆಂಬ ಭಾವನೆ, ಮನುಷ್ಯನನ್ನು ಕೇವಲ ಯಂತ್ರವನ್ನಾಗಿ ನೋಡುವುದು, ಯಾಂತ್ರಿಕ ವಾಸ್ತವತಾವಾದದ ಪರಮಾವಧಿ ಎನಿಸೀತು!

ವಸ್ತು ಮತ್ತು ಅದನ್ನು ಗ್ರಹಿಸುವ ನಮ್ಮ ಪ್ರಜ್ಞೆಯ ಬಗ್ಗೆ ಮಾರ್ಕ್ಸ್ ಹೀಗೆ ಹೇಳಿದ : ''ನಾವು ಪ್ರಜ್ಞಾಪೂರ್ವಕವಾಗಿ ವಸ್ತುವನ್ನು ಗ್ರಹಿಸಲಿ ಅಥವಾ ಗ್ರಹಿಸದಿರಲಿ, ವಸ್ತು ನಿರಂತರವಾಗಿ ಅಸ್ತಿತ್ವದಲ್ಲಿರುತ್ತದೆ. ಆದರೆ, ಈ ವಸ್ತುನಿಷ್ಠೆ ಯಾಂತ್ರಿಕವಾಗಿರುವುದಿಲ್ಲ. ಇದು ಸಚೇತನವಾಗಿದ್ದು ನಮ್ಮ ಪ್ರಜ್ಞೆಯೂ ಸಚೇತನವಾಗಿರುತ್ತದೆ. ವಸ್ತುವಿನ ಗ್ರಹಿಕೆಗೆ ಸಂಬಂಧಪಟ್ಟ ವೀಕ್ಷಣೆಗಳನ್ನು ಕಾಲ, ಅವಕಾಶ ಮತ್ತು ವೀಕ್ಷಣೆಯ ವಿಧಾನಗಳು ಸೀಮಿತಗೊಳಿಸುತ್ತವೆ. ಹಾಗೆಂದು ಹೇಳಿದಾಗ ವೀಕ್ಷಣೆಗಳಿಂದ ಲಭಿಸಿದ ಜ್ಞಾನ ತಪ್ಪೆಂದು ಹೇಳಲಾಗದು. ಜ್ಞಾನ ಮತ್ತು ವಾಸ್ತವ ಸತ್ಯಗಳು ಒಂದರ ಮೇಲೊಂದು ಪಾರಸ್ಪರಿಕವಾದ ಎಳೆತವನ್ನು ಅನುಭವಿಸುತ್ತವೆ. ವಿಜ್ಞಾನದ ಪ್ರತಿಯೊಂದು ಪ್ರಗತಿಪರ ಹಂತವೂ ಈ ಎಳೆತ ಅಥವಾ ವೈರುಧ್ಯವನ್ನು ಹೊಸದೊಂದು ಮಟ್ಟಕ್ಕೆ ಕೊಂಡೊಯ್ಯುತ್ತದೆ.''

ಈ ವಾದವನ್ನು ನಾವು ಹಿನ್ನೆಲೆಯಾಗಿಟ್ಟುಕೊಂಡರೂ ಸಹ, ಮಾನವನ ಪ್ರಜ್ಞೆಯನ್ನು ಅರ್ಥೈಸುವುದು ಅಷ್ಟೇನೂ ಸುಲಭವಲ್ಲ. ಪ್ರಜ್ಞೆಯಲ್ಲಿ ಸಾಕಷ್ಟು ಸಂಕೀರ್ಣತೆ ಇರುತ್ತದೆ. ಈ ಸಂಕೀರ್ಣತೆಯನ್ನು ಅಸಡ್ಡೆ ಮಾಡಿ ಇಡಿಯಾಗಿ ಸರಳೀಕರಿಸಿದರೆ ತಪ್ಪಾದೀತು. ಮಾರ್ಕ್ಸ್ ಹೇಳಿದಂತೆ ಮನಸ್ಸು ವಸ್ತುವಿನ ಅತ್ಯಂತ ಸಂಕೀರ್ಣತೆಯುಳ್ಳ ರೂಪಾಂತರ.

ಬಾಹ್ಯಾಕಾಶ ಎಷ್ಟು ವಿಶಾಲವೋ ಮನಸ್ಸು ಎಂಬುದು ಅಷ್ಟೇ ವಿಶಾಲ ಸ್ವರೂಪವುಳ್ಳದ್ದು. ಪ್ರಕೃತಿಯನ್ನು ಪ್ರತಿಬಿಂಬಿಸುವ ಮನಸ್ಸು ಕೂಡ ವಿಶಾಲವಾಗಿದ್ದು ಶಿಕ್ಷಣ, ಪ್ರಾವೀಣ್ಯತೆ ಮತ್ತು ಅವಶ್ಯಕತೆಗಳ ಒತ್ತಡದಿಂದ ತನ್ನ ವಿಶಿಷ್ಟ ಶಕ್ತಿಯನ್ನು ಪಡೆದಿರುತ್ತದೆ. ತನ್ನ ಮನಸ್ಸಿನ ಪರಿಪೂರ್ಣ ಶಕ್ತಿಯನ್ನು ಪಡೆಯಲು ಸಾಧನೆಯ ಅಗತ್ಯವಿದೆ. ಇಂಥ ಮನಸ್ಸಿನ ಅದ್ಭುತ ಶಕ್ತಿ ವಸ್ತು ಮತ್ತು ವಾಸ್ತವತೆಗೆ ಹೊರತಲ್ಲ. ಮನಸ್ಸಿನ ಅನೇಕ ''ಅದ್ಭುತ ಶಕ್ತಿ''ಗಳನ್ನು ನಾವು ಈಗೀಗ ಅರ್ಥಮಾಡಿಕೊಳ್ಳಲು ಮೊದಲ ಹೆಜ್ಜೆಗಳನ್ನು ಇಟ್ಟಿದ್ದೇವೆ. ಹೀಗಾಗಿ ಎಲ್.ಎಸ್.ಡಿ., ಮಾರಿವಾನಾ ಮುಂತಾದ ಮಾದಕ ವಸ್ತುಗಳು ಮಿದುಳಿನ ಮೇಲೆ ಮಾಡುವ ಪರಿಣಾಮವನ್ನು ಮಿದುಳಿನಲ್ಲಿರುವ ನ್ಯೂರಾನ್ (ನರಕೋಶ)ಗಳ ನಡವಳಿಕೆ ಮತ್ತು ಅವುಗಳ ಮೇಲೆ ರಾಸಾಯನಿಕಗಳ ಪ್ರಭಾವಗಳ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿದೆ.

ಜನಸಂಖ್ಯಾಸ್ಫೋಟ ಹಾಗೂ ಆಹಾರದ ಲಭ್ಯತೆಯನ್ನು ಕುರಿತು ಮಾರ್ಕ್ಸ್ ಮತ್ತು ಎಂಗೆಲ್ಸ್ ಕಾಲದಲ್ಲೇ ಮಾಲ್ತಸ್ ತನ್ನ ನಿರಾಶಾವಾದದ ಸಿದ್ಧಾಂತವನ್ನು ಮಂಡಿಸಿದ್ದ. ಜನಸಂಖ್ಯಾ ಸ್ಫೋಟದೊಟ್ಟಿಗೇ ಕೃಷಿ ಭೂಮಿಯ ಫಲವತ್ತತೆ ಮತ್ತು ಉತ್ಪನ್ನ ಕ್ಷೀಣಿಸುವುದು ಖಚಿತವೆಂದು ಮಾಲ್ತಸ್ ಸಿದ್ಧಾಂತ ಸಾರಿತ್ತು. ಮಾರ್ಕ್ಸ್ ಮತ್ತು ಎಂಗೆಲ್ಸ್ ಈ ಸಿದ್ಧಾಂತಕ್ಕೆ ಸವಾಲನ್ನು ಹಾಕಿದ್ದರು. ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಪೂರ್ಣವಾಗಿ ಬಳಸಿಕೊಂಡು ಕೃಷಿಗೆ ಯೋಗ್ಯವಾದ ಜಮೀನನ್ನು [illegible] ಬಿತ್ತರೆ ಜನರಿಗೆ ಸಾಕಷ್ಟು ಧಾನ್ಯವನ್ನು ಒದಗಿಸಬಹುದೆಂಬ ಆಶಾವಾದವನ್ನು ಅವರು ವ್ಯಕ್ತಪಡಿಸಿದ್ದರು. ಸ್ವಲ್ಪ ಮಟ್ಟಿಗೆ ಅವರ ಅಭಿಪ್ರಾಯಗಳಿಗೆ ಹಸಿರು ಕ್ರಾಂತಿ ಪುಷ್ಟಿಯನ್ನೊದಗಿಸಿದೆಯೆಂದು ಹೇಳಬಹುದು. ಆದರೆ, ಇಂದಿನ ಜನಸಂಖ್ಯಾಸ್ಫೋಟವನ್ನು ಪರಿಗಣಿಸಿದರೆ, ೨೧ನೆಯ ಶತಮಾನದಲ್ಲಿ ವಿಶ್ವದ ಎಲ್ಲ ಜನತೆಗೂ ಸಾಕಷ್ಟು ಆಹಾರ ಒದಗಿಸುವುದು ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಒಂದು ಬೃಹತ್ ಸವಾಲಾಗಬಹುದು. ಮಾರ್ಕ್ಸ್ ಆಶಾವಾದಿಯಾಗಿದ್ದ. ಜನಸಂಖ್ಯೆಯ ಹೆಚ್ಚಳ ಅಗಾಧವಾದರೂ ವಿಜ್ಞಾನ ಮತ್ತು ತಂತ್ರಜ್ಞಾನ ಆ ಸವಾಲನ್ನು ಎದುರಿಸಲು ಶಕ್ತವಾಗಿರುತ್ತದೆಯೆಂಬ ವಿಶ್ವಾಸವನ್ನು ಮಾರ್ಕ್ಸ್ ಹೊಂದಿದ್ದ. ಮಾರ್ಕ್ಸ್- ಎಂಗೆಲ್ಸ್ ಪತ್ರ ವ್ಯವಹಾರದಲ್ಲಿ ಈ ಆಶಾಭಾವನೆಗಳು ವ್ಯಕ್ತವಾಗಿದೆ. 'ವಿಜ್ಞಾನಕ್ಕೆ ಏನು ಸಾಧ್ಯವಿಲ್ಲ!' ಎಂಬ ಮಾತನ್ನು ಮಾರ್ಕ್ಸ್ ಹೇಳಿದ್ದುಂಟು.

ವೈಜ್ಞಾನಿಕ ಸಿದ್ಧಾಂತಗಳಿಂದ ಗಳಿಸಿದ ಉಪಯುಕ್ತ ಫಲಿತಾಂಶಗಳನ್ನು ಅರ್ಥೈಸುವಲ್ಲಿ ಮಾರ್ಕ್ಸ್‌ವಾದ ತನ್ನ ಕೊಡುಗೆಯನ್ನು ನೀಡಿದೆ. ಇದಲ್ಲದೆ, ಈ ಸಿದ್ಧಾಂತಗಳನ್ನು ಸೃಷ್ಟಿಸಿದ ಸಾಮಾಜಿಕ ಶಕ್ತಿಗಳನ್ನು ಗುರುತಿಸುವ ವಿಧಾನವನ್ನೂ ಮಾರ್ಕ್ಸ್‌ವಾದ ಕಲಿಸಿದೆ. ಆಧುನಿಕ ವಿಜ್ಞಾನ ಔದ್ಯೋಗಿಕ ಕ್ರಾಂತಿಯ ಕಾಲದಲ್ಲಿ ಬೇರೂಡೆಯಿತೆಂಬುದನ್ನು ನಾವಿಲ್ಲಿ ಸ್ಮರಿಸಿಕೊಳ್ಳಬಹುದು. ಹೀಗಾಗಿ ಬಂಡವಾಳಶಾಹಿ ಕಾಲದ ವಿರೋಧ ಬಣಗಳನ್ನೂ ಸಂಘರ್ಷಗಳನ್ನೂ ಅರ್ಥಮಾಡಿಕೊಳ್ಳದೆ ವಿಜ್ಞಾನದ ಅಭಿವೃದ್ಧಿಯನ್ನು ಅರ್ಥಪೂರ್ಣವಾಗಿ ವಿವರಿಸಲು ಸಾಧ್ಯವಿಲ್ಲ. ವರ್ಗ ಸಂಘರ್ಷಗಳ ಹಿನ್ನೆಲೆಯಲ್ಲಿ, ಮಾನವನ ಆರ್ಥಿಕ ಅವಶ್ಯಕತೆಗಳ ಅನಿವಾರ್ಯತೆಯಲ್ಲಿ ಮತ್ತು ಉತ್ಪನ್ನ ಬಲಗಳ ಆಸರೆಯಿಂದ ವಿಜ್ಞಾನ ಗ್ರೀಕ್ ಕಾಲದಿಂದ ಇಂದಿನವರೆಗೆ ಹೇಗೆ ವಿಕಾಸಹೊಂದಿದ [illegible] ಸಮಗ್ರ, ಚಾರಿತ್ರಿಕ [illegible] ಅಧ್ಯಯನ ಮಾಡಿದವರು ಜೆ.ಡಿ.ಬರ್ನಾಲ್ ಅವರು ಬರೆದ 'ಸೈನ್ಸ್ ಇನ್ ಹಿಸ್ಟರಿ' ಈ ಕ್ಷೇತ್ರದ ಮೇರು ಪರ್ವತ. ಬರ್ನಾಲ್ ಹೇಳಿದಂತೆ ವಿಜ್ಞಾನದ ಶಾಖೆಗಳ ಸಮನ್ವಯವೇ ಮಾರ್ಕ್ಸ್‌ನ ವಾದದ ತಿರುಳಾಗಿತ್ತು. ಪ್ರಕೃತಿ ವಿಜ್ಞಾನ ಮತ್ತು ಸಾಮಾಜಿಕ ವಿಜ್ಞಾನವನ್ನು ಬೇರ್ಪಡಿಸುವ ದೃಷ್ಟಿಯನ್ನು ಮಾರ್ಕ್ಸ್ ತಳ್ಳಿಹಾಕಿದ್ದ. ಕಾರ್ಲ್ ಮಾರ್ಕ್ಸ್‌ಗೆ ವಿಜ್ಞಾನದ ಬಗ್ಗೆ ಇದ್ದ ದೃಢ ವಿಶ್ವಾಸವನ್ನು ಎಂಗೆಲ್ಸ್ ಮಾರ್ಕ್ಸ್ ನಿಧನ ಸಂದರ್ಭದಲ್ಲಿ ಹೇಳಿದ ಮಾತುಗಳಿಂದ ಮನದಟ್ಟಾಗುತ್ತದೆ. ''ಮಾರ್ಕ್ಸ್ ಒಬ್ಬ ವಿಜ್ಞಾನಿ. ಇಷ್ಟು ಹೇಳಿದರೆ ಸಾಲದು. ಮಾರ್ಕ್ಸ್‌ಗೆ ವಿಜ್ಞಾನ ಒಂದು ಚಾರಿತ್ರಿಕ, ಕ್ರಿಯಾತ್ಮಕ ಮತ್ತು ಕ್ರಾಂತಿಕಾರಕ ಬಲವಾಗಿ ಕಾಣಿಸಿತು.''

ಒಟ್ಟಿನಲ್ಲಿ ವಿಜ್ಞಾನದ ಬಗ್ಗೆ ಮಾರ್ಕ್ಸ್ ತಳೆದಿದ್ದ ಭಾವನೆಗಳು ಇಂದಿಗೂ ಸುಸಂಗತ. ವಿಜ್ಞಾನ ಮತ್ತು ತಂತ್ರಜ್ಞಾನಕ್ಕೂ ವರ್ಗ ಸಂಘರ್ಷಕ್ಕೂ ಇರುವ ಸಂಬಂಧ ಇಂದಿಗೂ ಮಾರ್ಕ್ಸ್ ಹೇಳಿದಂತೆಯೇ ಇದೆ. ವರ್ಗ ಸಂಘರ್ಷವಿಲ್ಲದೆ ವೈಜ್ಞಾನಿಕ ಅಭಿವೃದ್ಧಿ ಯಾವ ಮಟ್ಟಕ್ಕೆ ಏರಿದರೂ ಸಮಾಜದ ದೀನ ದಲಿತವರ್ಗದವರಿಗೆ ವಿಜ್ಞಾನದ ಫಲ ದೊರಕದಿರಬಹುದು. ಹಾಗೆ ನೋಡಿದರೆ, ಸಮಾಜವಾದದ ಅವಲಂಬನೆಯಿಲ್ಲದೆ ವಿಜ್ಞಾನದ ಸಂಪೂರ್ಣ ಬಳಕೆ ಕೇವಲ ಕನಸಿನ ಗಂಟಾಗುತ್ತದೆ. ಮಾರ್ಕ್ಸ್ ಒಬ್ಬ ವೈಜ್ಞಾನಿಕ ಚಿಂತಕ ಹಾಗೂ ಸಾರ್ವಜನಿಕ ಜೀವನದಲ್ಲಿ ಹೋರಾಟಗಾರ. ಮಾರ್ಕ್ಸ್‌ನ ಜೀವನವನ್ನು ಅರ್ಥಮಾಡಿಕೊಳ್ಳಬೇಕಾದರೆ ಅವನ ಈ ಎರಡು ಮುಖಗಳ ಪರಿಚಯ ಅತ್ಯಗತ್ಯ. ವಿಜ್ಞಾನಿಯಾದವನು ಸಾರ್ವಜನಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕೆಂದು ಮಾರ್ಕ್ಸ್ ಒತ್ತಾಯ ಪೂರ್ವಕವಾಗಿ ಹೇಳುತ್ತಿದ್ದ. ಸಮಕಾಲೀನ ರಾಜಕೀಯ ಮತ್ತು ಸಾಮಾಜಿಕ ಸಂಘರ್ಷಗಳಲ್ಲಿ ವಿಜ್ಞಾನಿ ಪಾಲ್ಗೊಳ್ಳಬೇಕೆಂದು ಮಾರ್ಕ್ಸ್ ದೃಢವಾಗಿ ನಂಬಿದ್ದ. ತನ್ನ ಜೀವನದಲ್ಲೇ ಈ ಮಾರ್ಗವನ್ನು ಅವಲಂಬಿಸಿದ್ದ. ಈ ನಿಟ್ಟಿನಲ್ಲಿ ಅವನ ಉಕ್ತಿಗಳನ್ನೇ ಉದ್ಧರಿಸುವುದು ಸೂಕ್ತ: ''ವೈಜ್ಞಾನಿಕ ಹವ್ಯಾಸಗಳಲ್ಲಿ ತೊಡಗಿಸಿಕೊಳ್ಳುವ ಭಾಗ್ಯವಂತರು ತಮ್ಮ ಜ್ಞಾನ ಭಂಡಾರವನ್ನು ಜನತೆಯ ಸೇವೆಗೆ ಅರ್ಪಿಸಬೇಕು.''

ಮಾರ್ಕ್ಸ್‌ನ ಬಹುಮುಖ ಪ್ರತಿಭೆಯನ್ನು ಗಮನಿಸಿದರೆ, ಆತನನ್ನು ಕಳೆದ ಸಹಸ್ರಮಾನದ ಅದ್ವಿತೀಯ ವ್ಯಕ್ತಿಯೆಂದು ಪರಿಗಣಿಸಿದರೆ ತಪ್ಪಾಗಲಾರದು.

ಪ್ರೊ॥ ಎಂ. ಎ. ಸೇತುರಾವ್
[illegible]
ಬೆಂಗಳೂರು-೫೬೦ [illegible]

ಕೆಲಸದ ಸ್ಥಳದಲ್ಲಿ ಹೆಂಗಸರ ಮೇಲಿನ ದೌರ್ಜನ್ಯ

ಡಾ॥ ಎಸ್. ಗಾಯತ್ರಿ

ಈಗ ಭಾರತದಲ್ಲಿ ಸುಮಾರು ಒಂಬತ್ತು ಕೋಟಿಗೂ ಹೆಚ್ಚು ದುಡಿಯುವ ಮಹಿಳೆಯರಿದ್ದಾರೆ. ಈ ದುಡಿಮೆಯ ರಂಗದಲ್ಲಿ ಹೆಣ್ಣಾಗಿ ಹುಟ್ಟಿರುವ ಕಾರಣದಿಂದಲೇ ಅವರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ರೂಪನ್ ಬಜಾಜ್‌ನಂತಹ ಪೋಲೀಸ್ ಅಧಿಕಾರಿಣಿಯಿಂದ ಹಿಡಿದು ಸ್ವಯಂ ಸೇವಕಿಯಾಗಿ ಕೆಲಸ ಮಾಡುತ್ತಿರುವ ಭಾಂವ್ರಿದೇವಿಯವರೆಗೂ ಮಹಿಳೆಯರು ಲೈಂಗಿಕ ಕಿರುಕುಳ, ಅಪಮಾನಗಳಿಗೆ ಗುರಿಯಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ದುಡಿಯುವ ಮಹಿಳೆಗೆ ಸ್ವಲ್ಪ ಸಾಂತ್ವನ ನೀಡುವ ದಿಕ್ಕಿನಲ್ಲಿ ಸರ್ವೋಚ್ಚ ನ್ಯಾಯಾಲಯ ನೀಡಿರುವ ಒಂದು ತೀರ್ಪಿನ ಚರ್ಚೆ ಇಲ್ಲಿದೆ.

ಸವಿತಾ ಇಪ್ಪತ್ತರ ತರುಣಿ. ಆಕರ್ಷಕ ದೇಹ ಸೌಂದರ್ಯದ, ಅಗಾಧ ಬುದ್ಧಿಮತ್ತೆಯ ಚುರುಕು ಸ್ವಭಾವದ ಹುಡುಗಿ. ಅವಳ ಮಾರ್ಕ್ಸ್ ಕಾರ್ಡಿನ ಬಲದಿಂದಲೇ ರೈಲ್ವೇ ಇಲಾಖೆಯಲ್ಲೊಂದು ನೌಕರಿ ದೊರೆತಾಗ ಸ್ವರ್ಗ ಕೈಗೆಟುಕಿದಷ್ಟು ಸಂತೋಷ. ದೂರದ ಮೈಸೂರಿನಲ್ಲಿ ಕೆಲಸಕ್ಕೆ ಹಾಜರಾಗಬೇಕೆಂದರೂ ಕೊಂಚವೂ ಬೇಸರಿಸದೆ ತನ್ನೂರಾದ ಧಾರವಾಡವನ್ನು ಬಿಟ್ಟು ಮೈಸೂರಿಗೆ ಹೊರಟಿದ್ದಳು. ಮನೆಯಲ್ಲಿ ಕಿತ್ತು ತಿನ್ನುತ್ತಿದ್ದ ಬಡತನಕ್ಕೆ ಉದ್ಯೋಗವೇ ಒಂದು ನೇರ ಪರಿಹಾರವಾಗಿತ್ತು. ಆದ್ದರಿಂದ ಕೆಲಸ ಯಾವುದಾದರೇನಂತೆ, ಊರು ಯಾವುದಾದರೇನಂತೆ ಎಂದು ಮೈಸೂರಿನ ಹಾಸ್ಟೆಲ್‌ನಲ್ಲಿದ್ದು ಕೆಲಸಕ್ಕೆ ಹಾಜರಾದಳು. ಅವಳು ಕೆಲಸ ಮಾಡಬೇಕಿದ್ದ ಇಲಾಖೆಯಲ್ಲೂ ಎಲ್ಲಾ ಸುಗಮವಾಗಿದ್ದಂತೆ, ಸಹೋದ್ಯೋಗಿಗಳು ಸ್ನೇಹಪರರಿದ್ದಂತೆ ಅವಳಿಗೆ ಜೀವನ ಆನಂದದಾಯಕವಾಗಿತ್ತು. ಒಮ್ಮೆ ಅವಳು ಧಾರವಾಡಕ್ಕೆ, ತನ್ನೂರಿಗೆ ಹೊರಡಲು ರೈಲು ಹತ್ತಿದ್ದಾಗ ಅವಳದೇ ಬೋಗಿಯಲ್ಲಿ ಅವಳ ಬಾಸ್ ಕೂಡ ಪ್ರಯಾಣಿಸುತ್ತಿದ್ದ. ಒಂದೆರಡು ವರ್ಷಗಳಲ್ಲಿ ನಿವೃತ್ತರಾಗಲಿದ್ದ ಅವಳ ಬಾಸ್ ಅಂಗವಿಕಲರು. ಊರುಗೋಲಿನ ಸಹಾಯವಿಲ್ಲದೆ ನಡೆಯಲಾರದ ಅವಳ ಬಾಸ್ ಧಾರವಾಡಕ್ಕೆ ತಮ್ಮ ಮಗಳ ಮನೆಗೆ ರಜೆಗೆ ಹೊರಟಿದ್ದರು. ತಮ್ಮ ಸಹೋದ್ಯೋಗಿ ಸವಿತಾಳನ್ನು ಕಂಡೊಡನೆ ಆ ಅಧಿಕಾರಿಗೆ ಮುಖವರಳಿತು. ಪರಿಚಯ, ಸ್ನೇಹ ಎರಡೂ ಇದ್ದ ಸವಿತಾಳ ನೆರವನ್ನು ರೈಲು ಪ್ರಯಾಣದುದ್ದಕ್ಕೂ ಬಳಸಿಕೊಂಡರು. ರಾತ್ರಿಯ ಸಮಯ, ರೈಲು ಚಲಿಸುತ್ತಿದೆ. ಸವಿತಾಳಿಗೆ ಸವಿ ನಿದ್ದೆಯ ಸಮಯದಲ್ಲಿ ಯಾರೋ ತನ್ನ ಮೈಮೇಲೆಲ್ಲಾ ಸ್ಪರ್ಶಿಸಿದಂತಾಯಿತು. ಕಣ್ಣು ಬಿಟ್ಟರೆ ತನ್ನ ಅಧಿಕಾರಿ. ತಂದೆಯ ವಯಸ್ಸಿನ ಆ ಅಧಿಕಾರಿ ಅವಳನ್ನು ಅಲುಗಾಡದಂತೆ ಬಿಗಿಯಾಗಿ ಆಲಂಗಿಸಿ ಕಪಿಮುಷ್ಟಿಯಲ್ಲಿರಿಸಿಕೊಂಡಿದ್ದಾನೆ. ಬಾಯಿ ತೆಗೆದು ಕೂಗೋಣವೆಂದರೆ ಬಾಸ್‌ನ ಕೈ ಅವಳ ಬಾಯನ್ನೂ ಮುಚ್ಚಿದೆ. ಕ್ಷಣದಲ್ಲಿ ತನ್ನ ಕೈಯ ಶಕ್ತಿಯನ್ನೆಲ್ಲಾ ಕೂಡಿಸಿಕೊಂಡು ಅಧಿಕಾರಿಯ ಕೈಗಳನ್ನು ಕಿತ್ತೆಸೆದು ದೂರ ಹೊರಟುಬಿಟ್ಟಳು. ಬೆಳಗಾಗುವವರೆಗೂ ಹೇಗೋ ಸಾವರಿಸಿಕೊಂಡಿದ್ದು ಊರು ಬಂದನಂತರ ಆ ಅಧಿಕಾರಿಯ ಮುಖವನ್ನೂ ನೋಡದೆ ತನ್ನ ಹಾದಿ ಹಿಡಿದಳು.

ಆದರೆ ಮತ್ತೆ ಕೆಲಸಕ್ಕೆ ಮರಳಿದಾಗ ಅದೇ ಅಧಿಕಾರಿಯನ್ನು ಎದುರಿಸಬೇಕಲ್ಲಾ! ಹೆಂಡತಿ ಸತ್ತು ವಿಧುರನಾಗಿದ್ದ ಆ ಅಧಿಕಾರಿ ಈ ಪ್ರಕರಣವನ್ನು ಅಲ್ಲಿಗೇ ಬಿಡಲಿಲ್ಲ. ಪ್ರತಿದಿನ ತನ್ನ ಜಾಗಕ್ಕೆ ಅವಳನ್ನು ವಿನಾಕಾರಣ ಕರೆಸುವುದು, ಅವಳಿಗೆ ಅಸಹ್ಯವೆನಿಸುವಂತಹ ಮಾತುಗಳನ್ನಾಡಿ ಅವಳನ್ನು ಮನೆಗೆ ಆಹ್ವಾನಿಸುವುದು, ಕೊನೆಗೆ ಇವು ಯಾವುದಕ್ಕೂ ಸೊಪ್ಪುಹಾಕದ ಸವಿತಾಳ ಕೆಲಸದಲ್ಲಿ ತಪ್ಪು ಹುಡುಕಲು ಆರಂಭಿಸಿದ. ಹಲವಾರು ಕಷ್ಟಗಳ ಹೊರೆಯನ್ನೂ ಸೃಷ್ಟಿಸಿದ. ಕೊನೆಗೆ ಮೆಮೋ, ಚಾರ್ಜ್‌ಶೀಟ್‌ಗಳೂ ಸೃಷ್ಟಿಯಾದವು. ಯಾವುದಕ್ಕೂ ಸವಿತಾ ಬಗ್ಗದಾಗ ಪ್ರೊಬೇಷನರಿ ಅವಧಿಯಲ್ಲಿದ್ದ ಅವಳನ್ನು ಕೆಲಸದಿಂದಲೇ ವಜಾ ಮಾಡುವ ಅತಿರೇಕಕ್ಕೂ ಹೋದ. ಈ ಕಾಟ, ಅವಮಾನ, ಅಧಿಕಾರಿಯ ಅಸಹ್ಯ ವರ್ತನೆ ತಾಳಲಾರದೆ ಸವಿತಾ ತಾನೇ ಮುಂದಾಗಿ ರಾಜಿನಾಮೆಯಿತ್ತು ಕೆಲಸ ಬಿಟ್ಟು ನಡೆದಳು.

* * *

ಮನೆಗೆಲಸದ ರತ್ನಳದು ಮತ್ತೊಂದು ದುರಂತ ಕಥೆ. ಮೂರು ಮಕ್ಕಳನ್ನು ಅವಳಿಗೆ ಕೊಟ್ಟ ಗಂಡ ಇನ್ನೊಂದು ಹೆಣ್ಣಿನ ಸೆರಗು ಹಿಡಿದುಹೋದ. ಮನೆಗೆಲಸದ ಆದಾಯದಿಂದಲೇ ಜೀವನ ಸಾಗಿಸಬೇಕಾದ ರತ್ನ ನಾಲ್ಕು ಮನೆಯಲ್ಲಿ ಚಾಕರಿ ಮಾಡುತ್ತಾಳೆ. ಅದರಲ್ಲಿ ದೊಡ್ಡಮನೆ ರಾಮರಾಯರ ಮನೆಯಲ್ಲಿ ಅವರ ಹೆಂಡತಿ, ಮಕ್ಕಳು ಊರಿಗೆ ಹೋದಾಗೆಲ್ಲ ರತ್ನಳಿಗೆ ಆ ಮನೆಗೆ ಹೋಗಲು ಭಯ, ಆತಂಕ. ಕುಟುಂಬ ಊರಿನಲ್ಲಿ ಇಲ್ಲದಾಗ ರತ್ನಳ ಮೇಲೆ ಆಕ್ರಮಣದ ಅಭಿಲಾಷೆಯನ್ನು ವ್ಯಕ್ತಪಡಿಸುವ ಆ ರಾಮರಾಯನ ಮನೆಯನ್ನು ಆ ಕಾರಣಕ್ಕಾಗಿ ಬಿಟ್ಟುಬಿಡುವ ಪರಿಸ್ಥಿತಿಯಲ್ಲಿಲ್ಲ. ಆ ಮನೆಯವರು ನೀಡುವ ಒಂದು ಸಾವಿರ ರೂಪಾಯಿ ಸಂಬಳ ಸಂಪಾದಿಸಬೇಕಾದರೆ ಅವಳು ಮತ್ತೆ ನಾಲ್ಕು ಮನೆಯಲ್ಲಿ ದುಡಿಯಬೇಕು! ಯಾವುದಕ್ಕೆ ಯಾವುದು ಪರ್ಯಾಯ ? ದಿಕ್ಕೇ ತೋಚದ ಪರಿಸ್ಥಿತಿ ರತ್ನಳದು.

* * *

ರಾಷ್ಟ್ರೀಕೃತ ಬ್ಯಾಂಕೊಂದರಲ್ಲಿ ಕೆಲಸ ಮಾಡುವ ರಾಧಾ ಮೂವತ್ತು ವರ್ಷಗಳಾಗಿದ್ದರೂ ಅವಿವಾಹಿತಳಾಗಿಯೇ ಉಳಿದಿದ್ದಾಳೆ. ಕಾರಣವೇನೇ ಇರಲಿ, ಅವಳಿಗೆ ತನ್ನ ಬ್ಯಾಂಕಿನಲ್ಲಿ ಕೆಲಸ ಮಾಡುವವರನ್ನು ಮದುವೆಯಾಗಲು ಮನಸ್ಸಿಲ್ಲ. ಅವಳ ಅಪೇಕ್ಷೆಗೆ ತಕ್ಕ ವರ ಇನ್ನೂ ದೊರೆತಿಲ್ಲ. ಆದರೆ ಅವಳ ಸಹೋದ್ಯೋಗಿ ರಮಣನಿಗೆ ಅವಳನ್ನು ಮದುವೆಯಾಗುವ ಹುಚ್ಚು. ಎಷ್ಟೋ ಬಾರಿ ಅವಳಲ್ಲಿ ತನ್ನ ಹಂಬಲವನ್ನು ತೋಡಿಕೊಂಡಾಗಿದೆ. ಆದರೆ ರಾಧಾ ಬಿಲ್‌ಕುಲ್ ಆಗಿ ತಾನು ಮದುವೆಯಾಗುವುದಿಲ್ಲವೆಂದು ತಿಳಿಸಿದಾಗ ರಮಣನ ಅಹಂಗೆ ಭಾರಿ ಜಖಂ ಆಯಿತು. ಅವಳಿಗೆ ಬ್ಲಾಕ್‌ಮೇಲ್ ಮಾಡಲು ಆರಂಭಿಸಿದ. ಬ್ಯಾಂಕಿನಲ್ಲಿರುವವರಿಗೆಲ್ಲಾ ಇನ್ನೇನು ತಾವಿಬ್ಬರೂ ಮದುವೆಯಾಗುತ್ತಿರುವುದಾಗಿ ಸುದ್ದಿ ಹಬ್ಬಿಸಿದ. ಎಲ್ಲರೂ ಬಂದು ರಾಧಾನ ಅಭಿನಂದಿಸುವವರೇ! ಈ ಎಲ್ಲಾ ಸುದ್ದಿ ಸುಳ್ಳೆಂದು ರಾಧಾ ಹೇಳಿದಾಗ, ಎಲ್ಲರ ದೃಷ್ಟಿಯಲ್ಲಿ ಅಪರಾಧಿಯಾದವಳು ರಾಧಾಳೆ ಹೊರತು ರಮಣನಲ್ಲ. ರಾಧಾಗೆ ಅನವಶ್ಯಕವಾಗಿ ಫೋನ್ ಮಾಡುತ್ತಾ ರಮಣ ಎಲ್ಲೆಂದರಲ್ಲಿ ಕಾಡತೊಡಗಿದ.

* * *

ಕೇಂದ್ರ ಸರ್ಕಾರದ ಕಚೇರಿಯೊಂದರಲ್ಲಿ ರೂಪ ಅಕೌಂಟ್ಸ್ ಆಫೀಸರ್. ಅವಳ ಕೈಕೆಳಗಿನ ಹಲವಾರು ಮಂದಿಯ ಕೆಲಸ ಕಾರ್ಯವನ್ನು ವೀಕ್ಷಿಸಿ, ಅವರ ಬಿಲ್‌ಗಳನ್ನು ಪರೀಕ್ಷಿಸಿ ಹಣ ಸಂದಾಯ ಮಾಡುವ ಜವಾಬ್ದಾರಿ ಅವಳದು. ಸುಳ್ಳು ಬಿಲ್‌ಗಳನ್ನು ಹೊಂದಿಸಿಕೊಂಡು ಹಣ ಪಡೆಯಲು ಬಂದ ಮುನಿಯಪ್ಪನ ಬಿಲ್ ಪಾಸಾಗದಾಗ ಅವನ ಕೋಪ ನೆತ್ತಿಗೇರಿತು. ಅವಳು ಅಧಿಕಾರಿಯಾದರೂ ಅವನ ದೃಷ್ಟಿಯಲ್ಲಿ ಯಃಕಶ್ಚಿತ್ ಹೆಣ್ಣು ತಾನೇ? ವಾಚಾಮಗೋಚರವಾಗಿ ನಿಂದಿಸಿದ. ಇದಕ್ಕೆಲ್ಲಾ ಜಗ್ಗದೆ ಅವಳು ತನ್ನ ನಿರ್ಧಾರವನ್ನು ಸಮರ್ಥಿಸಿಕೊಂಡಾಗ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಕೋಪ ತಡೆಯಲಾರದೆ ಅವಳ ಸೀರೆಗೇ ಕೈ ಹಾಕಿದ ಆಧುನಿಕ ದುಶ್ಶಾಸನ !


* * *

ಲಿಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ನರ್ಸ್. ಹಗಲು, ರಾತ್ರಿ ಪಾಳಿಯ ಡ್ಯೂಟಿಯನ್ನು ಮಾಡಲೇಬೇಕಾದ ಅವಳಿಗೆ ರಾತ್ರಿಯ ಡ್ಯೂಟಿಯೆಂದರೆ ಸಿಂಹಸ್ವಪ್ನ. ಡಾ॥ ಕೃಷ್ಣಪ್ಪ

ರಾತ್ರಿಯ ಪಾಳಿಯ ಡ್ಯೂಟಿಗೆ ಬಂದಾಗೆಲ್ಲಾ ಆಸ್ಪತ್ರೆಯಲ್ಲಿ ಹೆಚ್ಚು ಜನರೂ ಇಲ್ಲದ ಸಮಯದಲ್ಲಿ ಅವಳೊಡನೆ ಕೃಷ್ಣಲೀಲೆ ಆರಂಭಿಸುವನು. ಇನ್ನೂ ಪ್ರೊಬೇಷನರಿ ಅವಧಿಯಲ್ಲಿರುವ ನರ್ಸ್ ಲಿಲ್ಲಿಗೆ ತನ್ನೊಡನೆ ಸಹಕರಿಸಲು ಸೂಚಿಸುವನು; ಇಲ್ಲದಿದ್ದರೆ ಕೆಲಸ ಕಳೆದುಕೊಳ್ಳಬೇಕಾದೀತೆಂದು ಬೆದರಿಸುವನು. ದೂರದೂರಿನಿಂದ ಕೆಲಸ ಹುಡುಕಿಕೊಂಡು ಬಂದಿರುವ ಲಿಲ್ಲಿಗೆ ನೈತಿಕ ಬೆಂಬಲ ತೋರಿಸುವ ವ್ಯಕ್ತಿಗಳೂ ಇಲ್ಲ. ಈ ಎಲ್ಲ ಸಂದರ್ಭದಿಂದ ಅವಳು ಹೆದರಿ ಕಂಗಾಲಾಗಿದ್ದಾಳೆ.

* * *

ಸವಿತಾ, ರತ್ನ, ರೂಪ, ಲಿಲ್ಲಿ, ರಾಧಾ – ಇವರೆಲ್ಲಾ ಕೇವಲ ಹೆಸರುಗಳಲ್ಲ; ಉದ್ಯೋಗಕ್ಕೆಂದು ಪುರುಷನ ಜಗತ್ತಿನಲ್ಲಿ ಕಾಲಿರಿಸಿದಾಗ ಇಂದು ಹೆಣ್ಣು ಎದುರಿಸಬೇಕಾಗಿರುವ ಸಮಸ್ಯೆಯ ಕೆಲವೊಂದು ತುಣುಕುಗಳು. ಪುರುಷಾಧಿಕಾರದ ಕೋಟೆಯನ್ನು ಭೇದಿಸಿ ಹೆಣ್ಣು ತನ್ನ ಸ್ವಸಾಮರ್ಥ್ಯವನ್ನು ಪ್ರಕಟಿಸಿದಾಗ ತಾನೂ ಅನಿವಾರ್ಯವಾಗಿ ಎದುರಿಸಲೇಬೇಕಾದ ಇಂತಹ ಸಂದರ್ಭಗಳು ಚರಿತ್ರೆಯಲ್ಲಿ ಹಿಂದೆಂದಿಗಿಂತ ಇಂದು ಹೆಣ್ಣನ್ನು ಬಹುವಾಗಿ ಕಾಡುತ್ತಿವೆ. ಅದು ಬಡತನ ದಿಂದಿರಬಹುದು; ಇಲ್ಲವೇ ಬೆಂಬಲಿಸುವ ಕುಟುಂಬವಿಲ್ಲದೆ ಹುಟ್ಟುವ ಹೆಣ್ಣಿನ ಅಸಹಾಯಕತೆ ಗಂಡಿಗೆ ಆಕರ್ಷಕವಾಗಿ, ಲಾಭವಾಗಿ ಕಾಣಬಹುದು. ತನ್ನ ಪುರುಷಾಧಿಕಾರಕ್ಕೆ ತಾನು ಬಯಸುವ ಹೆಣ್ಣು ತನಗೆ ದಕ್ಕಲೇಬೇಕು ಎನ್ನುವ ಪುರುಷನ 'ಅಹಂ' ಎಂತಹ ಅತಿರೇಕಕ್ಕೂ ಹೋಗಬಹುದು. ತನ್ನ ಕೈಕೆಳಗೆ ಕೆಲಸ ಮಾಡುವ ಕೂಲಿ ಹೆಣ್ಣಾದರೂ ಸರಿ, ಇಲ್ಲವೇ ತನ್ನೊಡನೆ ನೌಕರಿ ಮಾಡುವ ಸಹೋದ್ಯೋಗಿಯಾದರೂ ಸರಿ ತನ್ನ ಪುರುಷತ್ವಕ್ಕೆ ಮಣಿಯಬೇಕು ಎನ್ನುವ ಭಾವ ಇಲ್ಲಿಯದು. ಹೆಣ್ಣನ್ನು ಕುರಿತ ಕೀಳು ಭಾವನೆಯು ಪುರುಷ ಪ್ರಜ್ಞೆಯಲ್ಲಿ ಅಪ್ರಜ್ಞಾಪೂರ್ವಕವಾಗಿ ನೆಲೆಸಿರಲು ಸಾಧ್ಯ ಎನ್ನುವುದಕ್ಕೆ ಮಹಿಳಾ ಅಧಿಕಾರಿಯೊಡನೆ ಮುನಿಯಪ್ಪ ವರ್ತಿಸಿದ ರೀತಿಯೇ ಕಾರಣ.



'ಉದ್ಯೋಗವು ಪುರುಷನ ಲಕ್ಷಣ' ಎಂಬ ಮಾತನ್ನು ಹೇಳಿಕೊಂಡುಬಂದ ಭಾರತೀಯ ಸಮಾಜದಲ್ಲಿ ದುಡಿಯುವ ಮಹಿಳೆ ಇಪ್ಪತ್ತನೇ ಶತಮಾನದ ಅದ್ಭುತವೇನಲ್ಲ. ಅನಾದಿಕಾಲದಿಂದಲೂ ಪುರುಷನೊಡನೆ ಮಹಿಳೆಯೂ ದುಡಿಯುತ್ತಲೇ ಬಂದಿದ್ದಾಳೆ. ಇಂದು ಅವರ ಸಂಖ್ಯೆ ಹೆಚ್ಚಿರಬಹುದು, ಅಷ್ಟೆ. ಕೆಲಸದಲ್ಲಿ ವೈವಿಧ್ಯವೂ ಕೂಡಿಬಂದಿದೆ. ಹೊಲದ ಕೆಲಸ, ಪಶುಸಂಗೋಪನೆ, ಕೋಳಿ ಸಾಕಾಣಿಕೆ, ಗುಡಿ ಕೈಗಾರಿಕೆ, ಮನೆ ಕಟ್ಟುವುದು, ರಸ್ತೆ ಕಾಮಗಾರಿ, ಮುಂತಾದ ದೈಹಿಕ ಶ್ರಮದ ಕೆಲಸವಷ್ಟೇ ಅಲ್ಲದೆ, ಸಾರ್ವಜನಿಕ ಸಂಪರ್ಕ, ಪತ್ರಿಕೋದ್ಯಮ, ನಾಗರಿಕ ವಿಮಾನಯಾನ, ಇಂಜಿನಿಯರಿಂಗ್, ವಿಜ್ಞಾನ, ನೌಕಾನೆಲೆ, ಕಂಪ್ಯೂಟರ್ – ಮುಂತಾದ ಅಸಾಂಪ್ರದಾಯಿಕ ಕ್ಷೇತ್ರಗಳಿಗೂ ನುಗ್ಗಿರುವ ಮಹಿಳೆ ಎದುರಿಸ ಬೇಕಾಗಿರುವ ಸಮಸ್ಯೆಗಳೂ ಅಷ್ಟೇ ವೈವಿಧ್ಯಪೂರ್ಣ. ಹೆಚ್ಚಿದ ವಿದ್ಯಾಭ್ಯಾಸ ಮತ್ತು ಮಹಿಳೆಯರ ಸಶಕ್ತೀಕರಣದಿಂದಾಗಿ ಪುರುಷನ ಭದ್ರಕೋಟೆಯೆನಿಸಿಕೊಂಡ ಎಲ್ಲ ಕ್ಷೇತ್ರಗಳಲ್ಲೂ ಮಹಿಳೆ ಲಗ್ಗೆಯಿಡುತ್ತಿದ್ದಾಳೆ. 'ಹೊಸ ಮಹಿಳೆ'ಯ ಆವಿರ್ಭಾವ ದಿಂದಾಗಿ ವರ್ಗಾವಣೆಗೂ ಅಂಜದೆ ಭಡ್ತಿಗಳನ್ನು ಒಪ್ಪಿಕೊಳ್ಳುತ್ತಿದ್ದಾಳೆ. ಕೆಲವು ರಾಜ್ಯಗಳಲ್ಲಿ ಈಗ ಅನುಷ್ಠಾನಕ್ಕೆ ಬಂದಿರುವ ಉದ್ಯೋಗದಲ್ಲಿ ಮಹಿಳೆಯರಿಗಿರುವ ಮೀಸಲಾತಿ ಹಲವಾರು ಪುರುಷರ ಕಣ್ಣು ಕೆಂಪಾಗಿಸಿದೆ. ಮನೆಯಲ್ಲಿ ಎರಡನೆಯ ದರ್ಜೆಯ ಸದಸ್ಯೆಯಾಗಿರುವ ಹೆಣ್ಣು [illegible] ಮೇಲಧಿಕಾರಿಯಾಗಿ ಬಂದರೆ ಒಪ್ಪಿಕೊಳ್ಳುವುದು ಸ್ವಲ್ಪ ಕಷ್ಟವಾಗುತ್ತದೆ. ಇದು [illegible] ಹೊಸ ಸಮಸ್ಯೆಗಳನ್ನು ಸೃಷ್ಟಿಸುತ್ತಿದೆ.

ಮಹಿಳೆಯನ್ನು ದುಡಿಯುವ ಸ್ಥಳಗಳಲ್ಲಿ ಅಶ್ಲೀಲ ಮಾತುಗಳಿಂದ ನಿಂದಿಸುವುದು, ಅವಳ ಮೇಲೆ ಆಕ್ರಮಣ ಮಾಡುವುದು, ಕಾಮಕೇಳಿಗೆ ಆಹ್ವಾನಿಸುವುದು, ಅವಳೊಡನೆ ಅಸಭ್ಯವಾಗಿ ವರ್ತಿಸುವುದು ಮುಂತಾದವು [illegible] ವೆನಿಸುವಷ್ಟು ಸಹಜವಾಗಿದ್ದರೂ, ಯಾರೂ ಈ ಹೆಣ್ಣಿನ ದುರವಸ್ಥೆಯ ಬಗ್ಗೆ ವಿಶೇಷ ಗಮನ ಹರಿಸಲಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಬದಲಾಗುತ್ತಿರುವ ಮತ್ತು ಹೆಣ್ಣಿನ ಸಶಕ್ತೀಕರಣದ ಪ್ರಕ್ರಿಯೆಯಿಂದಾಗಿ ಪುರುಷರಿಂದ ಉಂಟಾಗುತ್ತಿರುವ ಲೈಂಗಿಕ ಕಿರುಕುಳದ ಪ್ರಕರಣಗಳು ಆತಂಕ ಹುಟ್ಟಿಸುವ ಹಂತವನ್ನು ತಲುಪಿವೆ. ಭಾರತದಲ್ಲಿಯಂತೂ ಅಸಾಂಪ್ರದಾಯಿಕ ಕ್ಷೇತ್ರಗಳಲ್ಲಿ ಲೈಂಗಿಕ ಕಿರುಕುಳದ ಸಮಸ್ಯೆ ಆತಂಕಕಾರಿ ಹಂತವನ್ನು ಮುಟ್ಟಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕೆಲಸ ಮಾಡಬೇಕಾಗಿರುವ ಮಹಿಳೆಯರಿಗೆ ಈ ಸಮಸ್ಯೆ ನುಂಗಲಾರದ ತುತ್ತಾಗಿದೆ. ಹಿಂದಿಗಿಂತಲೂ ಇದರ ಪ್ರಮಾಣ ಹೆಚ್ಚಿದೆ. ಅದರಲ್ಲೂ ಸಮಾಜ ಕಲ್ಯಾಣ ಇಲಾಖೆಯ ಅಂಗವಾಗಿ ಕೆಲಸ ಮಾಡುತ್ತಿರುವ ಗ್ರಾಮಸೇವಕಿಯರು, ದಾದಿಯರು, ಅಂಗನವಾಡಿ ಕಾರ್ಯಕರ್ತೆಯರು ಇಂತಹ ಲೈಂಗಿಕ ಕಿರುಕುಳದಿಂದಾಗಿ ಬಹಳಷ್ಟು ಕಷ್ಟಪಡುತ್ತಿದ್ದಾರೆ.

ಮಹಿಳೆಯರ ಹಕ್ಕುಗಳ ರಕ್ಷಣೆಗೆಂದು ಸಂವಿಧಾನದಲ್ಲಿ ಎಷ್ಟೇ ಅವಕಾಶಗಳಿದ್ದರೂ ದುಡಿಯುವ ಮಹಿಳೆಗೆಂದೇ ವಿಶೇಷವಾದ ಮತ್ತು ಪರಿಣಾಮಕಾರಿಯಾದ ಕಾನೂನಿನ ರಕ್ಷಣೆ ದೊರೆತದ್ದು ಸರ್ವೋಚ್ಚ ನ್ಯಾಯಾಲಯ ಈ ದಿಕ್ಕಿನಲ್ಲಿ ನೀಡಿರುವ ಮಹತ್ವದ ತೀರ್ಪಿನಿಂದ. ರಾಜಾಸ್ಥಾನದ ಬತೇರಿ ಗ್ರಾಮದಲ್ಲಿ ಸಮಾಜಸೇವಕಿಯಾಗಿ ಕೆಲಸ ಮಾಡುತ್ತಿದ್ದ ಭಾಂವ್ರಿದೇವಿ ಒಂದು ವರ್ಷ ವಯಸ್ಸಿನ ಮಗುವೊಂದರ ಬಾಲ್ಯವಿವಾಹವನ್ನು ನಿಲ್ಲಿಸಲು ಹೋದ 'ಮಹಾಪಾಪ'ಕ್ಕೆ ಊರ ಗಣ್ಯರ ರೋಷಕ್ಕೆ ಗುರಿಯಾದಳು. 'ಗೌರವಾನ್ವಿತ'ರೆನಿಸಿಕೊಂಡ ಐವರು ಊರ ಹಿರಿಯರು ಅವಳಿಗೆ ಶಿಕ್ಷೆ ಕೊಡಲೆಂಬಂತೆ ಅವಳ ಮೇಲೆ ಬಿದ್ದು ಸಾಮೂಹಿಕ ಅತ್ಯಾಚಾರವೆಸಗಿದರು. ಜಾಗೃತ ಮಹಿಳೆ ಭಾಂವ್ರಿದೇವಿ ಬಲಿಪಶುವಾದರೂ ಸುಮ್ಮನೆ ಕೂಡಲಿಲ್ಲ. ಸ್ತ್ರೀಪರ ಶಕ್ತಿಗಳ ಬೆಂಬಲ ಅವಳಿಗೆ ದೊರೆಯಿತು. ನ್ಯಾಯಾಲಯದ ಕಟ್ಟೆ ಹತ್ತಿದಳು. ಮಹಿಳೆಯರಿಗೆ ಸಂವಿಧಾನ [illegible] ಅನುಚ್ಛೇದ (ಸಮಾನತೆಯ ಹಕ್ಕು), ೧೯ನೆಯ ಅನುಚ್ಛೇದ (ಉದ್ಯೋಗ ಕೈಗೊಳ್ಳುವ ಹಕ್ಕು), ಮತ್ತು ೨೧ನೇ ಅನುಚ್ಛೇದ (ಜೀವಿಸುವ ಹಕ್ಕು) ದಲ್ಲಿರುವ ಮೂಲಭೂತ ಹಕ್ಕುಗಳನ್ನು ಅನುಭವಿಸಲು ಸೂಕ್ತ ರಕ್ಷಣೆ ಕೊಡಬೇಕೆಂದು (ವಿಶಾಖ v/s ರಾಜ್ಯಸರ್ಕಾರ) ಸುಪ್ರೀಂ ಕೋರ್ಟ್‌ನಲ್ಲಿ ಮೊಕದ್ದಮೆ ಹೂಡಿದಾಗ, [illegible] ಫಲ ಇಡೀ ಮಹಿಳಾ ಸಮುದಾಯಕ್ಕೆ ಅನ್ವಯವಾಗುವಂತೆ ಸರ್ವೋಚ್ಚ ನ್ಯಾಯಾಲಯವು ಕೆಲವು ನಿರ್ದೇಶನಗಳನ್ನು ನೀಡಿ ದುಡಿಯುವ ಹೆಣ್ಣಿನ ರಕ್ಷಣೆಗೆ ಬೆಂಬಲವಾಗಿ ನಿಂತಿದೆ.

ಈ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯವು ಒಂದು ಮಹತ್ವದ [illegible] ನೀಡಿದ್ದು ಉದ್ಯೋಗದ ಸ್ಥಳದಲ್ಲಿ ಮಹಿಳಾ ಕೆಲಸಗಾರರಿಗೆ ಉಂಟಾಗುವ ಲೈಂಗಿಕ ಕಿರುಕುಳವನ್ನು ತಡೆಗಟ್ಟಲು ಕೆಲವೊಂದು ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿಕೊಟ್ಟಿದೆ ಹಾಗೂ ಕೇಂದ್ರ ಮತ್ತು ರಾಜ್ಯ [illegible] ಕಾನೂನನ್ನು ಮಾಡುವವರೆಗೆ ಈ ಸೂತ್ರಗಳೇ ಕಾನೂನಾಗಿರುತ್ತವೆಂದು [illegible]

ಈ ತೀರ್ಪು ಭಾರತ ಸಂವಿಧಾನದ ಬೇರೆ ಬೇರೆ ಅನುಚ್ಛೇದಗಳನ್ನು ಆಧರಿಸಿರುವುದಲ್ಲದೇ ಅನೇಕ ಅಂತರರಾಷ್ಟ್ರೀಯ ಘೋಷಣೆಯ ಒಪ್ಪಂದಗಳನ್ನು ಗೌರವಿಸಿದೆ. ೧೯೭೯ರಲ್ಲಿ ನಡೆದ 'ಮಹಿಳೆಯರ ವಿರುದ್ಧದ ಎಲ್ಲ ರೀತಿಯ ತಾರತಮ್ಯ ನಿವಾರಣೆಯ ಸಮಾವೇಶ'ವು ಕೈಗೊಂಡ ನಿರ್ಣಯಗಳಿಗೆ ಮತ್ತು ಬೀಜಿಂಗ್‌ನಲ್ಲಿ ನಡೆದ ವಿಶ್ವ ಮಹಿಳಾ ಸಮಾವೇಶವು ಕೈಗೊಂಡ ನಿರ್ಣಯಗಳಿಗೆ ಭಾರತ ಸರ್ಕಾರವು ಬದ್ಧವಾಗಿದೆಯೆಂಬುದನ್ನು ಈ ನ್ಯಾಯಾಲಯದ ತೀರ್ಪುಗಳು ಮತ್ತೆ ಮತ್ತೆ ಸ್ಪಷ್ಟಪಡಿಸುತ್ತಿವೆ.

ವಿಶಾಖ ತೀರ್ಪಿನ ಹಿನ್ನೆಲೆಯಲ್ಲಿ ಲೈಂಗಿಕ ಕಿರುಕುಳಕ್ಕೆ ಸಂಬಂಧಪಟ್ಟಂತೆ ನೀಡಲಾದ ತೀರ್ಪು 'ಲೈಂಗಿಕ ಕಿರುಕುಳ'ದ ಪರಿಕಲ್ಪನೆಯನ್ನು ಪುನರ್ವ್ಯಾಖ್ಯಾನ ಗೊಳಿಸಿದೆ; ಅಷ್ಟೇ ಅಲ್ಲ, ವಿಸ್ತಾರಗೊಳಿಸಿದೆ ಕೂಡ. ಲೈಂಗಿಕ ಕಿರುಕುಳವೆಂದರೆ ದೈಹಿಕ ಸಂಪರ್ಕವನ್ನು ಒಳಗೊಳ್ಳಲೇಬೇಕಿಲ್ಲ ಎಂಬ ತಿಳಿವಳಿಕೆಯನ್ನೂ ನೀಡಿದೆ. ಇನ್ನೂ ಮುಂದುವರೆದಂತೆ ಲೈಂಗಿಕ ಕಿರುಕುಳವೆನ್ನುವುದು ಲೈಂಗಿಕ ತಾರತಮ್ಯದ ಮತ್ತೊಂದು ರೂಪ; ಒಲ್ಲದ ಲೈಂಗಿಕ ವರ್ತನೆಗಳಿಂದ, ಲೈಂಗಿಕ ಬೇಡಿಕೆಗಳನ್ನೊಡ್ಡುತ್ತಾ ಮಾತು ಮತ್ತು ಹಾವಭಾವಗಳಿಂದ ನೇರವಾಗಿ ಇಲ್ಲವೇ ಸಂಜ್ಞೆಯ ಮೂಲಕ ಲೈಂಗಿಕ ಅರ್ಥಗಳನ್ನು ಹೊಮ್ಮಿಸುತ್ತಾ ದುಡಿಯುವ ಸ್ಥಳದಲ್ಲಿ ಕೆಲಸಕ್ಕೆ ಅಡಚಣೆಯನ್ನುಂಟುಮಾಡುವುದು ಲೈಂಗಿಕ ಕಿರುಕುಳವಾಗುತ್ತದೆ ಎಂದೂ ತಿಳಿಸಿದೆ.

ಇಲ್ಲಿಯವರೆಗೂ ಲೈಂಗಿಕ ಕಿರುಕುಳದಿಂದ ತೊಂದರೆಗೀಡಾಗುತ್ತಿದ್ದ ಮಹಿಳೆಯರು ಪರಿಹಾರಕ್ಕೆ ನ್ಯಾಯಕ್ಕಾಗಿ ಕೋರ್ಟು ಕಚೇರಿಗಳಿಗೆ ಅಲೆಯಬೇಕಿತ್ತು. ನ್ಯಾಯಾಲಯದ ನಿಧಾನ ನಡೆಯಲ್ಲಿ ನ್ಯಾಯ ಸಿಕ್ಕುತ್ತಿದ್ದುದೆಂದೋ ! ಅದರೊಂದಿಗೆ ಅಪಾರ ಖರ್ಚು, ಸಮಯದ ವ್ಯರ್ಥ ವಿನಿಯೋಗ. ಜೊತೆಗೆ ನಿರಂತರ ಮಾನಸಿಕ ಹಿಂಸೆ. ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಲೈಂಗಿಕ ಕಿರುಕುಳವನ್ನು ಅನುಭವಿಸುವುದೇ ಅದರ ವಿರುದ್ಧ ಹೋರಾಡುವುದಕ್ಕಿಂತ ಮೇಲು ಎಂಬಂತಹ ಭಾವ ಮಹಿಳೆಯರಲ್ಲಿ ಮೂಡುತ್ತಿದ್ದರೆ ಆಶ್ಚರ್ಯವಿಲ್ಲ. ಆದರೆ ಈಗಿನ ತೀರ್ಪಿನಿಂದಾಗಿ ದುಡಿಯುವ ಸ್ಥಳಗಳಲ್ಲಿ ನಡೆಯುವ ಲೈಂಗಿಕ ಕಿರುಕುಳವನ್ನು ತಡೆಗಟ್ಟುವ ಜವಾಬ್ದಾರಿ ಮಾಲಿಕನದೂ ಆಗಿದೆ. ಹಿಂದಿನಂತೆ ಇಂತಹ ವಿಷಯಗಳು ತನಗೆ ಸಂಬಂಧಿಸಿದ್ದಲ್ಲವೆಂದು ಮಾಲಿಕ ಕೈತೊಳೆದುಕೊಳ್ಳಲು ಸಾಧ್ಯವಿಲ್ಲ. ಲೈಂಗಿಕ ಕಿರುಕುಳ ಅಧಿಕಾರಿಯಿಂದ ನಡೆಯುತ್ತಿರಲಿ, ಸಹೋದ್ಯೋಗಿಗಳಿಂದ ನಡೆಯುತ್ತಿರಲಿ, [illegible] ಕಚೇರಿಗೆ ಬರುವ ಗ್ರಾಹಕರಿಂದ ನಡೆಯುತ್ತಿರಲಿ, ಎಲ್ಲ [illegible] ನ್ಯಾಯ ದೊರಕಿಸಿಕೊಡುವ ಜವಾಬ್ದಾರಿ ಆಡಳಿತ ವರ್ಗದ್ದೇ. ದುಡಿಯುವ ಸ್ಥಳದಲ್ಲಿ ಹೆಚ್ಚಿನ ಮಹಿಳಾ ಪ್ರತಿನಿಧಿಗಳಿಂದ ಕೂಡಿದ 'ದೂರು ಸಮಿತಿ'ಯು ಈ ವಿಚಾರಣಾ ಕಾರ್ಯವನ್ನು ನಡೆಸಬೇಕೆಂದು ಸರ್ವೋಚ್ಚ ನ್ಯಾಯಾಲಯದ ತೀರ್ಪು ಸೂಚಿಸಿದೆ.

ಈ ತೀರ್ಪು ಹೊರಬೀಳುವುದಕ್ಕೆ ಮುಂಚೆನಿಂದಲೂ ನ್ಯಾಯಾಲಯದಲ್ಲಿ ಲೈಂಗಿಕ ಕಿರುಕುಳದ ವಿರುದ್ಧ ಹೋರಾಡುತ್ತಿದ್ದ ಮಹಿಳೆಯರಿಗೆ ಈ ತೀರ್ಪು ಆಶಾದಾಯಕ ಬೆಂಬಲವಾಗಿ ನಿಂತ ಎರಡು ಪ್ರಕರಣಗಳು ನಮ್ಮ ಮುಂದಿವೆ.

ಇಬ್ಬರು ಮಕ್ಕಳ ತಾಯಿಯಾದ ಶೆಹನಾಜ್ ಸಾನಿ ಸೌದಿ ಅರೇಬಿಯನ್ ಏರ್‌ಲೈನ್ಸಿನಲ್ಲಿ ಗಗನಸಖಿಯಾಗಿ ಕೆಲಸ ಮಾಡುತ್ತಿದ್ದಾಕೆ. ಅವಳು ತನ್ನ ಮೇಲಿನ ಅಧಿಕಾರಿಯ ಲೈಂಗಿಕ ದುರ್ವರ್ತನೆಯನ್ನು ತಿರಸ್ಕರಿಸಿ ಪ್ರತಿಭಟಿಸಿದಾಗ ಕೆಲಸ ಕಳೆದುಕೊಂಡಳು. ನ್ಯಾಯಕ್ಕಾಗಿ ನ್ಯಾಯಾಲಯದ ಕದ ತಟ್ಟಿದಳು. ಬಿದ್ದವಳಿಗೆ ಮತ್ತೊಂದು ಗುದ್ದು ಎಂಬಂತೆ ಅವಳ ಪತಿ ಅವಳ ವಿರುದ್ಧವಾಗಿ ಸೌದಿ ಅರೇಬಿಯನ್ ಏರ್‌ಲೈನ್ಸ್‌ನೊಂದಿಗೆ ಕೈಜೋಡಿಸಿಯಾಗಿತ್ತು. ನ್ಯಾಯಾಲಯದ ನಿಧಾನ ನಡೆಯ ಹದಿಮೂರು ವರ್ಷಗಳ ಹೋರಾಟದ ನಂತರ ಮುಂಬೈ ಉಚ್ಚ ನ್ಯಾಯಾಲಯವು ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅನ್ವಯಿಸಿ ಶೆಹನಾಜ್‌ಗೆ ನ್ಯಾಯ ದೊರಕಿಸಿತು. ಅವಳನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳುವುದಷ್ಟೇ ಅಲ್ಲದೆ, ಇಷ್ಟು ದಿನ ಅವಳು ಅನುಭವಿಸಿದ ನಷ್ಟಕ್ಕೆ ಪರಿಹಾರವನ್ನೂ ನೀಡಿದೆ.


ಇದೇ ಹಾದಿಯಲ್ಲಿ ಮತ್ತೊಂದು ಹೆಜ್ಜೆ : ಎಪೆರೆಲ್ ಎಕ್ಸ್‌ಪೋರ್ಟ್ ಪ್ರಮೋಷನ್ ಕೌನ್ಸಿಲ್‌ನಲ್ಲಿ ಟೈಪಿಸ್ಟ್ ಮತ್ತು ಕ್ಲರ್ಕ್ ತನ್ನ ಮಾಲೀಕರಿಗೆ ದೂರಿತ್ತಳು. ಚೇರ್‌ಮನ್‌ನ ಆಪ್ತ ಕಾರ್ಯದರ್ಶಿ ತನ್ನನ್ನು ಅಸಭ್ಯವಾಗಿ ಹಿಂಸಿಸುತ್ತಿರುವುದಾಗಿ ತನ್ನ ದೂರಿನಲ್ಲಿ ತಿಳಿಸಿದ್ದಳು. ಅವಳು ಶೀಘ್ರಲಿಪಿಕಾರಳಲ್ಲದಿದ್ದರೂ ಅವಳಿಗೆ ತಾಜ್ ಪ್ಯಾಲೇಸ್ ಹೋಟೆಲ್‌ಗೆ ಬರಬೇಕೆಂದೂ ಟಿಪ್ಪಣಿ ಬರೆದುಕೊಳ್ಳಬೇಕೆಂದೂ ಎ. ಕೆ. ಚೋಪ್ರಾ ಒತ್ತಾಯಿಸಿದುದಾಗಿ ದೂರಿನಲ್ಲಿ ಹೇಳಿದ್ದಳು. ಅಷ್ಟೇ ಅಲ್ಲದೆ, ಅವಳು ಕಚೇರಿಯಲ್ಲಿ ಕೆಲಸ ಮಾಡುವ ಸಂದರ್ಭದಲ್ಲಿ ಅವಳು ಪ್ರತಿಭಟಿಸಿದಾಗ್ಯೂ ಅವಳ ಸಮೀಪದಲ್ಲಿ ಬಂದು ಕುಳಿತುಕೊಳ್ಳುವುದು, ಅವಳನ್ನು ಮುಟ್ಟುವುದು, ಲಿಫ್ಟ್‌ನಲ್ಲಿ ಹೋಗಿಬರುವಾಗ ಅವಳನ್ನು ಹಿಂಸಿಸುವುದು, ಮುಂತಾಗಿ ಅಸಭ್ಯ ರೀತಿಯ ನಡೆವಳಿಕೆಯನ್ನು ಪ್ರದರ್ಶಿಸುತ್ತಿದ್ದಾಗಿ ಮಹಿಳಾ ಉದ್ಯೋಗಿ ದೂರಿತ್ತಳು. ಈ ದೂರಿನ ಆಧಾರದ ಮೇಲೆ ಕಂಪೆನಿಯು ನಿಯೋಜಿಸಿದ್ದ ವಿಚಾರಣಾ ಸಮಿತಿಯು ಮಹಿಳಾ ಉದ್ಯೋಗಿಯ ಆರೋಪವನ್ನು ಎತ್ತಿಹಿಡಿದು ಎ. ಕೆ. ಚೋಪ್ರಾನನ್ನು ತಪ್ಪಿತಸ್ಥನೆಂದು ಸಾರಿತು. ಇದರ ಆಧಾರದ ಮೇಲೆ ಕಂಪೆನಿಯ ಶಿಸ್ತುಪಾಲನಾ ಸಮಿತಿಯು ಎ. ಕೆ. ಚೋಪ್ರಾನನ್ನು ಕೆಲಸದಿಂದ ವಜಾ ಮಾಡಿತು. ಆದರೆ ಈ ದೂರಿನ ವಿರುದ್ಧ ಎ. ಕೆ. ಚೋಪ್ರಾ ಉಚ್ಚ ನ್ಯಾಯಾಲಯದಲ್ಲಿ ತನ್ನನ್ನು ವಜಾ ಮಾಡಿರುವ ಕ್ರಮವನ್ನು ಪ್ರಶ್ನಿಸಿದ. ಆದರೆ ನ್ಯಾಯಾಲಯವು ಕಂಪೆನಿಯ ಶಿಸ್ತುಪಾಲನಾ ಸಮಿತಿಯ ತೀರ್ಪನ್ನೇ ಎತ್ತಿಹಿಡಿದು ಚೋಪ್ರಾನ ವಜಾವನ್ನು ರದ್ದುಮಾಡಿದರೂ ಅವನನ್ನು ದೆಹಲಿಯ ಹೊರಗೆ ವರ್ಗ ಮಾಡಬೇಕೆಂದು ಆದೇಶಿಸಿದ್ದಲ್ಲದೆ, ಅವನ ಹಿಂದಿನ ಸಂಬಳವನ್ನು ಕೊಡಬೇಕಾಗಿಲ್ಲವೆಂದೂ ಸೂಚಿಸಿತು.

ಈ ಎರಡೂ ಯಶಸ್ವಿ ಪ್ರಕರಣಗಳು [illegible] ದುಡಿಯುವ ಮಹಿಳೆಗೆ ಭರವಸೆಯನ್ನು ಮತ್ತು [illegible] ಆಶ್ಚರ್ಯವಿಲ್ಲ.

ಡಾ॥ ಎನ್. ಗಾಯತ್ರಿ
[illegible]

ಗಣಿಯ ಮಾರಾಟ

ಆಸ್ತಿ ಮಾಡಿಕೊಳ್ಳುವುದೆಂದರೆ ಚಿನ್ನ ಹೊಂದಿರುವುದು ಎಂಬ ಭಾವನೆ ಹೊಸದೇನಲ್ಲ. ಕೋಲಾರದ ಚಿನ್ನದ ಗಣಿಯು ಲಾಭದಾಯಕವಾಗಿಲ್ಲವೆಂದು ಅದನ್ನು ಮುಚ್ಚುವುದಾಗಿ ಹೇಳಲಾಗುತ್ತಿದೆ. ಮುಚ್ಚುವುದಕ್ಕೂ ಮಾರುವುದಕ್ಕೂ ವ್ಯತ್ಯಾಸವಿದೆ. ಇಲ್ಲಿ ಮುಚ್ಚುವ ಹೆಸರಿನಲ್ಲಿ ಅದನ್ನು ಮಾರಲಾಗುತ್ತಿದೆ. ಕೈಗಾರಿಕೆಗಳನ್ನು ಮುಚ್ಚುವುದೇ ಈಗಿನ ಸರ್ಕಾರಗಳ ಕೈಗಾರಿಕೀಕರಣ ಯೋಜನೆಗಳ ಅದ್ಭುತ. ಚಿನ್ನದ ಗಣಿಯನ್ನು ಮಾರುವಾಗ ಬೆಲೆ ಕಟ್ಟುತ್ತಾರೆ. ಅದರ ಪ್ರಕಾರ ಒಂದು ಎಕರೆ ಭೂಮಿಗೆ ಐದು ನೂರು ರೂಪಾಯಿ ಬೆಲೆ! ಯಂತ್ರಗಳು ಗುಜರಿ ಮಾಲಿಗೆ ಸಮ. ಮನೆ-ಮಠಗಳೆಲ್ಲಾ ಬೆಲೆಯಿಲ್ಲದವು. ಹೀಗಾಗಿ ಹನ್ನೆರಡು ಸಾವಿರ ಎಕರೆ ಭೂಮಿಯೂ ಸೇರಿದಂತೆ ಇಡೀ ಕೆ. ಜಿ. ಎಫ್. ಗಣಿಯ ಬೆಲೆ ಮೂವತ್ತಾರು ಕೋಟಿ. ದೇಶವನ್ನು ಮಾರಾಟಕ್ಕಿಟ್ಟಿರುವವರು ಗಣಿಯನ್ನು ಇಷ್ಟು ಕಡಿಮೆ ಬೆಲೆಗೆ ಮಾರುತ್ತಾರೆಂದು ನಿರೀಕ್ಷಿಸಿದ್ದುಂಟೆ? ಇನ್ನು ಕೆಲಸಗಾರರ ಬವಣೆ ಸರ್ಕಾರದ ಗಣನೆಗೆ ಬರಬೇಕು ಹೇಗೆ? ಅವರು ವಾಸಿಸುತ್ತಿರುವ ಮನೆಗಳನ್ನು ಅವರಿಗೇ ಮಾರುವ ಆಶ್ವಾಸನೆಯನ್ನು ಸಚಿವರು ಲೋಕಸಭೆಯಲ್ಲಿ ನೀಡಿದ್ದಾರೆ. ಆದರೆ ಎಷ್ಟಕ್ಕೆ ಎಂಬುದನ್ನು ತಿಳಿಸಿಲ್ಲ. ಉದ್ಯೋಗ ಕಳೆದುಕೊಂಡವರು ಆ ಮನೆಗಳಲ್ಲಿ ವಾಸಿಸಿ ಏನು ಮಾಡಬೇಕು? ಅವನ್ನು ಬೇರೆಯವರು ಯಾರೂ ಖರೀದಿಸಲಾರರು. ಏಕೆಂದರೆ ಅವು 'ಮನೆ'ಗಳೇ ಅಲ್ಲ ಎಂಬಂತಿವೆ. ದುಡಿಯುವವರನ್ನು ಬೀದಿಗೆ ತಳ್ಳುವ ನಮ್ಮ ಹೊಸ ಆರ್ಥಿಕ ನೀತಿಯು ದೇಶದ ಬೆಳವಣಿಗೆಗಾಗಿ ಎಂಬ ಮಾತಿಗೆ ಇನ್ನೂ ಬೆಲೆ ಇರಬಹುದೇ?



ಅರಳು ಹುರಿದಂತಹ ಬಿಸಿಲು. ಹುಚ್ಚು ಹಿಡಿದವರಂತೆ ಗಾಳಿ ಬೀಸುತ್ತಿದೆ. ಜನರೆಲ್ಲ ಕಂಗಾಲಾಗಿದ್ದಾರೆ. ಮೋಡ ಬಿಳುಚಿಕೊಂಡಿದೆ. ಜನ ಹೇಗೋ ಬರಗಾಲದ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ. ಜಾನುವಾರುಗಳ ಸ್ಥಿತಿಯಂತೂ ನೋಡುವ ಹಾಗಿಲ್ಲ. ಜನ ಸಿಕ್ಕ ಹಾದಿ ಹಿಡಿದು ಹೊರಟಿದ್ದಾರೆ. ಊರೆಲ್ಲ ಬಟಾ ಬಯಲಾಗಿದೆ. ತಾಯ್ತಂದೆಗಳಿಗೆ ಮಕ್ಕಳ ಮೇಲಿನ ಮೋಹ ಕಡಿಮೆಯಾಗಿದೆ. ಎಂಥ ಕಾಲ ಬಂತಪ್ಪ? 'ವಿಧಿ ಲಿಖಿತ' ಏನು ಮಾಡುವದು, ಕಳೆದ ಜಾತ್ರೆಯಲ್ಲಿ ಪೂಜಾರಿ ಹೇಳಿದ ಭವಿಷ್ಯ ಖರೆಯಾಯಿತು.

ಮಾರೆವ್ವ ಸತ್ಯದಾಕಿ ಹರಕೆಗೆ ಸಲ್ಲುತ್ತಾಳೆ. ಮಕ್ಕಳಿಲ್ಲದವರಿಗೆ ಮಕ್ಕಳಾಗುತ್ತವೆ. ಸಂಕಟಗಳನ್ನು ನಿವಾರಿಸುತ್ತಾಳೆ. ಐದಕ್ಕೆ ಐವತ್ತು ಮಾಡುತ್ತಾಳೆ. ನಿಯತ್ತು ಚನ್ನಾಗಿದ್ದವರ ಮಾನ-ಮರ್ಯಾದೆಗೆ ಯಾವ ತೊಂದರೆಯೂ ಇಲ್ಲ. ಈ ಸಲ ಬರಗಾಲದಲ್ಲಿ ಏನಾದರೂ ಹಾದಿ ಸಿಗಬಹುದು. ಮಾರೆವ್ವಗ ತನ್ನ ಮಕ್ಕಳ ಸಂಕಟ ಗೊತ್ತಿಲ್ಲೇನು?

ಪರಶ್ಯಾ ಹತ್ತು ವರ್ಷಗಳ ನಂತರ ಊರಿಗೆ ಬಂದಿದ್ದಾನೆ. ಮಾರೆವ್ವನ ಜಾತ್ರೆಯಲ್ಲಿ ಪರಶ್ಯಾನ ಮಗ ಢಿಕ್ಕಿ ಹೊಡೆಯುವವನಿದ್ದಾನೆ. ಬರಗಾಲ ಬಿದ್ದಾಗ ಪರಶ್ಯಾ ಊರು ಬಿಟ್ಟಿದ್ದ. ಮುಂಬೈ ಸೇರಿದ್ದ. ಮೈಮುರಿದು ದುಡಿದು ಹಣ ಗಳಿಸಿದ್ದಾನೆ. ಹೆಂಡತಿ ಸುಭದ್ರಾ ಬಂಗಾರದ ಬೋರಮಾಳಾ ಹಾಕಿದ್ದಾಳೆ. ಇಲ್ಲೇ ಉಳಿದಿದ್ದರೆ ಬರೇ ಮಣ್ಣು ತಿನ್ನ ಬೇಕಾಗುತ್ತಿತ್ತು. ಮುಂಬೈಯಲ್ಲಿ ಹೇಲು ಬಳಿಯುವ ಚಾಕರಿ ಮಾಡಿದರೂ ಅಡ್ಡಿಯಿಲ್ಲ, ಊರಿಗೆ ಎದೆ ಸೆಟೆಸಿ ಬಂದಿದ್ದಾನೆ.

ನಾಳೆ ಜಾತ್ರೆ. ನೆಂಟರಿಷ್ಟರು ಒಬ್ಬೊಬ್ಬರಾಗಿ ಬರುತ್ತಿದ್ದಾರೆ. ಗುಡಿ ತುಂಬ ಜನರೇ ಜನ. ಎಲ್ಲೆಡೆ ಸಾಫ್ ಸಫಾಯಿ ನಡೆದಿದೆ. ಬಣ್ಣ ಹಚ್ಚಲಾಗಿದೆ. ಹೆಂಗಸರು ತಂತಮ್ಮ ಮನೆಯನ್ನು ಸಾರಿಸಿ, ಉಡುಗಿ ಸ್ವಚ್ಛಗೊಳಿಸುತ್ತಿದ್ದಾರೆ. ಮೈಲಿಗೆಯಾಗದಂತೆ ಎಚ್ಚರಿಕೆ ವಹಿಸಿದ್ದಾರೆ. ಪರಶ್ಯಾನ ಮನೆಯೂ ಶುಭ್ರಗೊಂಡಿದೆ. ಅವನ ತಾಯಿ ನಾಳೆ ಉರುಳುಸೇವೆ ಮಾಡುವವಳಿದ್ದಾಳೆ. ಬಲಿಷ್ಠವಾದ ಕುರಿಯನ್ನು ಖರೀದಿಸಲಾಗಿದೆ. ಹರಕೆ ಸಲ್ಲಿಸಿ ಮಾಂಸದ ಅಡಿಗೆ ಮಾಡಬೇಕಾಗಿದೆ. ಮನೆ ತುಂಬ ನೆಂಟರು.

ನಾಳೆ ಮಹಿಶ್ಯಾನೂ ಢಿಕ್ಕಿ ಹೊಡೆಯುವವನಿದ್ದಾನೆ. ಪರಶ್ಯಾನಿಗೆ ತನ್ನ ಢಿಕ್ಕಿಯೂ ನೆನಪಾಗಿ ಕಸಿವಿಸಿಯಾಯಿತು. ರಕ್ತ ಮೆತ್ತಿದ ತಲೆ ನೆನಪಾಯಿತು. ಪರಶ್ಯಾ ಒಮ್ಮೆ ಸತ್ತು ಸತ್ತು ಬದುಕಿದ್ದ. ಅವನ ಕಾಕಾ ಢಿಕ್ಕಿ ಹೊಡೆಯುವ ಹರಕೆ ಹೊರದಿದ್ದರೆ ಸಾಯುತ್ತಾನೆ, ಅವನ ವಂಶವೇ ಹಾಳಾಗುತ್ತದೆ ಎಂದ. ಹರಕೆ ಹೊತ್ತರು. ವಿಧಿಯ ಮುಂದೆ ಯಾರದ್ದೇನು ನಡೆಯುತ್ತದೆ? ರಕ್ಷಕನೂ ಅವನೇ, ಭಕ್ಷಕನೂ ಅವನೇ.

ಮಾರೆವ್ವನ ಗುಡಿ ಹತ್ತಿರ ಜಾತ್ರೆ ತುಂಬಿತ್ತು. ಎಲ್ಲ ಬಗೆಯ ಜನ ಸೇರಿದ್ದರು. ತೆಂಗು, ಅರಿಶಿಣ, ಕುಂಕುಮ, ಊದುಬತ್ತಿ, ಹೂವಿನ ಹಾರ, ಖಣದ ಅಂಗಡಿಗಳು ಗುಡಿಯ ಸುತ್ತಲೂ ಹಾಕಲಾಗಿತ್ತು. ಅಪಾರ ಜನಸಮೂಹ. ಸಾಕಷ್ಟು ಎತ್ತಿನ ಗಾಡಿಗಳೂ ಬಂದಿದ್ದವು.

ಎಲ್ಲರೂ ಕುರಿ, ಕೋಳಿಗಳನ್ನು ಹರಕೆಯೊಪ್ಪಿಸಲು ತಂದಿದ್ದರು. ಎಲ್ಲರೂ ತಂತಮ್ಮ ಗುಂಗಿನಲ್ಲಿದ್ದರು. ಮೂರು ಕಲ್ಲಿಟ್ಟು ಅಡಿಗೆಯನ್ನು ಆರಂಭಿಸಿದ್ದರು.

ಊರ ಗೌಡ ಹಾಗೂ ನಾಲ್ಕೈದು ಹೊಲೆಯರು ಗುಡಿ ಹತ್ತಿರ ನಿಂತಿದ್ದರು. ಜಾತ್ರೆ ಅತ್ಯಂತ ಭರಾಟೆಯಲ್ಲಿ ನಡೆದಿತ್ತು. ಜನರ ನೂಕು ನುಗ್ಗಲು ಅಪಾರವಾಗಿತ್ತು. ಕುರಿ ಕೊಯ್ಯಲಾಗಿತ್ತು. ಕೋಳಿಗಳಂತೂ ಲೆಕ್ಕವೇ ಇಲ್ಲ. ಗುಡಿಯ ಎದುರಿಗೆ ರಕ್ತದ ಹೊಳೆಯೇ ಹರಿದಿತ್ತು. ಗುಡಿಯ ಬಾಗಿಲಿಗೆ ರಕ್ತದ ಕೈಯೂರಲಾಗಿತ್ತು. ರಣಾಲಗಿ ಬಾರಿಸುತ್ತಿದ್ದರು. ಪಲ್ಲಕ್ಕಿ ಗುಡಿಯ ಆವಾರದಲ್ಲಿ ಸುತ್ತುತ್ತಿತ್ತು. ಮೈಮೇಲೆ ಬಂದ ಹೆಂಗಸರು ಗುಡಿಯ ಪ್ರಾಕಾರದೊಳಗೆ ಕುಣಿಯುತ್ತಿದ್ದರು. ಊದುಬತ್ತಿ, ತೆಂಗಿನ ರಾಶಿ ಬಿದ್ದಿತ್ತು. ದೇವರ ದರ್ಶನಕ್ಕಾಗಿ ಜನ ಸಾಲುಗಟ್ಟಿ ನಿಂತಿದ್ದರು. ಗದ್ದಲವನ್ನು ಹತೋಟಿಗೆ ತಂದು-ತಂದು ಪೋಲಿಸರು ರೋಸಿ ಹೋಗಿದ್ದರು.

ಸ್ವಲ್ಪ ಹೊತ್ತಿಗೆ ಢಿಕ್ಕಿ ಹೊಡೆದು ಹರಕೆ ಸಲ್ಲಿಸುವ ಕಾರ್ಯಕ್ರಮ ಆರಂಭವಾಗುತ್ತದೆ. ಪರಶ್ಯಾ ತನ್ನ ಮಗನಿಗೆ ಜಳಕ ಹಾಕಿದ. ಢಿಕ್ಕಿ ಹರಕೆ ಹೇಗೆ ಸಲ್ಲಿಸುವುದು ಎನ್ನುವುದನ್ನು ತಿಳಿಸಿ ಹೇಳಿದ. 'ಜೋರಾಗಿ ಢಿಕ್ಕಿ ಹೊಡಿಬ್ಯಾಡ್, ಇಲದಿರ್ಕ ಮಿದುಳಿಗೆ ಪೆಟ್ಟ ಬೀಳತೈತಿ. ಸತ್ತೂ ಹೋಗಬೌದು. ಮಾರೆವ್ವನ ಮನಸ್ ನೋಯಿಸಬಾರದಂತ ಈ ಹರಕಿ ಒಪ್ಪಿಸೋದು.' ಹೀಗೆ ಪರಶ್ಯಾ ಆ ಪುಟ್ಟ ಜೀವಕ್ಕ ತಿಳಿಸಿಹೇಳುತ್ತಿದ್ದ. ಮಹಿಶ್ಯಾನೂ ರೋಸಿಹೋಗಿದ್ದ. ಹರಕಿನೋ ಬಿರಕಿ ಎಂದು ಕೆರಳಿ ವಟಗುಟ್ಟುತ್ತಿದ್ದ. 'ಏ ಹಿಂಗ್ ಅನ್ನಬಾರ್ದು, ದೇವಿಗ ಕೋಪ ಬರತೈತಿ, ತಪ್ಪಾತು ಅನ್ನು. ಕುರಿ ಕೊಯ್ಯಾಕ ಬೇಕ, ನಿವೇದ್ದಿ ತೋರಿಸಾಕ ಬೇಕ, ನಮಸ್ಕಾರ ಹಾಕಾಕಬೇಕ, ಆಮ್ಯಾಲಿನ ಊಟ. ಅದರ ನಂತರ ಢಿಕ್ಕಿ ಹೊಡೆಯೋದು', ಎಂದು ಪರಶ್ಯಾ ಎಲ್ಲ ವಿವರಿಸಿದ. ಜನ ದೇವಿಗೆ ಹೂವಿನ ಹಾರ ಸಲ್ಲಿಸುತ್ತಿದ್ದರು. ದೀಪಕ್ಕೆ ಎಣ್ಣೆ ಹಾಕುತ್ತಿದ್ದರು. ಹೆಂಗಸರು ಮಕ್ಕಳು ತಪ್ಪಿಸಿಕೊಳ್ಳದಂತೆ ಗಟ್ಟಿಯಾಗಿ ಕೈ ಹಿಡಿದಿದ್ದರು. ಯಾರೋ ಕಿಸೆಗಳ್ಳನನ್ನು ಪೋಲಿಸರು ಹಿಡಿದುಕೊಂಡು ಹೋದರು. ಹರಕೆ ಒಪ್ಪಿಸುವವರು ಮೆರವಣಿಗೆಯಲ್ಲಿ ಬರುತ್ತಿದ್ದರು.

ಢಿಕ್ಕಿ ಹರಕೆಯೊಪ್ಪಿಸುವ ವೇಳೆ ಬಂತು. ಹಲಗೆ ಬಾರಿಸುತ್ತ ಮೆರವಣಿಗೆ ಬರುತ್ತಿತ್ತು. ಪೂಜಾರಿಗಳು 'ಬರ್ರಿ, ಬರ್ರಿ, ಹರಕಿ ಒಪ್ಪಿಸಿರಿ' ಎಂದು ಚೀರುತ್ತ ಲಿಂಬು, ಹಳದಿ, ಬೇವಿನ ಸೊಪ್ಪು ಹಾರಿಸುತ್ತಿದ್ದರು. ಗೃಹಿಣಿಯರು ಪಂಚಾರತಿ ಹಿಡಿದು ನಿಂತಿದ್ದರು. ಢಿಕ್ಕಿ ಒಪ್ಪಿಸುವ ಜನ ಹಾರ ಹಾಕಿಕೊಂಡು ದೇವಿಯ ಗುಡಿಯ ಹತ್ತಿರ ಹರಕೆಯ ಕುರಿಯಂತೆ ಹೊರಟಿದ್ದರು. ಜನಸಮೂಹ ಅವರ ಹಿಂದೆ. ಸುತ್ತಲೂ ಬರೀ ಗದ್ದಲವೇ ತುಂಬಿಕೊಂಡಿತ್ತು.

ಪರಶ್ಯಾ, ಅವನ ಅವ್ವ, ಸುಭದ್ರಾ, ಮಹಿಶ್ಯಾ ಹಾಗೂ ಅವನ ಕುಟುಂಬ ಪರಿವಾರ ಇವರೆಲ್ಲ ಅಲ್ಲೇ ಸನಿಹದಲ್ಲಿ ನಿಂತಿದ್ದರು. ಸುಭದ್ರಾ ದೇವಿಯ ಎದುರು ಸೆರಗು ಪಸರಿಸಿ ನಮಸ್ಕರಿಸಿದಳು. ಪರಶ್ಯಾನ ಅವ್ವ ಗಲ್ಲ ಗಲ್ಲ ಬಡಿದುಕೊಂಡಳು. ಸುತ್ತಲೂ ಗದ್ದಲ, ಈಗ ಢಿಕ್ಕಿಯ ಹರಕೆ ಆರಂಭವಾಗುತ್ತದೆ.

ಹರಕೆ ಸಲ್ಲಿಸುವವರ ಎದೆ ಡವಗುಡುತ್ತಿತ್ತು . ಕಳೆದ ವರ್ಷ ಢಿಕ್ಕಿ ಹೊಡೆದ ಗೇನೂ ಹುಚ್ಚನಾದ. ಹೆಣ್ಣುಮಕ್ಕಳ ಫಜೀತಿ ನೋಡುವ ಹಾಗಿಲ್ಲ. ಗೇನೂ ಢಿಕ್ಕಿ ಹೊಡೆವ ಮೊದಲು ಕುಡಿದು ಬಂದಿದ್ದ. ಅವನ ಕೈಕಾಲು ಕಂಪಿಸುತ್ತಿತ್ತು. ಜನ ಗಿಡಗಳ ಮೇಲೆ ಕೂತು ನೋಡುತ್ತಿದ್ದರು. ಪೂಜಾರಿ, ಗೌಡ, ಸೇವಕರು, ಪೋಲಿಸರು ಎಲ್ಲ ಸಜ್ಜಾಗಿದ್ದರು. ಗುಡಿಯ ಗೋಡೆಗೆಲ್ಲ ಜಾನುವಾರುಗಳ ರಕ್ತ ಸಿಂಪಡಿಸಲಾಗಿತ್ತು. ಈಗ ಹೊಲೆಯರ ರಕ್ತ ಚೆಲ್ಲುವದಷ್ಟೇ ಉಳಿದಿತ್ತು. ಹೊಲೆಯರ ಜಾತಿಯವರು ದೇವಿಗೆ ತಮ್ಮ ರಿವಾಜಿನಂತೆ ಪೂಜೆ ಸಲ್ಲಿಸಿದರು. ದೇವಿ ಕೌಲು ನೀಡಿತು. ಬರಗಾಲ ಹೊರಟುಹೋಗುತ್ತದೆ. ರೋಗ ರುಜಿನ ನಿಲ್ಲುತ್ತದೆ. ಎಲ್ಲರೂ 'ಉಧೋ ಉಧೋ' ಎಂದು ಜಯಘೋಷ ಹಾಕಿದರು.

ಮೊದಲ ಸರದಿ ಯಮ್ಯಾನದು. ಇಪ್ಪತ್ತು ಇಪ್ಪತ್ತೈದು ಅಡಿಯಿಂದ ಅವನು ಓಡುತ್ತ ಹೊರಟ. ಹಲಗೆಯ ಸಪ್ಪಳ ಜೋರಾಯಿತು. ಪೂಜಾರಿ ಅಂಗಾರವನ್ನು ಹಾರಿಸಿದ; 'ಢಿಕ್ಕಿ ಹರಕಿ; ಢಿಕ್ಕಿ ಹರಕಿ' ಎಂದು ಕೂಗಿದ. ಯಮ್ಯಾ ಢಿಕ್ಕಿ ಹರಕೆ ಒಪ್ಪಿಸಬೇಕಾಗಿತ್ತು. ಜೋರಾಗಿ ಗುಡಿಯ ಗೋಡೆಗೆ ಢಿಕ್ಕಿ ಹೊಡೆಯಬೇಕು. ಪ್ರಾಣಿಗಳಂತೆ ಗೋಡೆಗೆ ಢಿಕ್ಕಿ ಹೊಡೆಯಬೇಕು. ಅದು ಪ್ರಾಣಾಂತಿಕ ಢಿಕ್ಕಿ. ಇದು ಹಲವು ವರ್ಷಗಳ ರಿವಾಜು. ಮೌನವಾಗಿ ಹೊಲೆಯರು ಸಲ್ಲಿಸುತ್ತ ಬಂದಿದ್ದರು.

ಯಮ್ಯಾ ಓಡಲಾರಂಭಿಸಿದ. ಗೋಡೆಗೆ ಜೋರಾಗಿ ಢಿಕ್ಕಿ ಹೊಡೆದ. ತಲೆ ಹಿಡಿದು

ಮರಾಠಿ ಮೂಲ : ಶರಣಕುಮಾರ ಲಿಂಬಾಳೆ
ಅನುವಾದ : ಚಂದ್ರಕಾಂತ ಪೋಕಳೆ

ತಟ್ಟನೆ ಕೆಳಗೆ ಕೂತ. ಪೂಜಾರಿ ಅವನನ್ನು ಬದಿಗೆ ಸರಿಸಿದರು. ಅಂಗಾರ ಹಚ್ಚಿದರು. ಕೆಲ ಜನ ತಲೆಗೆ ಅರಿಶಿಣ ಮೆತ್ತಿದ್ದರು. ಹಲಗೆ ಸಪ್ಪಳ ಜೋರಾಗಿತ್ತು. ಪೂಜಾರಿ ಅರಚುತ್ತಿದ್ದ. ಲಿಂಬು ಬಾಯಲ್ಲಿ ಹಿಡಿದು ಕುಣಿಯುತ್ತಿದ್ದ. ಆಗಾಗ ಲಿಂಬು ಕಡಿದು ತುಂಡರಿಸುತ್ತಿದ್ದ. ಜನರ ಕೂಗಾಟ ನಡೆದೇ ಇತ್ತು. ಎಲ್ಲೆಡೆ ದೇವಿಯ ಗುಣಗಾನ ನಡೆದಿತ್ತು. ಗೃಹಿಣಿಯರು ಆರತಿಯೊಂದಿಗೆ ವಟವೃಕ್ಷದ ಕೆಳಗೆ ನಿಂತರು.

ಈಗ ಭೀಮೂನ ಪಾಳಿ. ಅವನು ಸಿದ್ಧನಾದ. ಅವನ ಅವ್ವ ಅವನ ಮೇಲೆ ಹೂವು ಎರಚಿದಳು. ಅಂಗಾರ ಹಚ್ಚಿದಳು. ದೇವಿಗೆ ಬೇಡಿಕೊಂಡಳು. ಹಲಗೆ ಸಪ್ಪಳ ಮತ್ತೂ ಹೆಚ್ಚಾಯಿತು. ಭೀಮೂ ಓಡಿದ. ಜನ ಕುತೂಹಲದಿಂದ ನೋಡುತ್ತಿದ್ದರು. ಅವನು ಗೋಡೆಗೆ ಢಿಕ್ಕಿ ಹೊಡೆದ. ಮರುಕ್ಷಣ ಅಲ್ಲೇ ಕುಸಿದು ಬಿದ್ದ. ನಾಲ್ಕು ಜನ ಅವನನ್ನು ಎತ್ತಿ ಬದಿಗೆ ಸರಿಸಿದರು. ಅಂಗಾರ, ಅರಿಶಿಣ ಹಚ್ಚಲಾಯಿತು. ಭೀಮೂ ದಿಗ್ಮೂಢಗೊಂಡಿದ್ದ.

ಇದನ್ನೆಲ್ಲಾ ಕಂಡು ಪರಶ್ಯಾನ ಎದೆಯೊಡೆಯಿತು. ಅವನು ತನ್ನ ಮಗನನ್ನು ನೋಡಿದ. ಮಹಿಶ್ಯಾ ಈಗ ಸಿದ್ಧನಾದ. ಪರಶ್ಯಾನ ಅವ್ವ ಉರುಳು ಸೇವೆ ಮಾಡಿದಳು. ದೇವಿಗೆ ಕೈ ಜೋಡಿಸಿದಳು. ಸುಭದ್ರಾ ಮಿಕಿ ಮಿಕಿ ನೋಡುತ್ತಿದ್ದಳು. ಗಲ್ಲ ಗಲ್ಲ ಬಡಿದು ಕೊಳ್ಳುತ್ತಿದ್ದಳು. ಆಕೆಯ ಕಂಗಳಲ್ಲಿ ನೀರು ತುಂಬಿಕೊಂಡಿತ್ತು. 'ನನ್ನ ಮಗನನ್ನ ಕಾಪಾಡವ್ವ' ಎಂದಾಕೆ ಬೇಡಿಕೊಂಡಳು. ಪೂಜಾರಿ ನರ್ತಿಸುತ್ತಿದ್ದ. ಭಂಡಾರ ಮೆತ್ತಿದ ಅವನ ಮುಖ ಭಯಾನಕವಾಗಿತ್ತು. ಮಹಿಶ್ಯಾ ಓಡಿದ. ಜನ ನೋಡಿತು. ಅವನು ಢಿಕ್ಕಿ ಹೊಡೆದ. ತಟ್ಟನೆ ನೆಲಕ್ಕೆ ಕುಸಿದ. ನಾಲ್ಕು ಜನ ಹೊತ್ತು ಬದಿಗೆ ಸರಿಸಿದರು. ಅವನ ದೇಹ ಕಂಪಿಸುತ್ತಿತ್ತು. ಕಣ್ಣು ಬೆಳ್ಳಗಾಗಿತ್ತು. ರಕ್ತ ಚಿಮ್ಮಿ ಹರಿಯುತ್ತಿತ್ತು . ಪೂಜಾರಿ ಅಂಗಾರ ಅರಿಶಿನ ಹಚ್ಚಿದ. ಹಲಗೆಯ ಸಪ್ಪಳ ಕರ್ಕಶವಾಗಿತ್ತು. ಜನ ಚೀರುತ್ತಿದ್ದರು. ಪರಶ್ಯಾನ ಕೈ ಕಾಲು ತತ್ತರಿಸಿತು. ಸುಭದ್ರಾಳಿಗೆ ಏನೂ ಹೊಳೆಯಲಿಲ್ಲ. ಮಹಿಶ್ಯಾ ಮಾತಾಡುತ್ತಿರಲಿಲ್ಲ. ಅಳುತ್ತಿರಲಿಲ್ಲ.



ಸುಭದ್ರಾ ಜನರ ನಡುವೆ ಪ್ರವೇಶಿಸಿದಳು. ಕಣ್ಣೀರು ಧಾರೆಯಂತೆ ಹರಿಯಲಾರಂಭಿಸಿತು. ಪೂಜಾರಿ 'ಅಳಬ್ಯಾಡ, ಪಾಪ ಹತ್ತತ್ತೈತಿ, ದೇವಿ ಎಲ್ಲ ನೋಡತಾಳ' ಎಂದು ಬಡಬಡಿಸುತ್ತಿದ್ದ.

ಮಹಿಶ್ಯಾ ಕೈಕಾಲು ಅಪ್ಪಳಿಸಿ ಕೊನೆಗೆ ಜೀವ ಬಿಟ್ಟ. ಸುಭದ್ರಾ ಓಡಿಹೋಗಿ ಗೋಡೆಗೆ ಜೋರಾಗಿ ತಲೆ ಅಪ್ಪಳಿಸಲಾರಂಭಿಸಿದಳು. ತಲೆಯಿಂದ ರಕ್ತ ಹರಿಯಲಾರಂಭಿಸಿತು. ಜನ ಕಂಗಾಲಾಯಿತು. 'ನನ್ನ ಮಗನ್ ಬದುಕಿಸ, ನೀ ಸತ್ಯವ್ವ. ಇಲ್ಲದಿದ್ರ ಈ ಜೀವ ಕೊಡ್ತೇನಿ' ಎಂದು ಸುಭದ್ರ ಗೋಡೆಗೆ ತಲೆಯಪ್ಪಳಿಸಿ ನೆಲಕ್ಕೆ ಕುಸಿದಳು. ಆಕೆಯ ಮೈಯೆಲ್ಲ ರಕ್ತದಿಂದ ತೊಯ್ದಿತ್ತು. ನಾಲ್ಕು ಜನ ಆಕೆಯನ್ನು ಬದಿಗೆ ಸರಿಸಿದರು.

ಗಂಡಸರು ಢಿಕ್ಕಿಯ ಹರಕೆಯೊಪ್ಪಿಸುವದು ಪದ್ಧತಿ. ಆದರೆ ಈಗ ಹೆಂಗಸು ಢಿಕ್ಕಿ ಹರಕೆ ನೀಡಿದ್ದರಿಂದ ಊರಿಗೇ ಆಪತ್ತು ಬಂತು. ಈಗ ನಮ್ಮ ಗತಿಯೇನು ಎಂದು ಜನ ಚಿಂತಾಕ್ರಾಂತರಾದರು. ಇಡೀ ಗುಡಿ ಬೆದರಿದಂತಿತ್ತು. ಸುಭದ್ರಾ ಮತ್ತು ಮಹಿಶ್ಯಾ ಸತ್ತು ಬಿದ್ದುದನ್ನು ಕಂಡು ಪರಶ್ಯಾ ಚಕಿತನಾದ. ಹರಕೆಯ ಕುರಿಯಂತೆ ಅವರಿಬ್ಬರ ದೇಹ ಗುಡಿಯೆದುರಿಗೆ ಬಿದ್ದಿತ್ತು. ಹಲಗೆ ಸಪ್ಪಳ ಮತ್ತಷ್ಟು ಜೋರಾಯಿತು. ಮುಂದಿನ ಸರದಿಯ ಭರಮ್ಯಾ ಢಿಕ್ಕಿಗೆ ಸಿದ್ಧನಾಗಿದ್ದ . ಜನ 'ಉಧೋ ಉಧೋ' ಎನ್ನುತ್ತಿದ್ದರು.

ತೆಂಗು ಹಾರಗಳ ರಾಶಿ ಬೆಳೆದಿತ್ತು. ಅದರಾಚೆ ಹೆಂಗಸರು ಕುಣಿಯುತ್ತಿದ್ದರು. ಪೂಜಾರಿಯು ಲಿಂಬುಗಳನ್ನು ಕಚಕಚ ಕಡಿದು ಚೆಲ್ಲುತ್ತಿದ್ದ. ಪಂಚರು ಗುಡಿಯಲ್ಲಿ ನಿಂತು ದೇಖರೇಖಿ ಮಾಡುತ್ತಿದ್ದರು. ಮುತ್ತೈದೆಯರು ಆರತಿಯೆತ್ತಿದರು. ಪೂಜಾರಿ ಅಂಗಾರವನ್ನು ಹಾರಿಸಿದ.

ಭರಮ್ಯಾ ಢಿಕ್ಕಿ ಹೊಡೆಯಲು ಓಡಲಾರಂಭಿಸಿದ. ಅವರವರ ಕರ್ಮ ಅವರವರಿಗೆ. ತಪ್ಪಿದರೆ ದೇವಿಯ ಅವಕೃಪೆ. ಆಕೆಗೆ ಎಲ್ಲರೂ ಒಂದೇ. ಪರಶ್ಯಾನ ಅವ್ವನಿಗೆ ದಿಕ್ಕೇ ತೋಚದಂತಾಗಿತ್ತು. ಪಾಪದ ಭಯದಿಂದ ಆಕೆ ವ್ಯಾಕುಲಗೊಂಡಿದ್ದಳು. ಆಗಾಗ ಬೆಚ್ಚಿ ಬೀಳುತ್ತಿದ್ದಳು. ಪರಶ್ಯಾ ಮಾತ್ರ ಮೈ ಮರೆತವನಂತೆ ನಿಂತಿದ್ದ.

ತಟ್ಟನೆ ಪರಶ್ಯಾ ಜನಸಂದಣಿಯಲ್ಲಿ ನುಗ್ಗಿದ. ಕಾವಲುಗಾರರು ತಡೆಗಟ್ಟಲು ಪ್ರಯತ್ನಿಸಿದರು. ಅವನು ಅವರನ್ನು ತಳ್ಳಿದ. ಪೂಜಾರಿ ಎದುರಾದ. ಪರಶ್ಯಾ ಪೂಜಾರಿಯ ಕೂದಲು ಹಿಡಿದೆಳೆದು ಕೆಳಗೆ ಕೆಡವಿದ. ಬಳಿಕ ಗುಡಿಯೊಳಗೆ ನುಗ್ಗಿದ. ಕಾವಲುಗಾರರು ಬೆನ್ನು ಹತ್ತಿದರು. ಪರಶ್ಯಾ ಮಾರೆವ್ವನ ತಲೆಯ ಮೇಲೇರಿ ನಿಂತುಕೊಂಡ. ಮತ್ತು ಥೈಥೈ ಕುಣಿಯಲಾರಂಭಿಸಿದ. ಅವನ ಎರಡೂ ಕಾಲುಗಳಿಗೆ ಸಿಂಧೂರ ಮೆತ್ತಿಕೊಂಡಿತು. ದೇವಿಯ ತಲೆ ಪರಶ್ಯಾನ ತುಳಿತಕ್ಕೆ ಸಿಕ್ಕು ಚಪ್ಪಾಡಿಯಾದಂತೆ ಕಾಣಿಸುತ್ತಿತ್ತು. ಅವನ ಕಾಲು ರಕ್ತದಿಂದ ತೊಯ್ದಂತೆ ಗೋಚರಿಸುತ್ತಿತ್ತು. ಪೂಜಾರಿ ಚಕಿತನಾದ. ಕಾವಲುಗಾರರು ಪರಶ್ಯಾನನ್ನು ಹಿಡಿದು ಕೆಳಗೆ ಎಳೆದರು.

ಗುಡಿಯ ಹೊರಗೆ ಗೊಂದಲ ಹೆಚ್ಚಾಗಿತ್ತು. ಢಿಕ್ಕಿ ಹರಕೆ ನಿಂತಿತ್ತು. ರಕ್ಷಕರು, ಕಾವಲುಗಾರರ ಗಂಟಲು ಒಣಗಿತ್ತು. ಹೆಂಗಸರ ಮೈಮೇಲೆ [illegible] ದೇವರು ಪಲಾಯನ ಮಾಡಿದ್ದ. ಮುತ್ತೈದೆಯರು ಓಡಿಹೋಗಿದ್ದರು. ಹೆಂಗಸರು, ಮಕ್ಕಳು [illegible] ತಂತಮ್ಮ ಸ್ಥಳಕ್ಕೆ ಧಾವಿಸಿದರು. ಜನ [illegible] ಎದುರಿಗೆ ನಿಂತು ಗೊಂದಲ [illegible].

ಕಾವಲುಗಾರರು ಪರಶ್ಯಾನನ್ನು [illegible]. ಜನರಿಗೆ ಅವನ ಕಾಲಿಗೆ ಮೆತ್ತಿದ್ದ [illegible] ಕಾಣಿಸುತ್ತಿತ್ತು. ಪರಶ್ಯಾ [illegible] ದೇವಿಗೆ [illegible].

[illegible]
[illegible]

ವಾಸನೆ

ಜುಲೈ ತಿಂಗಳಲ್ಲಿ ಒಂದು ಮುಂಜಾನೆ
ನಟ್ಟ ನಡು ಪೇಟೆ ಬಸ್ ಸ್ಟಾಂಡಿನಲ್ಲಿ
ಜನ ಜಂಗುಳಿಯ ನಡುವೆ ನಿಂತವಗೆ
ಬೆವರ ವಾಸನೆ, ಬೀಡಿ ಸಿಗರೇಟು
ಹೊಗೆಯ ವಾಸನೆ, ಉಚ್ಚೆ ಹೇಲು ಸೆಗಣಿ ವಾಸನೆ

ನರಕ ಯಾತನೆಯ ಈ ವಾಸನೆಯ ಬ್ರಹ್ಮಾಂಡ
ಬಾಯಿ ತೆರೆದಂತೆ ಸಣ್ಣಗೆ ಬೆವರುತ್ತ ಕಣ್ಣಾಡಿಸಿದರೆ
ಗಾಳಿಯಲ್ಲಿ ತೇಲಿದಂತೆ ಹನಿ ಹನಿ ಮಂಜಿನಂತೆ ಮಳೆ:
ಹರಿವ ಕೆಸರು, ಅಲ್ಲಿ-ಇಲ್ಲಿ ರಾಶಿ ಬಿದ್ದ ಕೊಳೆಯ ಮುದ್ದೆ
ಜೀವ ತಳೆದು ಬಂದ ರೀತಿ ಹರಕು ಸೀರೆ ಹೆಂಗಸು-

ಕೈಕಾಲು ಎರಡರಲ್ಲು ಕೊಳೆಯನೆಲ್ಲ ನೂಕಿ ನೂಕಿ
ಗುಪ್ಪೆ ಗೋಚಿ ಕೈಗಳಲ್ಲಿ ಬುಟ್ಟಿ ತುಂಬುತ್ತಿದ್ದ ಹಾಗೆ
ರಪಕ್ಕನೆ ರಟ್ಟೆತೊಂದು ಕೆಸರ ಬೊಟ್ಟು
ನನ್ನ ಅಂಗಿಯ ಮೇಲೆ!



ಎಂಥವಿದು ಇಲಿ ಸತ್ತ ವಾಸನೆ-ನುಗ್ಗಿದರೆ ಮನೆಗೆ
ಪ್ರಶ್ನೆಗಳ ಮಳೆಗರೆದಳು ನನ್ನವಳು ನನಗೆ
ಎಲ್ಲ ವಿವರಿಸಿದಂತೆ ನಿಟ್ಟುಸಿರುಬಿಟ್ಟವಳೆ
ಅಂಗಿಯನ್ನೆಳೆದು ಬಕೀಟಗೆ ತುರುಕಿದಳು

ಮಿಂದು ಚೊಕ್ಕಟ ಮೈಗೆ ಸುಗಂಧ ಚಿಮುಕಿಸಿಕೊಂಡೆ:
ಇದು ಎಂಥ ಸುಖವೆಂದು ಖುಷಿಪಟ್ಟ ಕ್ಷಣದಲ್ಲೆ



ಮತ್ತೆ ಅದೇ ಕೊಳೆತವಾಸನೆ-
ಹರಕು ಸೀರೆಯ ಹೆಂಗಸು
ಮರುಕಳಿಸಿ
ಗರ್ಭದಲ್ಲೇ ಚಳಿ ಕೂತ ಭಯ!

ವಾಸನೆಗೆ ಬಿಡುಗಡೆಯೆಲ್ಲಿ?

ಜೆ. ಎಸ್. ಉಬರಡ್ಕ
'ಕಾರ್ತಿಕ', ಅಂಚೆ: ದೊಡ್ಡತೋಟ - ೫೭೪ ೨೪೮. ಸುಳ್ಯ, ದ.ಕ.ಜಿಲ್ಲೆ

ಭಾರತ ದರ್ಶನ

ಬರಬಾರದೆ ಕ್ಲಿಂಟನ್ ನಮ್ಮೂರಿಗೆ ಒಮ್ಮೆ
ಇದ್ದರೂ ಏನೀಗ ರಸ್ತೆಯಲಿ ಒಂದೆರಡು ಹಸು-ಎಮ್ಮೆ
ಗೋಮಾತೆ - ಭಾರತೀಯರ ಹೆಮ್ಮೆ


ಬೇಸರ ಇಲ್ಲವೆ, ಇಲ್ಲೂ ಅದೇ ಕುಕ್, ಅದೇ ಕೇಕು
ತಿಂದು ನೋಡು ನಮ್ಮೂರ ಮೈಸೂರು ಪಾಕು
ನೀ ತಿನಲು ಇಲ್ಲಿ ಖಾರದ ಚುರುಮುರಿ,
ಬಿ.ಬಿ.ಸಿ.ಯಲ್ಲಿ ಸುದ್ದಿ ಕೇಳಿದ ನಿನ್ನ ಪತ್ನಿಗೆ ಹೊಟ್ಟೆ ಉರಿ

ಇಲ್ಲಿನ ರಸ್ತೆ ಡುಬ್ಬಗಳ ಮೇಲೆ ಚಲಿಸಲು ಕಾರು
ಎಂತಹ ಥ್ರಿಲ್ಲು
ಕಾರು ಕುದುರೆಯಾಗುವುದು ಕೇಳದೆ ಹುಲ್ಲು
ಹೆದರದಿರು ನೀನು, ಕೆಟ್ಟು ನಿಂತರೆ ಕಾರು
ಪಲ್ಲಕ್ಕಿಯಲಿ ಹೊತ್ತು ನಡೆವರು ನಮ್ಮೂರಿನವರು
ನಮ್ಮೂರ ಜನರಿಗೆ ಅತಿಥಿಗಳೇ ದೇವರು

ಪಂಚತಾರಾಗಳಲ್ಲಿಲ್ಲ, ಹೈವೇ ರಸ್ತೆಗಳಲ್ಲಿಲ್ಲ ಭಾರತ
ಶ್ರೀಸಾಮಾನ್ಯನ "ಉದಾರ - ಶ್ರೀಮಂತ ಮನದಲ್ಲಿದೆ"
ಭಾರತ

ಕೆ. ಆರ್. ಪ್ರೇಮಲೀಲ
ಜೆ.ಎಸ್.ಎಸ್. ಕಾಲೇಜು, ಮೈಸೂರು-೪

ಅರಿವು



ಎನ್. ಶ್ರೀನಿವಾಸ್
[illegible]

ಹಾರಾಡುತಲಿವೆ
ಬಣ್ಣ ಬಣ್ಣದ
ಹಕ್ಕಿಗಳು
ರೆಕ್ಕೆ ಪುಕ್ಕಗಳು ಬಲಿತು
ಸಾಕಿ ಸಲಹಿದವರನು ಮರೆತು

ಹುಟ್ಟಿ ಬೆಳೆದ
ಗೂಡುಗಳನು ತೊರೆದು
ವಾಸಿಸುತಲಿವೆ ಬದಲಿ
ಗೂಡುಗಳಲಿ ಪೋಷಿಸಿದವರ
ಹೃದಯಗಳನು ಕೊರೆದು

ಉರುಳಿದೆ ಕಾಲಚಕ್ರ
ಮನಸುಗಳು ಗತಕಾಲಕ್ಕೆ
ತೆರಳಿದವು
ಕಡೆಗಣಿಸಿದವು
ಪೋಷಿಸಿದವರನು
ಎಂದು ಅಂದುಕೊಂಡವು
ಹರೆಯ ಕಳೆದು
ಮುಪ್ಪು ಸಮೀಪಿಸಿದಾಗ

ಒಲವೆಂಬ ಮನೆಯ ಮಾಡಿ

ಮನವೆಂಬ ಭೂಮಿಯ ಮೇಲೆ
ಯೌವನವೆಂಬ ಪಾಯ ತೋಡಿ
ಚೆಲುವೆಂಬ ಗೋಡೆ ನಿಲಿಸಿ
ಒಲವೆಂಬ ಮನೆಯ ಮಾಡುವರು
ಕೊನೆಯಲ್ಲಿ
ಹಾಕಿದ ಪಾಯ ಕುಸಿಯುವುದೆ
ನಿಲಿಸಿದ ಗೋಡೆಯೂ ಬೀಳುವುದೆ
ಮಾಡಿದ ಮನೆಯೂ ಮನದೊಳಗೆ
ಮಗ್ನವಾಗುವುದೆ ಸಿರಿಗಂಧ

ಆರ್. ಪನ್ನೀರ್ ಸೆಲ್ವಂ
೭೪೫, ಆರ್.ಟಿ.ಟಿ.ಸಿ. ಹಿಂಭಾಗ
ಸರಸ್ವತಿಪುರಂ, ಮೈಸೂರು-೫೭೦ ೦೦೯

ರಾಷ್ಟ್ರೀಯ ಸುದ್ದಿ

ಕೋಟಿಗಟ್ಟಲೆ ನುಂಗಿ ಭಾರಿ ಪ್ರಸಿದ್ಧಿ
ಪಡೆದವನ ಮನೆ ಮದುವೆ ರಾಷ್ಟ್ರೀಯ ಸುದ್ದಿ
ಗಣ್ಯರೆಲ್ಲರು ಭಾಗವಹಿಸಿದರು ಮತ್ತು
ಅವನ ಘನ ಕಾರ್ಯಕ್ಕೆ ನೀಡಿದರು ಒತ್ತು.

ಪಳಕಳ ಸೀತಾರಾಮ ಭಟ್ಟ


ನೊಂದವರ ಹಾಡು

ಗೆಳೆಯಾ,
ಉಳ್ಳವರ (ಕು) ತರ್ಕಗಳು, ಪ್ರತಿಷ್ಠೆಗಳು
ಬದುಕ ರೂಪಿಸುವುದಿಲ್ಲ
ಆಸೆ ಕಂಗಳ ಕನಸುಗಳು ನನಸಾಗುವುದಿಲ್ಲ
ಐಷಾರಾಮದ ಬದುಕು ಸಿಕ್ಕುವುದಿಲ್ಲ
ದಿನ ನಿತ್ಯ ಗಂಜಿ ಕುಡಿಯುವುದು ತಪ್ಪುವುದಿಲ್ಲ
ಅಂಕಿ ಅಂಶಗಳು, ಬಲ್ಲವರ-ಬಲ್ಲಿದರ
ಮಾತುಗಳು ಅರ್ಥವಾಗದ ಶೂನ್ಯಗಳು
ನಿಟ್ಟುಸಿರಿನ, ಬಿಸಿಯುಸಿರಿನ, ಹಸಿದೊಡಲಿನ
ಕಾಳ್ಗಿಚ್ಚಿಗೆ ಸಿಕ್ಕಿ ಕನಸುಗಳು ಕಮರುತ್ತವೆ
ಕರಗುತ್ತವೆ
ಗೆಳೆಯಾ,
ಭರವಸೆ ಬದುಕಲ್ಲ ನೆನಪಿರಲಿ ನಿನಗೆ
ಉಳ್ಳವರ ಹುಸಿನಗೆ, ಅನುಕಂಪೆಯ ಸೋಗು
ಸಂಚುಗಳು ನಿನ್ನ ಬದುಕಗೊಡಿಸುವುದಿಲ್ಲ
ನೆನಪುಗಳು ಮುಳ್ಳಾಗಿ, ಕನಸುಗಳು ಕಲ್ಲಾಗಿ
ಬದುಕು ದಕ್ಕುವುದಿಲ್ಲ, ಕೊರಗು ನಿಲ್ಲುವುದಿಲ್ಲ
ಆದರೂ........
ಉಳ್ಳವರ ಎದೆಗೆ ಹಸಿದೊಡಲಿನ ಉರಿ
ಹೊತ್ತೀತು, ಬದುಕು ದಕ್ಕೀತು ಎಂಬ
ಹುಚ್ಚು ಭರವಸೆ ನಿನಗೆ

ಬಿ. ಬಸವರಾಜು
"ಯುವಶಕ್ತಿ ಪ್ರಕಾಶನ", ೭೬೭, ೨ನೇ ಕ್ರಾಸ್, ಪಾಪಾರಾಂ ರಸ್ತೆ,
ನಜರಾಬಾದ್, ಮೈಸೂರು-೫೭೦ ೦೧೦

ನಮ್ಮ ಬದುಕು

ಬೇಡ ನನಗಾ ತಳಮಳವಿಲ್ಲದ [illegible]
ನನ್ನ ಪ್ರಕ್ಷುಬ್ಧ ಜೀವಕ್ಕಂತು [illegible] ಬೇಡ !
ಎತ್ತರದ ಉದಾತ್ತ ಗುರಿ ಸಾಧನೆಗೆ
ನನ್ನ ಬದುಕೆಲ್ಲ ಹೋರಾಟಮಯವಾಗಲಿ
ಓ ಕಲೆಯೆ ! ಮನುಕುಲವು ಹಂಬಲಿಸುವ
ನಿನ್ನತುಲ ಭಂಡಾರಗಳ ನನಗಾಗಿ ತೆರೆದಿಡು
ನನ್ನಲ್ಲಿ ಬುದ್ಧಿ ವಿವೇಕಗಳಿಂದ
ಜಗವೆಲ್ಲವನು ಅಪ್ಪುವೆನು ನಾನು
ಕಷ್ಟ ಹಾದಿಯ ಹಿಡಿದು ದೂರ ದೂರಕೆ ಸಾಗುವಾ.
ಗೊತ್ತು ಗುರಿಗಳೊಂದಿಲ್ಲದ
ದಾರಿತೋರುವ ಗುರುವಿರದ
ಜಡ ಜೀವನವು ಬೇಡ ನಮಗೆ.
ನೋವು ದುಃಖಗಳ ನಿರ್ವೀರ್ಯ ಬದುಕು
ನಮಗೆ ಬೇಡ !



[illegible]
[illegible]
[illegible]

ಮೂಲ : ಕಾರ್ಲ್ ಮಾರ್ಕ್ಸ್
ಅನುವಾದ : ಆರ್. ಲಕ್ಷ್ಮೀನಾರಾಯಣ
(ಕಾರ್ಲ್ ಮಾರ್ಕ್ಸ್ ತನ್ನ ಹದಿನೆಂಟನೆ ಹರಯದಲ್ಲಿ ರಚಿಸಿದ ಕವಿತೆ)

ಕ್ಲಿಂಟನ್ ಹೋಳಿ ಆಡುತಾರೆ

ಕ್ರೂರ ಸಭ್ಯತೆಯ ಕುಬೇರ ನಗರದಿಂದ
ಬಿಜಯಂಗೈವರು
ಕ್ಲಿಷ್ಟ ಕ್ಲಿಂಟನ್
ಹಬ್ಬಗಳ ಈ ನಾಡಿಗೆ, ಓಕಳಿ ಆಡಲು

ಅತುಲವಿಹಾರಿಗಳಾಜ್ಞಾಪಿಸುವರು:
ರಂಗೇರಿಸಲು
ಭೇಟಿ ಕೂಟಗಳಿಗೆ
ಮಾಧ್ಯಮದ ಮುಖಪುಟಗಳಿಗೆ
ಎಲೆಕ್ಟ್ರಾನಿಕ್ ಲತಾ ಕುಂಜಗಳಲ್ಲಿ

ಕಂಬಾಳ ಪಳ್ಳಿ, ಕಾಶ್ಮೀರುಗಳಲಿ
ಒದ್ದೆಯಾದ ಬೆಡ್‌ಶೀಟುಗಳನು
ಒಂದೂ ರಕ್ತದ ಹನಿ ಕಾಣದಂತೆ ತತ್
ಕ್ಷಣ ತೊಳೆಯಬೇಕಾದುದರಿಂದ
ಪಾರಿವಾಳದ ಶುಭ್ರ, ರೆಕ್ಕೆಯನೊಳಗೊಂಡಂತೆ
ದೇಶದೆಲ್ಲ 'ಬಿಳಿ'ಯನ್ನೂ
ತುರ್ತಾಗಿ ಅಲ್ಲಿ ಬಳಿಯಲಾಗುತ್ತದೆ

ಕ್ಲಿಂಟನ್ ರಾಷ್ಟ್ರಗಳನೇ ಒಟ್ಟ
ಆಡಬಲ್ಲರು ಹೋಳಿ:
ಅತುಲವಿಹಾರಿ
ಭಾವಗೀತೆಗಳನು ಹೊಸೆದು
ಹಾಡಬಲ್ಲರು ಹೋಳಿ

ಅವರಿಬ್ಬರೂ ಆಡುತ್ತಲೇ ಹಾಡುತ್ತಲೇ
ಇರುವಾಗ,
ನಾವಿಲ್ಲಿ ನಗರಪಾಲಿಕೆಯ ಕಚಡಾ
ಲಾರಿಯಲ್ಲಿ ರಾಜರಸ್ತೆಯಿಂದ
ಹಠಾತ್ತನೇ ಹೊರದೂಡಲ್ಪಟ್ಟವರು

ಒಟ್ಟಾಗಿ, ಅವರ ಗಣಕಯಂತ್ರ
ಅಣುಕಟ್ಟುಗಳನು;
ನೀಲನಕ್ಷೆಗಳ ಸಮೇತ
ಒಟ್ಟಿ, ಹೋಳಿ ಹಚ್ಚುವ ತನಕ
ಮಾತಾಡುತ್ತಲೇ ಕೂತಿರುವೆವೇ ?

ಆನಂದ ಝುಂಜರವಾಡ
ನ್ಯಾಯಾಲಯ, ಬೀಳಗಿ (ಜಿ. ಬಾಗಲಕೋಟ)

ಮಂಗ... ಮಂಕ... ಮಾನವ..!

ಸಕಲ ಚರಾಚರ ಜೀವಿಗಳ ಒಡೆಯ, ವಿಕಾಸದ ಉತ್ತುಂಗ ಶಿಖರದಲ್ಲಿರುವ ಪ್ರಾಣಿಯೇ ಮಾನವ. ವಿದ್ಯಾ-ಬುದ್ಧಿ, ಶೀಲವಂತಿಕೆ, ಕಟುಕತೆ, ಕ್ರೋಧ, ಸಹನೆ, ಮೋಹ, ದ್ವೇಷ, ಅಸೂಯೆ ಎಲ್ಲವನ್ನೂ ಮೈಗೂಡಿಸಿಕೊಂಡ ಉಪ ಪ್ರಾಣಿ ಇವನು. ಹೊಟ್ಟೆ ಕಿಚ್ಚು ತನ್ನನ್ನು ತಾನು ಸುಟ್ಟುಕೊಂಡು ಬೇರೆಯವರನ್ನೂ ಸುಡಲು ಹೊರಡುವ ದುರ್ಬುದ್ಧಿ ಇವನದು. ಸಕಲ ಕಲಾ ವಲ್ಲಭನಂತೆ ಕಟ್ಟಬಲ್ಲನು - ಕೆಡುವ ಬಲ್ಲನು. ಒಳಿತಾದರೆ ತಾನು ಮಾಡಿದ್ದು, ಕೆಡುಕಾದರೆ ಬೇರೆಯವರು ಮಾಡಿದ್ದೆಂದು ಬೆರಳೊಡ್ಡುವವನು. ಏನೆಲ್ಲವನ್ನು ಮಾಡಬಲ್ಲ ಮಾನವ ಮಹಾ ಮಹಿಮ ಪ್ರಪಂಚ ಪ್ರದಕ್ಷಿಣೆ ಹಾಕಿ ಸಾಲದೆಂಬಂತೆ ಎಲ್ಲಾ ಗ್ರಹಗಳು ಸ್ವ ಗೃಹಗಳೆಂದು ಇಣುಕುವ ಹವಣಿಕೆಯಲ್ಲಿದ್ದಾನೆ. ಡಾರ್ವಿನ್‌ನ ಪ್ರತಿಪಾದನೆ ಪ್ರಶಂಸನೀಯ. ಮಂಗನಿಂದ ಮಾನವನೆಂದ ಅವನು. ಈ ಬರುವ ದಾರಿಯಲ್ಲಿ ಇನ್ನೊಂದು ನಿಲ್ದಾಣವಿದೆ. ಬಹುಶಃ ಡಾರ್ವಿನ್ ಅದಕ್ಕೆ ಬೆಲೆ ಕೊಡಲಿಲ್ಲವೇನೋ! ಅದುವೆ ''ಮಂಕ''. ಇದೊಂದು ಅರೆ ಮಾನವ ಜಾತಿ. ಅತ್ತ ಮಾನವನೂ (ಪರಿಪೂರ್ಣ) ಅಲ್ಲದ ಇತ್ತ ಮಂಗವೂ ಅಲ್ಲದ, ಪರಿಪಕ್ವಗೊಂಡ ಮಂಗವೆಂದು ಕರೆಯಬಹುದಾದ ''ಮಂಕಣ್ಣ'' ಸದಾ ಗೊಂದಲದಲ್ಲಿ ತೇಲಾಡುವ ವಿಚಿತ್ರ ಪ್ರಾಣಿ. ಡಾರ್ವಿನ್‌ನ ವಿಕಾಸವಾದದ ಪ್ರತ್ಯಕ್ಷರೂಪಕ. ಸಾಂಸ್ಕೃತಿಕ ಬದಲಾವಣೆಗಳು ಬಹುಬೇಗ ಚಲಾವಣೆಗೆ ಬರುವುದುಂಟು. ಆದರೆ ಜೈವಿಕ ವಿಕಸನ ನಿಧಾನವಾಗೇ ಬದಲಾಗುತ್ತದೆ.

ಮಂಗನಿಂದ ಒಂದು ಹೆಜ್ಜೆ ಮುಂದೆ ಇಟ್ಟ ಮಂಕಣ್ಣನ ಜೀವನ ಚರಿತ್ರೆ ವಿಚಿತ್ರ. ಇವನ ಪೂರ್ವಜರಲ್ಲಿಯ ತಾತನ ಹೆಸರು 'ಮಂಕಣ್ಣ'. ಅಪ್ಪನ ಹೆಸರು 'ಮರಿ ಮಂಕಣ್ಣ'. ತಾತನ ಗೌರವ ಸೂಚಕವೋ ಅಥವಾ ಕುಟುಂಬ ಸೂಚಕವೋ, ಬಳುವಳಿಯಾಗಿ ಬಂದ ಆ ಹೆಸರೇ ನಾಮಕರಣ ಮಾಡಿ ಕೈ ತೊಳೆದುಕೊಂಡಿದ್ದರು.

ವಾಲಿ, ಸುಗ್ರೀವ, ಅಂಗದ, ಆಂಜನೇಯರು ಮುಂದುವರೆದ ಮಂಗಗಳಾಗಿದ್ದಿರಬೇಕಲ್ಲವೇ? ಅವರು ಕೂಡ ಮರದಿಂದ ಮರಕ್ಕೆ ನೆಗೆದು ಬಾಲ ಅಲ್ಲಾಡಿಸುವವರೇ.... ಆದರೆ ಅವರು ಬೆಳೆದ ಪರಿಸರ ಅವರನ್ನು ಕೊಂಚ ತಿಳಿವಳಿಕೆಯೆಡೆಗೆ ಎಳೆದಿತ್ತು. ಶ್ರೀರಾಮನಂತಹ ಸದ್ಗುಣ ಸಂಪನ್ನ ಉನ್ನತ ಜೀವಿಯಡಿಯಲ್ಲಿ ಕೊಂಚ ಸುಧಾರಣೆ ಕಂಡಿದ್ದಿರಬೇಕು. ಇನ್ನು ಶ್ರೀರಾಮನಿಂದ ಸ್ವಲ್ಪ ದೂರ ಇದ್ದ ಕೆಲವು ಮಂಗಗಳ ವಂಶವಾಹಿನಿಯೇನಾದರೂ ಈ 'ಮಂಕಣ್ಣ'ನ ಕುಟುಂಬಕ್ಕೆ ಹರಿದಿರಬಹುದೆ? ಎಂಬ ಅನುಮಾನ.

[illegible] 'ಮಂಕಣ್ಣ'. ಗೆಳೆಯರ ಬಳಗಕ್ಕೆಲ್ಲ 'ಮಂಕ' ಈ ಮಂಕನನ್ನು [illegible] ಗೇಲಿ ಮಾಡುವವರು [illegible] ಓರಗೆಯವರ [illegible] ಆಯ್ತು. [illegible] ತನ್ನ

ಕೊನೆಯುಸಿರು ಬಿಡುವುದಕ್ಕಿಂತ ಮುಂಚೆಯೇ ಮಗ ಮಂಕಣ್ಣನನ್ನು ಹಸೆ ಮಣೆ ಏರಿಸಿ ತನ್ನ ಪಾಲಿನ ಕರ್ತವ್ಯ ಮುಗಿಸಿ ಪಾರಾಗಿದ್ದ. ಮಹಾನುಭಾವನಿಂದ ಮೂರು ಗಂಟು ಹಾಕಿಸಿಕೊಂಡ ಮಡದಿ ''ಮಂಕಮ್ಮ'' ಮಂಕಣ್ಣನ ಖಾಸಾ ಸೋದರತ್ತೆಯ ಮಗಳು. ಆರ್ಡರ್ ಕೊಟ್ಟು ಹೇಳಿ ಮಾಡಿಸಿದ ಜೋಡಿ. ಇಬ್ಬರೂ ಜೊತೆಗೂಡಿ ಬರುತ್ತಿದ್ದರೆ ಪಡ್ಡೆ ಹುಡುಗರ ದಂಡು ಪಿಳಿ ಪಿಳಿ ನೋಡಿ, ಮುಸಿ ಮುಸಿ ನಗುತ್ತ ಚಲುವ ಚೆನ್ನಿಗರಾಯ, ಮಡದಿ ಮಧುವಣಗಿತ್ತಿ, ಶಿವಾ! ಎಂಥಾ ತಪ್ಪು ಮಾಡಿ ಬುಟ್ಟೆ ಇನ್ನೊಂದು ಜರಾ ಬಾಲ ಇಟ್ಟರ ಏನ್ ಗಂಟ ಹೋಗ್ತಿತ್ತು : ಈ ಎಡಬಿಡಂಗಿ ಕೋಡಂಗಿಗೋಳಿಗೆ, ಜೋಡಿ ಅಂದರ



ಹಿಂಗಿರಬೇಕ ನೋಡ್ರಿ, ಎಂದು ಮಜಾ ಮಾಡುತ್ತಿದ್ದರು.

ಮಂಕಣ್ಣನೇನು ಸಾಮಾನ್ಯನಾಗಿರಲಿಲ್ಲ, ಇತಿಹಾಸ ದಲ್ಲಿ ಪದವಿ ಮುಗಿಸಿದ ಪಂಡಿತ. ಮರೆಗೂಳಿ ಇತಿಹಾಸಕಾರ. ಎಲ್ಲಿಯೂ ಸಲ್ಲಲಿಲ್ಲ, ತನ್ನ ವೃತ್ತಿ ಜೀವನ ಆರಂಭಿಸಿದ ಮೊದಲನೆ ದಿನ ಚಡ್ಡಿ ಮೇಲೆಯೆ ಆಫೀಸಿಗೆ ಹೋಗಿ ಪ್ರದರ್ಶಿಸಿದ ಅಂಗ ಅವತಾರ. ಲಂಗು ಲಗಾಮಿಲ್ಲದ ಮಂಗ ಹಾಕಿಸಿಕೊಂಡ ಮೇಲಧಿಕಾರಿ ಯಿಂದ ಛೀಮಾರಿ, ಹಿಡಿದ ಮನೆಯ ದಾರಿ. ಕೆಲಸಕ್ಕೆ ಬಿತ್ತು ಪಂಗನಾಮ. ತನ್ನ ಒಡನಾಡಿದ ಚಡ್ಡಿ ಗೆಳೆಯರು ಎದುರುಗಡೆ ಬಂದರೆ ನಾನು ಎಲ್ಲೋ ನೋಡಿದಿನಿ ನಿಮ್ಮನ್ನು....... ಎಲ್ಲಿರಬೇಕು.......? ಎಂದು ರಾಗ ಎಳೆಯುವುದು. ಅಷ್ಟಕ್ಕೆ ಬಿಡುವುದಿಲ್ಲ, ತಮ್ಮ

ಸಿ. ಎಸ್. ಪಾಟೀಲ

ಹೆಸರೇನು......? ತಾವು ಏನ್ ಕೆಲ್ಸ ಮಾಡ್ತೀರಿ.....? ನನಗೂ ಕೂಡ ಒಂದ ಕೆಲ್ಸ ಕೊಡ್ರಿ..... ಹೀಗೆ ಹತ್ತು ಹದಿನಾರು ಪ್ರಶ್ನೆಗಳ ಸುರಿಮಳೆ. ಮಡದಿ ಮಂಕಮ್ಮಳನ್ನು ಹೊರಗೆ ಕರೆದುಕೊಂಡು ಹೋಗಿ ಮರೆತು ಬಂದು ದ್ದುಂಟು. ಯಾವ ಕರ್ಮಕ್ಕಾದರೂ ಈ ಕಮಂಗಿಯನ್ನು ಕಟ್ಟಿಕೊಂಡೆ ಶಿವಾ ಎಂದು ಮಂಕಮ್ಮಳ ಪ್ರಲಾಪನೆ. ಅವಳದು ಕೂಡ ಒಂದು ವೀಕನೆಸ್. ದ್ಯಾವ್ರು ಹಿಂಗ್ಯಾಕ ಮಾಡ್ತಾನ ಅಂತಿನಿ, ಬೆಳ್ಳಾಗಿನ ಬಣ್ಣ ಸಣ್ಣ ದ್ಯಾಹ ಕೊಟ್ರೆ ಅವರಪ್ಪನ ಗಂಟೇನು ಹೋಗ್ತಿತ್ತು....... ನಾನು ಹ್ಯಾಂಗಾರ ಮಾಡಿ ಒಬ್ಬ ಸೂರ, ಈರ, ಹೀರನ ಹಂತವನಿಗಿ ಕಟಕೊಂಡ ಝುಗ್‌ಂತ ಝುಗಮಗಿಸಿ ಜನದಾಗ ಇರ್ತಿದ್ದೆ. ಈ ಹಾಳಾದ ಹದ್ದಿನ ಮೂತಿ ಮುಸಡಿ ತಗೊಂಡ, ಕಮಂಗಿನಾ ಕಟಕೊಂಡೆ. ನನ್ನ ಕರ್ಮ...... ನೋಡ್ತಿನಿ ಈಗೇನಾರ ಮಾಡಲಾಕ ಬರ್ತಾದೇನೋ .....ಅಂತ ಸೌಂದರ್ಯದ ಆಸೆ ಕಟಕೊಂಡ ಹೊರಟಳು ಮಂಕಮ್ಮ 'ಬ್ಯೂಟಿ ಪಾರ್ಲರ್'ಗೆ..

ಎಡಬಿಡಂಗಿ ಗೋಸುಂಬಿಯನ್ನು ಕಂಡು, ಬ್ಯೂಟಿ ಪಾರ್ಲರ್‌ನ 'ಬಂಗಾರಿ' ಆದಳು ಗಾಬರಿ! ಬ್ಲೀಚಿಂಗೋ, ಸ್ಕ್ಯಾನರೀಂಗೋ, ಕಟಿಂಗೋ, ಸೆಟ್ಟಿಂಗೋ, ಮಾಡ ಲಿಂಗೋ, ಮ್ಯಾನರಿಂಗೋ, ಯಾವುದು ಮಾಡಬೇಕು ಹೇಳಿ ಮೇಡಮ್. ಎಲ್ಲವನ್ನು ಅರ್ಥ ಮಾಡಿಕೊಂಡ ಮಂಕಮ್ಮ, ಎಲ್ಲಾ ಸೇರ್‍ಸಿ ''ಸುಂದರಿಂಗೋ'' ಮಾಡಬೇಕು ಎಂದು ಕೇಳಿಕೊಂಡಳು. ತುಕ್ಕು ಹಿಡಿದ ಪಾತ್ರೆಯಂಥ ಗಿರಾಕಿ ಸಿಕ್ತು ಎಂದು ಗಸ ಗಸ, ಮಸ ಮಸ ತೀಡಿ ತಿಕ್ಕಲಾರಂಭಿಸಿದಳು. ಮೊಗದ ಗಲ್ಲ, ನೊಗ ಹೊತ್ತ ಎತ್ತಿನ ಹೆಗಲಿನಂತಾಗಿದ್ದವು. ತೊಂಡೆಯಂಥ ಮೂಗು, ಹುಬ್ಬಿನೊಳಗೆ ಆಳವಾಗಿ ಇಳಿಬಿದ್ದ ಕಣ್ಣು, ಹರಕು ತುಟಿ, ಸಣ್ಣ ಕಿವಿ, ಅಡ್ಡಾದಿಡ್ಡಿ ತಿರುಗಿ ನಿಂತ ದಂತ ಪಂಕ್ತಿ, ಮೇಲೆ ಪದರಿನಂಥ ನಾರು, ಹಂಚಿಗಂಟಿದ ಕರಿ ಮಸಿ. ತಾಜಾ ಆಗಿದ್ದರೆ ಬೇಗ ಹೋಗುವುದು. ಆದರೆ ಇದು ಹಾಗಲ್ಲ, ಚರ್ಮ ತೆಗೆದು ಕಸಿ ಮಾಡಿದಾಗ ಸ್ವಲ್ಪ ಮಟ್ಟಿಗೆ 'ಸುಂದರಿಂಗೋ' ಬರುವದು. ಹಾಗೂ ಹೀಗೂ ಸರ್ವವಿಧ ಸೌಂದರ್ಯ ವರ್ಧಕಗಳಿಂದ ಸರಿಸುಮಾರು ಮುಕ್ಕಾಲು ದಿವಸ ಶ್ರಮವಹಿಸಿ ತಂದಳು ಕೊಂಚ ಅವಸ್ಥೆಗೆ ದುರವಸ್ಥೆಯ ಪರಿಧಿಯಿಂದ. ವ್ಯತ್ಯಾಸ ಅವಳಿಗೆ ನೂರ್ಮಡಿಯಂತೆ ಭಾಸವಾಗುತ್ತಿತ್ತು. ಆಗಲೇ ಕೊಬ್ಬಿನಿಂದ ತಾನೇ ಸೌಂದರ್ಯ ಖಣಿಯಂದು ವಯ್ಯಾರ ಮಾಡುತ್ತ ಹೊರಟಳು ಮನೆಗೆ 'ಮಂಕಮ್ಮ'. ಬಂಗಾರಿಯಿಂದ ಸಿಂಗರಿಸಿಕೊಂಡ ಸಿಂಗಾರಿ! ಮನೆಯಬಾಗಿಲ ಬಡಿದು ಬಾರಿಸಿದಳು ನಗಾರಿ! ಭೂಪನೆದ್ದು ಬಂದು ಬಾಗಿಲು ತೆರೆದು ಆದ ಗಾಬರಿ.....!

ಯಾರು ನೀವು? .....ನನ್ನ ಮಡದಿ ಮನೆಯಲ್ಲಿಲ್ಲ...

([illegible] ಪುಟ ನೋಡಿ)

ಅಂದು ಮಂಗಳವಾರ ನವಿಲೂರ ಕೇರಿಯಲಿ
ಓಲಗದ ಸದ್ದು ತುಂಬಿತ್ತು;
ಬಳೆಯ ತೊಡಿಸಿದರಂದು ಅಮ್ಮನಿಗೆ ತೌರಿನಲಿ
ಅಂಗಳದ ತುಂಬ ಜನವಿತ್ತು
(ಮೈಸೂರು ಮಲ್ಲಿಗೆ)

ಬಾಗಿಲಿಗೆ ಬಂದಿಹನು
ಬಳೆಗಾರ ಕೃಷ್ಣಪ್ಪ

ನವಿಲೂರಿನಿಂದ ತಂದ ಈ ಸುದ್ದಿಯೊಂದಿಗೆ 'ಹೋಗಿ ಬನ್ನಿರಿ ಒಮ್ಮೆ, ಅಮ್ಮನಿಗೆ ನಿಮ್ಮದೇ ಕನಸು' ಎಂದು, ಮಾವನೊಂದಿಗೆ ಮುನಿಸಿಕೊಂಡಿದ್ದ ರಾಯರಿಗೆ ಬಿಮ್ಮನಿಸೆ ಪತ್ನಿಯ ನೆನಪು ಮೂಡಿಸುವ ಬಳೆಗಾರ ಚನ್ನಯ್ಯನನ್ನು ಕೆ. ಎಸ್. ನ. ಚಿರಜೀವಿಯಾಗಿಸಿದ್ದಾರೆ.

ಮೂರು ನಾಲ್ಕು ತಿಂಗಳಿಗೊಮ್ಮೆ ಅಥವಾ ಹಬ್ಬ ಹರಿದಿನಗಳಿಗೆ ಮುಂಚೆ ಬಳೆ ಮಲಾರವನ್ನು ಹೆಗಲಿಗೆ ನೇತು ಹಾಕಿಕೊಂಡು ಬಳೆಗಾರ ಊರಿಗೆ ಬಂದರೆ ಹೆಂಗಸರಿಗೆ ಬಳೆ ತೊಡಿಸಿಕೊಳ್ಳುವ ಸಡಗರ. ಯಾರದಾದರೂ, ಜಗುಲಿಯ ಮೇಲೆ ತನ್ನ ಜಮಖಾನ ಹಾಸಿ, ಬಳೆಯ ಸರಗಳನ್ನು ಮುಂದೆ ಹರಡಿ ಕುಳಿತರೆ ಸುದ್ದಿ ಇಡೀ ಬೀದಿಗೆ ತಲುಪಿ ಹೆಂಗಸರು ಮಕ್ಕಳು ಬಂದು ನೆರೆಯುತ್ತಾರೆ. ಚೆಂದದ ಬಳೆ ತೊಡಿಸಿಕೊಳ್ಳಬೇಕಾದರೆ ಸ್ವಲ್ಪ ನೋವು ತಿನ್ನಬೇಕಾಗುತ್ತದೆ. ಬಳೆಗಾರ ಹೆಂಗಸರ ಕೋಮಲ ಹಸ್ತಗಳನ್ನು ಅದುಮಿ ಬಳೆ ತೊಡಿಸುವಾಗ ಕಣ್ಣಂಚಿನಲ್ಲಿ ನೀರು ಕಾಣಿಸಿಕೊಂಡರೂ, ಹೊಂದಿಕೆಯಾಗುವ, ಬಣ್ಣ ಬಣ್ಣದ, ಬಂಗಾರದ ಮೆರುಗಿನ ಬಳೆ ಕೈ ತುಂಬ ತೊಡಿಸಿಕೊಂಡಾಗ ಅವನ್ನು ತಿರುಗಿಸಿ ನೋಡುವ ಹಿಗ್ಗು, ಕೈಯಾಡಿಸಿದಾಗ ಅವು ಹೊರಡಿಸುವ ಝಣ ಝಣ ಸದ್ದಿಗೆ ನೋವೆಲ್ಲ ಮಾಯ! ಬಳೆ ಮಲಾರಕ್ಕೆ ಭಕ್ತಿಯಿಂದ ಶರಣು ಮಾಡಿಕೊಂಡು, ಬಳೆಗಾರನಿಗೆ ಅವುಗಳ ಬೆಲೆ ಮುಟ್ಟಿಸಿದಾಗ ಮನಸ್ಸಿಗೆ ತೃಪ್ತಿ. ಬಸುರಿಗೆ ಬಳೆ ತೊಡಿಸುವುದಂತೂ ಸಂಭ್ರಮದ ಆಚರಣೆ.



ನಾವೆಲ್ಲಿ ಸ್ಟೋರುಗಳಲ್ಲಿ ಬಳೆ ಖರೀದಿಸಿ ತಾವೇ ತೊಟ್ಟುಕೊಳ್ಳುವ ಆಧುನಿಕ ಮಹಿಳೆಯರ ನೆನಪಿನಿಂದ ಈ ಬಳೆಗಾರ ಮಾಯವಾಗಿರಲು ಸಾಕು. ಆದರೆ ನಗರದ ಹೊರವಲಯಗಳಲ್ಲಿ ಅಲ್ಲಲ್ಲಿ ಬಳೆಗಾರ ವೃತ್ತಿಯಿಂದ ಜೀವನ ಸಾಗಿಸುವ ಕೆಲವರಾದರೂ ಇದ್ದಾರೆ.

[illegible] ಬಳೆ ತೊಡಿಸುತ್ತಿದ್ದ [illegible] ನಾಲ್ಕನೆಯ ಬಳೆಗಾರ [illegible].

ತನ್ನ ಬಳೆ ಮಲಾರ [illegible] ಪತ್ನಿಸುತ್ತ ಕಿಲೋಮೀಟರ್ ನಡೆದು [illegible] ಕೃಷ್ಣಪ್ಪ ಹುಟ್ಟಿದ್ದು ಆನೇಕಲ್ಲಿನಲ್ಲಿ. ಈಗ ಅಂಚೆಪಾಳ್ಯದಲ್ಲಿ ವಾಸ. ಮನೆ ಬಾಡಿಗೆ ಮುನ್ನೂರು ರೂಪಾಯಿ. ನಾಲ್ಕು, ಆರು ಮತ್ತು ಒಂಬತ್ತನೇ ತರಗತಿಯಲ್ಲಿ ಕಲಿಯುವ ಮೂರು ಮಕ್ಕಳು. ಸಂಸಾರ ತೂಗಿಸುವುದು ಸುಲಭವಲ್ಲ. ಆದರೆ ಬೇರೆ ಯಾವುದೇ ಕೆಲಸ ಬಾರದು. ಈ ತಿರುಗಾಟದಲ್ಲಿ ದಿನಕ್ಕೆ ೮೦ ರಿಂದ ೧೫೦-೨೦೦ ರೂ.ವರೆಗೆ ವ್ಯಾಪಾರವಾಗುತ್ತದೆ. ಸಂಸಾರದ ಖರ್ಚಿಗೆ ಸ್ವಲ್ಪ ತೆಗೆದಿರಿಸಿದರೆ ಉಳಿದದ್ದು ಹೊಸ ಬಳೆ ಖರೀದಿಸಲು ಬಂಡವಾಳ. ತಿಂಗಳಿಗೊಮ್ಮೆ ಬಳೆ ಖರೀದಿಸುವುದುಂಟು ಅಥವಾ ಅಗತ್ಯ ಬಿದ್ದ ಹಾಗೆ. ಸಗಟು ವ್ಯಾಪಾರ ಮಾರವಾಡಿ ವರ್ತಕರ ಕೈಯಲ್ಲಿ, ಅವರ ಮುಂದೆ ದುಸರಾ ಮಾತಾಡುವಂತಿಲ್ಲ. ಅವರು ಹೇಳಿದ್ದೇ ಬೆಲೆ. ತೊಡಿಸುವಾಗ ಒಡೆದು ಹೋಗುವ ಬಳೆ ನಷ್ಟದ ಲೆಕ್ಕದ್ದು. ಬಂಡವಾಳ ಸಾಲದೆ ಹೋಗುತ್ತದೆ. ಒಮ್ಮೆಗೆ ಸಾಲ ಮಾಡಬೇಕಾಗುತ್ತದೆ. ಈ ಸಾಲವಂತೂ ತೀರಿತು ಎನ್ನುವಂತಿಲ್ಲ.

''ಹ್ಯಾಗೋ ಬದುಕು ನಡೀಬೇಕಲ್ಲ ಸಾರ್!''

ಕೃಷ್ಣಪ್ಪನ ಬದುಕು ನಡೆಯಲು ಆತನ ಪತ್ನಿಯ ಸಹಕಾರವೂ ಇದೆ. ಕೆಲವೊಮ್ಮೆ ಮನೆಗೆ ಬರುವ ಹೆಂಗಸರಿಗೆ ಆಕೆ ಬಳೆ ತೊಡಿಸುತ್ತಾಳೆ.

ರಸ್ತೆ ಬದಿಯಲ್ಲಿ ಬಳೆ ತೊಡಿಸಿಕೊಂಡ ಮಹಿಳೆಗೆ, 'ಈಗೀಗ ನಮ್ಮ ಬೀದಿ ಬೀದಿಯಲ್ಲಿ ಬಳೆ ಅಂಗಡಿಗಳಿವೆಯಲ್ಲ' ಎಂದದ್ದಕ್ಕೆ, ನೊಂದ ಕೈಯನ್ನು ಹಿಂಡಿಸಿಕೊಳ್ಳುತ್ತಾ, ''ಇಲ್ಲ ಅಣ್ಣಾವರೆ, ಬಳೆಗಾರರ ಕೈಯಿಂದ ಬಳೆ ಹಾಕಿಸಿಕೊಳ್ಳದಿದ್ದರೆ ಬಳೆತೊಟ್ಟ ತೃಪ್ತಿಯೇ ಆಗುವುದಿಲ್ಲ'' ಎಂದಳು.

ಹೀಗೆ ಸಮಾಜದೊಂದಿಗೆ ಬಳೆಗಾರರ ಸಂಪರ್ಕ, ಅಲ್ಲಲ್ಲಿ ಮುಂದುವರಿಯುತ್ತಿದೆ. ಆಭರಣ ತಯಾರಿಕೆಯಿಂದ ಹಿಡಿದು ಜೀವನದ ಎಲ್ಲ ರಂಗಗಳಲ್ಲಿ ಆಧುನಿಕತೆ ಪ್ರವೇಶವಾಗಿದೆ. ಪ್ರಾಯಶಃ ತೀರಾ ಹಿಂದುಳಿದಿರುವುದು ಈ ಬಳೆಗಾರಿಕೆ ಎನ್ನಿಸುತ್ತದೆ.

- ಕೆ.ಪಿ. ಸ್ವಾಮಿ

ನನ್ನ ರಾಗ – ಹಾಡೆಲ್ಲ ನಿಮ್ಮವು !

ಇಂದಿನಿಂದ-
ಓ ! ಎನ್ನ ರೈತರೇ ಕೂಲಿಕಾರರೇ;
ನನ್ನ ರಾಗ, ಹಾಡೆಲ್ಲ ನಿಮ್ಮವು !
ಉಪವಾಸದಲ್ಲಿರುವ
ನನ್ನ ಪ್ರಿಯ ಸಂಗಾತಿಗಳೇ
ನನ್ನ ಜೋಗ, ಬಿಹಾಗ್ ನಿಮ್ಮವು !


ನೀವು ಎಲ್ಲಿಯವರೆಗೂ
ಉಪವಾಸ ವನವಾಸದಲ್ಲಿರುವಿರೋ
ಅಲ್ಲಿಯವರೆಗೂ
ಈ ಜ್ವಾಲೆ ಕುದಿಯುತ್ತಿರುತ್ತದೆ !





ನೀವು ಎಲ್ಲಿಯವರೆಗೂ
ಅಶಾಂತಿಯಲ್ಲಿರುವಿರೋ
ಈ ನನ್ನ ಕಾವ್ಯ
ಸುಖಪ್ರದವಾಗಲಾರದು !


ಇಂದಿನಿಂದ ನಾನು
ಮಂಜುಹನಿಯ ಬದಲು
ಬೆಂಕಿ ಕಿಡಿಗಳ ಸುರಿಸುವೆ !

ಮೂಲ ಉರ್ದು : ಸಾಹಿರ್ ಲುಧಿಯಾನ್ವಿ
ಕನ್ನಡ ರೂಪ : ಡಾ|| ಪಂಚಾಕ್ಷರಿ ಹಿರೇಮಠ



ಇನ್ನು ಮುಂದೆ ಈತನ ಭಾಷಣವನ್ನು ಮೊದಲೇ ಟೇಪ್ ಮಾಡಿ.. ಎಡಿಟ್ ಮಾಡಿಬಿಡಬೇಕು.. ಅನ್ಸುತ್ತೆ


ಈ ದರಿದ್ರ ಮಂತ್ರಿಗಳು ಬರುವ ಬದಲು ಒಂದು ಹನಿ ನೀರನ್ನಾದರೂ ಕಳಿಸಬಾರದಿತ್ತೆ....


ನಲವತ್ತು ವರ್ಷಗಳಿಂದ ನಮ್ಮನ್ನು ಏನೂ ಮಾಡಲಿಕ್ಕೆ ಆಗಲಿಲ್ಲ.. ಈಗ ಮಗುವನ್ನು ಅಸ್ತ್ರ ಮಾಡಿಕೊಳ್ಳಲು ನಾಚಿಕೆ ಆಗಲ್ವಾ..?


ಪಾಕಿಸ್ತಾನ
ಮಾನವ ಹಕ್ಕುಗಳು


ಕ್ರಿಕೆಟ್ ಅವ್ಯವಹಾರ


ಈ ಕ್ರಿಕೆಟ್ ಅವ್ಯವಹಾರಗಳು ನಮ್ಮ ದೇಶದ ಮರ್ಯಾದೆಯನ್ನೆಲ್ಲಾ ಹರಾಜು ಹಾಕಿಬಿಟ್ರು..
ರಾಜಕಾರಣಿಗಳ ಅವ್ಯವಹಾರಗಳು

ಆತಂಕದ ನೆರಳಿನಲ್ಲಿ ಇಪ್ಪತ್ತೊಂದನೇ ಶತಮಾನದತ್ತ ಕರ್ನಾಟಕ

ಇಪ್ಪತ್ತನೆಯ ಶತಮಾನದ ಆರಂಭದಲ್ಲಿ 'ಕೈಗಾರಿಕೀಕರಣ - ಇಲ್ಲವೇ ನಾಶ' ಎಂಬ ಧ್ಯೇಯ ಹೊಂದಿದ್ದ ಅಂದಿನ ದಿವಾನರಾಗಿದ್ದ ಸನ್ಮಾನ್ಯ ಎಂ. ವಿಶ್ವೇಶ್ವರಯ್ಯನವರು ಮೈಸೂರು ಪ್ರಾಂತ್ಯದ ನೈಸರ್ಗಿಕ ಸಂಪತ್ತನ್ನು ಸೂಕ್ತವಾಗಿ ಬಳಸಿಕೊಳ್ಳುವ ದೃಷ್ಟಿಯಿಂದ ೩೪ ಉದ್ಯಮಗಳನ್ನು ಸ್ಥಾಪಿಸಿದರು. ಸರ್ಕಾರಿ ಸ್ವಾಮ್ಯದ ಈ ಕೈಗಾರಿಕೆಗಳು ಆರ್ಥಿಕ ಪ್ರಗತಿ ಮತ್ತು ಸ್ವಾವಲಂಬನೆಯನ್ನು ಸಾಧಿಸುವುದರ ಜೊತೆಗೆ ಸ್ಥಳೀಯರಿಗೆ ಉದ್ಯೋಗ ನೀಡಿ ರಾಜ್ಯದ ಸರ್ವಾಂಗೀಣ ಪ್ರಗತಿಗೆ ನೆರವಾಗುತ್ತದೆ ಎಂದು ಅವರು ನಂಬಿದ್ದರು. ನಮ್ಮ ಗಂಧದ ಎಣ್ಣೆ, ಸಾಬೂನು, ಆಟಿಕೆ, ರಾಸಾಯನಿಕ ಕಾರ್ಖಾನೆಗಳ ಉತ್ಪನ್ನಗಳು ದೇಶ-ವಿದೇಶಗಳಲ್ಲಿ ಮಾರುಕಟ್ಟೆ ಪಡೆದಿದ್ದವು.

ಕನ್ನಂಬಾಡಿ ಅಣೆಕಟ್ಟು (ವಿಶ್ವದ ಪ್ರಥಮ ಬಹೂಪಯೋಗಿ ಅಣೆಕಟ್ಟು) ನಿರ್ಮಿಸಿ, ಬೆಂಗಾಡಾಗಿದ್ದ ಮಂಡ್ಯ ಜಿಲ್ಲೆಯನ್ನು ಭತ್ತ, ಕಬ್ಬುಗಳ ಕಣಜವಾಗಿಸಿದರು. ಚಿತ್ರದುರ್ಗದಲ್ಲಿ ಬಹುತೇಕ ನದಿಗಳಿಗೆ ಒಡ್ಡು ನಿರ್ಮಿಸಿ ವಾಣಿವಿಲಾಸ ಸಾಗರದ ಮುಖಾಂತರ ಕೃಷಿ ಕ್ಷೇತ್ರಕ್ಕೆ ಹೊಸ ಚಾಲನೆ ನೀಡಿದರು. ದೇಶದಲ್ಲೇ ಪ್ರಥಮವಾಗಿ ವೃತ್ತಿಪರ ಶಿಕ್ಷಣ (ಎಸ್. ಜೆ. ಪಾಲಿಟೆಕ್ನಿಕ್, ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್) ಸಂಸ್ಥೆಗಳು ಪ್ರಾರಂಭವಾದವು. ಅಂದು ಪ್ರಪಂಚದಲ್ಲಿ ಪ್ರಚಲಿತವಿದ್ದ ವಿಜ್ಞಾನ - ತಂತ್ರಜ್ಞಾನಗಳ ಹೊಸ ಆವಿಷ್ಕಾರಗಳನ್ನು ಸ್ವಂತ ನೆಲೆಯಲ್ಲಿ ಯಶಸ್ವಿಯಾಗಿ ಬಳಸಿಕೊಳ್ಳುವ ಕೆಲಸವಾಯಿತು.

ದೇಶದಲ್ಲಿಯೇ ಮೊದಲ ಬಾರಿಗೆ ಪಂಚವಾರ್ಷಿಕ ಯೋಜನೆಯನ್ನು ರೂಪಿಸಿ, ಕೈಗಾರಿಕೆ, ಕೃಷಿ ಮತ್ತು ಮೂಲಭೂತ ನಾಗರಿಕತೆಯ ಸೌಲಭ್ಯಗಳಲ್ಲಿ ಪ್ರಗತಿ ಸಾಧಿಸಿ, ರಾಷ್ಟ್ರಕ್ಕೆ ಮಾದರಿ ರಾಜ್ಯವಾಗಿಸಿದ ಕೀರ್ತಿ ವಿಶ್ವೇಶ್ವರಯ್ಯನವರದು. ವಿಶ್ವೇಶ್ವರಯ್ಯನವರು ನಿರ್ಮಿಸಿದ ಈ ಉತ್ತಮ ಅಡಿಪಾಯವನ್ನು ಅನಂತರ ದಿವಾನರಾದ ಮಿರ್ಜಾ ಇಸ್ಮಾಯಲ್ ಇನ್ನಷ್ಟು ಗಟ್ಟಿಗೊಳಿಸಿದರು.

ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಪ್ರವರ್ಧಮಾನ ಸಾಧಿಸಿ, ಗಾಂಧೀಜಿಯವರಿಂದ 'ನನ್ನ ಕನಸಿನ ಸ್ವತಂತ್ರ ಭಾರತಕ್ಕೆ ಮಾದರಿ' ಎಂದು ಗುರುತಿಸಲ್ಪಟ್ಟಿದ್ದ ಕರ್ನಾಟಕ ಇಂದು ಎಲ್ಲ ಕ್ಷೇತ್ರಗಳಲ್ಲಿ ಹಿನ್ನಡೆದಿದೆ. ಕರ್ನಾಟಕ ಸರ್ಕಾರವು ಪ್ರಕಟಿಸಿರುವ ಅಂಕಿ ಅಂಶಗಳೇ ಕರ್ನಾಟಕದ ಹಿನ್ನಡೆ - ಹೀನಸ್ಥಿತಿಯನ್ನು ದೃಢಪಡಿಸುತ್ತವೆ.

ಕೈಗಾರಿಕಾ ರಂಗದಲ್ಲಿ ಹಲವು ವರ್ಷಗಳಿಂದ ದೇಶದ ಮುಂಚೂಣಿಯಲ್ಲಿದ್ದ ಕರ್ನಾಟಕ ಇಂದು ಎಂಟನೆ ಸ್ಥಾನಕ್ಕಿಳಿದಿದೆ. ೧೯೫೭ರಲ್ಲಿ ರಾಷ್ಟ್ರದ ಕೈಗಾರಿಕೆಗಳಲ್ಲಿ ಶೇ. ೭. ೨ರಷ್ಟು ಪಾಲು ಹೊಂದಿದ್ದ ಕರ್ನಾಟಕ ಇಂದು ಶೇ. ೪.೯ಕ್ಕಿಳಿದಿದೆ. ಬಂಡವಾಳದ ಪಾಲು ಶೇ. ೬.೧ರಿಂದ ಶೇ. ೩.೬ಕ್ಕಿಳಿದಿದೆ. 'ಟೆಕ್ನಿಕಲ್ ಕನ್ಸಲ್‌ಟೆನ್ಸಿ ಸರ್ವಿಸಸ್ ಆರ್ಗನೈಸೇಷನ್ ಆಫ್ ಕರ್ನಾಟಕ'ದ ವರದಿಯ ಪ್ರಕಾರ ರಾಜ್ಯದಲ್ಲಿ ಮೂಲಭೂತ ವ್ಯವಸ್ಥೆಯ ಕೊರತೆ, ಪರಿಸ್ಥಿತಿಯನ್ನು ನಿರ್ವಹಿಸುವಲ್ಲಿನ ವೈಫಲ್ಯ, ಅಧಿಕಾರಶಾಹಿಗಳ ನಿರಂಕುಶ ಆಧಿಪತ್ಯದಿಂದ ಸುಮಾರು ೨೫೦೦ ಸಣ್ಣ ಕೈಗಾರಿಕಾ ಘಟಕಗಳು ತೀವ್ರ ತೊಂದರೆಗೆ ಸಿಲುಕಿದ್ದು, ರಾಜ್ಯ ಸರ್ಕಾರ ೧೦೦೦ ಕೋಟಿ ರೂಪಾಯಿಗಳಷ್ಟು ಕಳೆದುಕೊಂಡಿದೆ. ಬೆಂಗಳೂರು ಜಿಲ್ಲೆಯೊಂದರಲ್ಲೇ ೫೦,೦೦೦ಕ್ಕೂ ಹೆಚ್ಚು ಜನ ನೌಕರಿ ಕಳೆದುಕೊಂಡಿದ್ದಾರೆ. ೫೫೦ ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ. ದಕ್ಷಿಣ ಕನ್ನಡದಲ್ಲಿ ೧೯೦ ಕೋಟಿ ರೂ.ಗಳು ನಷ್ಟವಾಗಿ ೨೦,೦೦೦ ಮಂದಿ ಉದ್ಯೋಗವಂಚಿತರಾಗಿದ್ದಾರೆ. 'ಬಿಸಿನೆಸ್ ಟುಡೆ' ಡಿಸೆಂಬರ್ ೨೨, ೧೯೯೯ರ ಸಂಚಿಕೆಯ ಸಮೀಕ್ಷೆಯಂತೆ ಬಂಡವಾಳ ಹೂಡಿಕೆದಾರರ ದೃಷ್ಟಿಯಲ್ಲಿ ಕರ್ನಾಟಕಕ್ಕೆ ೬ನೇ ಸ್ಥಾನ. ಪಕ್ಕದ ಆಂಧ್ರ, ಮಹಾರಾಷ್ಟ್ರ, ತಮಿಳುನಾಡು ಕರ್ನಾಟಕಕ್ಕಿಂತ ಹೆಚ್ಚು ಬಂಡವಾಳವನ್ನು ಆಕರ್ಷಿಸುತ್ತಿರುವ ಸುದ್ದಿಯಿದೆ. ೧೯೭೦ರವರೆಗೆ ಹೆಚ್ಚುವರಿ ವಿದ್ಯುತ್ ಉತ್ಪಾದಿಸಿ, ಕೈಗಾರಿಕೆಗಳ ಸ್ಥಾಪನೆಗೆ ಸ್ವರ್ಗವೆನಿಸಿದ್ದ ನಾಡಿನಲ್ಲಿ ಇಂದು ಕೈಗಾರಿಕಾ ಕ್ಷೇತ್ರ ವಿದ್ಯುತ್ ಕೊರತೆಯಿಂದಾಗಿ ನಲುಗಿಹೋಗುತ್ತಿದೆ. ಶೇ. ೨೧.೬ ರಷ್ಟು ವಿದ್ಯುತ್ ಕೊರತೆ ಅನುಭವಿಸುತ್ತಿರುವ ಕರ್ನಾಟಕವು ದೇಶದ ೨೫ನೇ ಸ್ಥಾನದಲ್ಲಿದೆ. ಬಿಹಾರವನ್ನು ಬಿಟ್ಟರೆ ಹೆಚ್ಚು ವಿದ್ಯುತ್ ಕೊರತೆಯನ್ನು ಎದುರಿಸುತ್ತಿರುವ ರಾಜ್ಯ ನಮ್ಮದು. ವಿದ್ಯುತ್ ಸಂವಹನ ನಷ್ಟ (ವಿದ್ಯುತ್ ಕಳವೂ ಸೇರಿ)ಶೇ. ೧೯.೬. ಕರ್ನಾಟಕದ ತಲಾ ವಿದ್ಯುತ್ ಬಳಕೆ ೩೩೮ ಕಿ.ವಾಟ್, ಪಂಜಾಬ್ ರಾಜ್ಯದ ತಲಾ ಬಳಕೆ ೭೯೦ ಕಿ.ವಾಟ್. ವಿದ್ಯುತ್ ಬಳಕೆಯಲ್ಲಿ ಕನ್ನಡಿಗನದು ೧೧ನೇ ಸ್ಥಾನ.

ಜಾಗತೀಕರಣ - ಉದಾರೀಕರಣದ ಹೆಸರಿನಲ್ಲಿ ನಡೆಯುತ್ತಿರುವ ಘಟನೆಗಳನ್ನು ಗಮನಿಸಿದರೆ ನಾಳಿನ ಕರ್ನಾಟಕದ ಬಗ್ಗೆ ಗಾಬರಿಯಾಗುತ್ತದೆ. ಕರ್ನಾಟಕದ ಭವಿಷ್ಯ ಕರಾಳವಾಗಿ ಕಾಣುತ್ತದೆ. ಕರ್ನಾಟಕಕ್ಕೆ ಪ್ರತಿಷ್ಠೆಯನ್ನು ತಂದುಕೊಟ್ಟ ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳು ಆಳುವವರ ಸ್ವಾರ್ಥ ಮತ್ತು ಐ.ಎ.ಎಸ್. ಅಧಿಕಾರಿಗಳ ನಿರ್ಲಕ್ಷ್ಯದಿಂದ ಒಂದೊಂದಾಗಿ ಮುಚ್ಚಿಹೋಗುತ್ತಿವೆ.

ರಾ. ನಂ. ಚಂದ್ರಶೇಖರ

ಖಾಸಗಿಯವರ ಪಾಲಾಗುತ್ತಿವೆ. ಎಪ್ಪತ್ತರ ದಶಕದಲ್ಲಿ ಹೆಚ್ಚು ಲಾಭದಾಯಕವಾಗಿದ್ದ ಎನ್.ಜಿ.ಇ.ಎಫ್. ಮತ್ತು ಮೈಸೂರು ಲ್ಯಾಂಪ್ಸ್ ಕಾರ್ಖಾನೆಗಳು ಹೆಚ್ಚು ಕಡಿಮೆ ಖಾಸಗಿಯವರ ಮಡಿಲಿಗೆ ಹೋಗಿ ಅಲ್ಲಿನ ಕಾರ್ಮಿಕರು ಬೀದಿ ಪಾಲಾಗುವ ಸ್ಥಿತಿಗೆ ಬಂದಿದ್ದಾರೆ. ಗೌರಿಬಿದನೂರಿನ ಸಕ್ಕರೆ ಕಾರ್ಖಾನೆ ಹೆಂಡದ ದೊರೆಗಳ ಪಾಲಾಗಿದೆ. ಕಿಂಕೋ ಕಾರ್ಖಾನೆ ಮುಚ್ಚಿದೆ. ಮೈಸೂರು ಪೇಪರ್ ಮಿಲ್, ಬೆಳಗೊಳದ ಅಸಿಟೇಟ್ ಎಲ್ಲವೂ ಮುಚ್ಚುವ ಸ್ಥಿತಿಯಲ್ಲಿವೆ. ಹೀಗೆ ಪಟ್ಟಿ ಬೆಳೆಯುತ್ತದೆ. (ಕಾರ್ಖಾನೆಗಳಿಗೆ ಆಡಳಿತ - ತಾಂತ್ರಿಕ ಪರಿಣತಿಯಿಲ್ಲದ ವ್ಯಕ್ತಿಗಳನ್ನು ಮುಖ್ಯಸ್ಥರನ್ನಾಗಿ ನೇಮಿಸಿ, ಕಾರ್ಖಾನೆಯ ಪರಿಸ್ಥಿತಿ ಹದಗೆಡುವಂತೆ ಮಾಡಿ, ಆಳುವ ಜನ 'ತಮ್ಮ ಹಿತ' ಕಾಪಾಡುವವರಿಗೆ ಈ ಕಾರ್ಖಾನೆಗಳನ್ನು ಉಡುಗೊರೆಯಾಗಿ ನೀಡುತ್ತಿದ್ದಾರೆ ಎಂದು ಒಬ್ಬ ಹಿರಿಯ ಅಧಿಕಾರಿ ಹೇಳಿದ್ದಾರೆ).

'ಕರ್ನಾಟಕ ಸರ್ಕಾರ ನಡೆಸುತ್ತಿರುವ ನಷ್ಟದ ಕಾರ್ಖಾನೆಗಳು ಹಿಂದೆ ಲಾಭಗಳಿಸುತ್ತಿದ್ದು, ಅವು ಅನ್ಯರ ಕೈಗೆ ಹೋದೊಡನೆ ಲಾಭಗಳಿಸುವಂತಾದರೆ ಅರ್ಥವೇನು? ಒಂದು ಕಾರ್ಖಾನೆಯನ್ನು ಸರಿಯಾಗಿ ನಡೆಸಲಾಗದವರು ೫ ಕೋಟಿ ಜನರಿರುವ ಕರ್ನಾಟಕದ ಆಡಳಿತವನ್ನು ನಡೆಸಲು ಸಾಧ್ಯವೇ?' ಎಂದು ಡಾ|| ಎಂ. ಚಿದಾನಂದ ಮೂರ್ತಿ ಪ್ರಶ್ನಿಸಿರುವುದು ಎಲ್ಲ ಪ್ರಜ್ಞಾವಂತ ಕನ್ನಡಿಗರ ಅಭಿಪ್ರಾಯ ಕೂಡ.

ಕೃಷಿ ಕ್ಷೇತ್ರದಲ್ಲೂ ನಮ್ಮ ಸಾಧನೆ ತೃಪ್ತಿದಾಯಕವಾಗಿಲ್ಲ. ತಲಾ ದವಸ ಧಾನ್ಯಗಳ ಉತ್ಪಾದನೆ ರಾಷ್ಟ್ರೀಯ ಸರಾಸರಿ ೨೦೬ ಕೆ.ಜಿ.ಗಳಾದರೆ ಕರ್ನಾಟಕ ದಲ್ಲಿ ೧೭೮ ಕೆ.ಜಿ.ಗಳು ಮಾತ್ರ. ರಾಷ್ಟ್ರದಲ್ಲಿ ಆಹಾರೋತ್ಪನ್ನದ ಕೃಷಿಯಲ್ಲಿ ೧೪ನೇ ಸ್ಥಾನಕ್ಕಿಳಿದಿದ್ದೇವೆ. ಏಕೀಕರಣ ಪೂರ್ವದಲ್ಲಿ ರಾಷ್ಟ್ರೀಯ ಸರಾಸರಿಗಿಂತ ಮೇಲಿದ್ದ ನಮ್ಮ ರಾಜ್ಯ ಇಂದು ಹೀನ ಸ್ಥಿತಿಯಲ್ಲಿದೆ. ಆಹಾರದ ಬಳಕೆಯಲ್ಲೂ ಸಾಕಷ್ಟು ಹಿಂದಿದ್ದೇವೆ. ಒಂದು ಹೊತ್ತಿನ ಊಟಕ್ಕೂ ಕಷ್ಟ ಪಡುತ್ತಿರುವವರ ಸಂಖ್ಯೆ ಸುಮಾರು ೧.೫ ಕೋಟಿ. ಕರ್ನಾಟಕ ಸರ್ಕಾರದ ಅಂಕಿ ಸಂಖ್ಯೆಗಳೇ ಹೇಳುವಂತೆ ಜನಸಂಖ್ಯೆಯ ಶೇ. ೩೩ ರಷ್ಟು ಮಂದಿ ಬಡತನದ ರೇಖೆಗಿಂತ ಕೆಳಗಿದ್ದಾರೆ. ಕರ್ನಾಟಕದ ತಲಾ ಆದಾಯ ೧೯೯೬-೯೭ರಲ್ಲಿ ೧೦,೨೭೯, ರಾಷ್ಟ್ರದ ಸರಾಸರಿ ತಲಾ ಆದಾಯ ೧೦,೭೭೧ ರೂಪಾಯಿಗಳು. ದೇಶದ ಪ್ರತಿ ವ್ಯಕ್ತಿಯ ಆಸ್ತಿ ೧೧,೩೪೫ ರೂ.ಗಳಾದರೆ ಕನ್ನಡಿಗನ ಆಸ್ತಿ ೧೦,೦೩೧ ರೂ.ಗಳು ಮಾತ್ರ. ದೇಶದ ಪ್ರತಿ ವ್ಯಕ್ತಿಯ ಮೇಲಿರುವ ಸಾಲ ೧೯೮೬ರ ಪ್ರಕಾರ ೧,೧೬೭ ರೂ. ಗಳಾದರೆ ಕನ್ನಡಿಗನ ತಲಾ ಸಾಲ

[illegible]. (ಈ ಪ್ರಮಾಣ ಈಗ ಇನ್ನೂ ಹೆಚ್ಚಿದೆ. ಮೂಲಭೂತ ಸೌಲಭ್ಯ ಸೂಚ್ಯಂಕದಂತೆ (ಇನ್ ಫ್ರಾ ಸ್ಟ್ರಕ್ಚರ್ ಇಂಡೆಕ್ಸ್) ಕರ್ನಾಟಕ ೯೬.೭; ದೇಶದ ಸೂಚ್ಯಂಕ ೧೦೦, ಪಂಜಾಬು ೨೦೦ ಸೂಚ್ಯಂಕವನ್ನು ಪಡೆದಿದ್ದರೆ ಪಕ್ಕದ ಕೇರಳ ೧೫೭. ತಮಿಳುನಾಡು ೧೪೮ ಸೂಚ್ಯಂಕವನ್ನು ಪಡೆದಿವೆ).

ನಮ್ಮ ರಾಜಕೀಯ ನಾಯಕರು ಕರ್ನಾಟಕದ ಶಿಕ್ಷಣ ಪ್ರಗತಿಯ ಬಗ್ಗೆ ದೊಡ್ಡ ಮಾತುಗಳನ್ನು ಹೇಳುತ್ತಾರೆ. ೬೨,೦೦೦ ಜನ ಶಿಕ್ಷಕರನ್ನು ನೇಮಕ ಮಾಡಿಕೊಂಡಿರುವುದಾಗಿ ಹೇಳಿದ್ದಾರೆ. ಸಾಕ್ಷರತಾ ಯೋಜನೆಗೆ ಸಾಕಷ್ಟು ಖರ್ಚಾಗಿದೆ. ಆದರೆ ಫಲಿತಾಂಶ ಶೂನ್ಯ ಎನ್ನುವುದನ್ನು ಇತ್ತೀಚೆಗೆ ನಡೆದ ರಾಷ್ಟ್ರೀಯ ಮಾದರಿ ಸಮೀಕ್ಷೆ ತಿಳಿಸಿದೆ. ಅಖಿಲ ಭಾರತ ಸಾಕ್ಷರತೆಯ ಪ್ರಮಾಣ ೧೯೯೧ರಲ್ಲಿ ಶೇ. ೫೨.೨ ರಷ್ಟಿದ್ದು, ೧೯೯೭ರ ಅಂತ್ಯಕ್ಕೆ ಶೇ. ೬೨ಕ್ಕೆ ಏರಿದೆ. ಅಂದರೆ ಸಾಕ್ಷರತೆ ಶೇ.೯.೮ರಷ್ಟು ಹೆಚ್ಚಿದೆ. ಇದೇ ಅವಧಿಯಲ್ಲಿ ಕರ್ನಾಟಕದ ಸಾಕ್ಷರತೆಯ ಪ್ರಗತಿ ಶೇ. ೨ರಷ್ಟು ಮಾತ್ರ. ಅಂದರೆ ೧೯೯೧ರಲ್ಲಿ ಶೇ. ೫೬ಇದ್ದುದು ೧೯೯೭ರ ಅಂತ್ಯಕ್ಕೆ ಶೇ. ೫೮ ಆಗಿದೆ. ರಾಷ್ಟ್ರದಲ್ಲಿಯೇ ಬಡರಾಜ್ಯವೆನಿಸಿದ ಬಿಹಾರದಲ್ಲಿ ಶೇ.೧೦.೫, ಪಶ್ಚಿಮ ಬಂಗಾಲದಲ್ಲಿ ಶೇ. ೧೪.೪ ಹೆಚ್ಚಿದರೆ, ಮೇಘಾಲಯದಲ್ಲಿ ಶೇ. ೨೭.೯ರಷ್ಟು



ಪ್ರಗತಿಯನ್ನು ಸಾಧಿಸಿದೆ.

ಭಾರತದ ಯೋಜನಾ ಆಯೋಗದ ಉದ್ಯಮ ಸಮಿತಿಗಳ ಲೆಕ್ಕಾಚಾರದಂತೆ ಕರ್ನಾಟಕ ಮುಂದುವರೆದ ರಾಜ್ಯ. ಕೇಂದ್ರ ವಿತ್ತೀಯ ಆಯೋಗದ ಅಭಿಪ್ರಾಯದಲ್ಲಿ ನಮ್ಮದು ಶ್ರೀಮಂತ ರಾಜ್ಯ. ಆದರೆ ಕೇಂದ್ರ - ರಾಜ್ಯ ಸರ್ಕಾರಗಳೇ ಪ್ರಕಟಿಸಿರುವ ಅಂಕಿ ಅಂಶಗಳನ್ನು ಗಮನಿಸಿದಾಗ ತಲಾ ವರಮಾನದ ಲೆಕ್ಕದಲ್ಲಿ, ಒಟ್ಟು ರಾಜ್ಯದ ಉತ್ಪಾದನೆಯ ಮೌಲ್ಯದ ಲೆಕ್ಕಾಚಾರದಲ್ಲಿ, ವಿದ್ಯುತ್ ಬಳಕೆ, ನೀರಾವರಿ ಸೌಲಭ್ಯ, ಆಹಾರ ಬಳಕೆ, ಭೂಮಿಯ ಪ್ರತಿ ಎಕರೆಯಿಂದ ಪಡೆಯುವ ಆದಾಯದ ದೃಷ್ಟಿಯಿಂದ ಕರ್ನಾಟಕದ ಸ್ಥಾನ ಅಖಿಲ ಭಾರತ ಸರಾಸರಿ ಗೆರೆಯ ಕೆಳಗಡೆಯೇ ಇದೆ. ಬಡತನದ ರೇಖೆಗಿಂತ ಕೆಳಗಿರುವ ಸಂಖ್ಯೆಯೂ ಭಾರತದ ಸರಾಸರಿಗಿಂತ ಕರ್ನಾಟಕದಲ್ಲಿ ಹೆಚ್ಚು. ಹೀಗೆ ಎಲ್ಲದರಲ್ಲೂ ಹಿಂದುಳಿದಿರುವ ಕರ್ನಾಟಕ ಕೇಂದ್ರ ವಿತ್ತೀಯ ಆಯೋಗದ ದೃಷ್ಟಿಯಲ್ಲಿ ಶ್ರೀಮಂತವೆನಿಸಿರುವುದು ಚೋದ್ಯದ ಸಂಗತಿ.

ಕರ್ನಾಟಕದ ವೈಫಲ್ಯಗಳನ್ನು ಪಟ್ಟಿ ಮಾಡುತ್ತಾ ಹೋದರೆ ಅದು ಬೆಳೆಯುತ್ತಲೇ ಇರುತ್ತದೆ. ಕರ್ನಾಟಕ ಎರಡು ಕ್ಷೇತ್ರಗಳಲ್ಲಿ ರಾಷ್ಟ್ರೀಯ ಸರಾಸರಿಯಲ್ಲಿ ಮುಂದಿದೆ. ಪ್ರತಿ ಸಹಸ್ರ ಜನಸಂಖ್ಯೆಯ ಲೆಕ್ಕದಲ್ಲಿ, ಇಡೀ ದೇಶದ ಅತಿ ಹೆಚ್ಚಿನ ಸಾರಾಯಿ ಹೆಂಡದಂಗಡಿಗಳು, ವೈನ್ ಶಾಪ್‌ಗಳು, ಬಾರ್‌ಗಳು ಇವೆ. ಹಾಗೇ ಇಂಗ್ಲಿಷ್ ಮಾಧ್ಯಮ ಶಾಲೆಗಳು ಮತ್ತು ಖಾಸಗಿಯವರ ದೊರೆತನದಲ್ಲಿರುವ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳು ಬೇರೆ ರಾಜ್ಯಗಳಿಗಿಂತ ಹೆಚ್ಚು.

ರಾಜ್ಯದ ಜನಸಂಖ್ಯೆಯಲ್ಲಿ ೧/೩ ಭಾಗದಷ್ಟು ಮಂದಿ ರಾತ್ರಿ ಹಸಿವೆಯಲ್ಲೇ ಮಲಗುತ್ತಾರೆ ಎಂಬುದನ್ನು ನೆನೆದಾಗ ಆಳುವವರ ಬಗ್ಗೆ ಆಕ್ರೋಶ ಮೂಡದಿರದು. ನಾಡು ನುಡಿಯ ಬಗ್ಗೆ ನಿಜವಾದ ಕಾಳಜಿಯಿರುವ ಜನ ಇಂತಹ ಸಂಗತಿಗಳ ಬಗ್ಗೆ ಚರ್ಚಿಸಿ ಜನಾಭಿಪ್ರಾಯ ಮೂಡಿಸಿ, ಕೆಲ ಅನಗತ್ಯ ಯೋಜನೆಗಳನ್ನು ಕೈಬಿಟ್ಟು ಅಕ್ಷರ-ಅನ್ನಕ್ಕೆ ಆದ್ಯತೆ ಕೊಡುವಂತಾದಾಗ ಮಾತ್ರ ಕರ್ನಾಟಕಕ್ಕೆ ಭವಿಷ್ಯ.

ಇಪ್ಪತ್ತನೆಯ ಶತಮಾನದ ಯಶಸ್ಸು ನೈಸರ್ಗಿಕ ಸಂಪತ್ತಿನ ಬಳಕೆಯಲ್ಲಿ ಅಡಗಿತ್ತು. ಆದರೆ ಇಪ್ಪತ್ತೊಂದನೆಯ ಶತಮಾನದ ಯಶಸ್ಸು ನೈಸರ್ಗಿಕ ಸಂಪತ್ತನ್ನು ರಕ್ಷಿಸಿ, ಕಸದಿಂದ ರಸ ತೆಗೆಯುವುದರಲ್ಲಿದೆ. ಕರ್ನಾಟಕ ಸರ್ಕಾರ ಇದನ್ನು ಗಮನಿಸಿಲ್ಲ. ನಿಸರ್ಗದ ಸಮತೋಲನ ಕಾಪಾಡಿಕೊಳ್ಳಲು ಶೇ. ೩೩ರಷ್ಟು ಕಾಡಿರಬೇಕೆಂದು ಹಲವು ವಿಜ್ಞಾನಿಗಳು ಹೇಳಿದ್ದಾರೆ. ಆದರೆ ಕರ್ನಾಟಕದಲ್ಲಿ ಶೇ. ೧೬.೨ ರಷ್ಟು ಮಾತ್ರ ಕಾಡಿದೆ. ಡಾ|| ಎಂ. ವಿಶ್ವೇಶ್ವರಯ್ಯನವರು ಕಾಗದ ಕಾರ್ಖಾನೆಗೆ ಬೇಕಾದ ಮರವನ್ನು ಅವರೇ ಬೆಳೆದುಕೊಳ್ಳಬೇಕು, ಪ್ರತಿ ವರ್ಷ ಅವರು ಉಪಯೋಗಿಸುವ ಪ್ರದೇಶದ ಎರಡರಷ್ಟು ಪ್ರದೇಶದಲ್ಲಿ ಬಿದಿರನ್ನು ಬೆಳೆಯಲು ಪ್ರಾರಂಭಿಸಬೇಕೆಂದು ಷರತ್ತು ವಿಧಿಸಿದ್ದರು. ಆದರೆ ಇಂದು ಬಿರ್ಲಾ - ಅಂಬಾನಿಗಳಿಗಾಗಿ ಭೂಸಾರವನ್ನು ನಾಶ ಮಾಡುತ್ತದೆಂದು ಹಲವು ದೇಶಗಳಲ್ಲಿ ನಿಷೇಧಿಸಲ್ಪಟ್ಟಿರುವ ನೀಲಗಿರಿ ಮರವನ್ನು ಬೆಳೆಯುತ್ತಿದ್ದೇವೆ. ಕೊಡಗು ಮತ್ತು ಕೆಲವು ಪುಟ್ಟ ಪ್ರದೇಶಗಳಲ್ಲಿ ಬಿರ್ಲಾ ಕಂಪೆನಿಗೆ ಅತ್ಯಂತ ಕಡಿಮೆ ದರದಲ್ಲಿ ಸಾವಿರಾರು ಎಕರೆ ಕಾಡನ್ನು ಗುತ್ತಿಗೆ ನೀಡಿದ್ದೇವೆ. ಮಿತಿ ಮೀರಿದ ಅಂತರ ಜಲ ಬಳಕೆಯಿಂದ ಬೆಂಗಳೂರು ಸೇರಿದಂತೆ ೧೨ ಜಿಲ್ಲೆಗಳಲ್ಲಿ ಅಂತರ ಜಲ ಮಟ್ಟ ಅಪಾಯಕಾರಿ ಮಟ್ಟವನ್ನು ಮೀರಿದೆ. ಚಿನ್ನವೂ ಸೇರಿದಂತೆ ಹಲವು ಖನಿಜಗಳು ಬರಿದಾಗಿವೆ. ನೈಸರ್ಗಿಕ ಸಂಪತ್ತನ್ನು ಪೋಲಾಗದಂತೆ ತಡೆಯುವ ಕೊಳಚೆ ನೀರನ್ನು ಪುನರ್ ಬಳಕೆ ಮಾಡುವ, ನಗರಗಳು ಉತ್ಪತ್ತಿ ಮಾಡುತ್ತಿರುವ ಕಸವನ್ನು ಶಕ್ತಿಯಾಗಿ, ಗೊಬ್ಬರವಾಗಿ ಮಾಡುವ ಅಸಾಂಪ್ರದಾಯಿಕ ಶಕ್ತಿಗಳನ್ನು ಬಳಸಿಕೊಳ್ಳುವ ಜನಾಂದೋಲನ ನಡೆದಾಗ ಮಾತ್ರ ಕರ್ನಾಟಕಕ್ಕೆ ಉತ್ತಮ ಭವಿಷ್ಯವಿದೆ. ನಾಡಿನ ಜನತೆ ಜಾಗೃತರಾಗದಿದ್ದರೆ ಜಾಗತೀಕರಣ, ಉದಾರೀಕರಣಗಳ ಹೆಸರಿನಲ್ಲಿ ಬಹುರಾಷ್ಟ್ರೀಯ ಕಂಪೆನಿಗಳು ಕರ್ನಾಟಕವನ್ನು ಕಸದ ತೊಟ್ಟಿಯನ್ನಾಗಿಸುತ್ತವೆ.

ನೈಸರ್ಗಿಕ ಸಂಪನ್ಮೂಲಗಳು ಸಮೃದ್ಧವಾಗಿದ್ದರೆ ಸಾಲದು. ಮೈಸೂರು-ಬೆಂಗಳೂರು ವೇಗದೂತ ರಸ್ತೆಯ ನಿರ್ಮಾಣದಂತಹ ಬೃಹತ್ ಯೋಜನೆಯಾಗಲಿ, ಬೆಂಗಳೂರನ್ನು ಸಿಂಗಪೂರ ಮಾಡುತ್ತೇವೆ ಎನ್ನುವಂತಹ ಉಡಾಫೆ ಮಾತುಗಳಾಗಲಿ, ಕನ್ನಡಿಗರ ಕಣ್ಣೀರನ್ನು ಒರೆಸಲಾರವು. ಲಭ್ಯವಿರುವ ಸಂಪನ್ಮೂಲಗಳನ್ನು ಜನರ ಐಹಿಕಾಭ್ಯುದಯಗಳಿಗಾಗಿ ಬಳಸಿಕೊಳ್ಳಲು ಕಾರ್ಯಸಾಧುವಾದ ಕ್ರಿಯಾಶೀಲ ಮನಸ್ಸು ಆಳುವವರಿಗೆ ಇದ್ದಾಗ ಮಾತ್ರ ಕನ್ನಡಿಗರ ಬವಣೆ ನೀಗಬಹುದು. ಅಂತಹ ದಿನಗಳು ಬರಲಿ ಎಂದು ಕ್ರಿಯಾಶೀಲರಾಗುವುದೊಂದೆ ನಮಗಿರುವ ಮಾರ್ಗ.

ರಾ. ನಂ. ಚಂದ್ರಶೇಖರ
ನಂ.೬,ರಾಘವೇಂದ್ರ ಕಾಂಪ್ಲೆಕ್ಸ್, ೨ನೆಯ ತಿರುವು
ಸಿ.ಕೆ.ಸಿ. ಗಾರ್ಡನ್, ಬೆಂಗಳೂರು-೫೬೦ ೦೨೭

ಸಂತಾನ

ಪುಸ್ತಕದ ಪುಟಗಳ ನಡುವೆ
ಹುದುಗಿಸಿದ ನವಿಲುಗರಿ
ಮರಿ
ಹಾಕುತ್ತದೆ ಎನ್ನುವುದು
ನಮ್ಮ ಬಾಲ್ಯದೊಂದು ಭಾವನೆ !
ನವಿಲೇ ಮರಿ ಹಾಕುವುದಿಲ್ಲ,
ಇನ್ನು ಗರಿ ಹಾಕುತ್ತದೆಯೆ?



ಬಣ್ಣ ಬಣ್ಣದ ಕಣ್ಣು ಕಣ್ಣಿನ
ನವಿಲುಗರಿಯಂಥ
ಕನಸುಗಳು ಮರಿ ಹಾಕುವುದಷ್ಟೆ ಸತ್ಯ !

- ಸಿ. ಪಿ. ಕೆ.

ಮಾರ್ಗ- ದೇಸಿ: ಸಂಸ್ಕೃತಿ ಚರ್ಚೆಗೊಂದು ಆಯಾಮ

ಡಾ|| ಕಾ. ವೆಂ. ಶ್ರೀನಿವಾಸ ಮೂರ್ತಿ

ಕನ್ನಡ ಕಾವ್ಯ ನಿರ್ಮಿತಿಯಲ್ಲಿ ಮಾರ್ಗ-ದೇಸೀಯ ಪಾತ್ರ ನಿಯತವಾದುದು. ಆದ್ದರಿಂದ ಕನ್ನಡ ಕಾವ್ಯ ಮೀಮಾಂಸೆಯಲ್ಲಿ ಇದು ಅವಿಭಾಜ್ಯ ಪ್ರಸ್ಥಾನವಾಗಿ ನಿಲ್ಲುತ್ತದೆ.

ವಾಸ್ತವವಾಗಿ ದೇಶಿ ಬೇರೆ ದೇಸಿ ಬೇರೆ. ದೇಶಿ ಎಂಬುದು ಕೇಂದ್ರೀಕೃತ ಕಲ್ಪನೆ. ಆದ್ದರಿಂದ ಕನ್ನಡದ ಸಂದರ್ಭದಲ್ಲಿ ದೇಶಿ ಎಂದಾಗ ಅದು ಕನ್ನಡ ದೇಶಿಯೇ ಆಗುತ್ತದೆ. ಆದರೆ ದೇಸಿ ಎಂದಾಗ ಅಸಂಖ್ಯ ಒಳ ಸಂಸ್ಕೃತಿಗಳು ಇಲ್ಲಿ ಕಾಣುತ್ತವೆ. ಆದ್ದರಿಂದ ಕರ್ನಾಟಕದ ದೇಸೀಯತೆ ಎಂಬುದು ಕನ್ನಡವನ್ನು ಒಳಗೊಂಡ ಹಲವು ಭಾಷೆ ಸಂಸ್ಕೃತಿಗಳ ಒಟ್ಟು ವಿಕೇಂದ್ರೀಕೃತ ಮೊತ್ತವಾಗುತ್ತದೆ. ಈ ಹಿನ್ನೆಲೆಯಲ್ಲಿ ದೇಶಿ, ದೇಸಿಗಳು ಪ್ರತ್ಯೇಕವಾಗಿ ನಿಲ್ಲುತ್ತಾ ವಿಭಿನ್ನ ಅಸ್ತಿತ್ವಗಳನ್ನು ಗುರುತಿಸಿಕೊಳ್ಳುತ್ತವೆ.

ಈ ಹಿನ್ನೆಲೆಯಲ್ಲಿ ಕನ್ನಡ ಕವಿಗಳು ಮುಖಾಮುಖಿ ಯಾಗಿರುವುದು ದೇಸಿಗೋ ದೇಶಿಗೋ ಎಂಬ ಪ್ರಶ್ನೆ ಏಳುತ್ತದೆ. ಒಟ್ಟು ಕನ್ನಡ ಕಾವ್ಯವನ್ನು ಗಮನಿಸಿದಾಗ ಕವಿಗಳು ದೇಸೀಗೂ ದೇಶೀಗೂ ಒಟ್ಟಿಗೆ ಪ್ರತಿಕ್ರಿಯಿಸಿ ರುವುದನ್ನು ಕಾಣುತ್ತೇವೆ. ಉದಾಹರಣೆಗೆ, 'ಕವಿರಾಜಮಾರ್ಗ'ವು ಕಾವೇರಿಯಿಂದಮಾ ಗೋದಾವರಿವರೆಗಿರ್ಪ ಕನ್ನಡ ದೇಶದಲ್ಲಿ ವಾಸುಗಿಯೂ ಎಣಿಸಲಾರದಷ್ಟು ಇರುವ ದೇಸಿಗಳನ್ನು ಗುರುತಿಸುತ್ತದೆ. ಅದರ ಒಟ್ಟಂದದ ಕನ್ನಡ ಭಾಷೆಯನ್ನು ಸ್ವೀಕರಿಸುತ್ತಾ, ಅದನ್ನು ಕಾವ್ಯಕ್ಕೆ ಬೇಕಾದ ಪ್ರಮಾಣಬದ್ಧವಾದ ಭಾಷೆಯನ್ನಾಗಿ ರೂಪಿಸುವಲ್ಲಿ ಕನ್ನಡ ದೇಶೀಯತೆಗೆ ಬದ್ಧವಾಗುತ್ತದೆ.

ಹೀಗೆ ನೃಪತುಂಗನ 'ಕವಿರಾಜಮಾರ್ಗ'ವು ಕನ್ನಡದ ದೇಸೀಗಳನ್ನೂ ಗುರುತಿಸುತ್ತಾ ಅಂತಿಮವಾಗಿ ದೇಶಿ ಪರವಾಗಿ ನಿಂತುಬಿಡುತ್ತದೆ. ಇಂತಹ ದೇಶೀಯನ್ನು ಮಾರ್ಗದ ಪರಿಕರಗಳ ಅನ್ಯೋನ್ಯ ಸಂಯೋಜನೆಯಲ್ಲಿ ಮೂಡಿಸಬೇಕೆಂದು ಕನ್ನಡ ಕಾವ್ಯಕ್ಕೆ ನಿರ್ದೇಶಿಸುತ್ತಾ ಕನ್ನಡ ಕವಿರಾಜರಿಗೆ ಮಾರ್ಗವೊಂದನ್ನು ನಿರ್ಮಿಸಿಕೊಡುತ್ತದೆ. ಈ ಮಾರ್ಗದಲ್ಲಿ ಪಂಪ ಮುಂದುವರೆಯುವುದು ಕಾಕತಾಳೀಯವೆನಿಸುತ್ತದೆ.

ಅಂತೂ ಪಂಪ ಕನ್ನಡ ದೇಶೀಯತೆಯ ಭಾಗವಾದ ಪುಲಿಗೆರೆಯ ದೇಸೀ ಭಾಷಾ ಸೊಗಡನ್ನು ತನ್ನ ಕಾವ್ಯಕ್ಕೆ ತಂದುಕೊಳ್ಳುತ್ತಾನೆ. ಈ ವಿಚಾರವನ್ನು ತಾನೆ ಒಂದೆಡೆ ಹೇಳುತ್ತಾನೆ. ಹೀಗೆ ತನ್ನ ದೇಸೀಯತೆಯನ್ನು ಮಾರ್ಗ ಕಾವ್ಯಕ್ಕೆ ತರುತ್ತಾ ಅಂತಿಮವಾಗಿ ಕನ್ನಡ ಭಾಷೆಗೂ ದೇಶಕ್ಕೂ ಬದ್ಧನಾಗುವುದು ದೇಶೀಯತೆಯ ಪರವಾದ ಕಾಳಜಿ ಯಾಗುತ್ತದೆ. ಆದರೂ ಅದರ ಒಳಗೆ ದೇಸಿ-ದೇಶಿ-ಮಾರ್ಗಗಳು ಒಟ್ಟಿಗೆ ಇರುವುದು ಗಮನಾರ್ಹ. ಇದು ಆ ಹೊತ್ತಿನ ಕವಿಗಳ ಆದರ್ಶವೂ ಆಗಿತ್ತು ಎಂಬುದು ರನ್ನ, ನಾರಣಪ್ಪ, ಲಕ್ಷ್ಮೀಶ ಮೊದಲಾದ ಕವಿಗಳಿಗೂ ಮುಂದುವರೆದು, ಅನ್ವಯಿಸುತ್ತದೆ.

ಒಟ್ಟಾರೆ ಶಿಷ್ಟ ಕವಿಗಳಲ್ಲಿ ಮಾರ್ಗ ಮತ್ತು ದೇಶಿಗಳೇ ಪ್ರಧಾನವಾಗುತ್ತಾ, ದೇಸೀಯು ಆನುಷಂಗಿಕವಾಗಿ ಇತ್ತು ಎನ್ನಿಸುತ್ತದೆ. ಇಂತಹ ದೇಸೀಯತೆಯು ಒಟ್ಟು ಕನ್ನಡದ ಸಂದರ್ಭದಲ್ಲಿ ಪ್ರವಾಹವಾಗಿ ಪ್ರವಹಿಸಿದ್ದು ಶರಣರ ಕಾಲದಲ್ಲಿ; ಅವರ ವಚನಗಳಲ್ಲಿ. ಈ ಕಾಲದ ವಿವಿಧ ಜನವರ್ಗಗಳ ಅಸಂಖ್ಯ ಸಂವೇದನೆಗಳು, ಆಶೋತ್ತರಗಳು, ಆಶಯಗಳು ಇಲ್ಲಿ ದೇಸೀಯತೆಯ ಭಾಗವಾಗಿ 'ವಚನ'ಗಳಾದವು. ಇಂತಹ ಪ್ರವಾಹ ಮಹಾಪ್ರವಾಹವಾಗಿ ಪುನಃ ಪ್ರವಹಿಸಿದ್ದು ದಲಿತ-ಬಂಡಾಯ ಸಾಹಿತ್ಯದ ಸಂದರ್ಭದಲ್ಲಿ. ಇದರ ನಡುವೆ ಕೀರ್ತನೆಗಳು, ತತ್ವಪದಗಳು ಸಹ ದೇಸೀಯತೆಯ ನೆಲೆಯಲ್ಲಿ ಕಾಣಿಸಿವೆ. ಹೀಗೆ ದೇಸೀಯತೆ ಮೂಲದ ಸಾಹಿತ್ಯ ದೊಡ್ಡ ಪ್ರಮಾಣದಲ್ಲಿ ಕಾಣಿಸಿದೆ ಎಂದರೆ ಅದು ಅಲ್ಲಿ ಜನಾಭಿಮುಖಿಯಾಗಿ ಹೊರಟಿದೆ ಎಂದರ್ಥ. ಆದ್ದರಿಂದಲೇ ದೇಶೀಗಿಂತ ದೇಸೀಯು ಪ್ರಜಾಸತ್ತಾತ್ಮಕವೂ ಜನಪರವೂ ಜನಾಭಿಮುಖಿಯೂ ಆಗಿರುವುದು. ಈ ನಿಟ್ಟಿನಲ್ಲಿ ಬೇಂದ್ರೆಯವರು ''ಜಾನಪದದ ಏಳಿಗೆಯಾಗಬೇಕೆಂಬ ಕಾ... ವರ್ಣಕ ಸಾಹಿತ್ಯಕ್ಕೆ ಉಕ್ಕು ಹೆಚ್ಚು. ... ಶರಣರ ವಚನ, ದಾಸರ ಪದಗಳೂ ಆ ಬುದ್ಧಿಯಿಂದ ಹುಟ್ಟಿದವುಗಳು'' ಎಂದಿರುವುದು. (ಸಾಹಿತ್ಯದ ವಿರಾಟ್ ಸ್ವರೂಪ, ಪು. ೧೬೫)

ಹೀಗೆ ಮಧ್ಯಕಾಲ ಮತ್ತು ಈ ಶತಮಾನದ ... ದಶಕದಿಂದೀಚೆಗೆ ಅಸಂಖ್ಯ ನೆಲ ಮೂಲದ ಸಂವೇದನೆಗಳು ಕನ್ನಡ ಸಾಹಿತ್ಯಕ್ಕೆ ಪ್ರವೇಶಿಸಿ, ಈ ಘಟ್ಟಗಳನ್ನು ದೇಸೀ ಪ್ರಧಾನ ಭಾಗಗಳನ್ನಾಗಿ ರೂಪಿಸುತ್ತಾ, ಕನ್ನಡ ಸಂಸ್ಕೃತಿ ಮತ್ತು ಕಾವ್ಯದ ಮೂಲದ ಕನ್ನಡ ಕಾವ್ಯ ಮೀಮಾಂಸೆಯ ಚರ್ಚೆಗೆ ಹೊಸ ಪ್ರಸ್ಥಾನವನ್ನು ಸೇರಿಸಿದೆ.

ಇದರಲ್ಲಿಯ ಎರಡನೆಯ ಭಾಗದ ಸಾಹಿತ್ಯ ಗ್ರಹಿಕೆ ಮತ್ತು ನಿರ್ವಚನಕ್ಕೆ ಬರಗೂರು ರಾಮಚಂದ್ರಪ್ಪನವರ 'ಬಂಡಾಯ ಸಾಹಿತ್ಯ ಮೀಮಾಂಸೆ' ಕೃತಿಯು ಕನ್ನಡ ಕಾವ್ಯ ಮೀಮಾಂಸೆಯ ವಿಸ್ತರಣೆಯಾಗಿ ನಿಲ್ಲುತ್ತದೆ.

ಹೀಗೆ ದೇಸಿ ಮತ್ತು ದೇಶಿಗಳು ಪ್ರತ್ಯೇಕವಾದ ಕಾಲಘಟ್ಟಗಳಲ್ಲಿ ಪ್ರವಾಹವಾಗಿ ಪ್ರವಹಿಸಿವೆ. ಆದರೆ ಇಲ್ಲಿ ಒಂದು ಮಾತು: ದೇಶಿ ಪ್ರವಾಹವಾಗಿ ಹರಿಯುವಾಗಲೆಲ್ಲಾ ಮಾರ್ಗವು ಗಮನಾರ್ಹವಾಗಿ ಕಾಣಿಸುತ್ತಾ, ಅದರೊಂದಿಗೆ ಸಮನ್ವಯಗೊಳ್ಳುತ್ತಾ ಬಂದಿರುವುದನ್ನು ಕಾಣಬಹುದು. ಆದ್ದರಿಂದ ದೇಸಿ ಮತ್ತು ದೇಶಿಗಳು ಕನ್ನಡ ಕಾವ್ಯದ ರೂಪು ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸುತ್ತಾ, ಅದರೊಂದಿಗೆ ತಾವೂ ವಿಕಾಸಗೊಳ್ಳುತ್ತಾ ಬಂದಿವೆ.

ವಾಸ್ತವವಾಗಿ ದೇಸಿ ಮತ್ತು ದೇಶೀಗಳು ಕನ್ನಡಕ್ಕೆ ಮಾತ್ರ ಸೀಮಿತವಲ್ಲ. ಇದು ಜಗದ್ವ್ಯಾಪಿಯಾದುದು. ಈ ಚರ್ಚೆ ಒಂದಲ್ಲ ಒಂದು ಬಗೆಯಲ್ಲಿ ಎಲ್ಲಾ ಸಾಹಿತ್ಯ ಚರಿತ್ರೆಗಳಲ್ಲೂ ಇರುವ ಸಾಧ್ಯತೆ ಇದೆ. ಕಾರಣ, ಅದರ ಮೂಲವಾದ ಸಂಸ್ಕೃತಿಯು ಅನೇಕ ವೈರುಧ್ಯಗಳನ್ನು ಅಂತಸ್ಥಗೊಳಿಸಿಕೊಂಡಿರುತ್ತದೆ. ಆದ್ದರಿಂದ ಆ ಸಂಸ್ಕೃತಿಯ ಕೂಸಾದ ಸಾಹಿತ್ಯದಲ್ಲಿ ಸಹಜವಾಗಿಯೆ ಅದನ್ನು ಕುರಿತ ಮುಖಾಮುಖಿ ಜರುಗುತ್ತದೆ. ಹೀಗೆ ಈ ಹಿನ್ನೆಲೆಯಲ್ಲಿ ಮಾರ್ಗ-ದೇಸಿ ಕಲ್ಪನೆಗಳು ಕನ್ನಡ ಕಾವ್ಯದಲ್ಲೂ ಅಂತರ್ಗತಗೊಂಡಿವೆ; ಅದನ್ನು ರೂಪಿಸಿವೆ.

ಮಾರ್ಗ ಮತ್ತು ದೇಸಿಗಳ ಬಗ್ಗೆ ಕನ್ನಡದಲ್ಲಿ ದೊಡ್ಡ ಚರ್ಚೆ ನಡೆದಿದೆ. ಇದು ಕೇವಲ ಈ ಹೊತ್ತಿನದಲ್ಲ. 'ಕವಿರಾಜಮಾರ್ಗ'ದಿಂದ ಪ್ರಾರಂಭಿಸಿ ಈ ಹೊತ್ತಿನವರೆಗೂ ವೈವಿಧ್ಯಮಯವಾಗಿ ಇದು ಬೆಳೆದು ಬಂದಿದೆ. ಇದರ ಒಟ್ಟು ಚರ್ಚೆಯನ್ನು ಗಮನಿಸಿದಾಗ 'ಮಾರ್ಗ' ಎನ್ನುವುದು ಕೇವಲ ಭಾಷಾ ವಿನ್ಯಾಸವಾಗದೆ ಒಂದು ಆಲೋಚನಾ ವಿಧಾನವೂ ಶಾಸ್ತ್ರಗಳು ಸಂಘಟಿಸಿ ಕೊಟ್ಟ ವಿವಿಧ ಚೌಕಟ್ಟುಗಳೂ ಆಗುತ್ತವೆ. ಇದು ಸಾಹಿತ್ಯಕ್ಕೆ ಮಾತ್ರ ಅನ್ವಯವಾಗದೆ ಸಂಸ್ಕೃತಿ ಸಂದರ್ಭಕ್ಕೂ

ಆಧಾರ



ನಮ್ಮನ್ನು ವಿಭಜಿಸುವ
ಸಾಧನಗಳೆಂದು
ನಿಂದಿಸುವುದು ಬೇಡ
ಗೋಡೆಗಳನ್ನು; ಅವು ಅಶಕ್ತರು,
ವೃದ್ಧರು ಮನೆಯೊಳಗೆ
ಹಿಡಿದು ನಡೆಯುವ
ಆಧಾರಗಳೂ ಹೌದು!

- ಟಿ.ಪಿ.ಕೆ.

ಅನ್ವಯವಾಗುವ ಮಾತಾಗುತ್ತದೆ. ಇಲ್ಲಿ ಎಷ್ಟೋ ಸಲ ಮಾರ್ಗ ಮತ್ತು ದೇಸಿಗಳ ನಡುವೆ ಸ್ಪಷ್ಟ ಗೆರೆಯನ್ನು ಎಳೆಯುವುದು ಸಹ ಕಷ್ಟವಾಗುತ್ತದೆ. ಇದರ ವಿಸ್ತೃತ ಚರ್ಚೆ ಕನ್ನಡ ಕಾವ್ಯವನ್ನು ಆಧರಿಸಿದ ಈ ಮುಂದಿನ ಭಾಗದಲ್ಲಾಗಿದೆ.

ವಿಕೇಂದ್ರೀಕರಣಕ್ಕೆ ತುಡಿಯುವ ದೇಸೀಯಲ್ಲಿ ನೆಲಕ್ಕೆ ಅಂಟಿದ ಬದುಕಿನ ಆಶೋತ್ತರಗಳು ಬಿಂಬಿತವಾಗುತ್ತವೆ. ಬದುಕಿಗೆ ನಿರ್ದಿಷ್ಟವಾದ ಲಕ್ಷಣಗಳು ಇಲ್ಲದಿರುವ ಹಾಗೆ ದೇಸೀಗೂ ಇರುವುದಿಲ್ಲ. ಆದ್ದರಿಂದ ಲಕ್ಷಣರಾಹಿತ್ಯವೇ ಇದರ ಮೂಲಭೂತ ಗುಣವಾಗುತ್ತದೆ. ಇಂತಹ ದೇಸೀಯು ಸಾಹಿತ್ಯ, ಕಲೆ, ನೃತ್ಯ, ಸಂಗೀತ, ಬದುಕಿನ ಕ್ರಮ -ಹೀಗೆ ಅನೇಕ ವಿನ್ಯಾಸಗಳಲ್ಲಿ ಮೈತಳೆಯುತ್ತಾ ಹೆಚ್ಚು ಹೆಚ್ಚು ಸಂಕೀರ್ಣವಾಗುತ್ತಾ ಹೋಗುತ್ತದೆ. ಹೀಗೆ ಅನೇಕ ಮೂಲವಾದ ದೇಸೀಯು ಲಿಖಿತ ಶಾಸ್ತ್ರಗಳನ್ನು ಗಣನೆಗೆ ತೆಗೆದುಕೊಳ್ಳದೆ, ಅವನ್ನೂ ಮೀರಿ ಸಾಗುವ ಕ್ರಿಯೆಯು ತನ್ನ ಚಲನಶೀಲ ಗುಣವೂ ಆಗಿರುತ್ತದೆ. ಆದ್ದರಿಂದಲೇ ಈ ಹಿನ್ನೆಲೆಯಲ್ಲಿ ಮೂಡುವ ವಿವಿಧ ಜಾನಪದ ಪ್ರಕಾರಗಳಿಗಾಗಲೀ ಕಲಾ ಪ್ರಕಾರಗಳಿಗಾಗಲೀ ನಿರ್ದಿಷ್ಟವಾದ ಶಾಸ್ತ್ರೀಯ ಚೌಕಟ್ಟು ಇದುವರೆಗೂ ನಿರ್ಮಾಣವಾಗದಿರಲು ಸಾಧ್ಯವಾಗಿರುವುದು. ಇಂತಹ ಕೋಟಿ ಮುಖವಾದ ದೇಸಿಗಳು ಕನ್ನಡ ದೇಶಿಗೆ, ಜಾಗತಿಕ ಸಂದರ್ಭದ ದೇಶಿಗಳಿಗೆ ಅಗಣಿತ ಮುಖಗಳನ್ನು ನೀಡುತ್ತಾ ಹೋಗುತ್ತದೆ.

ಹೀಗೆ ಖಚಿತತೆಗೆ ಒಳಪಡದ ದೇಸಿಗೆ ಶಾಸ್ತ್ರೀಯ ಶಿಸ್ತನ್ನು ಮೂಡಿಸುತ್ತಾ ಮಾರ್ಗವು ತನ್ನ ಅಸ್ತಿತ್ವವನ್ನು ಕಂಡುಕೊಳ್ಳಲು ಯತ್ನಿಸುತ್ತಾ, (ದೇಸಿಗೆ ಲಕ್ಷಣರಾಹಿತ್ಯವೇ ಮೂಲಭೂತ ಗುಣ ಎಂಬುದನ್ನು ಲಕ್ಷಿಸುತ್ತಲೂ) ಸಾಗುತ್ತದೆ. ಹಾಗಾದಾಗ ಅನೇಕ ಸಂವಿಧಾನಗಳು, ಕಾನೂನುಗಳು, ಶಿಕ್ಷಣ, ನಿಯಮ ಶಾಸ್ತ್ರ-ಮೀಮಾಂಸೆಗಳು ಹುಟ್ಟಿಕೊಳ್ಳುತ್ತವೆ. ಇದು ಸಂಸ್ಕೃತಿ ಕೇಂದ್ರಿತ ಚರ್ಚೆ. ಇದನ್ನು ಸಾಹಿತ್ಯಕ್ಕೆ ಜಾರಿಸಿದಾಗ, ಚದುರಿದ ದೇಸೀಯ ಅಭಿವ್ಯಕ್ತಿಗಾಗಿ ಸಾಹಿತ್ಯವು ಹಲವು ಲಕ್ಷಣಗಳನ್ನು ಲಕ್ಷ್ಯದಲ್ಲಿರಿಸಿಕೊಂಡು ಮೈತಾಳುತ್ತದೆ. ಆಗ ವಿವಿಧ ಕವಿಗಳಲ್ಲಿ ಲಕ್ಷಣಬದ್ಧವಾದ ಮತ್ತು ಅದರಲ್ಲಿ ದೇಸೀಯತೆಯ ನೆಲೆಗಳನ್ನು ಹೊಂದಿರುವ ಕಾವ್ಯಗಳು ಹುಟ್ಟಿಕೊಳ್ಳುತ್ತವೆ. ಈ ಹಿನ್ನೆಲೆಯಲ್ಲಿ ಪಂಪ ಮಾರ್ಗ-ದೇಸಿ ಈ ಎರಡಕ್ಕೂ ಬದ್ಧನಾಗಿ ನಿಲ್ಲುವ ಕವಿಯಾಗುತ್ತಾನೆ. ಇವನಲ್ಲಿ ಸಂಸ್ಕೃತ ಕಾವ್ಯ-ಶಾಸ್ತ್ರಗಳ ಶಿಕ್ಷಣ ಇದೆ. ಸಂಸ್ಕೃತ ಮೀಮಾಂಸೆಯ ಪರಿಕರಗಳು ತನ್ನ ಕಾವ್ಯದಲ್ಲಿ 'ಲಕ್ಷ್ಯ'ವೇ ಆಗಿವೆ. ಶಾಸ್ತ್ರದ ಇನ್ನೂ ಹಲವು ನಿಯಮಗಳಾದ ಧ್ವನಿ, ರಸ, ರೀತಿ, ಔಚಿತ್ಯ, ವಕ್ರೋಕ್ತಿ ಮೊದಲಾದವುಗಳು ಇಲ್ಲಿ ಕ್ರಿಯಾಶೀಲಗೊಳ್ಳುತ್ತವೆ. ಆದಾಗ್ಯೂ ಕನ್ನಡದ ದೇಶೀಯತೆಯನ್ನು, ಅದರೊಳಗಿನ ದೇಸೀಯತೆಯನ್ನು ವಿವಿಧ ಪಾತ್ರಗಳ ನಿರ್ಮಿತಿಯಲ್ಲಿ, ಆ ಪಾತ್ರಗಳ ಆಡುಮಾತಿನ ಲಯದಲ್ಲಿ, ಅಲ್ಲಿ ಬಳಕೆಯಾಗುವ ಗಾದೆ ಮೊದಲಾದ ವಿವಿಧ ತೆರನ ಸೂಕ್ಷ್ಮಗಳಲ್ಲಿ ಕಂಡರಿಸುತ್ತಾ ಹೋಗುತ್ತಾನೆ. [illegible] ತಾನಿದ್ದಾಗಲೂ [illegible] 'ಅಹಮಹಮಿಕಾಪರಂ' ಎಂಬ

ಮಾತುಗಳನ್ನು ಆಡುವಾಗಲಾಗಲಿ, ಸಿಟ್ಟಿನಿಂದ ಸೆಟೆದು ನಿಂತು -

ಮುಡಿಯಂ ಪಿಡಿದೆಳೆದವನಂ
ಮಡಿಯಿಸಿ ಮತ್ತವನ ಕರುಳ ಪಿಣಿಲಿಂದೆನ್ನಂ
ಮುಡಿಯಿಸುವಿನೆಗಂ ಮುಡಿಯಂ
ಮುಡಿಯೆಂ ಗಡ ಕೇಳಿಮೀಗಳಾನ್ ನುಡಿನುಡಿದೆಂ।

ಶ್ರೀ ಕೃಷ್ಣನಿಗೆ ಅಹವಾಲು

ಯಾರು ಹೇಳಿದರು
ನಿಮಗೆ ಮಹಾಭಾರತ ಹಿಂದಿನ ಕಥೆಯೆಂದು ?
ಕೆಲದಿನಗಳ ಹಿಂದೆ,
ದುರ್ಯೋಧನನ ಅಟ್ಟಹಾಸ ನಗೆ,
ದುಃಶಾಸನನ ಪಾಪಿ ಹಸ್ತ,
ಧರ್ಮಾಂಧ ಧೃತರಾಷ್ಟ್ರನ ಸೋಗು,
ಸ್ವಂತ ಮಗನನ್ನು ತ್ಯಜಿಸಿದ ಕುಂತಿಯ ಹೃದಯ,



ಹುಳಿಮನದ ಕಪಟಿ ಶಕುನಿಯ ಬುದ್ಧಿ,
ಜರಾಸಂಧನ ಕ್ರೂರ ಮುಖ,
ಕಂಸನ ರಕ್ಕಸ ನಗೆ.....
ಇವೆಲ್ಲವೂ-
ನಮ್ಮೂರಿನಲ್ಲಿಯೇ ಕಂಡವು!
ಪರಿತ್ರಾಣಾಯ ಸಾಧೂನಾಂ
ಎಂದ ನೀನೊಬ್ಬನೇ
ಈ ಜನ ಜಂಗುಳಿಯಲ್ಲಿ ಅದೃಶ್ಯ!

ಶೋಭಾ ಪ್ರಮೋದ್
ಮಾಣಗಾಂವ್-೪೦೨೧೦೪ (ಮಹಾರಾಷ್ಟ್ರ)

ಎಂದು ದ್ರೌಪದಿ ಆಡುವ ಮಾತಿನಲ್ಲಾಗಲಿ ದೇಸೀಯತೆಯ ಸೊಗಡು ಇಲ್ಲದೇ ಇಲ್ಲ.

ಹೀಗೆ ಪಂಪನಲ್ಲಿ ಕಂಡುಬರುವ ಮಾರ್ಗ-ದೇಸಿಗಳ ಸಮನ್ವಯದ ಚರ್ಚೆ ದೊಡ್ಡದು. ಅದು ಈಗಾಗಲೇ ಆಗಿರುವಂಥದ್ದು. ಅದನ್ನು ಸ್ಥೂಲವಾಗಿ ವಿವರಿಸುವುದಾದರೆ ಪಂಪನಲ್ಲಿ ದೇಸಿ ಎಂಬುದು ಕೇವಲ ಭಾಷಾ ವಿನ್ಯಾಸವಾಗಿ ಮೂಡಿ ಬರುವುದಿಲ್ಲ. ಅದು ತನ್ನ ಕಾಲ-ದೇಶದ ಸಾಂಸ್ಕೃತಿಕ ಒತ್ತಡವಾಗಿ, ಜನಪರತೆಯ ತುಡಿತವಾಗಿ ಮೂಡಿ ಬರುತ್ತದೆ. ಇದರ ಅಭಿವ್ಯಕ್ತಿಗಾಗಿ 'ಮಾರ್ಗ'ವನ್ನು ಆಶ್ರಯಿಸಿದರೂ ಅದರ ಒಳಗೆ ಸೂಕ್ಷ್ಮ ಭಾಷಾ ಸೊಗಡು, ಪ್ರತಿನಾಯಕರ ವೈಭವ, ನಾಣ್ಣುಡಿ, ತನ್ನ ಜನ-ಬದುಕಿನ ಚಿತ್ರಗಳು (ವಿಶೇಷವಾಗಿ ಯುದ್ಧ ಸಂದರ್ಭಗಳಲ್ಲಿ) - ಇವೇ ಮೊದಲಾದವು ದೇಸೀಯ ವಿವಿಧ ಅಭಿವ್ಯಕ್ತಿ ವಿನ್ಯಾಸಗಳಾಗುತ್ತವೆ. ಆದರೆ ಇವುಗಳ ಛಂದೋ ವಿನ್ಯಾಸಗಳು, ಕಾವ್ಯ ಮೀಮಾಂಸೆಯ ಪರಿಕರಗಳು ಸಂಸ್ಕೃತ ಮೂಲದವಾಗಿ ನಿಂತುಬಿಡುತ್ತವೆ. ಆದ್ದರಿಂದಲೇ ಪಂಪನ ಮಾರ್ಗ-ದೇಸಿ ಎಂದಾಗ ಎಷ್ಟೋ ಸಲ ಸಂಸ್ಕೃತ-ಕನ್ನಡ ಎಂದೂ ಅನ್ನಿಸಿಬಿಡುತ್ತದೆ. ಆದರೆ ಇದನ್ನು ಒಳಗೊಂಡು ಈ ಮಾರ್ಗ-ದೇಸಿ ವಿಚಾರವು ಜಾತ್ಯಾತೀತವಾಗಿ ಬೆಳೆಯುತ್ತಾ ಎರಡು ವಿಭಿನ್ನ ಸಂಸ್ಕೃತಿ ಮತ್ತು ಬೌದ್ಧಿಕತೆಗಳ ಮುಖಾಮುಖಿಯಾಗಿಯೂ ಕಾಣಿಸಿಬಿಡುತ್ತದೆ ಎಂಬುದು ಹೆಚ್ಚು ಮುಖ್ಯವಾದುದು.

ಮಾರ್ಗ-ದೇಸಿಗಳು ಎಲ್ಲಾ ಕಾಲದಲ್ಲೂ ಸಮನ್ವಯವನ್ನು ಸಾಧಿಸಿವೆ ಎಂಬುದು ಸಾಂಪ್ರದಾಯಿಕವಾದ ಮಾತು. ಕಾರಣ, ಇದು ಕನ್ನಡ-ಸಂಸ್ಕೃತಗಳ ಮುಖಾಮುಖಿಯ ಸಂದರ್ಭದಲ್ಲಿ ಸಂಘರ್ಷಾತ್ಮಕ ನೆಲೆಯಲ್ಲೂ ಪ್ರಕಟಗೊಂಡಿದೆ. ಮೂಲಭೂತವಾಗಿ ಇಲ್ಲಿ ಭಾಷಾ ಮೂಲವಾದ ಜಗಳವಿಲ್ಲ. ಆದರೆ ಈ ಎರಡು ಭಾಷೆಗಳಿಗೆ ಬದ್ಧವಾಗಿ ಎರಡು ಭಿನ್ನ ಮನೋಧರ್ಮಗಳು ಮತ್ತು ಅವುಗಳ ಸಂಸ್ಕೃತಿಗಳು ಅನೇಕ ಕಾರಣಗಳಿಗಾಗಿ ಜಗಳಕ್ಕಿಳಿದಿವೆ. ಈ ತತ್ವವನ್ನು ಮುಂದೆ ಉದ್ಧರಿಸಿರುವ ಪದ್ಯಗಳೇ ಒಂದು ರೀತಿಯಲ್ಲಿ ಸಾಬೀತುಪಡಿಸುತ್ತವೆ.

ಛಂದಮಿದಾವುದೆಂದೊಡೆ ಇರಿವರ್, ಪದ
ಬಂಧದೊಳ್ ಈ ಪ್ರಯೋಗಂ ಎಂತು
ಎಂದೊಡೆ ಬಯ್ವರ್, ಆವ ಕವಿಮಾರ್ಗವಿದು
ಎಂದೊಡೆ ಪೊಯ್ವರ್, ಅರ್ಥಮೇನ್
ಎಂದೊಡೆ ತೊಂಡು ಬಂಡುಗೆಡೆದು ಉಟ್ಟುದನ್
ಇಕ್ಕುವರ್, ಆವ ನೀತಿ ಪೇಳ್
ಎಂದೊಡೆ ಕೊಲ್ವರ್ ಈಗಡಿನ ದೇಸಿಗೆ ಬಿಳ್ದ
ಮಹಾಕವೀಶ್ವರರ್।

★ ★ ★

ತಾಳ ಮಾನ ಸರಸವನರಿಯೆ
ಓಜೆ ಬಜಾವಣೆಯ ಲೆಕ್ಕವನರಿಯೆ
ಅಮೃತಗಣ ದೇವಗಣವನರಿಯೆ
ಕೂಡಲ ಸಂಗಮದೇವಾ, ನಿನಗೆ ಕೇಡಿಲ್ಲವಾಗಿ
ಆನು ಒಲಿದಂತೆ ಹಾಡುವೆ।

★ ★ ★

ಕಲ್ಲಿಯ ಹಾಕಿ ನೆಲ್ಲವ ತಳೆದು
ಗುಬ್ಬಿಯ ಸಿಕ್ಕಿಸುವ ಕಳ್ಳನಂತೆ
ವಾಗದ್ವೈತವ ಕಲಿತು
ಸಂಸ್ಕೃತದ ಮಾತಿನ ಪಸರವ ಮುಂದೆ ಇಕ್ಕಿಕೊಂಡು
ಮತ್ಸ್ಯನ ವಕ್ತ್ರದಲ್ಲಿ ಗ್ರಾಸವ ಹಾಕುವನಂತೆ
ಅದೇತರ ನುಡಿ? ಮಾತಿನ ಮರೆ, ಆತುರ ವೈರಿ
ಮಾರೇಶ್ವರಾ

★ ★ ★

ಈ ಮೇಲಿನ ಪದ್ಯಗಳನ್ನು ಪರಿಶೀಲಿಸಿದಾಗ ಮಾರ್ಗ ಮತ್ತು ದೇಸಿ ಇವುಗಳ ನೆಲೆಯಲ್ಲಿ ಸಂಸ್ಕೃತ ಮತ್ತು ಕನ್ನಡ ಪರವಾದ ಭಿನ್ನ ಸಂಸ್ಕೃತಿ ಮತ್ತು ಬೌದ್ಧಿಕತೆಗಳ ನಡುವೆ ಜಗಳ ಇತ್ತು ಎನ್ನಿಸುತ್ತದೆ. ಇದು ನಯಸೇನ, ಆಂಡಯ್ಯ, ಮಹಲಿಂಗರಂಗ ಮೊದಲಾದವರಲ್ಲೂ ನಡೆದು ಈಗಾಗಲೇ ಜನಪ್ರಸಿದ್ಧವೂ ಆಗಿದೆ. ಆದ್ದರಿಂದ ಈ ಜಗಳ ಭಾಷಾ ಕೇಂದ್ರಿತವಾಗದೆ, ಅದನ್ನೂ ಮೀರಿ ಭಿನ್ನ ಮನೋಧರ್ಮಗಳನ್ನು ಮುಖಾಮುಖಿಯಾಗಿಸಿದ್ದಾಗಿದೆ. ಮಾರ್ಗ ಸಾಹಿತ್ಯ ಮತ್ತು ಅದರ ಧೋರಣೆಗಳು ದೇಸಿಯ ಮೇಲೆ ಲಗ್ಗೆ ಹಾಕಿದಾಗ, ದೇಸೀಪರ ಚಿಂತಕರು ಅದನ್ನು ಪ್ರತಿರೋಧಿಸಿದರು. ಕಾವ್ಯಕ್ಕೆ ಅನುಭವ, ಪ್ರಾಮಾಣಿಕತೆ ಮತ್ತು ಬದುಕಿನ ಪರವಾದ ನಿಷ್ಠೆ ಮುಖ್ಯವೇ ಹೊರತು ಅರಮನೆ, ಗುರುಮನೆಗಳನ್ನು ಆಶ್ರಯಿಸಿರುವ ಸಂಸ್ಕೃತವೇ ಅನಿವಾರ್ಯವಲ್ಲ ಎಂಬ ಭಾವನೆ ಮತ್ತು ಇದು ದೇಶ ಭಾಷೆಗಳ ಮೇಲೆ ಸಾಂಸ್ಕೃತಿಕ ಧಾಳಿ ಮಾಡತೊಡಗಿದಾಗ ಹಾಗೂ ಅದರ ಮೂಲಕವಾಗಿ ದೇಶೀ ಭಾಷೆಗಳನ್ನು ಕೀಳಾಗಿ ಪರಿಭಾವಿಸಿದ ಮನೋಧರ್ಮವನ್ನು ವ್ಯಕ್ತಪಡಿಸಿದಾಗ ದೇಶೀ ಚಿಂತಕರು ಕೆರಳಿದರು. ಈ ಉಗ್ರತ್ವ ಮೊದಲ ಪದ್ಯದಲ್ಲಿ ಪರೋಕ್ಷವಾಗಿ ಸಾಕ್ಷಾತ್ಕಾರಗೊಳ್ಳುತ್ತದೆ. ಆನಂತರದ ಪದ್ಯಗಳಲ್ಲಿ ಸಂಸ್ಕೃತಶಾಹಿಯ ವಿರುದ್ಧವಾದ ಮತ್ತು ದೇಸಿ ಅಥವ ಕನ್ನಡ ದೇಶಿ ಪರವಾದ ನಿಲುವುಗಳು ಸ್ಪಷ್ಟವಾಗಿ ಅನಾವರಣಗೊಳ್ಳುತ್ತವೆ.

ಹೀಗೆ ಮಾರ್ಗ-ದೇಸೀಗಳು ಕನ್ನಡದ ಸಂದರ್ಭದಲ್ಲಿ ಎಲ್ಲ ಕಾಲಗಳಲ್ಲೂ ಸಮನ್ವಯದ ರೂಪದಲ್ಲಿಯೇ ಪ್ರವಹಿಸದೆ ಸಂಘರ್ಷದ ನೆಲೆಯಲ್ಲೂ ಪ್ರವಹಿಸಿವೆ ಎಂಬುದು ಇಲ್ಲಿಯ ಮುಖ್ಯಮಾತು. ಇದು ವಸಾಹತು ಮತ್ತು ನವ ವಸಾಹತು ಸಂದರ್ಭಗಳಲ್ಲಿಯೂ ಅನ್ಯ ದೇಶಿ ಸಂಸ್ಕೃತಿಗಳ ಮುಖಾಮುಖಿಯಲ್ಲಿ ಹೊಸ ಹೊಸ ರೂಪಗಳನ್ನು ಪಡೆಯುತ್ತಾ ಬೆಳೆದಿದೆ.

ಈ ಹಿನ್ನೆಲೆಯಲ್ಲಿ ಸಂಸ್ಕೃತ ಮುಖಿಯಾದ ಮಾರ್ಗ-ದೇಸಿಗಳು ಕನ್ನಡ ಕಾವ್ಯವನ್ನು ರೂಪಿಸುತ್ತಾ ಪರೋಕ್ಷವಾಗಿ ಕನ್ನಡ ಕಾವ್ಯ ಮೀಮಾಂಸೆಯನ್ನು ಸಹ ಕಟ್ಟುತ್ತಾ ಬಂದಿವೆ. ಆದರೆ ಅಂತಹ ಮೀಮಾಂಸೆಯ ಕೃತಿಗಳು ಕನ್ನಡದಲ್ಲಿ ಅಲ್ಪ ಎಂಬುದು ಗಮನಾರ್ಹ ವಿಚಾರ. ಆದ್ದರಿಂದಲೇ ಸಂಸ್ಕೃತ ಕಾವ್ಯ ಮೀಮಾಂಸೆಯೆ ಭಾರತೀಯ ಕಾವ್ಯ ಮೀಮಾಂಸೆಯಾಗಿ ಮಿಂಚುತ್ತಾ ಆ ಮೂಲಕವಾಗಿ ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು [illegible] ನಮ್ಮ ಇಂದಿನ ಕಣ್ಣುಗಳಿಗೆ ಒಂದು ದೊಡ್ಡ ಇತಿಹಾಸ ಇದೆ. ಅದರಲ್ಲೊಂದು, ಸಂಸ್ಕೃತ ಶಿಕ್ಷಣ ಮೂಲದ ಚಿಂತಕರು ವಸಾಹತು ಪೂರ್ವದಲ್ಲಿ ವಿಶೇಷವಾಗಿ ಕಾಣಿಸಿದ್ದು. ಅನಂತರ ಪಾಶ್ಚಾತ್ಯ [illegible] ಅನೇಕರು ಕನ್ನಡ ಕಾವ್ಯವನ್ನು ಮತ್ತೊಂದು ಬಗೆಯಲ್ಲಿ ನೋಡಲಾರಂಭಿಸಿದ್ದು ಈಗಾಗಲೇ ಚರಿತ್ರೆಗೆ ಸೇರಿದ ಮಾತು. ಆದರೆ ಕನ್ನಡವು ಸಂಸ್ಕೃತದಷ್ಟೇ ಇಂಗ್ಲಿಷ್‌ಗಿಂತ ಪ್ರಾಚೀನವೂ ಪ್ರತ್ಯೇಕವೂ ಆದ ಸಂಸ್ಕೃತಿಯಾದ್ದರಿಂದ ಈ ಹಿನ್ನೆಲೆಯಲ್ಲಿ ನಮ್ಮಲ್ಲಿ ಶ್ರೀಮಂತ ಸಾಹಿತ್ಯವೂ ಮೂಡಿರುವು ದರಿಂದ, ಇದು ವಿವಿಧ ಕಾಲಗಳಲ್ಲಿ, ವಿವಿಧ ರೂಪಗಳಲ್ಲಿ ಅವಸ್ಥಾಂತರಗೊಂಡಿರುವುದರಿಂದ ಅದನ್ನು ಅರ್ಥೈಸಲಿ ಕ್ಕಾಗಿ ಪ್ರತ್ಯೇಕ ಕಾವ್ಯ ಮೀಮಾಂಸೆಯೆ ಬೇಕಾಗಿದೆ. ಈ ನಿಟ್ಟಿನಲ್ಲಿ ಕನ್ನಡ ಸಂಸ್ಕೃತಿಯು ರೂಪಿಸಿದ ಕನ್ನಡ ಕಾವ್ಯ ಮತ್ತು ಕನ್ನಡ ಕಾವ್ಯ ಅಂತರ್ಗತವಾಗಿಸಿಕೊಂಡ ಮಾರ್ಗ-ದೇಸಿ ವಿಚಾರಗಳು ಹಾಗೂ ಅವನ್ನು ಕುರಿತ ಕನ್ನಡ ಕಾವ್ಯಮೀಮಾಂಸೆಯು ಕೇವಲ ಕಾವ್ಯ ಚರ್ಚೆಯಾಗದೆ ಅಂತಿಮವಾಗಿ ಸಂಸ್ಕೃತಿ ಚರ್ಚೆಯಾಗಿಯೂ ಚಲಿಸಿಬಿಡುತ್ತದೆ.

ಡಾ॥ ಕಾ. ವೆಂ. ಶ್ರೀನಿವಾಸ ಮೂರ್ತಿ
ಕನ್ನಡ ಅಧ್ಯಾಪಕ, ಬೆಂಗಳೂರು ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ಕೋಲಾರ-೫೬೩೧೦೧

ಯಾರ ಹಿತಕ್ಕಾಗಿ ಬ್ಯಾಂಕ್ ಖಾಸಗೀಕರಣ?

ಮ. ಶ್ರೀ. ಮುರಳಿ ಕೃಷ್ಣ

ಈಗ ದೇಶದಲ್ಲೆಲ್ಲೂ ಖಾಸಗೀಕರಣದ ಗುಲ್ಲು. ೧೯೯೧ರಲ್ಲಿ ಕಾಂಗ್ರೆಸ್ ಸರ್ಕಾರ ನೂತನ ಆರ್ಥಿಕ ನೀತಿಗಳನ್ನು ಘೋಷಿಸಿತು. ಜಾಗತೀಕರಣದ ಹೆಸರಲ್ಲಿ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ ಹಾಗೂ ವಿಶ್ವ ಬ್ಯಾಂಕ್‌ಗಳ ಆದೇಶಗಳ ಮೇರೆಗೆ ನಮ್ಮ ದೇಶದಲ್ಲಿ ಆರ್ಥಿಕ ಸುಧಾರಣೆಗಳನ್ನು ಜಾರಿ ಮಾಡಲು ನಿಶ್ಚಯಿಸಲಾಯಿತು. ಈ ನವ ಆರ್ಥಿಕ ನೀತಿಗಳ ಹಿಂದಿದ್ದ ಉದ್ದೇಶಗಳು ಸ್ಪಷ್ಟ. ಅವೆಂದರೆ ಸಾರ್ವಜನಿಕ ವಲಯದ ಖಾಸಗೀಕರಣ, ಬಹುರಾಷ್ಟ್ರೀಯ ಕಂಪೆನಿಗಳಿಗೆ ಹಾಗೂ ವಿದೇಶಿ ಬಂಡವಾಳಕ್ಕೆ ಮುಕ್ತ ಸ್ವಾಗತ ಮತ್ತು ಉದಾರೀಕರಣದ ನೆಪದಲ್ಲಿ ನಿರ್ಬಂಧನಾ ಕ್ರಮಗಳ ಸಡಿಲಿಕೆ. ಅಭಿವೃದ್ಧಿ ಹೊಂದುತ್ತಿರುವ ಬೇರೆ ಕೆಲ ದೇಶಗಳಲ್ಲೂ ವಿದೇಶಿ ಬಂಡವಾಳ ಅಡೆತಡೆಯಿಲ್ಲದೆ ಹರಿದು ಬರುವಂತೆ ಮಾಡಲು ಆರ್ಥಿಕ ಸುಧಾರಣೆಗಳನ್ನು ಜಾರಿಗೊಳಿಸಲಾಗುತ್ತಿದೆ. ಮೆಕ್ಸಿಕೋದಂತಹ ದೇಶದಲ್ಲಿ ಘಟಿಸಿದ ದುರಂತ ನಮ್ಮಲ್ಲಿ ಎಂದು, ಎಂಬುದೇ ಪ್ರಶ್ನೆ.

ನಮ್ಮ ದೇಶದಲ್ಲಿ ಆರ್ಥಿಕ ಸುಧಾರಣೆಗಳನ್ನು ಜಾರಿಮಾಡುವ ದಿಸೆಯಲ್ಲಿ ರಿಸರ್ವ್ ಬ್ಯಾಂಕಿನ ಮಾಜಿ ಗೌರ್ನರ್ ಎಂ. ನರಸಿಂಹಂ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ೧೪-೮-೧೯೯೧ರ ಒಂದು ಸರ್ಕಾರಿ ಆದೇಶದಲ್ಲಿ ಹಿಂದಿನ ಎರಡು ದಶಕಗಳಲ್ಲಿ ದೇಶದ ಆರ್ಥಿಕತೆಯ ವ್ಯಾಪ್ತಿ ಬೆಳವಣಿಗೆ ಹಾಗೂ ಗೃಹಕ್ಷೇತ್ರದ ಉಳಿತಾಯದ ಬಗ್ಗೆ ಸಕಾರಾತ್ಮಕ ಪ್ರಸ್ತಾಪವಿತ್ತು. ಆದರೆ ನಂತರದ ವರ್ಷಗಳಲ್ಲಿ ಕೆಲವು ನ್ಯೂನತೆಗಳು ನುಸುಳಿವೆಯೆಂದು ಹಾಗೂ ಒಂದು ಸಮರ್ಥ, ಸ್ಪರ್ಧಾತ್ಮಕ ಆರ್ಥಿಕ ವ್ಯವಸ್ಥೆ ನೆಲೆಗೊಳ್ಳಬೇಕಾದರೆ ಈ ನಕಾರಾತ್ಮಕ ಅಂಶಗಳನ್ನು ನೀಗಿಸಬೇಕೆಂದೂ ಸೂಚಿಸಲಾಗಿತ್ತು. ಆದರೆ ಈ ಸಮಿತಿಯ ಸದಸ್ಯರಲ್ಲಿ ಬ್ಯಾಂಕ್ ನೌಕರರ ಮತ್ತು ಅಧಿಕಾರಿಗಳ ಪ್ರತಿನಿಧಿಯಾಗಲಿ, ಸರ್ಕಾರದ ಆರ್ಥಿಕ ನೀತಿಗಳಿಗೆ ಭಿನ್ನವಾದ ನಿಲುವುಳ್ಳ ಅರ್ಥಶಾಸ್ತ್ರಜ್ಞನಾಗಲಿ ಇರಲಿಲ್ಲ. ಈ ಸಮಿತಿಯ ಶಿಫಾರಸ್ಸುಗಳಲ್ಲಿ ಹಾಗೂ ೧೭-೬-೧೯೯೧ರಂದು ಬ್ಯಾಂಕಿಂಗ್ ವ್ಯವಸ್ಥೆಗೆ ಸಂಬಂಧಿಸಿದಂತೆ ಭಾರತೀಯ ರಿಸರ್ವ್ ಬ್ಯಾಂಕ್ ಪ್ರಕಟಿಸಿದ ವಿಶ್ವಬ್ಯಾಂಕ್‌ನ ಶಿಫಾರಸ್ಸುಗಳಲ್ಲಿ ಸಾಮ್ಯತೆಯಿದ್ದದ್ದು ಗಮನಾರ್ಹವಾದ ಅಂಶ.

> *ಮಾನವನ ಪ್ರತಿಯೊಂದು ಪರಿಶ್ರಮದ ಹಾದಿಯಲ್ಲಿ ಅಂತಿಮವಾಗಿ ದೊರಕುವ ಪ್ರತಿಫಲದ ಸ್ವರೂಪ, ಆ ಪರಿಶ್ರಮದ ಪ್ರಾರಂಭದಲ್ಲೇ ಶ್ರಮಿಕನು ಕಲ್ಪನಾಶಕ್ತಿಯಲ್ಲಿ ಕಂಡುಕೊಂಡ ಸ್ವರೂಪ. ಕಾರ್ಮಿಕನು ಉತ್ಪಾದನೆಯಲ್ಲಿ ತಾನು ಬಳಸುವ ಮೂಲವಸ್ತುವಿನ ಸ್ವರೂಪವನ್ನು ಬದಲಿಸುತ್ತಾ ತನ್ನದೇ ಆದ ವೈಯಕ್ತಿಕ ಸೃಜನಶೀಲ ಉದ್ದೇಶವೊಂದನ್ನು ಸಾಧಿಸಿಕೊಳ್ಳುತ್ತಾನೆ.*
>
> *- ಕಾರ್ಲ್ ಮಾರ್ಕ್ಸ್*

ನರಸಿಂಹಂ ಸಮಿತಿ ಈ ಶಿಫಾರಸ್ಸುಗಳನ್ನು ಮಾಡಿತು:

೧) ಭಾರತದ ಬ್ಯಾಂಕಿಂಗ್ ವ್ಯವಸ್ಥೆಯ ಮೇಲೆ ರಿಸರ್ವ್ ಬ್ಯಾಂಕಿನ ಹತೋಟಿ ಕಡಿಮೆಯಾಗಬೇಕು.

೨) ಬ್ಯಾಂಕ್ ಶಾಖೆಗಳ ಸಂಖ್ಯೆಯಲ್ಲಿ ಗಣನೀಯವಾಗಿ ಇಳಿಮುಖವಾಗಬೇಕು.

೩.) ಇನ್ನು ಮುಂದೆ ಯಾವುದೇ ಬ್ಯಾಂಕನ್ನು ರಾಷ್ಟ್ರೀಕರಿಸಬಾರದು.

೪) ಹೊಸ ಬ್ಯಾಂಕುಗಳನ್ನು ಖಾಸಗಿ ರಂಗದಲ್ಲಿ ತೆರೆಯಬೇಕು ಹಾಗೂ ವಿದೇಶಿ ಬ್ಯಾಂಕುಗಳು ಇಲ್ಲಿ ನೆಲೆಗೊಂಡು ಕಾರ್ಯ ನಿರ್ವಹಿಸಲು ಸೂಕ್ತ ವಾತಾವರಣ ಕಲ್ಪಿಸಬೇಕು.

೫) ಆದ್ಯತಾವಲಯ, ಸ್ವಯಂ-ಉದ್ಯೋಗ ಹಾಗೂ ಬಡತನ ನಿವಾರಣಾ ಕಾರ್ಯಕ್ರಮಗಳಿಗೆ ಸಿಗುವ ಬ್ಯಾಂಕ್ ಸಾಲಗಳ ಮೇಲಿನ ಸಹಾಯಧನವನ್ನು ರದ್ದುಗೊಳಿಸಬೇಕು.

೬) ಆದ್ಯತಾ ಕ್ಷೇತ್ರಕ್ಕೆ ನಿಗದಿಪಡಿಸಿರುವ ಸಾಲದ ಪ್ರಮಾಣವನ್ನು ಶೇ. ೪೦ರಿಂದ ಶೇ. ೧೦ಕ್ಕೆ ಇಳಿಸಬೇಕು.

೭) ಸ್ಥಳೀಯ ಪ್ರಾದೇಶಿಕ ಬ್ಯಾಂಕ್‌ಗಳನ್ನು ಖಾಸಗಿ ಸ್ವಾಮ್ಯದಲ್ಲಿ ತೆರೆಯಬೇಕು.

೮) ಸಾರ್ವಜನಿಕ ವಲಯದಲ್ಲಿರುವ ರಾಷ್ಟ್ರೀಕೃತ ಬ್ಯಾಂಕುಗಳ ಸರ್ಕಾರದ ಸ್ವಾಮ್ಯದಲ್ಲಿ ಇಳಿತವಾಗಬೇಕು.

೯) ಅನುತ್ಪಾದಕ ಸ್ವತ್ತುಗಳು, ಅಂದರೆ ಸುಸ್ತಿ ಸಾಲಗಳನ್ನು, ಆಯಾಯ ಬ್ಯಾಂಕುಗಳ ಲಾಭಗಳಿಂದಲೇ ನಿಭಾಯಿಸಬೇಕು.

೧೦) ತ್ವರಿತವಾಗಿ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಅನಿರ್ಬಂಧಿತ ಗಣಕೀಕರಣ ಹಾಗೂ ಇತರ ಆಧುನಿಕ ತಂತ್ರಜ್ಞಾನಗಳ ಬಳಕೆ ಆಗಬೇಕು.

ಈ ಶಿಫಾರಸ್ಸುಗಳ ಉದ್ದೇಶವೆಂದರೆ, ಜನತಾ ಬ್ಯಾಂಕಿಂಗ್‌ನ್ನು ಒಂದು ವರ್ಗದ ಪರವಾಗಿ ಪರಿವರ್ತಿಸುವುದು, ರಾಷ್ಟ್ರೀಕೃತ ಬ್ಯಾಂಕ್‌ಗಳ ಖಾಸಗೀಕರಣದಿಂದ ಅವನ್ನು ದೊಡ್ಡ ಬಂಡವಾಳಗಾರರ ವಶವಾಗುವಂತೆ ಮಾಡುವುದು, ಹಾಗೂ ಸಾಮಾಜಿಕ ಬ್ಯಾಂಕಿಂಗ್‌ನ್ನು ಕಡೆಗಣಿಸುವುದು. ಸರ್ಕಾರ ಈ ಶಿಫಾರಸ್ಸುಗಳನ್ನು ಅನುಮೋದಿಸಿತು. ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿನ ಸರ್ಕಾರದ ಸ್ವಾಮ್ಯವನ್ನು ಶೇ. ೫೧ಕ್ಕೆ ಇಳಿಸಲು ಮುಂದಾಯಿತು. ಬ್ಯಾಂಕ್ ರಾಷ್ಟ್ರೀಕರಣ ಕಾಯ್ದೆಗೆ ತಿದ್ದುಪಡಿ ತರಲು ಯೋಜನೆಗಳು ಸಿದ್ಧವಾದವು.

ಈ ಕ್ರಮಗಳನ್ನು ಪ್ರಬಲವಾಗಿ ವಿರೋಧಿಸಿದರು ಬ್ಯಾಂಕ್ ನೌಕರರು. ಪ್ರತಿಭಟನಾ ಮತ ಪ್ರದರ್ಶನಗಳು, ಸಭೆಗಳು, ಧರಣಿಗಳು ಜರುಗಿದವು. ಕೊನೆಗೆ ನಡೆದ ಮೂರು ಅಖಿಲ ಭಾರತ ಮಟ್ಟದ ಮುಷ್ಕರಗಳು ಯಶಸ್ವಿಯಾದವು. ಸಂಸತ್ತಿನಲ್ಲಿ ಎಡ ಹಾಗೂ ಮಿತ್ರ ಪಕ್ಷಗಳು ತೀವ್ರವಾಗಿ ಸರ್ಕಾರವನ್ನು ಖಂಡಿಸಿದವು. ಇತರ ಪುರೋಗಾಮಿ ಹಾಗೂ ಪ್ರಜಾತಾಂತ್ರಿಕ ಗುಂಪುಗಳು ಸಹ ತಮ್ಮ ದನಿಗೂಡಿಸಿದರು. ಆದರೂ ತಿದ್ದುಪಡಿ ಮಸೂದೆಯನ್ನು ಬಹುಮತದಿಂದ ಸರ್ಕಾರ ಜಾರಿ ಮಾಡಿತು. ತ್ವರಿತದಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳ ಷೇರುಗಳ ಮಾರಾಟ ಶುರುವಾಯಿತು. ಸಾರ್ವಜನಿಕ ಕ್ಷೇತ್ರದಲ್ಲಿದ್ದ ೨೭ ಬ್ಯಾಂಕ್‌ಗಳಲ್ಲಿ ಒಟ್ಟು ೮ ಬ್ಯಾಂಕ್‌ಗಳಲ್ಲಿ ಸರ್ಕಾರದ ಸ್ವಾಮ್ಯವನ್ನು ಕಡಿಮೆ ಮಾಡಲಾಯಿತು. ಅವುಗಳೆಂದರೆ ಭಾರತೀಯ ಸ್ಟೇಟ್ ಬ್ಯಾಂಕ್, ಬ್ಯಾಂಕ್ ಆಫ್ ಇಂಡಿಯಾ,ಕಾರ್ಪೊರೇಷನ್ ಬ್ಯಾಂಕ್, ದೇನಾ ಬ್ಯಾಂಕ್, ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್, ಬ್ಯಾಂಕ್ ಆಫ್ ಬರೋಡ, ಸ್ಟೇಟ್ ಬ್ಯಾಂಕ್ ಆಫ್ ಬಿಕಾನೇರ್ ಮತ್ತು ಜಯಪುರ್ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಟ್ರಾವನ್‌ಕೂರ್.

ಪ್ರಸ್ತುತ, ಕೇಂದ್ರದ ವಿತ್ತ ಮಂತ್ರಿ ಯಶವಂತ್ ಸಿನ್ಹರು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿನ ಸರ್ಕಾರೀ ಸ್ವಾಮ್ಯವನ್ನು ಶೇ. ೩೩ಕ್ಕೆ ಇಳಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ನಮ್ಮ ದೇಶದಲ್ಲಿ ಏಕೆ ಬ್ಯಾಂಕ್ ರಾಷ್ಟ್ರೀಕರಣವಾಯಿತು? ಈ ರಾಷ್ಟ್ರೀಕರಣದ ಹಿಂದಿದ್ದ ಪ್ರಬಲ ಕಾರಣಗಳೇನು? ರಾಷ್ಟ್ರೀಕರಣದ ನಂತರ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಆದ ಬದಲಾವಣೆಗಳೇನು? ಇವೇ ಮುಂತಾದ ವಿಷಯಗಳನ್ನು ಸೂಕ್ಷ್ಮವಾಗಿ ಅವಲೋಕಿಸೋಣ.

೧೯೬೯ಕ್ಕೆ ಮುನ್ನ ಬ್ಯಾಂಕ್‌ಗಳು ಖಾಸಗಿ ಒಡೆತನದಲ್ಲಿದ್ದವು. ದೊಡ್ಡ ದೊಡ್ಡ ಬಂಡವಾಳಗಾರರು, ಕೈಗಾರಿಕೋದ್ಯಮಿಗಳು, ಹಾಗೂ ಕೆಲವು ಉದ್ಯಮಿ ಕುಟುಂಬಗಳು ಅವನ್ನು ತಮ್ಮದನ್ನಾಗಿಸಿಕೊಂಡಿದ್ದರು. ಹೆಚ್ಚಿನ ಶಾಖೆಗಳು ನಗರ ಪ್ರದೇಶಗಳಲ್ಲೇ ಕೇಂದ್ರೀಕೃತವಾಗಿದ್ದವು.

ಗ್ರಾಮಾಂತರ ಪ್ರದೇಶಗಳ ಹೆಚ್ಚಿನ ಜನರು ಬ್ಯಾಂಕ್ ಸೌಲಭ್ಯದಿಂದ ವಂಚಿತರಾಗಿದ್ದರು. ಸಣ್ಣ ಹಾಗೂ ಮಧ್ಯಮ ರೈತರು, ಸಣ್ಣ ವ್ಯಾಪಾರಸ್ಥರು, ಕುಶಲ ಕರ್ಮಿಗಳು, ಉದ್ಯೋಗವಿರದ ಯುವಜನರು ಹಾಗೂ ಇತರರಿಗೆ ಯಾವ ರೀತಿಯ ಬ್ಯಾಂಕ್ ನೆರವೂ ಸಿಗುತ್ತಿರಲಿಲ್ಲ. ಅವರು ತಮ್ಮ ಆವಶ್ಯಕತೆಗಳಿಗೆ ಜಮೀನುದಾರರ, ಲೇವಾದೇವಿ ಮಾಡುವವರ ಮೊರೆ ಹೋಗುತ್ತಿದ್ದರು. ನಮ್ಮ ದೇಶದಲ್ಲಿ ಕೃಷಿ ಪ್ರಧಾನ ವೃತ್ತಿಯಾಗಿದ್ದರೂ, ಈ ಕ್ಷೇತ್ರಕ್ಕೆ ಸಿಗಬೇಕಾಗಿದ್ದ ಆರ್ಥಿಕ ಸಹಾಯ ಸಿಗುತ್ತಿರಲಿಲ್ಲ.

ಆಗ್ಗೆ ಯುಕೋ ಬ್ಯಾಂಕ್ ಬಿರ್ಲಾರವರ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಟಾಟಾರ ಸಿಂಡಿಕೇಟ್ ಬ್ಯಾಂಕ್ ಮಣಿಪಾಲದ ಪೈಗಳ, ಇಂಡಿಯನ್ ಬ್ಯಾಂಕ್ ಚೆಟ್ಟಿಯಾರರ, ನ್ಯೂ ಬ್ಯಾಂಕ್ ಆಫ್ ಇಂಡಿಯಾ (ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಲ್ಲಿ ವಿಲೀನವಾಗಿದೆ) ಬಂಗೂರುಗಳ, ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್ ಕರಮ್ ಚಂದ್ ಥಾಪರ್‌ರ, ಬ್ಯಾಂಕ್ ಆಫ್ ಬರೋಡ ವಾಲ್ಚಂದ್‌ಹಿರಾಚಂದ್‌ರ, ಪಂಜಾಬ್ ನ್ಯಾಷನಲ್ ಬ್ಯಾಂಕ್ ದಾಲ್ಮಿಯಾ ಮತ್ತು ಜೈನರ ಸ್ವಾಮ್ಯ ದಲ್ಲಿದ್ದವು. ಈ ಬ್ಯಾಂಕುಗಳಲ್ಲಿ ಜಮಾವಣೆಯಾದ ಹಣ ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳಿಗೆ ಸಂದಾಯವಾಗುತ್ತಿರಲಿಲ್ಲ. ದೊಡ್ಡ ಬಂಡವಾಳಗಾರರ ಕಪಿಮುಷ್ಟಿಯಲ್ಲಿದ್ದ ಬ್ಯಾಂಕ್‌ಗಳು ತಮ್ಮ ಮಾಲೀಕರ, ಅವರ ಪರಿವಾರದವರ ಸ್ವ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿದ್ದವು. ರಾಷ್ಟ್ರೀಕರಣಕ್ಕೆ ಸ್ವಲ್ಪ ಮುನ್ನ ಸ್ಟೇಟ್ ಬ್ಯಾಂಕ್ ಒಳಗೊಂಡು ಬ್ಯಾಂಕುಗಳು ನೀಡಿದ ಸಾಲಗಳ ಮೊತ್ತ ಸುಮಾರು ರೂ. ೩೨೮೦ ಕೋಟಿ. ಇವುಗಳಲ್ಲಿ ಆದ್ಯತಾ ವಲಯದ ಬೇಸಾಯ, ಸಣ್ಣ ಉದ್ದಿಮೆಗಳಿಗೆ ಸಿಕ್ಕಿದ್ದು ಬರೀ ರೂ. ೨೬೦ ಕೋಟಿ. ಅಂದರೆ ಶೇಕಡಾ ೮.

ಇದಲ್ಲದೆ, ಈ ಖಾಸಗಿ ಬ್ಯಾಂಕ್‌ಗಳು ಕಪ್ಪು ಹಣದ ಬೆಳವಣಿಗೆಗೆ ಪೂರಕವಾಗಿದ್ದವು. ಅನೇಕ ಬೇನಾಮಿ ಖಾತೆಗಳಿದ್ದವು. ಖರೀದಿ ಪಟ್ಟಿಗಳನ್ನು ಕಡಿಮೆ ಅಥವಾ ಹೆಚ್ಚುಗೊಳಿಸಿ ದೇಶಕ್ಕೆ ಲಭ್ಯವಾಗಬೇಕಾಗಿದ್ದ ಅಮೂಲ್ಯ ವಿದೇಶಿ ವಿನಿಮಯಕ್ಕೆ ಧಕ್ಕೆಯಾಗುತ್ತಿತ್ತು. ಬ್ಯಾಂಕುಗಳನ್ನು ಖೋಟಾ ಹಾಗೂ ವಂಚನೆಯ ಚಟುವಟಿಕೆಗಳಿಗೆ ಬಳಸಲಾಗುತ್ತಿತ್ತು ಕೂಡ.

ಆ ಕಾಲದಲ್ಲಿದ್ದ ಪ್ರಮುಖ ೨೦ ಖಾಸಗಿ ಬ್ಯಾಂಕ್‌ಗಳಲ್ಲಿ ಸುಮಾರು ೧೮೮ ನಿರ್ದೇಶಕರಿದ್ದರು. ಅವರು ಸುಮಾರು ೧೧೦೦೦ ಕಂಪೆನಿಗಳ ೧೪೫೨ ನಿರ್ದೇಶಕರ ಸ್ಥಾನಗಳಲ್ಲಿದ್ದರು. ಇದರಿಂದ ಅವರ ಆಶಯ ಏನಿತ್ತು ಎಂಬುದು ನಿಚ್ಚಳ. ದುರಾಡಳಿತದಿಂದ ಹಾಗೂ ಅಕ್ರಮ ವ್ಯವಹಾರಗಳಿಂದ ಗಣನೀಯ ಸಂಖ್ಯೆಯಲ್ಲಿ ಬ್ಯಾಂಕ್‌ಗಳು ಮುಚ್ಚಿದವು. ಎಷ್ಟೋ ಗ್ರಾಹಕರ ಹಣ ಗುಳುಂ ಆಯಿತು. ಅವರಲ್ಲಿ ಬೀದಿ ಪಾಲಾದವರು ಹಲವರು. ಬ್ಯಾಂಕಿಂಗ್ ಕಂಪೆನಿ ಕಾಯಿದೆಯನ್ನು ೧೯೪೯ರಲ್ಲಿ ಜಾರಿಗೊಳಿಸಿದ್ದರೂ ಈ ಖಾಸಗಿ ಬ್ಯಾಂಕ್‌ಗಳ ವ್ಯವಹಾರಗಳ ಮೇಲೆ ಭಾರತೀಯ ರಿಸರ್ವ್ ಬ್ಯಾಂಕ್‌ನ ನಿಯಂತ್ರಣವೇ ಇರಲಿಲ್ಲ.

ಪರಿಸ್ಥಿತಿ ಹೀಗಿರಲು, ಈ ಖಾಸಗಿ ಬ್ಯಾಂಕ್‌ಗಳನ್ನು ರಾಷ್ಟ್ರೀಕರಣಗೊಳಿಸಬೇಕೆಂಬ ಕರೆಗೆ ಚಾಲನೆ ಸಿಕ್ಕಿತು. ಬ್ಯಾಂಕ್ ನೌಕರರು ತಮ್ಮ ದನಿಗೂಡಿಸಿ ಚಳುವಳಿಯಲ್ಲಿ ಧುಮುಕಿದರು. ಫೆಬ್ರವರಿ ೨೮, ೧೯೬೮ ರಂದು ಒಂದು ದಿನದ ಮುಷ್ಕರವನ್ನು ಯಶಸ್ವಿಯಾಗಿ ನಡೆಸಿ ಸಾಮಾಜಿಕ ನಿಯಂತ್ರಣದ ಜಿಲ್ ಬಗ್ಗೆ ತೀವ್ರ ವಿರೋಧ ವ್ಯಕ್ತಪಡಿಸಿದರು. ರಾಷ್ಟ್ರದ ಹಿತದಲ್ಲಿ ನಡೆದ ಈ ದೇಶವ್ಯಾಪೀ ಹೋರಾಟಕ್ಕೆ ಪುರೋಗಾಮಿ ಶಕ್ತಿಗಳ ಬೆಂಬಲವೂ ದೊರೆಯಿತು. ನಂತರ ಜುಲೈ ೧೯, ೧೯೬೯ರಂದು ಸಂಸತ್ತಿನಲ್ಲಿ ಬ್ಯಾಂಕಿಂಗ್ ಕಂಪೆನಿಗಳು (ಉದ್ದಿಮೆಗಳ ವಹಿಸಿಕೊಳ್ಳುವಿಕೆ ಹಾಗೂ ಹಸ್ತಾಂತರ) ಕಾಯಿದೆಯನ್ನು ಮಂಡಿಸಲಾಯಿತು. ಇದರಲ್ಲಿ ಬ್ಯಾಂಕ್ ರಾಷ್ಟ್ರೀಕರಣದ ಉದ್ದೇಶಗಳನ್ನು ಪ್ರಸ್ತುತ ಪಡಿಸಲಾಗಿತ್ತು :

''ಕೋಟ್ಯಾಂತರ ಜನರ ಜೀವನದಲ್ಲಿ ಹಾಸು ಹೊಕ್ಕಿದೆ ಬ್ಯಾಂಕ್ ಉದ್ದಿಮೆ. ಆದ್ದರಿಂದ ಇದಕ್ಕೆ ಸಾಮಾಜಿಕ ಉದ್ದೇಶವಿರಬೇಕಾದದ್ದು ಅನಿವಾರ್ಯ. ವ್ಯವಸಾಯ, ಸಣ್ಣ ಕೈಗಾರಿಕೆ, ರಫ್ತಿನಲ್ಲಿ ಏಳಿಗೆ, ಉದ್ಯೋಗಾವಕಾಶಗಳಲ್ಲಿ ವೃದ್ಧಿ.... ಮುಂತಾದ ರಾಷ್ಟ್ರೀಯ ಗುರಿಗಳನ್ನು ತಲುಪಲು ಹಿಂದುಳಿದ ಪ್ರದೇಶಗಳ ಶ್ರೇಯಸ್ಸು ಹಾಗೂ ಉದ್ಯಮಶೀಲತೆಗೆ ಉತ್ತೇಜನ ನೀಡುವುದು ತೀರ ಆವಶ್ಯಕ. ಆದ್ದರಿಂದ ಈಗ ದೇಶದ ಸರ್ವಾಂಗೀಣ ಬೆಳವಣಿಗೆಗೆ ಬ್ಯಾಂಕ್ ವ್ಯವಸ್ಥೆಯ ಜವಾಬ್ದಾರಿಗಳನ್ನು ಸರ್ಕಾರ [illegible]


ಕೋಟಿಗಟ್ಲೆ ಸಾಲ ತಗೊಂಡಿರುವವರ ಬಗ್ಗೆ ನೀನೆನಯ್ಯಾ ಕೇಳೋದು ? ಅದನ್ನ ನಾವು ನೋಡ್ಕೋತೇವೆ. ನೀನು ಎಷ್ಟು ತಗೊಳ್ಳೋಕೆ ಅಂತ ಮಾಡಿದ ಸಾಲ್ದಲ್ಲಿ ಇನ್ನೂ ಒಂದೂವರೆ ಸಾವಿರ ಬಾಕಿ ಇದೆ. ವಾಪ್ಸು ಮಾಡ್ಲಿಲ್ಲ, ಮನೆ-ಮಠ ಜಪ್ತು ಮಾಡ್ತೀವಿ... ಗೊತ್ತಾಯ್ತು ?

[illegible]

ಜುಲೈ ೨೯.೧೯೬೯ರಂದು ಲೋಕಸಭೆಯಲ್ಲಿ ಮಾತನಾಡುತ್ತಾ ಅಂದಿನ ಪ್ರಧಾನಿ ಇಂದಿರಾ ಗಾಂಧಿ ಹೇಳಿದರು : ''ಈಗ ರಾಷ್ಟ್ರೀಕರಿಸಿದ ಬ್ಯಾಂಕೊಂದರ ಷೇರುದಾರರ ಆರ್ಥಿಕ ಜವಾಬ್ದಾರಿ ನಗಣ್ಯ. ಈ ಹದಿನಾಲ್ಕು ಬ್ಯಾಂಕ್‌ಗಳ ಸಂದಾಯವಾದ ಷೇರು ಮೂಲಧನ ಹಾಗೂ ಸುರಕ್ಷಿತ ಧನದ ಮೊತ್ತ ಠೇವಣಿಗಳ [illegible] ಭಾಗವೂ ಇಲ್ಲ. ಡಿಸೆಂಬರ್ ೧೯೬೭ರ ಕೊನೆಯಲ್ಲಿದ್ದ ಬ್ಯಾಂಕ್‌ಗಳ ಠೇವಣಿಯ ಒಟ್ಟು ಮೊತ್ತ ಸುಮಾರು ರೂ. [illegible] ಕೋಟಿ. ಇವುಗಳಲ್ಲಿ ಸಂದಾಯವಾದ ಮೂಲಧನ ಕೇವಲ ರೂ. ೨೮.೫ ಕೋಟಿ (ಅಂದರೆ ಶೇ.೧ಕ್ಕಿಂತ ಸ್ವಲ್ಪ ಹೆಚ್ಚು). ಅಂತೆಯೇ, ಬ್ಯಾಂಕ್ ಆಡಳಿತ ವರ್ಗಗಳು ಗ್ರಾಹಕರ ಹಣದಿಂದಲೇ ಕಾರ್ಯ ನಿರ್ವಹಿಸುತ್ತವೆ.''

ಬ್ಯಾಂಕ್ ರಾಷ್ಟ್ರೀಕರಣದ ನಂತರ ಶೇ. ೪೦ರಷ್ಟು ಬ್ಯಾಂಕ್ ಸಾಲವನ್ನು ಆದ್ಯತಾ ವಲಯಗಳಿಗೆ ವಿನಿಯೋಗಿಸಬೇಕೆಂದು, ಇದರಲ್ಲಿ ಕೃಷಿಗೆ ಶೇ. ೧೮, ಸಣ್ಣ ಕೈಗಾರಿಕೆಗೆ ಶೇ. ೧೦ರಷ್ಟು ಸಂದಾಯವಾಗಬೇಕೆಂದು ನಿರ್ಧರಿಸಲಾಯಿತು. ಶಾಖೆಗಳನ್ನು ಗ್ರಾಮೀಣ ಪ್ರದೇಶಗಳನ್ನೊಳಗೊಂಡು ಅದುವರೆಗೆ ಬ್ಯಾಂಕ್ ಸೌಲಭ್ಯಗಳಿರದಿದ್ದ ಸ್ಥಳಗಳಲ್ಲಿ ತೆರೆಯಲಾಯಿತು. ಹೀಗೆ ಬ್ಯಾಂಕ್ ಸೇವಾ ಸೌಲಭ್ಯಗಳು ವಿಸ್ತರಿಸಿದ್ದರಿಂದ ಗ್ರಾಹಕರ ಸಂಖ್ಯೆ ಅಧಿಕವಾಗಿ ಬೆಳೆಯಿತು. ಠೇವಣಿಗಳು ವೃದ್ಧಿಸಿದವು. ಸಾಮಾನ್ಯ ಜನರಲ್ಲಿ ಉಳಿತಾಯದ ಮನೋಭಾವ ಬೆಳೆಯುವಂತಹ ವಾತಾವರಣ ಸೃಷ್ಟಿಯಾಯಿತು. ಸಾರ್ವಜನಿಕರಿಂದ ಕ್ರೋಢೀಕರಿಸಿದ ಸಂಪನ್ಮೂಲಗಳನ್ನು ಬ್ಯಾಂಕ್‌ಗಳು ಗ್ರಾಮೀಣ ಅಭಿವೃದ್ಧಿಯಂತಹ ರಾಷ್ಟ್ರೀಯ ಅಭ್ಯುದಯದ ಕಾರ್ಯಕ್ರಮಗಳಿಗೆ ವಿನಿಯೋಗಿಸಿದವು. ಇದರಿಂದ ಕೃಷಿ ಕ್ಷೇತ್ರದಲ್ಲಿ ಹಲವಾರು ಬದಲಾವಣೆಗಳಾದವು. ಸಂಶೋಧನೆಗಳು ಅಧಿಕಗೊಂಡವು. ಹಸಿರು, ಶ್ವೇತ ಹಾಗೂ ನೀಲಿ ಕ್ರಾಂತಿಗಳು ಜರುಗುವುದರಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳ ಪಾಲು ದೊಡ್ಡದಿತ್ತು. ಇಡೀ ಗ್ರಾಮೀಣ ಪರಿಸರದಲ್ಲಿ ನವ ಚೈತನ್ಯದ ಗಾಳಿ ಬೀಸಿತು. ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಗಳಿಸಿದ್ದು ಇದೇ ಅವಧಿಯಲ್ಲಿ. [illegible] ರೈತ, ಕೃಷಿ ಕೂಲಿಗಾರ, ಸಣ್ಣ ವ್ಯಾಪಾರಿ, ಕುಶಲ ಕರ್ಮಿ, ಚಮ್ಮಾರ, ಅಕ್ಕಸಾಲಿಗ, ಕಾರ್ಮಿಕ, [illegible] ಮುಂತಾದ ಸಾಮಾನ್ಯರು ಶಾಖೆಗಳಿಗೆ ನೇರವಾಗಿ ಹೋಗಿ ಬ್ಯಾಂಕ್ ಸೌಲಭ್ಯಗಳನ್ನು ಪಡೆಯುವಂತಾದದ್ದು ರಾಷ್ಟ್ರೀಕರಣಗೊಂಡ ನಂತರವೇ. [illegible]

ಬ್ಯಾಂಕ್ ರಾಷ್ಟ್ರೀಕರಣದ [illegible]

ಸಂಪೂರ್ಣವಾಗಿ ಈಡೇರಿವೆಯೆ? ಇಲ್ಲ. ಇದಾಗದೆ ಇರುವುದಕ್ಕೆ ಹಲವಾರು ಕಾರಣಗಳಿವೆ. ಬ್ಯಾಂಕ್‌ಗಳು ರಾಷ್ಟ್ರೀಕರಣಗೊಂಡ ನಂತರವೂ ಕೆಲವು ಪಟ್ಟಭದ್ರ ಹಿತಾಸಕ್ತಿಯ ಬಂಡವಾಳಗಾರರ ಗುಂಪುಗಳು ರಾಷ್ಟ್ರೀಕೃತ ಬ್ಯಾಂಕ್‌ಗಳನ್ನು ತಮ್ಮ ನಿಯಂತ್ರಣದಲ್ಲಿರಿಸಿಕೊಳ್ಳಲು ಸಫಲವಾದವು. ಆಳುವ ವರ್ಗ ಸಹ ರಾಜಕೀಯ ಹಿತಾಸಕ್ತಿಯಿಂದ ಈ ಬ್ಯಾಂಕ್‌ಗಳ ಕಾರ್ಯ ನಿರ್ವಹಣೆಯಲ್ಲಿ ಹಸ್ತಕ್ಷೇಪ ಮಾಡುತ್ತಾ ಬಂದಿದೆ. ದೊಡ್ಡ ಉದ್ಯಮಿಗಳು, ರಾಜಕೀಯ ನೇತಾರರು ಹಾಗೂ ಬ್ಯಾಂಕ್‌ಗಳ ವರಿಷ್ಠ ಅಧಿಕಾರಿಗಳು ಶಾಮೀಲಾಗಿ ಬ್ಯಾಂಕ್‌ಗಳ ಹಣವನ್ನು ಸಾಲದ ರೂಪದಲ್ಲಿ ಲೂಟಿಮಾಡಿದರು. ಭಾರತೀಯ ರಿಸರ್ವ್ ಬ್ಯಾಂಕ್ ಪ್ರಕಟಿಸಿರುವ ''ಭಾರತದಲ್ಲಿ ಬ್ಯಾಂಕಿಂಗ್‌ನ ಅಭಿವೃದ್ಧಿ ಮತ್ತು ದಿಕ್ಕು'' ಎಂಬ ಹೊತ್ತಿಗೆಯ ಪ್ರಕಾರ ಮಾರ್ಚ್ ೩೧, ೧೯೯೯ರಲ್ಲಿ ಮರುಪಾವತಿಯಾಗದ ಸಾಲಗಳ (ಅನುತ್ಪಾದಕ ಸ್ವತ್ತುಗಳು) ಒಟ್ಟು ಮೊತ್ತ ರೂ. ೫೮,೫೫೪ ಕೋಟಿ. ಇವುಗಳಲ್ಲಿ ಸಿಂಹಪಾಲು ಖಾಸಗಿರಂಗದ ಕಾರ್ಪೊರೇಟ್ ಕ್ಷೇತ್ರದ್ದು - ಸುಮಾರು ರೂ. ೩೦,೦೦೦ ಕೋಟಿ. ಭಾರತೀಯ ಕೈಗಾರಿಕೆಗಳ ಮಹಾ ಒಕ್ಕೂಟದ (CII) ದೊಡ್ಡ ಬಂಡವಾಳಗಾರರಿಂದಲೇ ಸುಮಾರು ರೂ. ೨೫,೦೦೦ ಕೋಟಿ ಸಾಲ ಮರುಪಾವತಿಯಾಗಬೇಕು. ಬ್ಯಾಂಕ್‌ಗಳನ್ನು ಹಗಲು ದರೋಡೆ ಮಾಡಿದ ಈ ಖದೀಮರು ಬ್ಯಾಂಕಿಂಗ್ ಕ್ಷೇತ್ರದ ಬಗ್ಗೆ ವರದಿಯೊಂದನ್ನು ನೀಡಿ, ರಾಷ್ಟ್ರೀಕೃತ ಬ್ಯಾಂಕ್‌ಗಳನ್ನು ಖಾಸಗೀಕರಣ ಮಾಡಬೇಕೆಂದು ಹಾಗೂ ನಷ್ಟದಲ್ಲಿರುವ ಯುಕೋ ಬ್ಯಾಂಕ್, ಇಂಡಿಯನ್ ಓವರ್ಸೀಸ್ ಬ್ಯಾಂಕ್ ಹಾಗೂ ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾಗಳನ್ನು ಮುಚ್ಚಬೇಕೆಂದು ಸಲಹೆ ನೀಡಿದ್ದಾರೆ. ಹಿಂದಿರುಗಿಸ ಲಾಗದೆ ಹಾಗೇ ಉಳಿದಿರುವ ಸಾಲಗಳ ಬಗ್ಗೆ ಆ ವರದಿಯಲ್ಲಿ ಪ್ರಸ್ತಾಪವೇ ಇಲ್ಲ. ಏಕೆಂದರೆ, ಈ ಧೂರ್ತರು ತಾವೇ ಬ್ಯಾಂಕ್‌ಗಳಲ್ಲಿ ಅವ್ಯವಹಾರಗಳನ್ನು ಮಾಡಿ ಸಾರ್ವಜನಿಕರ ಹಣವನ್ನು ಲೂಟಿ ಮಾಡಿರುವುದು! ಆದ್ದರಿಂದ ಆ ಬ್ಯಾಂಕುಗಳನ್ನು ಮುಚ್ಚಿದರೆ ಅವರಿಗೆ ಇಡುಗಂಟಿನ ಲಾಭ. ಬ್ಯಾಂಕ್ ನೌಕರರು ಪ್ರತಿಭಟಿಸಿದ ಮೇಲೆ ಬ್ಯಾಂಕ್ ಮುಚ್ಚುವಿಕೆಯ ಶಿಫಾರಸ್ಸನ್ನು CII ಹಿಂತೆಗೆದುಕೊಂಡಿತು.

ಇವಲ್ಲದೆ, ಅಸಮರ್ಪಕ ವೃತ್ತಿಪರರಹಿತ ಆಡಳಿತ, ಸ್ವಜನ ಪಕ್ಷಪಾತ, ಬ್ಯಾಂಕ್‌ಗಳ ಆಡಳಿತ ಮಂಡಲಿಯಲ್ಲಿ ನುರಿತ ಬ್ಯಾಂಕ್ ಹಾಗೂ ಆರ್ಥಿಕ ತಜ್ಞರನ್ನು ಕಡೆಗಣಿಸಿ ಬಂಡವಾಳಶಾಹಿ ಹಾಗೂ ಗುತ್ತೇದಾರಿ ಗುಂಪುಗಳ ಭ್ರಷ್ಟ ಪ್ರತಿನಿಧಿಗಳ

ಶಾಖೆಗಳ ಸಂಖ್ಯೆ (ಜೂನ್ ೩೦, ೧೯೯೯)

ಬ್ಯಾಂಕ್ ಗುಂಪು	ಬ್ಯಾಂಕ್‌ಗಳ ಸಂಖ್ಯೆ	ಗ್ರಾಮೀಣ	ಅರೆನಗರ	ನಗರ	ಮಹಾನಗರ	ಒಟ್ಟು
ಎಸ್.ಬಿ.ಐ	೧	೪೧೧೭	೨೪೧೪	೧೩೭೦	೯೫೮	೮೮೫೯
ಎಸ್.ಬಿ.ಐ ನ ಸಂಯೋಜಿತ ಬ್ಯಾಂಕ್‌ಗಳು	೭	೧೩೯೬	೧೫೦೭	೭೭೧	೬೪೨	೪೩೧೬
ರಾಷ್ಟ್ರೀಕೃತ ಬ್ಯಾಂಕ್‌ಗಳು	೧೯	೧೩೯೨೭	೬೬೯೯	೬೨೬೭	೫೩೧೩	೩೨೨೦೬
ಖಾಸಗಿ ಬ್ಯಾಂಕ್‌ಗಳು	೩೪	೧೧೪೨	೧೬೩೯	೧೧೫೯	೯೪೧	೪೮೮೧
ವಿದೇಶಿ ಬ್ಯಾಂಕ್‌ಗಳು	೪೨	೦	೩	೧೭	೧೬೯	೧೮೯

೧೯೬೯-೧೯೯೫ರ ಅವಧಿಯ ಶೆಡ್ಯೂಲ್ಡ್ ಬ್ಯಾಂಕ್‌ಗಳ ಬೆಳವಣಿಗೆ

೧) ಒಟ್ಟು ಶಾಖೆಗಳ ಸಂಖ್ಯೆಯಲ್ಲಿ ೭ ಪಟ್ಟು ಹೆಚ್ಚಳ.
೨) ಗ್ರಾಮೀಣ ಶಾಖೆಗಳು ಹಾಗೂ ಗ್ರಾಮೀಣ ಸಾಲಗಳಲ್ಲಿ ೩೦ ಪಟ್ಟು ಹೆಚ್ಚಳ.
೩) ಒಟ್ಟು ಶಾಖೆಗಳ ಪೈಕಿ ಗ್ರಾಮೀಣ ಶಾಖೆಗಳ ಪ್ರಮಾಣದಲ್ಲಿ ಹೆಚ್ಚಳ ಶೇ. ೧೭.೬ ರಿಂದ ಶೇ. ೫೫.೭ಕ್ಕೆ.
೪) ಒಟ್ಟು ಠೇವಣಿಯ ಪೈಕಿ ಗ್ರಾಮೀಣ ಠೇವಣಿಯಲ್ಲಿ ಹೆಚ್ಚಳ ಶೇ. ೬.೩ ರಿಂದ ಶೇ. ೧೫.೬.
೫) ಒಟ್ಟು ಸಾಲಗಳ ಪೈಕಿ ಗ್ರಾಮೀಣ ಸಾಲಗಳ ಪ್ರಮಾಣದಲ್ಲಿ ಹೆಚ್ಚಳ ಶೇ. ೩.೩ ರಿಂದ ಶೇ. ೧೨.೭. ಡಿಸೆಂಬರ್ ೮೭-೮೮ರ ಅವಧಿಯಲ್ಲಿ ಇದು ಶೇ. ೧೫.೩ರಷ್ಟಿತ್ತು.
೬) ಗ್ರಾಮೀಣ ಶಾಖೆಗಳ ಸಂಖ್ಯೆ ೧೯೯೦ರಲ್ಲಿ ಶೇ. ೫೮.೧ರಷ್ಟಿತ್ತು. ಸೆಪ್ಟೆಂಬರ್ ೧೯೯೫ರಲ್ಲಿ ಶೇ. ೫೫.೭ಕ್ಕೆ ಇಳಿಯಿತು.

(Southern Economist, - vol.36, no. 11; Oct 1, 1997).

ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕ್‌ಗಳ ಬಗ್ಗೆ ೧೯೯೯ರಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಪ್ರಕಟಿಸಿರುವ ಕೆಲವು ಅಂಕಿ ಅಂಶಗಳನ್ನು ವಿಶ್ಲೇಷಿಸಿದಾಗ ಹಲವು ಕುತೂಹಲಕಾರಿ ಬೆಳವಣಿಗೆಗಳಾಗಿರುವುದನ್ನು ಗಮನಿಸಬಹುದು :

೧) ಒಟ್ಟು ಶಾಖೆಗಳಲ್ಲಿ, ಗ್ರಾಮೀಣ ಶಾಖೆಗಳ ಸಾಲಿನಲ್ಲಿ ಇಳಿತ ಹಾಗೂ ಮಹಾನಗರ ಪ್ರದೇಶದ ಶಾಖೆಗಳಲ್ಲಿ ಹೆಚ್ಚಳವುಂಟಾಗಿದೆ.
೨) ವೈಯಕ್ತಿಕ ಠೇವಣಿದಾರರು ಹೊಂದಿರುವ ಠೇವಣಿಗಳು (ರೈತಾಪಿ ಜನರನ್ನೊಳಗೊಂಡು) ಇಳಿಮುಖವಾಗಿದೆ.
೩) ಸಣ್ಣ ಸಾಲಗಳ ಖಾತೆಗಳ ಸಂಖ್ಯೆ ಹಾಗೂ ಪ್ರಮಾಣದಲ್ಲಿ ಇಳಿತ - ಮಾರ್ಚ್ ೧೯೯೨ರ ಕೊನೆಯಲ್ಲಿ ೬೫.೯ ದಶಲಕ್ಷ ಸಣ್ಣ ಸಾಲಗಳ ಖಾತೆಗಳಿದ್ದವು. ಮಾರ್ಚ್ ೧೯೯೬ರ ಕೊನೆಯಲ್ಲಿ ಅವು ೫೬.೭ ದಶಲಕ್ಷಕ್ಕೆ ಇಳಿದವು. ಅಂದರೆ ಇಳಿತ ಸುಮಾರು ೯ ದಶಲಕ್ಷದಷ್ಟು. ಆದರೆ ಮಾರ್ಚ್ ೧೯೮೯- ಮಾರ್ಚ್ ೧೯೯೨ರ ಅವಧಿಯಲ್ಲಿ ೫೨.೧ ದಶಲಕ್ಷದಿಂದ ೬೫.೯ ದಶಲಕ್ಷಕ್ಕೆ ಏರಿತು. ಅಂದರೆ ಹೆಚ್ಚಳ ೧೩.೮ ದಶಲಕ್ಷದಷ್ಟು.
೪) ಸುಧಾರಣೆಗಳು ಜಾರಿಯಾದ ಪೂರ್ವಾವಧಿಯಲ್ಲಿ ಅಂದರೆ ಮಾರ್ಚ್ ೧೯೯೦ರಲ್ಲಿ ಕೌಟುಂಬಿಕ ಕ್ಷೇತ್ರಕ್ಕೆ (ಕೃಷಿಕರು ಹಾಗೂ ಸಾಮಾನ್ಯರು) ದೊರೆತ ಸಾಲ ಶೇ. ೫೮.೩. ಇದು ಮಾರ್ಚ್ ೧೯೯೬ರಲ್ಲಿ ಶೇ. ೫೧.೧ಕ್ಕೆ ಇಳಿಯಿತು (ಸುಧಾರಣೆಗಳ ನಂತರ).
೫) ಗ್ರಾಮೀಣ ಹಾಗೂ ಅರೆ ನಗರ ಪ್ರದೇಶಗಳ ಶಾಖೆಗಳು ನೀಡಿರುವ ಕೃಷಿ ಸಾಲಗಳಲ್ಲಿ ಇಳಿಮುಖ ಕಂಡುಬಂದಿದೆ. ಮಾರ್ಚ್ ೧೯೯೦ ಶೇ. ೧೫.೯, ಮಾರ್ಚ್ ೧೯೯೬ರಲ್ಲಿ ಶೇ. ೧೧.೩ ಸಣ್ಣ ಕೈಗಾರಿಕಾ ಕ್ಷೇತ್ರದಲ್ಲಿ ಶೇ. ೧೨.೪ ಹಾಗೂ ಶೇ.೧೦.೭ ಅದೇ ಅವಧಿಯಲ್ಲಿ.
೬) ರೂ. ೨೫೦೦೦/- ಅಥವಾ ಕಡಿಮೆ ಮೊತ್ತದ ಸಾಲಗಳ ಪ್ರಮಾಣ ಮಾರ್ಚ್ ೧೯೯೧ರಲ್ಲಿ ಶೇ. ೨೨ರಷ್ಟಿದ್ದರೆ, ಮಾರ್ಚ್ ೧೯೯೬ರಲ್ಲಿ ಶೇ. ೧೪.೨ಕ್ಕೆ ಇಳಿಯಿತು.

(ECONOMIC AND POLITICAL WEEKLY RESERACH FOUNDATION - EPW - JAN 16-23.1999)

ಅಂಕಿ - ಅಂಶಗಳು (ರೂ.- ಕೋಟಿಗಳಲ್ಲಿ)

	೧೯೬೯	೧೯೯೯
ಠೇವಣಿ	೪,೬೬೫	೭,೭೦,೨೦೬
ಶಾಖೆಗಳು	೮,೨೬೨	೪೫,೫೯೮
ಸಾಲಗಳು	[illegible],೬೦೭	೩,೯೧,೬೩೬
ಅ) ಕೃಷಿಗೆ	೧೬೨	೨೧,೨೦೪
ಆ) ಆದ್ಯತಾ ವಲಯಕ್ಕೆ	೪೪೧	೫೩,೧೯೭
[illegible]	[illegible]	೯,೬೫,೭೨೦

(ಕರ್ನಾಟಕ ಪ್ರದೇಶ ಬ್ಯಾಂಕ್ ನೌಕರರ ಒಕ್ಕೂಟದ ಒಂದು ಕರಪತ್ರದಿಂದ)
* ಗ್ರಾಮೀಣ ಬ್ಯಾಂಕ್‌ಗಳ ಅಂಕಿ-ಅಂಶಗಳನ್ನು ಹೊರತುಪಡಿಸಿ

ನೇಮಕಾತಿ, ಸಾಲಮೇಳಗಳ ಹೆಸರಿನಲ್ಲಿ ಅನಿಯಂತ್ರಿತ ಸಾಲಗಳ ವಿತರಣೆ ಸಹ ದುಷ್ಪರಿಣಾಮ ಬೀರಿವೆ. ಬ್ಯಾಂಕ್ ಸಾಲಗಳನ್ನು ಮರುಪಾವತಿ ಮಾಡಬೇಕಾಗಿಲ್ಲ ಎಂಬ ವಾತಾವರಣ ಸೃಷ್ಟಿಯಾಯಿತು. ಈ ಬೆಳವಣಿಗೆಗಳು ರಾಷ್ಟ್ರೀಕೃತ ಬ್ಯಾಂಕ್‌ಗಳ ಆರೋಗ್ಯವನ್ನು ಹದಗೆಡಿಸಿದವು.

೧೯೯೧ರ ಸುಧಾರಣೆಗಳು ಜಾರಿಯಾದ ನಂತರದ ಅವಧಿಯಲ್ಲಿ ಪ್ರಾರಂಭ ವಾದ ಕೆಲವು ಖಾಸಗಿ ಬ್ಯಾಂಕ್‌ಗಳಲ್ಲಿ ಸಾಮಾನ್ಯ ಜನರು ಠೇವಣಿಯಿಡುವುದು ಸಾಧ್ಯವಾಗುತ್ತಿಲ್ಲ. ಅವು ಸೇವೆ ನೀಡುವುದು ಪ್ರತಿಷ್ಠಿತ ಗ್ರಾಹಕರಿಗೆ ಮಾತ್ರ. ಅಧಿಕ ಮೊತ್ತವನ್ನು ಸಣ್ಣ ಉಳಿತಾಯ ಖಾತೆಗಳಲ್ಲಿ ಉಳಿಸಲೇಬೇಕೆಂಬ ಕಡ್ಡಾಯ ಬೇರೆ. ಹೀಗಿರಬೇಕಾದರೆ, ರಾಷ್ಟ್ರೀಕೃತ ಬ್ಯಾಂಕ್‌ಗಳ ಆರೋಗ್ಯವನ್ನು ಕಾಪಾಡಲು, ಲೋಪದೋಷಗಳನ್ನು ಸರಿಪಡಿಸಲು ಸೂಕ್ತ ಕ್ರಮಗಳನ್ನು ಜಾರಿ ಮಾಡುವುದರ ಬದಲು ಸರ್ಕಾರ ಬ್ಯಾಂಕ್ ಖಾಸಗೀಕರಣಕ್ಕೆ ಒತ್ತು ನೀಡುತ್ತಿರುವುದು ಏಕೆ? ಹೀಗೆ ಮಾಡಬೇಕೆಂದು ಆಜ್ಞೆ ನೀಡುತ್ತಿರುವುದು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ, ವಿಶ್ವ ಬ್ಯಾಂಕ್ ಹಾಗೂ ನಮ್ಮ ಬಂಡವಾಳಶಾಹಿ ವರ್ಗ. ಖಾಸಗೀಕರಣದ ಗೊಂಬೆಯಾಟದ ಸೂತ್ರಗಳಿರುವುದು ಅಂತಹವರ ಕೈಗಳಲ್ಲಿ.


ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸುಧಾರಣೆಗಳು ಜಾರಿಯಾದ ತರುವಾಯ ಖಾಸಗಿ ಬ್ಯಾಂಕ್‌ಗಳನ್ನು ಸ್ಥಾಪಿಸಲು ಬಂಡವಾಳಿಗ ಹಾಗೂ ಗುತ್ತೇದಾರಿ ಗುಂಪುಗಳು 'ನಾ ಮುಂದು ತಾ ಮುಂದು' ಎಂದು ಅರ್ಜಿಗಳನ್ನು ಸಲ್ಲಿಸಿದವು. ಷೇರುಪೇಟೆಯಲ್ಲಿ ಸಾರ್ವಜನಿಕರಿಂದ ಜಮಾವಣೆಯಾದ ಹಲವು ಕೋಟಿಗಳನ್ನು ನುಂಗಿಹಾಕಿದ ಎಂ.ಎಸ್.ಶೂ ಕಂಪೆನಿಯ ಗುಂಪು ಸಹ ಖಾಸಗಿ ಬ್ಯಾಂಕ್ ಸ್ಥಾಪಿಸಲು ರಿಸರ್ವ್ ಬ್ಯಾಂಕ್‌ನ ಕದ ಬಡಿಯಿತು.

ನಮ್ಮ ರಾಷ್ಟ್ರದ ಸರ್ವತೋಮುಖ ಬೆಳವಣಿಗೆಗೆ ಅಪಾರ ಕೊಡುಗೆ ನೀಡಿವೆ ರಾಷ್ಟ್ರೀಕೃತ ಬ್ಯಾಂಕ್‌ಗಳು. ಮುಂದೆಯೂ ಸಹ ಅವುಗಳು ಸೂಕ್ತ ಪಾತ್ರ ವಹಿಸಬೇಕು. ಹೀಗಿರಬೇಕಾದರೆ, ಯಾರ ಹಿತಕ್ಕಾಗಿ ಈ ಬ್ಯಾಂಕ್ ಖಾಸಗೀಕರಣ, ಎಂದು ನಮ್ಮ ಜನರು ಪ್ರಶ್ನಿಸಬೇಕು.

ಮ. ಶ್ರೀ. ಮುರಳಿ ಕೃಷ್ಣ
ನಂ.೧೦೦, ೨ನೇ 'ಎ' ಕ್ರಾಸ್, ಗವೀಪುರಂ ಬಡಾವಣೆ, ಬೆಂಗಳೂರು-೫೬೦ ೦೧೯

ಮಾನ

ಒಟ್ಟಿಗೇ ಬಂದಿದೆ
ಮೂರು ಮಾನ
ಹೊಸ ಸಹಸ್ರಮಾನ
ಹೊಸ ಶತಮಾನ
ಹೊಸ ವರ್ಷಮಾನ
ಒತ್ತಿ ಹೇಳುತ್ತಿವೆ
ಇನ್ನಾದರೂ ಕಾಪಾಡಿಕೊಳ್ಳಿ
ಮಾನವರೆ ನಿಮ್ಮ
ಮಾನ !



ಗಣೇಶ ಪಿ. ನಾಡೋರ
ಸಬಗೇರಿ ಶಾಲೆಯ ಹತ್ತಿರ,
ಯಲ್ಲಾಪುರ-೫೮೧ ೩೫೯

ಕಲ್ಯಾಣ ಬಸವಣ್ಣ

(೯ನೇ ಪುಟದಿಂದ)

ಮಂದಿ ಕೂಡಿ ಕುದೀಬೇಕಾಗೇದ, ಕೂಡಿ ಗೆದೀಬೇಕಾಗೇದ.

'ಸೋಲಿಸ್ತಿನಿ ನಿಮ್ಮನ್ನ' ಅಂತ ಮ್ಯಾಲ ಬೀಳವರು ಎಲ್ಲಾ ಕಾಲಕ್ಕೂ ಇರ್ತಾರ. ಇವರೂ ಒಂದು ಥರಾ ಕಲ್ಯಾಣ ಮಾಡವರಽ. ಯಾಕಂದರ ಮ್ಯಾಲಿಂದ ಮ್ಯಾಲಿ ಮ್ಯಾಲಬಿದ್ದು ಮಲಕೊಂಡ ನಮ್ಮನ್ನ ಎಚ್ಚರಿಡತಾರ ಇರಲಿಲ್ಲಂದ್ರ, ನಾವು ನಿದ್ದೀ ಮಾಡ್ತೀವಿ, ಕಾಯಕಾ ಮರೀತೀವಿ. ಕಾಯಕ ಮರತರ ಕಲ್ಯಾಣ ಹ್ಯಾಂಗಾಗ್ತದ, ಬೈದವರ್ನ ಬಂಧುಗಳು ಅನ್ರಿ, ಹೊಗಳಿದವರು ಹೊನ್ನಶೂಲಕ್ಕೇರಸ್ತಾರ. ಹೊಗಳಿಕಿ ಅನ್ನೋ ಹುಚ್ಚನಾಯೀನ್ನ ಹೊರಗ ಹಾಕಿ ನಿಮ್ಮ ನಿಮ್ಮ ತನು-ಮನ ಸಂತೈಸಿಕೊಂಡು ಕಾಯಕಾ ಮಾಡ್ರಿ ಅಲ್ಲೇ ಕೈಲಾಸ ಅದ' ಅಂತ ಹೇಳಿದ ಬಸವಣ್ಣ. ಮಂಗ್ಯಾನಂಗ ಹರದಾಡೊ ಮನಸ ಅಂಕ್ಯಾಗ ಇಡಬೇಕಾದರ ಲಿಂಗ ಧರಸಬೇಕು. ಈ ಲಿಂಗ ಅಂದರ ಆತ್ಮ ಇದರ ಜೀವ ಆತ್ಮಸಾಕ್ಷಿ, ಇದಽ ಜಂಗಮ, ಈ ಜಂಗಮದ ಬೆಳಕ ಒಳಗಿಟಗೊಂಡು ಒಳ-ಹೊರಗಿನ ಕತ್ತಲ ಕಳಕೋಬೇಕು. ಜಗದಗಲ ಮುಗಿಲಗಲ ಇದ್ದ ಕೂಡಲಸಂಗನಽ ಕರಸ್ಥಳಕ್ಕ ಬಂದು ತುಳುಕಾದ ಅಂತ ಹೇಳಿ ಅಷ್ಟು ದೊಡ್ಡ ದೇವರನ್ನ ಇಷ್ಟ ಲಿಂಗ ರೂಪದೊಳಗ ಕೈಯಾಗ ಇಟ್ಟು ಕಿವಿಮಾತ ಹೇಳಿದ ಬಸವಣ್ಣ ಉಂಡು ಉಪವಾಸನೂ ಆಗಿದ್ದ, ಬಳಸಿ ಬ್ರಹ್ಮಚಾರೀನೂ ಆಗಿದ್ದ. ಸಂಸಾರಿ ಆಗಿದ್ದರೂ ಖರೇ ವಿರಕ್ತ ಆಗಿದ್ದ.

'ನಾ' ಅನ್ನೋ ಮಾಯಾ ವಿರಕ್ತಿಯ ವೈರಿ, ಈ ಮಾಯಾದ ಪರಿ ಹರಿಯೋದ ಲಿಂಗಪೂಜಾ. ಪೂಜಾ ಮಾಡಿ 'ನಾ' ಅನ್ನೂದನ್ನ ಪೂಜೆ ಮಾಡ್ರಿ, ಅಡ್ಡಿ ಮಾಡು ವೈರಿಗಳನ್ನ ನಾಶಮಾಡ್ರಿ.... ಹ್ಯಾಂಗ ಅಂದರ....

'ಸತ್ಯವೆಂಬ ಕೂರಲುಗನೆ ತಳೆದು ಭಕ್ತರು ಗೆದ್ದರು....' ಹೀಂಗ. ಏನಽ ಬರಲಿ ಸತ್ಯ ಬಿಡಬಾರದು, ಕಿಲಬಿಗೆ ಒಳಗಾಗೊ ಈ ಭಾಂಡ (ಅಂಗ) ಬೆಳಗಿ ಕನ್ನಡಿ ಮಾಡಬೇಕು. ಲೋಕದ ಡೊಂಕ ನೀವೇಕೆ ತಿದ್ದುವಿರಿ, ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ. ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ..... ಅಂದು ಬೆಳಕಿನ ಹಾದಿ ತೋರಿಸಿದ, ತಮಂಧದ ಕೇಡು ಜ್ಯೋತಿ ಅಂತ ಕಲಿಸಿದ.

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಇದಿರು ಹಳಿಯಲುಬೇಡ. ಈ ಏಳು ಸೂತ್ರ ಹೇಳಿಕೊಟ್ಟು ಅಂತರಂಗ-ಬಹಿರಂಗ ಶುದ್ಧ ಮಾಡಿ ಕೊಳ್ಳೋ ಹಾದಿ ತೋರಿಸಿದಾಂವಗ ಕಲ್ಯಾಣ ಬಸವಣ್ಣ ಅನ್ನಲಾರದ ಇನ್ನೇನು ಅನಬೇಕು? ಮಹಾತ್ಮ ಅನ್ನಲಾರದ ಇನ್ನೇನ ಅನಬೇಕು? ಎಲ್ಲಾರ ಕಲ್ಯಾಣದಾಗ ತಮ್ಮ ಕಲ್ಯಾಣ ಕಾಣೋರಿಗೇ ಮಹಂತರು ಅಂತಾರ. ಹಿಂತಾ ಮಹಂತರು ಕಾಲಾತೀತರು, ದೇಶಾತೀತರು. ಎಲ್ಲಾರ್ನೂ ಪ್ರೀತಿ ಮಾಡೋ ಹಾದಿ ಹಿಡಿದು ಮುಂದ ನಡದರಽ ಹಿಂತವರ ಖರೇ ಮಕ್ಕಳಾಗೂ ಯೋಗ್ಯತಾ ಬಂದೀತು !

ಬಿ. ಆರ್. ಪೋಲಿಸ್ ಪಾಟೀಲ
'ವಾತ್ಸಲ್ಯ', ಬನಹಟ್ಟಿ

ಮಂಗ.. ಮಂಕ.. ಮಾನವ...

(೧೯ನೇ ಪುಟದಿಂದ)

ಮಾರ್ಕೆಟ್ಟಿಗೆ ಹೋಗಿದ್ದಾಳೆ.....ಮನೆ ಜವಾಬ್ದಾರಿಯೆಲ್ಲ ಅವಳದೇ...ಬನ್ನಿ ಒಳಗೆ. ಬರಮಾಡಿಕೊಂಡ. ತುಂಬಾ ಸ್ಟೈಲಾಗಿ ಒಳಗಡಿಯಿಟ್ಟು, ವಯ್ಯಾರ ಮಾಡುತ್ತ ಕುಳಿತಳು. ಎಂಥಾ ಘಮಘಮ. ಕಾಣದ ಕಂಡರಿಯದ ಮೂಗಿಗೆ ಹಬ್ಬದಂತಿತ್ತು ಸುವಾಸನೆಯ ಸಾರ. ಇವಳ ರಕ್ತದಲ್ಲೇನಾದರೂ ಚಂದನ ಇರಬಹುದೆ? ಕುತೂಹಲ ಕಂಡ ಕಣ್ಣಿನ ಚೆಲ್ಲಾಟ. ಮುಸಿ ಮುಸಿ ನೋಡುತ್ತ ಹುಸಿನಗೆಯ ಬೀರಿ ಆನಂದಾತುಲನಾಗಿ ಇನ್ನೂ ನಿಂತೇ ಇದ್ದ..... ಅಷ್ಟರಲ್ಲಿ ಹೊರಗೆ ಯಾರೋ ಬಂದಂತಾಯಿತು.

ಸಾರಿ, ಮೇಡಮ್, ಒಂದ್ನಿಮಿಷವೆಂದು ಹೊರ ಬಂದನು. ಕಂಡ ಅವಳನ್ನು ''ಏನೇ ಇಷ್ಟೊಂದು ಲೇಟು, ಬೇಗ ಬರಬಾರದೇ. ಈ ಹೆಂಗಸರೇ ಇಷ್ಟು, ಮಾರ್ಕೆಟ್ಗೆ ಬಿಟ್ಟರೆ ಮರ್ಕಟನಂತೆ ಅಲೆದಾಡ್ತಾರೆ, ಬೇಗ ಮನೆ ಸುರಕ್ಷಿತವಾಗಿ ಬರುವವರೆಗೆ ಭರವಸೆಯೇ ಇರುವುದಿಲ್ಲ. ಹೋಗು ಒಳಗೆ, ಯಾರೋ ಘಮ ಘಮಾಂತ ಬೀರುತ್ತ, ನಿನ್ನ ಕೇಳುತ್ತ ಬಂದಿದ್ದಾರೆ. ಎಂಥಾ ಸುವಾಸನೆ ಬೀರುವ ಸುಂದರಿ, ನಿಂದ ನೋಡು ಗಮ್ಮಂತ ನಾರತದ'' ಎಂದು ಸಾರಿದ ಮರೆಗುಳಿ ಮಂಕಣ್ಣ.

ಒಳಗಿನಿಂದಲೇ ಕೇಳಿಸಿಕೊಂಡ ಮಂಕಮ್ಮ ಹೊರ ಬಂದು ನೋಡುತ್ತಾಳೆ..... ನಿಂತವಳು ಮಂಕಣ್ಣನ ಸೋದರತ್ತೆ ಮಂಕಮ್ಮಳ ತಾಯಿ ರುಕ್ಕಮ್ಮ!

ಸಿ. ಎಸ್. ಪಾಟೀಲ
ಬಿ.ವಿ.ಬಿ ಕಾಲೇಜು ಬೀದರ

— ಫಾಯ್ರೆ ಬೆಳ್ಳಿ ಎಲೆ ಮಂಗ —

ಡಾ॥ ಎಸ್. ಎಸ್. ಲೀಲಾ

ಮೊಸರನ್ನ ತಿಂದ ಕೋತಿ ತನ್ನ ಯಜಮಾನನಿಗೆ ನಿಂದೆ ಹುಟ್ಟಿಸಲು ಮೊಸರನ್ನದ ಕೈಯನ್ನು ಮೇಕೆಯ ಬಾಯಿಗೆ ಒರೆಸಿದ ಕತೆ ಎಲ್ಲರಿಗೂ ಚಿರಪರಿಚಿತ. ಆದರೆ ತನ್ನ ಮೂತಿಗೇ ಮೊಸರನ್ನ ಒರೆಸಿಕೊಂಡಿರುವಂತೆ ಕಾಣುವ ಮಂಗದ ಬಗ್ಗೆ ಹೆಚ್ಚು ಜನರಿಗೆ ತಿಳಿದಿರಲಾರದು. ಅದನ್ನೇ ಮೊಸರು ಮೂತಿಯ ಕೋತಿ ಎನ್ನುವುದು (ದಧಿ ಮುಖಿ ಬಂದರ್).

ಪಿಗ್ರಾಫ ಗ್ರಹಣದಿಂದ ವಿಶ್ವದೆಲ್ಲೆಡೆ ವಿಶೇಷ ಕನ್ನಡಕ ಧರಿಸಿ ಗ್ರಹಣ ವೀಕ್ಷಿಸಿದ್ದು ಸಾಮಾನ್ಯವಾಗಿ ಕಂಡು ಬಂದದ್ದು. ಆದರೆ ಬೆಲ್‌ಗ್ರೇಡ್‌ನ ಪ್ರಾಣಿ ಸಂಗ್ರಹಾಲಯದಲ್ಲಿನ ಕೋತಿಗೆ, ಅದರ ಮೇಲ್ವಿಚಾರಕಿ ಕನ್ನಡಕ ತೊಡಿಸಿ ಗ್ರಹಣ ವೀಕ್ಷಿಸುವಂತೆ ಮಾಡಿದ್ದು ಭಾರಿ ಸುದ್ದಿ. ಈ ಮೊಸರು ಮೂತಿಯ ಕೋತಿಯನ್ನು ಸುಲೋಚನೆ, ಅಂದರೆ ಕನ್ನಡಕ ಧರಿಸಿದ ಕೋತಿ (ಚಷ್ಮಾ ಬಂದರ್) ಎಂತಲೂ ಕರೆಯುವುದಿದೆ.

ಈ ಕೋತಿ/ಮಂಗದ ವೈಜ್ಞಾನಿಕ ನಾಮ ಪ್ರೆಸ್‌ಬೈಟಿಸ್ ಫಾಯ್ರಿ (Presbytis phayrei). ರೂಢಿಯಾಗಿ ಇದನ್ನು ಫಾಯ್ರೆಯ ಬೆಳ್ಳಿ ಎಲೆ ಮಂಗ ಎಂದು ಹೆಸರಿಸಲಾಗಿದೆ. ಈ ನಾಮಧೇಯವೂ ಇದರ ಗುಣ, ಲಕ್ಷಣಗಳನ್ನು ನೇರವಾಗಿ ವಿವರಿಸುವುದು. ಕ್ಯಾಪ್ಟನ್ ಫಾಯ್ರೆ ಇದನ್ನು ಮೊದಲು ಪರಿಚಯಿಸಿದ್ದರಿಂದ ಆತನ ಗೌರವಾರ್ಥ 'ಫಾಯ್ರೆ' ಎಂದೂ, ಬೆಳ್ಳಿಯ ಬಿಳಿ ಎದೆ ಭಾಗ, ತುಟಿಗಳು ಇರುವುದರಿಂದ 'ಬೆಳ್ಳಿ' ಎಂದೂ, ಎಲೆ ಭಕ್ಷಕಗಳಾದ್ದರಿಂದ 'ಎಲೆ' ಎಂಬ ಹೆಸರಿನಿಂದಲೂ ಈ ಮಂಗವನ್ನು ಗುರುತಿಸಲಾಗಿದೆ.

ಈ ಮಂಗವು ಭಾರತದ ತ್ರಿಪುರ, ಮಿಜೋರಾಂ ಮತ್ತು ಅಸ್ಸಾಂ ರಾಜ್ಯದ ಕೆಲವೆಡೆ ಮಾತ್ರ ಕಾಣಬರುವುದರಿಂದ ಬೇರೆ ಭಾಗಗಳಲ್ಲಿ ಹೆಚ್ಚು ಜನಪ್ರಿಯವಾಗಿಲ್ಲ. ತ್ರಿಪುರಾದ ಸ್ಪೆಪಾಹಿ ಜಾಲ ವನ್ಯಧಾಮದಲ್ಲಿ ಇವು ಕಂಡುಬರುವುದರಿಂದ ಹಾಗೂ ಈ ಪ್ರಭೇದವು ವಿನಾಶದ ಅಂಚಿನಲ್ಲಿರುವುದರಿಂದ ಈ ಮಂಗವನ್ನು ತ್ರಿಪುರಾ ರಾಜ್ಯದ 'ಲಾಂಛನ ಪ್ರಾಣಿ' ಎಂದು ಗುರುತಿಸಲಾಗಿದೆ. ಭಾರತದಲ್ಲಿ ಮಾತ್ರವಲ್ಲದೆ ಬಾಂಗ್ಲಾದೇಶದ ಚಿಟ್ಟಗಾಂಗ್, ಥೈಲಾಂಡ್, ಲಾವೋಸ್, ವಿಯೆಟ್ನಾಂ ಮತ್ತು ಪಶ್ಚಿಮ ಚೀನಾಗಳಲ್ಲಿಯೂ

ಗುರು ನಮನ

ಪ್ರೊ॥ ಎಂ. ಡಿ. ಪಾರ್ಥಸಾರಥಿ ಅವರ Ecology and Sociobiology of Indian Primates ಎಂಬ ಪುಸ್ತಕವನ್ನು ಡೈನಾರಾಮ್ ಪ್ರಕಾಶನವು ೧೯೯೫ರಲ್ಲಿ ಪ್ರಕಟಿಸಿತು. ಈ ಪುಸ್ತಕವು First Search dataದ ಕಂಪ್ಯೂಟರ್ ನೆಟ್‌ವರ್ಕ್‌ನಲ್ಲಿ ಸೇರಿ ಅಮೆರಿಕಾದ ಪ್ರಸಿದ್ಧ ಲೈಬ್ರರಿಗಳಲ್ಲಿ ಸೇರ್ಪಡೆಯಾದದ್ದು ಒಂದು ವಿಶೇಷ. ಈ ಪುಸ್ತಕದ ವಿಮರ್ಶೆಯು ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಪ್ರೈಮೇಟಾಲಜಿ (Vol.18, No. 6, 1997) ಮತ್ತು ಕರೆಂಟ್ ಸೈನ್ಸ್ (Vol.72, No. 6, 1997)ಗಳಲ್ಲೂ ಪ್ರಕಟವಾಯಿತು. ಹಾಗೂ ಲ್ಯಾಬೋರೇಟರಿ ಪ್ರೈಮೇಟ್ ನ್ಯೂಸ್‌ಲೆಟರ್ (Vol. 35, No. 6, 1996)ನಲ್ಲಿ ಹೊಸ ಪುಸ್ತಕಗಳ ಸೇರ್ಪಡೆಯ ಪಟ್ಟಿಯಲ್ಲಿಯೂ ಸೇರಿಸಲಾಯಿತು. ಕೇವಲ ೧೬೦ ಪುಟಗಳ ಈ ಚಿಕ್ಕ ಪುಸ್ತಕದ ದೊಡ್ಡತನ ತೋರಿಸಲು ಕಾರಣಕರ್ತರಾದವರು ಅದರ ಲೇಖಕ ಪ್ರೊ॥ ಮಂಡ್ಯಮ್ ಡಿ. ಪಾರ್ಥಸಾರಥಿ. ಇವರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಾಣಿಶಾಸ್ತ್ರ ವಿಭಾಗದ ವಿದ್ಯಾರ್ಥಿಗಳಿಗೆ ಎಂ. ಡಿ. ಪಿ. ಎಂತಲೇ ಚಿರಪರಿಚಿತರು.

ಈ ನಮ್ಮ ಗುರುಗಳು ಸ್ನೇಹಪರತೆಯಿಂದಲೇ ವಿದ್ಯಾರ್ಥಿಗಳ ಮನ ಗೆದ್ದಿದ್ದರು. ಯಾರೊಂದಿಗೂ ಗಟ್ಟಿಯಾಗಿ ಮಾತನಾಡಿದ್ದನ್ನು ನಾವ್ಯಾರೂ ನೋಡಿರಲೇ ಇಲ್ಲ. ಸದಾ ಹಸನ್ಮುಖಿಯಾಗಿರುತ್ತಿದ್ದ ಇವರು ಕೆಲವೊಮ್ಮೆ ವಿಶ್ವವಿದ್ಯಾಲಯದ ಒಳಸುಳಿಗಳನ್ನು ಎತ್ತಿ ಹೇಳುತ್ತಿದ್ದರೂ ಆಡಳಿತದ ರಾಜಕೀಯದಿಂದ ದೂರವೇ ಇರುತ್ತಿದ್ದ ವ್ಯಕ್ತಿ. ಕಾಯಕವಾಯಿತು, ತಮ್ಮ ಪ್ರವಚನವಾಯಿತು, ಎಂಬಂತೆ ಎಲ್ಲಾ ಆಗುಹೋಗುಗಳಿಗೂ ಕಿವುಡರಾಗಿರುವಂತೆಯೇ ಇದ್ದರು. ತಮ್ಮದೇ ಆದ ಚೌಕಟ್ಟಿನಲ್ಲಿ ಕ್ಷೇತ್ರ ವೀಕ್ಷಣೆ ನಡೆಸಿ ದಕ್ಷಿಣ ಭಾರತದ ಮಂಗಗಳ ಬಗೆಗೆ ಮಾಹಿತಿಗಳನ್ನು ಸಂಗ್ರಹಿಸಿದ ಕೀರ್ತಿ ಮೊದಲಿಗೆ ಇವರಿಗೇ ಸಲ್ಲಬೇಕು. ಆ ನಿಟ್ಟಿನಲ್ಲಿ ಹೆಚ್ಚು ಲೇಖನಗಳು ಇರದಿದ್ದ ಕಾಲಕ್ಕೆ ೧೯೬೭ ರಿಂದ ೧೯೮೮ರವರೆಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ವಿಜ್ಞಾನ ಸಭೆಗಳಲ್ಲಿ ಭಾಗವಹಿಸುವುದರ ಮಂಗಗಳ ಕುರಿತ ಲೇಖನಗಳನ್ನೂ ಅವರು ಮಂಡಿಸಿದ್ದರು. ವಿಶೇಷವಾಗಿ ಜಪಾನ್ ಮತ್ತು ಆಸ್ಟ್ರೇಲಿಯಾದ ಮನಃಶಾಸ್ತ್ರ ಮತ್ತು ಪ್ರೈಮೇಟ್ ವಿಭಾಗದ ವಿಜ್ಞಾನಿಗಳು ಅವರ ಲೇಖನಗಳನ್ನು ಪ್ರಶಂಸಿಸಿ ಬರೆದ ಪತ್ರಗಳನ್ನು ನನಗೊಮ್ಮೆ ಮಾನ್ಯ ಪಾರ್ಥಸಾರಥಿಯವರೇ ತೋರಿಸಿದ್ದರು.



೮೦ಕ್ಕೆ ಮೀರಿದ ವಯಸ್ಸಿನಲ್ಲಿದ್ದ ಅವರು ಸೆಪ್ಟೆಂಬರ್ ೬, ೧೯೯೮ ರಂದು ಹೃದಯಾಘಾತದಿಂದ ನಿಧನರಾದರು. ಡಯಾಬಿಟಿಸ್‌ನಿಂದ ನರಳುತ್ತಿದ್ದ ಅವರು ಹಿತ-ಮಿತ ಆಹಾರ ಮತ್ತು ಪಥ್ಯದಿಂದ ಆರೋಗ್ಯವನ್ನು ಸರಿಯಾಗಿರಿಸಿಕೊಂಡು ಚಟುವಟಿಕೆಯ ಜೀವನವನ್ನೇ ನಡೆಸುತ್ತಿದ್ದರು. ಇಳಿವಯಸ್ಸಿನಲ್ಲಿಯೂ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಗೋಖಲೆ ಇನ್ಸ್ಟಿಟ್ಯೂಟ್, ಮುಂತಾದೆಡೆ ಭಾಷಣಗಳನ್ನೂ ಕೇಳಲು ಮತ್ತು ಕೊಡಲು ಹೋಗುತ್ತಿದ್ದರು.

ಅಮೆರಿಕಾದ ಪರ್ಡ್ಯೂ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪಡೆದಿದ್ದ ಇವರು ಬೆಂಗಳೂರು ವಿಶ್ವವಿದ್ಯಾಲಯದ ಯಾವುದೇ ಉನ್ನತ ಹುದ್ದೆ ಅಲಂಕರಿಸದಿದ್ದರೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ್ದು ಕೇವಲ ತಮ್ಮ ಸ್ವಂತ ಸಂಶೋಧನೆಯಿಂದಲೇ. ವಿಶ್ವವಿದ್ಯಾಲಯಕ್ಕೆ ಅಗಾಧ ಗೌರವ ತಂದು ಕೊಟ್ಟ ಅವರಿಗೆ ಸ್ವತಃ ವಿಶ್ವವಿದ್ಯಾಲಯವು ತೋರಿಸಿದ ಗೌರವ ಅತ್ಯಲ್ಪ. ಅವರ ಅನೇಕ ವಿದ್ಯಾರ್ಥಿಗಳೇ ಅವರಿಗಿಂತ ಹಿರಿಯ ಹುದ್ದೆಗಳನ್ನು ಪಡೆದು ''ಕೀರ್ತಿವಂತ''ರಾದರು. ಆದರೆ ಎಂ.ಡಿ.ಪಿ. ಅವರ ಕೀರ್ತಿ ಬೇರೆ ತೆರನಾದದ್ದು. ವಿಶ್ವವಿದ್ಯಾಲಯವು ಅವರ ನಿವೃತ್ತಿ ವೇತನ ನಿಗದಿಗೊಳಿಸುವುದರಲ್ಲಿ ತೋರಿದ ಅಸಡ್ಡೆಯನ್ನು ಸಹ ಪಾರ್ಥಸಾರಥಿಯವರು ಸ್ಥಿತಪ್ರಜ್ಞರಾಗಿಯೇ ಸ್ವೀಕರಿಸಿದರು. ಅವರು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಇಥಲಾಜಿಕಲ್ ಸೊಸೈಟಿಗಳ ಸದಸ್ಯತ್ವವನ್ನೂ ಪಡೆದಿದ್ದರು. ಅವುಗಳಲ್ಲಿ ಕೆಲವು ಇವು:


ಜಪಾನ್ - ಭಾರತ ಪ್ರೈಮೇಟ್ ರೀಸರ್ಚ್ ಪ್ರಾಜೆಕ್ಟಿನ ಸದಸ್ಯ;

ಸಿಗ್ಮ - XI ಸೊಸೈಟಿ ಆಫ್ ಅಮೆರಿಕಾ ಸದಸ್ಯ;

ಜೂಲಾಜಿಕಲ್ ಸೊಸೈಟಿ ಆಫ್ ಲಂಡನ್‌ನ ಫೆಲೋ;

ಇಥಲಾಜಿಕಲ್ ಸೊಸೈಟಿ ಆಫ್ ಇಂಡಿಯಾದ ಫೆಲೋ : ಇದರ ಅಧ್ಯಕ್ಷರಾಗಿಯೂ ಎಂ.ಡಿ.ಪಿ. ಸೇವೆ ಸಲ್ಲಿಸಿದ್ದರು.

ಈ ಸ್ನೇಹಪರ, ಎಲೆ ಮರೆಯ ಮಂಗ ತಜ್ಞನಿಗೆ ಗೌರವ ಸಲ್ಲಿಸುವ ದಿಶೆಯಲ್ಲಿ ಅಷ್ಟೇ ಅಜ್ಞಾತವಾಗಿ ಹೆಚ್ಚು ಪರಿಚಯವಿಲ್ಲದ ಫಾಯ್ರೆ ಬೆಳ್ಳಿ ಎಲೆ ಮಂಗ ಕುರಿತ ಕೆಲವಂಶಗಳ ಮೂಲಕ ನಮನ.



ಗಂಡು ಹೆಣ್ಣು

ಅ = ಗಂಡಿನಲ್ಲಿರುವ ಕಣ್ಣಿನ ಆಕಾರ ಒ = ಹೆಣ್ಣು ಕೋತಿಯ ಕಣ್ಣಿನ ಆಕಾರ

ಇದು ಕಾಣಬರುತ್ತದೆ.

ಮಂಗಗಳು, ವಾನರ ಮತ್ತು ಮಾನವರು 'ಪ್ರೈಮೇಟಾ' ಗಣಕ್ಕೆ ಸೇರಿದ ಸ್ತನಿಗಳು. ವಾನರಗಳ ಪೈಕಿ ಹೂಲಾಕ್ ಗಿಬ್ಬನ್ ಮಾತ್ರ ಭಾರತದಲ್ಲಿ ಕಾಣಬರುತ್ತದೆ. ಮಂಗಗಳ ಪೈಕಿ ಮಕಾಕ್ ಮತ್ತು ಲಂಗೂರ್ ಪ್ರಭೇದಗಳು ಭಾರತದಲ್ಲೆಲ್ಲಾ ಹರಡಿವೆ. ಹೂಲಾಕ್ ಗಿಬ್ಬನ್ ಸೇರಿದಂತೆ, ಸಿಂಗಳೀಕ (Lion tailed macaque - Macaca silenus) (ಕೇರಳ), ಹಂದಿ ಬಾಲದ ಮಕಾಕ್ (Pig tailed Macaque - M. nemestrina) (ಪೂರ್ವ ಭಾರತ), ನೀಲಗಿರಿ ಲಂಗೂರ್ (Nilgiri langur Presbytis johnii) (ದಕ್ಷಿಣ ಭಾರತ), ಟೋಪಿ ಲಂಗೂರ್ (capped langur - Presbytis pileatus) ಮತ್ತು ಫಾಯ್ರೆ ಬೆಳ್ಳಿ ಎಲೆ ಮಂಗಗಳು ವಿನಾಶದಂಚಿನ ಪ್ರಾಣಿಗಳ ಪಟ್ಟಿಯಲ್ಲಿ ಸೇರಿವೆ.

Dr. M.D. Parthasarathy

ECOLOGY AND SOCIOBIOLOGY OF INDIAN PRIMATES

DYNASAM PUBLICATIONS

ಫಾಯ್ರೆ ಬೆಳ್ಳಿ ಎಲೆ ಮಂಗವು ಪುರಾಣ ಪ್ರಸಿದ್ಧವಾದ ಹನುಮಾನ್ ಲಂಗೂರ್‌ನ ಹತ್ತಿರದ ಸಂಬಂಧಿ. ಹೆಣ್ಣು ಮತ್ತು ಗಂಡು ಮಂಗಗಳನ್ನು ಸುಲಭವಾಗಿ ಗುರುತಿಸಬಹುದು. ಗಂಡು ಮಂಗಕ್ಕೆ ಕಣ್ಣಿನ ಸುತ್ತ ಇರುವ ಬಿಳಿ ಪಟ್ಟಿ ಗುಂಡಗಿದ್ದು ಮೂಗಿನ ಬದಿಗಳಲ್ಲಿ ಸಮಾನಾಂತರ ಅಂತರವಿರುವಂತೆ ಕಾಣುತ್ತದೆ. ಹೆಣ್ಣು ಮಂಗಗಳಲ್ಲಿ ಬಿಳಿ ಪಟ್ಟಿಯು ತ್ರಿಕೋನಾಕಾರದಲ್ಲಿದ್ದು ಮೂಗಿನ ಭಾಗದ ಅಂತರ ಹೆಚ್ಚಿನದಾಗಿ ಕಾಣುತ್ತದೆ. ಇದರಿಂದಾಗಿ ಮೇಲ್ತುಟಿಯ ಮೇಲ್ಭಾಗದಲ್ಲಿ ಎದ್ದು ಕಾಣುವ ಕಪ್ಪು ತ್ರಿಕೋನ ಗುರುತಿಸಬಹುದು.

ತಲೆ ಮತ್ತು ಹಿಂಭಾಗ ಬೂದು ಬಣ್ಣ, ಎದೆ ಮತ್ತು ತುಟಿಗಳು ಬಿಳಿ ಬಣ್ಣದ್ದಾಗಿದ್ದು, ನೆಟ್ಟಗಿನ ಕಪ್ಪು ಹುಬ್ಬು, ತಲೆಯ ಮೇಲೊಂದು ಜುಟ್ಟು- ಇವುಗಳಿಂದ ಸುಲಭವಾಗಿ ಗುರುತಿಸಬಹುದು. ಶರೀರದ ಬಣ್ಣಕ್ಕೆ ಹೋಲಿಸಿದರೆ ಬಾಲ ತಿಳಿಬಣ್ಣದ್ದಾಗಿದ್ದು, ಬಾಲದ ತುದಿಯಲ್ಲಿ ಗೊಂಡೆಯಿದೆ. ಹೆಣ್ಣು, ಗಂಡಿಗಿಂತ ಗಾತ್ರದಲ್ಲಿ ಸಣ್ಣದು. ನಾಚಿಕೆ ಸ್ವಭಾವದ ಇವು ದಟ್ಟ ಕಾಡುಗಳಲ್ಲಿ ಗುಂಪಾಗಿ ಕೊಂಬೆಗಳ ಮರೆಗಳಲ್ಲಿ ಅವಿತಿಟ್ಟುಕೊಂಡು ಜೀವಿಸುವುದರಿಂದ ಅವುಗಳ ನಡವಳಿಕೆ ವಿಜ್ಞಾನಿಗಳಿಗೆ ಇನ್ನೂ ನಿಗೂಢವಾಗಿಯೇ ಇದೆ. ಅಪಾಯದ ಸೂಚನೆ ಕಂಡಲ್ಲಿ ಗೋಲ್ಡನ್ ಲಂಗೂರ್‌ಗಳಂತೆಯೇ ತಾರಸ್ಥಾಯಿಯಲ್ಲಿ ಅರಚಾಡುವುವು.

ತಮ್ಮ ಹೆಚ್ಚಿನ ವೇಳೆಯನ್ನು ಮರಗಳ ಮೇಲೆಯೇ ಕಳೆಯುವುದರಿಂದ ಅವು ನೆಲಕ್ಕಿಳಿಯುವುದು ಅಪರೂಪವೆಂದೇ ಹೇಳಬೇಕು. ಅವು ರಸಭರಿತ ಹಣ್ಣು, ಎಲೆಗಳನ್ನು [illegible] ಶರೀರಕ್ಕೆ ಬೇಕಾದ [illegible] ಮತ್ತು [illegible] ಹನಿಗಳು ಎಲೆಯ ಮೇಲೆ ಕಂಡಾಗ ಅದನ್ನು ನೆಕ್ಕುವುದನ್ನೂ ನೋಡಬಹುದು. ತಮ್ಮ ಸುತ್ತಲೂ ಜೀವಿಸುವ ಜೀವಿಗಳೊಂದಿಗೆ ಸಾಮರಸ್ಯ ಜೀವನ ನಡೆಸುವ ನಡವಳಿಕೆ ತೋರುತ್ತವೆ.

ಹೇನು ಹೆಕ್ಕುತ್ತಾ ಮಧ್ಯೆ-ಮಧ್ಯೆ ವಿಶ್ರಾಂತಿ ಪಡೆಯುತ್ತಾ ದಿನವಿಡೀ ಆಹಾರ ಸೇವಿಸುತ್ತಲೇ ಇರುತ್ತವೆ. ಬೇಸಿಗೆಯಲ್ಲಿ ಮಧ್ಯಾಹ್ನದ ಹೊತ್ತು ದೀರ್ಘಕಾಲ ವಿಶ್ರಾಂತಿ ಪಡೆಯುವುವು. ಕುಳಿತ ಕಡೆಯೇ ಪಕ್ಕದ ಕೊಂಬೆಯನ್ನು ಬಗ್ಗಿಸುತ್ತಾ ಮೊಗ್ಗು, ಹೂ, ಹಣ್ಣುಗಳನ್ನು ಬಾಯಿಯ ಬಳಿ ನೇರವಾಗಿ ಎಳೆದುಕೊಂಡು ಆಹಾರ ಸೇವಿಸುವ ದೃಶ್ಯ ಸಾಮಾನ್ಯವಾಗಿ ಕಂಡುಬರುವುದು. ನಾವು ವೀಳ್ಯದೆಲೆಯನ್ನು ಸೇವಿಸುವಾಗ ತೊಟ್ಟನ್ನು ಬಿಡಿಸಿ ಎಲೆಯನ್ನು ತಿನ್ನುವಂತೆ, ಈ ಎಲೆಮಂಗ ರಬ್ಬರ್ ಗಿಡದ ಎಲೆಗಳಲ್ಲಿನ ಎಲೆಯ ಭಾಗವನ್ನು ಬಿಸುಟು ತೊಟ್ಟನ್ನು ಆಸ್ಥೆಯಿಂದ ತಿನ್ನುತ್ತದೆ.

ಮರಿ ಮಾಡುವ ಕಾಲ ಚಳಿಗಾಲ. ಸೆಪ್ಟೆಂಬರ್‌ನಿಂದ ಫೆಬ್ರವರಿಯವರೆಗೆ ಮರಿಗಳು ಹುಟ್ಟುವುವು. ಒಂದು ಬಾರಿಗೆ ಒಂದೇ ಮರಿ. ಮರಿಗಳು ನಾಲ್ಕು - ಐದು ತಿಂಗಳಿನ ನಂತರ ಘನಾಹಾರ ಸೇವಿಸಲು ಪ್ರಾರಂಭಿಸುವುವು. ಒಂದು ವರ್ಷದವರೆವಿಗೂ ತಾಯಿಯ ಹಾಲನ್ನು ಸೇವಿಸುವುವು. [illegible] ವರ್ಷಗಳಲ್ಲಿ ಹೆಣ್ಣು ಪ್ರೌಢಾವಸ್ಥೆ ತಲುಪಿದರೆ, ಗಂಡು [illegible] ರಿಂದ [illegible] ವರ್ಷಗಳಲ್ಲಿ ವಂಶಾಭಿವೃದ್ಧಿ ಕಾರ್ಯಕ್ಕೆ ತಯಾರಾಗುವುದು.

ಅಸ್ಸಾಂ ಮತ್ತು ನಾಗಾಲ್ಯಾಂಡ್‌ನಲ್ಲಿ [illegible] ಆಹಾರಕ್ಕಾಗಿ ಇವುಗಳ ಬೇಟೆಯಾಡುವುದರಿಂದ ಇವುಗಳ ಸಂಖ್ಯೆ ಕ್ಷೀಣಿಸುತ್ತಿದೆ. ತ್ರಿಪುರಾದಲ್ಲಿ ಇವುಗಳನ್ನು ಜನ ಬೇಟೆಯಾಡುವುದಿಲ್ಲ. ಹೊಲ ಗದ್ದೆಗಳನ್ನು ಹಾಳು ಮಾಡದಿದ್ದರೂ ರಬ್ಬರ್ ತೋಟಗಳಿಗೆ ನುಗ್ಗಿ ಬೆಳೆಯನ್ನು ಹಾಳು ಮಾಡುತ್ತವೆ. ರಬ್ಬರ್ ತೋಟವು [illegible] ನೀಡುವ ತಾಣವಾಗಿದ್ದರೂ ಮಾನವನ ಆರ್ಥಿಕ [illegible] ಸವಾಲಾಗುವುದರಿಂದ ಈ ಮಂಗಗಳ ನಾಶ - [illegible] ಪ್ರಶ್ನೆ ಏಳುತ್ತಿದೆ. ೧೯೭೨ರ ವನ್ಯ ಜೀವಿ ರಕ್ಷಣೆಯನ್ವಯ ನಶಿಸುತ್ತಿರುವ ಜೀವಿಗಳ ಪಟ್ಟಿಯಲ್ಲಿ ಇದನ್ನು ಸೇರಿಸಲಾಗಿದೆ. ಅವುಗಳ ರಕ್ಷಣೆಯ ಹೊಣೆ ಹೊರದಿದ್ದಲ್ಲಿ ಸಂಪೂರ್ಣವಾಗಿ ಭಾರತದಿಂದ ಅಳಿಸಿಹೋಗುವ ಸಂಭವವನ್ನು ತಳ್ಳಿಹಾಕುವಂತಿಲ್ಲ.

ಡಾ|| ಎಸ್. ಎಸ್. ಲೀಲಾ
[illegible]

ಲೋಕಾಯತ (ಚಾರ್ವಾಕ ದರ್ಶನ)


ಪುಟ : ೧೨೮ ಬೆಲೆ : ರೂ. ೩೦

ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್

ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು - ೫೬೦ ೦೦೧

ಕನ್ನಡದ ವೈಚಾರಿಕ ಸಾಹಿತ್ಯಕ್ಕೆ ಹಿರಿಯ ಲೇಖಕರಾದ ಗೌರೀಶ ಕಾಯ್ಕಿಣಿಯವರ ಕೊಡುಗೆ ದೊಡ್ಡದು. ಅವರ ಅಭ್ಯಾಸೀ ಲೇಖನಿಯಿಂದಲೇ 'ಲೋಕಾಯತ' ಮೂಡಿಬಂದಿದೆ. ಲೋಕಾಯತದ ಪ್ರಸ್ತಾಪ ಅವರ 'ನಾಸ್ತಿಕ ಮತ್ತು ದೇವರು' ಪುಸ್ತಕದಲ್ಲಿಯೇ ಬಂದಿದೆ. ಆದರೆ ಇಲ್ಲಿ ಅದು ವಿಸ್ತಾರವಾಗಿ, ಪೂರ್ಣ ಪ್ರಮಾಣದಲ್ಲಿ ಪ್ರಕಟವಾಗಿದೆ. ಈ ಪುಸ್ತಕಕ್ಕೆ ದಕ್ಷಿಣ ಕನ್ನಡದಿಂದ ೧೯೯೯ರ ಉಗ್ರಾಣ ಪ್ರಶಸ್ತಿ ಸಂದಿದೆ.

''ಈ ಚಾರ್ವಾಕವಾದಿಗಳು ಪ್ರಾಚೀನಕಾಲದ ವೈಜ್ಞಾನಿಕರೇ ಆಗಿದ್ದರು. ತರ್ಕದ ಒರೆಗಲ್ಲಿನ ಮೇಲೆ ಅವರು ಸತ್ಯದ ಪರೀಕ್ಷೆ ಮಾಡುತ್ತಿದ್ದರು. ಅವರು ನಾಸ್ತಿಕರು, ನಿಜ. ಆದರೆ ಸಂಯಮಿಗಳೇ ಆಗಿದ್ದರು. ಭಾರತ - ರಾಮಾಯಣಗಳಲ್ಲಿಯೂ ಅವರ ಉಲ್ಲೇಖವು ಅತಿ ಪ್ರಾಚೀನ. ಅಲ್ಲಿಯೂ ಅವರು ತಪಸ್ವಿಗಳು, ಯತಿಗಳು, ತ್ರಿದಂಡಿಗಳೆಂಬ ವರ್ಣನೆ ಬರುತ್ತದೆ. ತ್ರಿದಂಡಿಗಳೆಂದರೆ ಮೂರು ದಂಡಗಳನ್ನು ಒಟ್ಟಾಗಿ ಕಟ್ಟಿ ಹಿಡಿಯುವವರು. ಈ ಮೂರು ದಂಡಗಳೆಂದರೆ ವಾಗ್ದಂಡ, ಮನೋದಂಡ ಮತ್ತು ಕಾಯದಂಡ; ಮಾತು, ಮನಸ್ಸು ಮತ್ತು ದೇಹ-ನಡತೆ, ಇವುಗಳ ಮೇಲೆ ಹಿಡಿತ ಸೂಚಿಸುವ ಮೂರು ಉದ್ದ ಬಡಿಗೆಗಳು. ಸದಾ ತಮ್ಮ ಮತ ಪ್ರಚಾರಕ್ಕಾಗಿ ಸಂಚಾರದಲ್ಲಿರುವ ಈ ಪರಿವ್ರಾಜಕರು ಸಾಲವನ್ನು ಮಾಡಿಯಾದರೂ ತುಪ್ಪವನ್ನು ಕುಡಿಯಿರಿ ಎಂದರಲ್ಲದೆ ಹೆಂಡ ಕುಡಿಯಿರಿ ಎನ್ನಲಿಲ್ಲ'' (ಇವರದ್ದೇ 'ನಾಸ್ತಿಕ-ಮತ್ತು ದೇವರು'ದಲ್ಲಿ ತುಪ್ಪ ಕುಡಿಯಿರಿ ಎಂಬುದನ್ನೇ ಮೂಲವನ್ನು ಮರೆಸಿ ಬೇಕೆಂತಲೇ ಸೇರಿಸಿದ ಶಬ್ದ ಎಂದು ಹೇಳಿದ್ದಾರೆ) ಎಂದು ಹೇಳಿದ್ದಾರೆ. ಇಂಥ ವಿಚಾರವಾದಿಗಳ ದರ್ಶನ ಇಂದು ಯಾಕೆ ನಷ್ಟವಾಯಿತು ಎಂಬುದನ್ನು ವಿಸ್ತಾರವಾಗಿ ಪುಸ್ತಕದಲ್ಲಿ ಹೇಳಲಾಗಿದೆ.



''ಸಾಮಾಜಿಕ ಕ್ರಾಂತಿಯ ಆರಂಭ ವಿಚಾರ ಕ್ರಾಂತಿಯಿಂದ. ಆದ್ದರಿಂದ ಯಾವ ಕಾಲದಲ್ಲಿಯೂ ಯಾವ ದೇಶದಲ್ಲಿಯೂ ಸಮಾಜದ ವ್ಯವಸ್ಥಾಪಕರು, ಸ್ಥಾಪಿತ ವ್ಯವಸ್ಥೆಯ ಸ್ಥಿತಿಸ್ಥಾಪಕರು ವೈಚಾರಿಕ ಸ್ವಾತಂತ್ರ್ಯಕ್ಕೆ ವಿಶೇಷ ಎಡೆ ಕೊಡುವುದಿಲ್ಲ. ಆದ್ದರಿಂದ ಲೋಕಾಯತರನ್ನು ಸದೆಬಡಿಯುವುದು ವೈದಿಕ ವರ್ಗಗಳಿಗೆ ಅಗತ್ಯವೆನಿಸಿತು. ಮೂರು ವೇದಗಳು ಮೂರ್ಖರು ಸುಲಿಗೆಗಾಗಿ ಹೂಡಿದ ಧೂರ್ತರ ಸಂಚು, ವ್ಯರ್ಥಾಲಾಪನೆ. ಅಗ್ನಿಹೋತ್ರಾದಿ ಕರ್ಮವನ್ನು ಪ್ರತಿಪಾದಿಸುವ ವೇದಗಳು ಪರಲೋಕದಲ್ಲಿ, ಅದೃಷ್ಟದಲ್ಲಿ ಕುರುಡು ನಂಬಿಕೆ ಹುಟ್ಟಿಸುತ್ತವೆ. ಆ ಮೂಲಕವಾಗಿ ಈ ಲೋಕದ ಜೀವನದಲ್ಲಿ ದುಂದುವೆಚ್ಚ, ಆರ್ಥಿಕ ಕ್ಲೇಶ. ಪುರೋಹಿತ ವರ್ಗಕ್ಕೆ ಅಧಿಕ ದಕ್ಷಿಣೆ. ಪಶುಹಿಂಸೆ, ವ್ಯರ್ಥ ವಿಧಿವಿಧಾನಗಳ ಆಡಂಬರಗಳಿಗೆ ಕಾರಣವಾಗುತ್ತದೆ'' ಎಂದರು. ಅಂದ ಮೇಲೆ ಕೇಳಬೇಕೆ? ಸತತವಾಗಿ ಲೋಕಾಯತದ ಮೇಲೆ ಪ್ರಹಾರ ಆಗುತ್ತಿದ್ದರೂ ಅದು ಸಂಪೂರ್ಣ ನಾಶವಾಗಲಿಲ್ಲ. ಕೆಲವರಿಗೆ ಒಪ್ಪಿಗೆಯಾಗದಿದ್ದರೂ ಅದನ್ನು ತಳ್ಳಿಹಾಕುವಂತೆ ಇರಲಿಲ್ಲ! ''ಚಾರ್ವಾಕ ದರ್ಶನ ಸಾಂಖ್ಯ, ವೈಶೇಷಿಕ, ಬೌದ್ಧ, ಜೈನ ಇತ್ಯಾದಿ ದರ್ಶನಗಳಲ್ಲಿ ಸೇರಿಕೊಂಡು ಉಳಿದಿದೆ. ವೈದಿಕ ದರ್ಶನಗಳು ಅನ್ಯಮತ ಖಂಡನೆಯ ವಿಭಾಗದಲ್ಲಿ ಚಾರ್ವಾಕರ ಮಾತುಗಳನ್ನು ಅಲ್ಲಲ್ಲಿ ಎತ್ತಿಕೊಂಡು ಟೀಕಿಸಿದ್ದು ಕಂಡುಬರುತ್ತದೆ'' ಎನ್ನುವ ಲೇಖಕರು ಚಾರ್ವಾಕ ದರ್ಶನ ಅತಿ ಪ್ರಾಚೀನ ಭೌತಿಕ ವಾದ ಎಂಬುದನ್ನು ಮಂಡಿಸಿದ್ದಾರೆ. ಸಾಂಖ್ಯ ದರ್ಶನದಲ್ಲಿ ಈಶ್ವರನೊಡನೆ ಸಂಬಂಧವಿಟ್ಟು ತಿಳಿದುಕೊಳ್ಳುವ ಪ್ರಯತ್ನ ಕಂಡು ಬರುವುದಿಲ್ಲ. ಕಪಿಲನ ಸಾಂಖ್ಯ ನಿರೀಶ್ವರವಾದಿ. ಸಾಂಖ್ಯದಲ್ಲಿ ಪ್ರಕೃತಿ ತತ್ವಕ್ಕೇ ಪ್ರಾಧಾನ್ಯ. ಮುಂದೆ 'ಪುರುಷ' ಪ್ರವೇಶ. ಹೀಗೆಯೇ ಅನೇಕ ದರ್ಶನಗಳು ದೇವರೊಡನೆ, ಆತ್ಮದೊಡನೆ ರಾಜಿ ಮಾಡಿಕೊಂಡವು. ಆದರೆ ಲೋಕಾಯತ ಹಾಗೆಯೇ ಉಳಿಯಿತು. ಅದರ ತತ್ವಗಳು ಉಪನಿಷತ್ತು ಮತ್ತು ಭಗವದ್ಗೀತೆಗಳ ಮೇಲೂ ಬೌದ್ಧ ಜೈನದ ಮೇಲೂ ಮಾಡಿರುವ ಪ್ರಭಾವವನ್ನು ಉದಾಹರಣೆ ಸಹಿತ ನೀಡುತ್ತಾರೆ.

ಲೋಕಾಯತ ಮರೆಯಾಗಲು ಭಕ್ತಿ ಮಾರ್ಗವು ಒಂದು ಕಾರಣವೆನ್ನುತ್ತಾರವರು. ಯಾಕೆಂದರೆ ''ಭಕ್ತಿ ಮಾರ್ಗವೂ ಸಮಾಜದಲ್ಲಿಯ ಜಾತಿ, ಮತ, ಪಂಥಗಳ ವೈಷಮ್ಯದ ವಿರುದ್ಧವೇ ಬಂಡಾಯ ಹೂಡಿತ್ತು. ಭಗವದ್ಗೀತೆಯಲ್ಲಿಯೂ ವೇದಗಳ ಪ್ರಶಂಸೆಗಿಂತ ಭಕ್ತಿಯ ಮಹಿಮೆಯೇ ಹೆಚ್ಚಾಗಿ ಹೊಗಳಿದೆ. ಭಕ್ತಿ ಪಂಥದಲ್ಲಿ ದೇವರು ನಿರ್ಗುಣ ನಿರಾಕಾರ ಬ್ರಹ್ಮನಲ್ಲ. ಆತ ಭಕ್ತನಿಗೆ ಆತ್ಮೀಯ. ಆತನ ಆದೇಶ ಅತ್ಯಂತ ಆಶಾದಾಯಕ. ಸಮಾಜದ ಬಹುಜನ ಸಮುದಾಯದ ಆರ್ತವರ್ಗಗಳಿಗೆ ದುಃಖ ವಿಮೋಚನೆಯ ಈ ಭಾವೋನ್ಮಾದದ ದಾರಿ ಸುಲಭವೆನಿಸುತಿತ್ತು. ಕರ್ಮಕಾಂಡಕ್ಕೆ ಬೇಸತ್ತ ಇವರಿಗೆ ಪೂಜನೆ, ಭಜನೆ, ಸಂಕೀರ್ತನೆ ಆಕರ್ಷಕವಾದವು. ಆದರೆ ಚಾರ್ವಾಕವಾದ ನಿಷ್ಠುರವಾದುದು. ಅದು ಭಾವಲೋಲುಪತೆಗೆ ಎಡ ಕೊಡುವಂತಹದಲ್ಲ.

''ದೇಹಾತ್ಮ ಪ್ರಜ್ಞೆಯೇ ಆತ್ಮ. ಅದೇ ಸ್ವಭಾವ, 'ತಸ್ಮಾತ್ ಸ್ವಭಾವಾತ್ ವ್ಯವಸ್ಥಿತಿಃ.' ನಾವು ಸತ್ತಾಗ ಆಗುವುದೇನು? ಕಾಷ್ಠ ಲೋಷ್ಠ ಸಮಂ. ದೇಹ ಜೀವ ಕೂಡಿದಾಗಲೇ ಅಲ್ಲಿ ಆತ್ಮದ ಅಸ್ತಿತ್ವ. ಶವ, ಪ್ರೇತ ಈ ಶಬ್ದಗಳ ಅರ್ಥ ಗತಿಸಿದ್ದು, ಹೋದದ್ದು ಎಂದು, ಅಂದರೆ ಸತ್ತ ಮೇಲೆ ಆತ್ಮ ಇರುವುದಿಲ್ಲ. ಆತ್ಮದ ಲಕ್ಷಣ 'ಅಸ್ಮಿತೆ', ನಾನು ಇದ್ದೇನೆ ಎಂಬ ಪ್ರಜ್ಞೆ.''


''ನಿರಿಂದ್ರಿಯ ಜಡಸೃಷ್ಟಿ. ಆನಂತರ ಸೇಂದ್ರಿಯ ಸಾವಯವ ಜೀವ ಸೃಷ್ಟಿ. ಉದ್ಭಿಜ್ಜ ಅಂಡಜ, ಯೋನಿಜ ಪ್ರಾಣಿ. ಇವೆಲ್ಲ ಹಂತಗಳಿಂದ ಜೀವ ವಿಕಾಸಗೊಂಡು ಮನೋ ಬುದ್ಧಿಗಳನ್ನು ಹೊಂದಿ ಪಂಚಕೋನ ಸಿದ್ಧಾಂತದಂತೆ ಬೆಳೆದು ನಿಂತ ಮನೋದೇಹಿಯೂ ದೇಹಾತ್ಮನೂ ಆದ ಮನುಷ್ಯನೆಂಬ ರೆಕ್ಕೆ ಪುಕ್ಕವಿಲ್ಲದ ದ್ವಿಪಾದ ಪಶುವಿನವರೆಗೆ ಅಚೇತನ ಜಡ ಪ್ರಕೃತಿಯೇ ಮನೋಬುದ್ಧಿ ಅಂತಃಕರಣಗಳ ಮುತ್ತಜ್ಜಿ - ಮೂಕಜ್ಜಿ! ಅಂದಾಗ ಜಡದ ವಿಶ್ವದ ಹಿಂದೆ ಇಚ್ಛೆ ಇತ್ತೆಂದು ನಂಬುವುದು ಅಸಂಗತ. ಆದ್ದರಿಂದ ಆತ್ಮವು ದೇಹದ ಸ್ವಭಾವ. ಇಂಥ ಸ್ವಭಾವವಾದವು ಲೋಕಾಯತದ ಕೊಡುಗೆ. ವಿಶ್ವದ ಮೂಲ ವಾಸ್ತವ. ಇದ್ದುದು ಇಲ್ಲವಾಗುವುದಿಲ್ಲ. ವಿಶ್ವ ಪ್ರಪಂಚವೆಲ್ಲ ತನ್ನ ತನ್ನ ಸ್ವಭಾವಕ್ಕೆ ಅನುಗುಣವಾಗಿ ತಾನೇ ತಾನಾಗಿ ಪರಿವರ್ತನೆಗೊಳ್ಳುತ್ತಿರುತ್ತದೆ. ಜಡ-ಚೈತನ್ಯ, ದೇಹಾತ್ಮ ಇವು ಒಂದೇ ಪರಿಮಾಣ (ಕ್ವಾಂಟಂ); ಇದುವೆ ಲೋಕಾಯತದ ದರ್ಶನ ಲೋಕಸ್!'' ಎಂಬುದನ್ನು ಲೇಖಕರು ಸಂಗ್ರಹಿಸಿಕೊಡುತ್ತಾರೆ.

ಇಷ್ಟಾದರೂ ಲೋಕಾಯತರು ಸೋತರೆ? ''ಅವರು ಸಂಘಟನೆಗಿಂತ ಪರಮತ ಖಂಡನೆಗೇ ಹೆಚ್ಚಿನ ಗಮನ ಕೊಡಬೇಕಾಯಿತು. ಅವರ ವಾದಪಟುತ್ವ ನಿರ್ವಿವಾದವಾಗಿತ್ತು. ಆದರೆ ಅವರ ಬುದ್ಧಿಯ ತೀಕ್ಷ್ಣತೆಯು ನಕಾರಾತ್ಮಕವಾಗಿಯೇ ಪ್ರಕಟವಾಗಿತ್ತು. ಒಂದು ತಾತ್ವಿಕ ವಿಧಾಯಕ ಭೂಮಿಕೆಯ ಆಳ-ಅಗಲ ಅದರ ದರ್ಶನವನ್ನು ಬೆಳೆಸಲು ಭದ್ರವಾಗಿ ನಿಲ್ಲಿಸಲು ಒದಗಿಬರುವಂತೆ ಆಗಲಿಲ್ಲ. ಅದು ಪ್ರತಿಭಟನೆಯ ರೂಪದಲ್ಲೇ ವ್ಯಕ್ತಗೊಂಡಿತು. ಆದರೂ ಚಾರ್ವಾಕರು ಭಾರತೀಯ ವಿಚಾರವಾದದ ಮೂಲಕ ವಿಚಾರ ಕ್ರಾಂತಿಯ ಅಗ್ರದೂತರಾದರು. ಮುಂಚೂಣಿಯ ಯೋಧರಾದರು,'' ಎಂಬುದು ಗೌರೀಶರ ಅಭಿಪ್ರಾಯವಾಗಿದೆ.

ಗೌರೀಶರ ಬರವಣಿಗೆ ಚೇತೋಹಾರಿಯಾದುದು. ವಸ್ತುವನ್ನು ಆಪ್ತವಾಗುವಂತೆ ಅವರ ಭಾಷಾ ಶೈಲಿ ಕಳೆಕಟ್ಟಿಕೊಡುತ್ತದೆ. ಅಲ್ಲದೆ ಅವರ ಓದಿನ ಹರಹಿನಲ್ಲಿ ನಮ್ಮ ವಿಚಾರವನ್ನು ಚುರುಕುಗೊಳಿಸಿ ಹಿಗ್ಗಿಸುತ್ತಾರೆ ಕೂಡ. ತಂತ್ರ-ಸಾಂಖ್ಯ ಚಾರ್ವಾಕ ನಿಲುಮೆ, 'ಪ್ರಬೋಧ ಚಂದ್ರೋದಯ' ನಾಟಕದಲ್ಲಿ, ಕೇವಲ ಸುಖವಾದಿಗಳು ಜಡದಿಂದ ಜೀವ, ದೇಹಾತ್ಮ ಪ್ರಜ್ಞೆ, ಭಕ್ತಿಯೆಂಬ ಪ್ರಕ್ರಿಯೆ ಬುದ್ಧಿ ಪ್ರಾಮಾಣ್ಯದ ದಾರಿ, ಈಶ್ವರನು ಅಪ್ರಸ್ತುತ, ಏಕಮೇವ ಪುರುಷಾರ್ಥ, ವಿಶ್ವಸೃಷ್ಟಿಗೆ ಸ್ವಭಾವವೇ ಕಾರಣ, ಅನುಮಾನಂ ಪ್ರಮಾಣಂ, ಆತ್ಮನ್ ಅಂದರೇನು? ಪತಂಜಲಿಯ ಯೋಗದಲ್ಲಿ ಪರಮೇಶ್ವರ ಮೀಮಾಂಸದ ಕರ್ಮ, ಮೋಕ್ಷದ ಪರಿಕಲ್ಪನೆ, ರಾಕ್ಷಸರು ಯಾರು? ಇಂತಹ ಅನೇಕ ತಲೆ ಬರಹದಲ್ಲಿ ವಿಷಯವನ್ನು ಚರ್ಚಿಸುತ್ತಾರಲ್ಲದೆ ಲೋಕಾಯತದ ಪ್ರಸಿದ್ಧ ಸಿದ್ಧಾಂತವನ್ನು 'ಮುಖ್ಯ ಚಾರ್ವಾಕ ವಚನಗಳು' ಎಂಬ ಶೀರ್ಷಿಕೆಯಲ್ಲಿ ಮೂಲ ಮತ್ತು ಅನುವಾದದಲ್ಲಿ ಸಂಗ್ರಹಿಸಿಕೊಡುತ್ತಾರೆ. ರೂಪ ಮರೆಸಿಕೊಂಡಿರುವ ನಮ್ಮ ಪ್ರಾಚೀನ ದರ್ಶನವಾದ ಲೋಕಾಯತವನ್ನು ಸೋಸಿ ಸೋಸಿ ಕಟ್ಟಿ ಕೊಟ್ಟ ಗೌರೀಶರ ಈ ಪುಸ್ತಕ ಒಂದು ಸಾರ್ಥಕ ಮತ್ತು ಮುಖ್ಯ ಓದಾಗಿದೆ.

ಆರ್. ವಿ. ಭಂಡಾರಿ

ಅರೆಅಂಗಡಿ- ೫೮೧ ೪೩೦, ಹೊನ್ನಾವರ - ಉ. ಕ.



ಬುದ್ಧ ಹರಿಶ್ಚಂದ್ರ (ನಾಟಕ)

ಕೇಶವ

ಪುಟ : 110 **ಬೆಲೆ : ರೂ. 25**

ಕರ್ನಾಟಕ ಪ್ರಕಾಶಕರ ಪರಿಷತ್ತು, 27, ಕಾಟನ್‌ಪೇಟೆ ಮುಖ್ಯರಸ್ತೆ, ಬೆಂಗಳೂರು - 560 053

ಇದೊಂದು ವಿಶಿಷ್ಟ ವೈಚಾರಿಕ ನಾಟಕ. ಪುರಾಣದ ಪುಣ್ಯಕಥೆಗಳಿಗೆ ಉತ್ತರಾರ್ಧ ಕಲ್ಪಿಸಿದಾಗ ಏಳುವ ಪ್ರಶ್ನೆಗಳ ಸುರಿಮಳೆಯಲ್ಲಿ ಪೂರ್ವಾರ್ಧದ ಪುಣ್ಯವೆಲ್ಲ ಕೊಚ್ಚಿಹೋಗುತ್ತದೆ ಎಂಬ ಲೇಖಕರ ಮಾತು ಮಾಣಿಕ್ಯದಂತಿದೆ. ರಾಮ, ಬುದ್ಧ, ವಿಶ್ವಾಮಿತ್ರರಂಥ ಪುರಾಣ ಶ್ರೇಷ್ಠರಿಗೆ ಶೋಷಿತ ಸ್ತ್ರೀವಾದಿ ನೆಲೆಯಲ್ಲಿ ಚಂದ್ರಮತಿಯೂ ಸಜ್ಜನಿಕೆಯ ನೆಲೆಯಲ್ಲಿ ಬಂಡೆದ್ದ ಹರಿಶ್ಚಂದ್ರನೂ 'ವಕ್ರ' ಪ್ರಶ್ನೆಗಳನ್ನು ಕೇಳುತ್ತಿದ್ದಾರೆ.

ಶತಮಾನದ ಕನ್ನಡ ಸಾಹಿತ್ಯ-1 (ಸಮೀಕ್ಷೆ)

ಸಂಪಾದಕ : ಜಿ. ಎಚ್. ನಾಯಕ

ಪುಟ : 400 **ಬೆಲೆ : ರೂ. 200**

ಶ್ರೀ ರಾಘವೇಂದ್ರ ಪ್ರಕಾಶನ, ಅಂಬಾರಕೊಡ್ಲ, ಅಂಕೋಲಾ- 581 314

ಇಪ್ಪತ್ತನೇ ಶತಮಾನದ ಕನ್ನಡ ಸಾಹಿತ್ಯ ಕಂಡ ಏಳು ಬೀಳುಗಳನ್ನು, ಸಮೃದ್ಧತೆಯನ್ನು, ಅದು ಓದುಗನ ಮೇಲೆ ಬೀರಿದ ಪ್ರಭಾವವನ್ನು ಹದಿಮೂರು ವಿವಿಧ ಲೇಖನಗಳ ಮೂಲಕ ಸಮೀಕ್ಷೆ ಮಾಡಲಾಗಿದೆ. ಪ್ರೊ.// ಜಿ. ಎಚ್. ನಾಯಕರ ಸಮರ್ಥ ಸಂಪಾದಕತ್ವದಲ್ಲಿ ಹೊರಬಂದ ಈ ಸಂಪುಟದಲ್ಲಿ ಮೊದಲರ್ಧ ಶತಮಾನದ ಚಿತ್ರಣವಿದ್ದು, ಶೀಘ್ರದಲ್ಲಿಯೇ ಉತ್ತರಾರ್ಧವನ್ನು ಹೊರತರುವ ಆಶ್ವಾಸನೆ ಇದೆ.

ಬಾಲಕರಿಗಾಗಿ ಸ್ಕೌಟಿಂಗ್


ಮೂಲ : ಲಾರ್ಡ್ ಬೇಡನ್ ಪೊವೆಲ್

ಕನ್ನಡಕ್ಕೆ : ರಾ. ಚಂದ್ರಶೇಖರನ್

ಪುಟ : 312 **ಬೆಲೆ : ರೂ. 110**

ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ.ಲಿ., ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು- 560 001.

ಮತ ಧರ್ಮ ಪಂಥಗಳ ಬೇಲಿಯಿಲ್ಲದೆ ಸೇವಾ ಮನೋಧರ್ಮವನ್ನು ಎಳೆಯರಲ್ಲಿ ಮೂಡಿಸಿ ವಿಶ್ವ ಭ್ರಾತೃತ್ವದ ಸಂದೇಶ ಸಾರುವ ಸ್ಕೌಟ್ ಮತ್ತು ಗೈಡ್ಸ್ ಸಂಸ್ಥೆ ಅಂತರರಾಷ್ಟ್ರೀಯ ಮಟ್ಟದಲ್ಲಿ ತರಬೇತಿ ನೀಡುತ್ತದೆ. ಅದರ ಸಂಸ್ಥಾಪಕ ಲಾರ್ಡ್ ಬೇಡನ್ ಪೊವೆಲ್‌ರ ಆಂಗ್ಲ ಮೂಲಕೃತಿಯ ಈ ಕನ್ನಡಾನುವಾದ ಸ್ಕೌಟ್ ತರಬೇತುದಾರರಿಗೂ, ವಿದ್ಯಾರ್ಥಿಗಳಿಗೂ ಅತ್ಯುಪಯುಕ್ತವಾದ ಕೃತಿ.



ಶೋಷಿತ ಜಂಗಮರ ಮೀಸಲಾತಿ

ದಾಸನೂರು ಕೂಸಣ್ಣ

ಪುಟ : 288 **ಬೆಲೆ : ರೂ. 120**

ಮಾತಂಗ ಪ್ರಕಾಶನ, 24, ಸಿದ್ಧಾರ್ಥ ನಿಲಯ, 2ನೇ ಹಂತ, ಗಾಯತ್ರಿಪುರಂ ಉದಯಗಿರಿ ಬಡಾವಣೆ, ಮೈಸೂರು - 19

ರಾಜಕೀಯ ರಂಗದಲ್ಲಿ ಆಗಾಗ ರಾಡಿ ಎಬ್ಬಿಸುವ ಮೀಸಲಾತಿಯ ಮೂಲ ಸಮಸ್ಯೆಯನ್ನು ಗುರುತಿಸಿ, ಮಾಹಿತಿಗಳನ್ನು ಸಂಗ್ರಹಿಸಿ, ಅಂಕಿ ಅಂಶಗಳ ಸಹಿತ ಅಧ್ಯಯನ ಮಾಡಿದ ಈ ಸಂಶೋಧನಾ ಗ್ರಂಥ ಶೋಷಿತ ಜನರ [illegible] ಸೌಲಭ್ಯಗಳು [illegible] ಹಿಂದೆ ಮುಂದೆ [illegible] ತಪ್ಪಿಸಲು ಸಲಹೆ [illegible].

ಪದಕಟ್ಟಿ ಹಾಡೇನಾ (ಹಾಡುಗಳು)



ಡಾ// ಬಸವರಾಜ ಸಬರದ

ಪುಟ : 80 **ಬೆಲೆ : ರೂ. 45**

ನೆಲಮನೆ ಪ್ರಕಾಶನ, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ

ಪದಕಟ್ಟಿ ಹಾಡುವವರೊಂದಿಗೆ [illegible] ಎದೆಯಾಳದಲ್ಲಿ [illegible] ಒಂದನ್ನು [illegible] ಚೆನ್ನಾಗಿದ್ದರೆ ಮಾತ್ರ ಹಾಡು ಸಾರ್ಥಕವೆಂಬ ಧ್ವನಿಯೊಂದನ್ನು ಇಲ್ಲಿ ಗುರುತಿಸಬಹುದು. ಎರಡು, ಮೂರು [illegible] ಈ ಪದ್ಯಗಳಲ್ಲಿ ಜಾನಪದ ಶೈಲಿಯನ್ನು ಸಂಗೀತಕ್ಕಳವಡಿಸಿ [illegible] ಹೆಚ್ಚಬಹುದು.



ಹೆಜ್ಜೆ ಗುರುತು (ಕಥಾ ಸಂಕಲನ)

ತಿಲಕನಾಥ ಮಂಜೇಶ್ವರ

ಪುಟ : 120 **ಬೆಲೆ : ರೂ. 50**

ಸೌಮ್ಯ ಸಂಕೇತ ಪ್ರಕಾಶನ, 'ಕೃತಿ', 80, [illegible] ಕಾಲೋನಿ, ರಾಜೀವ ನಗರ, ಬಡಗಬೆಟ್ಟು ಅಂಚೆ, ಪರ್ಕಳ - 576 123.

ಸೃಷ್ಟಿಸಿದ ಪಾತ್ರಗಳಲ್ಲಿ ಯಾವುದನ್ನೂ ಹೆಚ್ಚು ಮುದ್ದು ಮಾಡದೆ ನೈಜವಾಗಿ ಕಥೆ ಹೇಳುವ ವಿಮರ್ಶೆ ಓದುಗನಿಗೆ ಸೇರಿದ್ದೆಂದು ತಿಳಿದಿರುವುದೇ ಈ ಕಥೆಗಾರರ ಯಶಸ್ಸಿನ ಗುಟ್ಟು. 'ತರಂಗ' ವಾರಪತ್ರಿಕೆಯ ಹಿರಿಯ ಉಪಸಂಪಾದಕರಾದ ಇವರ ಇಲ್ಲಿನ ಹತ್ತು ಕಥೆಗಳು ಪ್ರಾದೇಶಿಕವಾಗಿ ಪ್ರತಿನಿಧಿಸಿದ್ದು, ಸಮಾಜದ ಒಳಿತು-ಕೆಡಕುಗಳು ಮನುಷ್ಯನ ಸ್ವಯಂಕೃತವೆಂಬ ಸತ್ಯ ಹೇಳುತ್ತವೆ.



ಭಾರತ ಗೀತ (ನೂರೊಂದು ಕವಿತೆಗಳು)

ಅಹ್ಮದ್ ಅನ್ವರ್ (ಅಬೂ ಆಸ್ಮಾ)

ಪುಟ : 142 **ಬೆಲೆ : ರೂ. 40**

ವಿಚಾರ ಪ್ರಕಾಶನ, ಪ್ರಥಮ ಮಹಡಿ, ವಿಜಯಶ್ರೀ ಮಹಲ್, ಪಾಂಡೇಶ್ವರ, ಮಂಗಳೂರು-575 001

ತಾನು ನೋಡುವ, ಅನುಭವಿಸುವ ಪ್ರತಿಯೊಂದು ಘಟನೆಗಳನ್ನೂ ಕಾವ್ಯವಾಗಿ ಪರಿವರ್ತಿಸುವ ಉತ್ಸಾಹೀ ಯುವ ಕವಿ ಶ್ರೀ ಅಹ್ಮದ್ ಅನ್ವರ್. ಪರಿಸರ ಪ್ರೇಮವನ್ನು ಬೆಳೆಸಿಕೊಂಡು ಬರೆದಿರುವ ಈ ಕವನಗಳಲ್ಲಿ ಕವಿಯ ಸುಂದರ ಭಾವನೆ ಅಭಿವ್ಯಕ್ತವಾಗುತ್ತದೆ. ತನ್ನ ದೇಶಪ್ರೇಮದ ಸಂಕೇತವಾಗಿ ತನ್ನ ಚೊಚ್ಚಲ ಕೃತಿಗೆ ''ಭಾರತ'' ಗೀತವೆಂದು ಗೌರವ ತೋರಿದ್ದಾರೆ. ಈ ಕೃತಿಯನ್ನು ವಿಶ್ವಕವಿ ಮಹಾದಾರ್ಶನಿಕ ಮುಹಮದ್ ಇಕ್ಬಾಲರಿಗೆ ಅರ್ಪಿಸಿದ್ದಾರೆ.

ಸಾತ್ವಿಕ ಶಿಲ್ಪಿ ನಾಗೇಂದ್ರ ಸ್ಥಪತಿ



ಎಲ್. ಶಿವಲಿಂಗಪ್ಪ

ಪುಟ : 60 **ಬೆಲೆ : ರೂ. 15**

ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಮೇಲ್ಮನೆ, ಕನ್ನಡ ಭವನ, ಜೆ. ಸಿ. ರಸ್ತೆ ಬೆಂಗಳೂರು - 560 002

ಕಲ್ಲರಳಿಸಿ ಹೂವಾಗಿಸುವ ಶಿಲ್ಪಿಯ ಜಾಣ್ಮೆಗ ಬೆರಗಾಗದವರು ವಿರಳ. ಶಿಲ್ಪಕಲೆಗೆ ಉತ್ತಮ ಹೆಸರಿರುವ ಕರ್ನಾಟಕದ ಶಿಲ್ಪಿ ನಾಗೇಂದ್ರ ಸ್ಥಪತಿಯವರ ಶಿಲ್ಪಕಲಾ ವಿಗ್ರಹಗಳ ಬಗೆಗೆ [illegible] ಅವರ ಸಾಧನೆಗೆ, ಕುಸುರಿ ಕೆಲಸಕ್ಕೆ ಅವರು ನಿರ್ಮಿಸಿದ ಮೂರ್ತಿ [illegible] ನುಡಿಯುತ್ತವೆ

[illegible]

ಸಾದರ ಸ್ವೀಕಾರ

ದಲಿತ ಚೇತನ
(ಡಾ॥ ಮುನಿವೆಂಕಟಪ್ಪನವರ ಕುರಿತ ಲೇಖನಗಳು)
ಸಂ: ಡಾ॥ ತಿಪ್ಪೇಸ್ವಾಮಿ
ಪುಟ: ೧೧೫ ಬೆಲೆ: ರೂ.೪೦
ವಿಚಾರವಾದಿ ಪ್ರಕಾಶನ, ೧೨೪೦, ೩ನೆಯ ಕ್ರಾಸ್, ಗಂಗೆ ರಸ್ತೆ, ಕುವೆಂಪುನಗರ, ಮೈಸೂರು-೨೩.

ಮಗಳಿಗೆ ಪತ್ರ (ಪತ್ರಗಳು)
ಗಣಪತಿ ದಿವಾಣ
ಪುಟ: ೨೦೬ ಬೆಲೆ: ರೂ.೮೦
ರವಿರಾಜ ದಿವಾಣ, ದಿವಾಣ ಪ್ರಕಾಶನ
ಅಂಚೆ: ಕಟೀಲು, ಮಂಗಳೂರು-೫೭೪ ೧೪೮

ಭಾವಯಾನ (ಕವನ ಸಂಕಲನ)
ಕೆ.ಆರ್. ಪ್ರೇಮಲೀಲ
ಪುಟ: ೯೪ ಬೆಲೆ: ರೂ.೩೦

ಮಿಂಚುಗಳು (ಚುಟುಕು ಸಂಕಲನ)
ಕೆ. ಆರ್. ಪ್ರೇಮಲೀಲ
ಪುಟ: ೫೪ ಬೆಲೆ: ರೂ. ೨೦
ಮೇಲಿನ ಎರಡು ಪುಸ್ತಕಗಳ ಪ್ರಕಾಶಕರು
ಸಂವಹನ, ೧೨/೧, ೧೫೫೦ ಈವನಿಂಗ್ ಬಜಾರ್ ಹಿಂಭಾಗ, ಶಿವರಾಂ ಪೇಟೆ, ಮೈಸೂರು-೫೭೦ ೦೦೧

ನಿರಂತರ (ಕವನ ಸಂಕಲನ)
ಹೆಚ್. ಹೆಚ್. ಗಂಗಾಧರಾಚಾರ್
ಪುಟ: ೬೦ ಬೆಲೆ: ರೂ. ೨೫
ಸಾಹಿತ್ಯ ಚಿಂತನ ಪ್ರಕಾಶನ
ಹೊನ್ನವಳ್ಳಿ, ತಿಪಟೂರು ತಾ, ತುಮಕೂರು ಜಿಲ್ಲೆ

ಕೃಷ್ಣೆಯ ನೀರು ರೈತರ ಕಣ್ಣೀರು (ಲೇಖನಗಳು)
ಎನ್. ಕೆ. ಉಪಾಧ್ಯಾಯ
ಪುಟ: ೬೪ ಬೆಲೆ: ರೂ.೧೨
ಕರ್ನಾಟಕ ಪ್ರಾಂತ ರೈತ ಸಂಘ
ಬಿಜಾಪುರ ಜಿಲ್ಲಾ ಸಮಿತಿ

ಮಂದಹಾಸ (ಮಕ್ಕಳ ಕವನಗಳು)
ಗುರುರಾಜ ಬೆಣಕಲ್
ಪುಟ: ೪೮ ಬೆಲೆ: ರೂ.೧೮
ಸಿಸು ಸಂಪದ ನಂ. ೧ 'ಸಪ್ನ' ಬಿ. ಅಪಾರ್ಟ್‌ಮೆಂಟ್ಸ್, ಭವಾನಿನಗರ, ಹುಬ್ಬಳ್ಳಿ-೫೮೦ ೦೨೩

ಏರುವ ಬಾ ಕೇದಾರ ಶಿಖರ
(ಎಳೆಯರಿಗಾಗಿ ಪ್ರವಾಸ ಕಥನ)
ಲೀಲಾವತಿ ಎಸ್. ರಾವ್
ಪುಟ: ೩೦ ಬೆಲೆ: ರೂ.೧೮
ಭಾರವಿ ಪ್ರಕಾಶನ, 'ಶ್ರೀಕೃಷ್ಣ' ೮-೬೦/೧, ಕಾಟ್ಲ ಇಡ್ಯ, ಸುರತ್ಕಲ್-೫೭೪ ೧೫೮

ಕನ್ನಡ ಕಾವೇರಿ (ಮಕ್ಕಳ ಕವನಗಳು)
ಜೇನಹಳ್ಳಿ ಸಿದ್ದಲಿಂಗಪ್ಪ
ಪುಟ: ೫೬ ಬೆಲೆ: ರೂ. ೨೫
ಶ್ರುತಿ ಪ್ರಕಾಶನ, ಜೇನಹಳ್ಳಿ ಅಂಚೆ, ನ್ಯಾಮತಿ ಮಾರ್ಗ, ದಾವಣಗೆರೆ ಜಿಲ್ಲೆ-೫೭೭ ೨೨೩

ಸೂಕ್ತಿಗಳಲ್ಲಿ ಸಾಹಿತ್ಯ
ಸಂ: ಟಿ.ವಿ. ವೆಂಕಟರಮಣಯ್ಯ
ಪುಟ: ೬೪ ಬೆಲೆ: ರೂ.೧೫
ಟಿ. ವಿ. ವೆಂಕಟರಮಣಯ್ಯ, EWS - ೨೧೮ ಕೆ. ಎಚ್. ಬಿ. ಕಾಲನಿ. ೨ನೇ ಹಂತ, ೫ನೇ ಕ್ರಾಸ್ ಬಸವೇಶ್ವರ ನಗರ, ಬೆಂಗಳೂರು.

ಆರೋಗ್ಯ ದರ್ಶನ (ಜನಪದ ವೈದ್ಯಗ್ರಂಥ)
ಡಾ॥ ಆರ್. ಎಲ್. ಹೆಗಡೆ
ಪುಟ: ೧೦೨ ಬೆಲೆ: ರೂ. ೪೫
ಡಾ॥ ಆರ್. ಎಲ್. ಹೆಗಡೆ
ಕೃತಿ ಪ್ರಕಾಶನ ಸಮಿತಿ, ಶಿರಸಿ (ಉ.ಕ.)

ಎದೆಯ ನಂಟು ನೂರೆಂಟು (ಪತ್ರಗುಚ್ಛ)
ಸಂ. ಅಮೃತ ಸೋಮೇಶ್ವರ
ಪುಟ: ೭೩ ಬೆಲೆ : ರೂ. ೧೫
ಹೇಮಾಂಶು ಪ್ರಕಾಶನ
ದೇರೇಬೈಲು, ಮಂಗಳೂರು-೫೭೫ ೦೦೬.

ಸಪ್ತಸ್ವರ (ಕವನ ಸಂಕಲನ)
ಶಾರದಾ ಆರ್. ರಾವ್
ಪುಟ: ೪೮ ಬೆಲೆ: ರೂ. ೨೫
ಮೊಗವೀರ ವ್ಯವಸ್ಥಾಪಕ ಮಂಡಳಿ, ನಾನಾಭಾಯಿ ಲೇನ್, ಫೋರ್ಟ್, ಮುಂಬಯಿ-೪೦೦ ೦೦೧.

ರಾಜ್ಯಾಂಗದ ಶತ್ರುಗಳು ಯಾರು?

ರಾಜ್ಯಾಂಗದ ಇಂದಿನ ಶತ್ರುಗಳು ಬಂಡವಾಳ ಶಾಹಿಯನ್ನು ಕೊನೆಗಾಣಿಸುವ ಯೋಜನೆಯಲ್ಲಿ ತೊಡಗಿರುವ ಮೊರಡು ಕಮ್ಯೂನಿಸ್ಟರಂತೂ ಅಲ್ಲ. ಅವರನ್ನು ಇಂದು ಡಾಮ್ಲೆರ್ ಮತ್ತು ಸೀಮನ್ಸ್‌ರ ಆಡಳಿತ ಕಚೇರಿಯ ಕೊಠಡಿಗಳಲ್ಲಿ, ಡ್ರೆಸ್‌ಡೆನ್‌ನ, ಡ್ಯೂಷ ಬ್ಯಾಂಕ್‌ನ ನಿರ್ದೇಶಕ ಮಂಡಳಿಯಲ್ಲಿ ಗುರುತಿಸಬಹುದಾದ ಈ ಕಾಲದಲ್ಲಿ, ಯುವಜನ, ಮುಂಬರುವ ತಮ್ಮ ಔದ್ಯೋಗಿಕ ಜೀವನವನ್ನು ಹಾಗೂ ನಿರುದ್ಯೋಗದ ಪರಿಣಾಮವನ್ನು ಅನುಭವಿಸಿಯೂ, ಬದುಕಿ ಉಳಿಯುವ ಬಗೆ ಹೇಗೆ?

- ಗುಂಥರ್ ಗ್ರಾಸ್
೧೯೯೯ರ ನೊಬೆಲ್ ಪಾರಿತೋಷಕ ಪಡೆದ ಜರ್ಮನಿಯ ಸುಪ್ರಸಿದ್ಧ ಸಾಹಿತಿ

'ಬಂಧನ' ಎನ್ನುವ ಪದವನ್ನು 'ಸೆರೆ' ಎಂಬ ಕೀಳರ್ಥದಲ್ಲಿ ಬಳಸಬಹುದು. 'ಕರ್ತವ್ಯ' ಎಂಬ ಗೌರವಾರ್ಥದಲ್ಲೂ ಬಳಸಬಹುದು. ಬಂಧನ ಶಿಕ್ಷೆಯಾದರೆ ಸೆರೆ, ರಕ್ಷೆಯಾದರೆ ಕರ್ತವ್ಯ. ಬಂಧನಕ್ಕೊಳಪಟ್ಟವನು ನಕಾರಾತ್ಮಕವಾಗಿ 'ಬಂದಿ' ಯಾಗುತ್ತಾನೆ. ಸಕಾರಾತ್ಮಕವಾಗಿ 'ಬಂಧು'ವಾಗುತ್ತಾನೆ.

ಆಂಗ್ಲ ಪದ 'ಬೈಂಡ್'(bind), ನಾವು ಬಳಸುವ 'ಬಂಧನ' ಪದದ ಜೊತೆಗೆ ಬಾಂಧವ್ಯವನ್ನು ಇಟ್ಟುಕೊಂಡಿದೆ. ಪುಸ್ತಕದ ಬೈಂಡ್ ಗಟ್ಟಿಯಾಗಿದ್ದರೆ ಒಳಗಿರುವ ಹಾಳೆಗಳು ಸುಭದ್ರವಾಗಿರುತ್ತವೆ. ಇಲ್ಲದಿದ್ದರೆ ಬಿಡಿ ಬಿಡಿಯಾಗಿ ದಿಕ್ಕಾಪಾಲಾಗುತ್ತವೆ. ಬಂಧನವೆನ್ನುವುದೊಂದು ಕಟ್ಟುಪಾಡು, ನಿಯಮ, ಶಿಸ್ತು.

ಬಂಧನಕ್ಕೆ ವಿರುದ್ಧವಾದದ್ದು ಸ್ವಾತಂತ್ರ್ಯವಲ್ಲ, ಸ್ವೇಚ್ಛೆ. ಏಕೆಂದರೆ ಸ್ವಾತಂತ್ರ್ಯದಲ್ಲೂ ಬಂಧನಗಳಿವೆ, ಅಡೆತಡೆಗಳಿವೆ. ಸ್ವಾತಂತ್ರ್ಯಕ್ಕೆ ವಿರುದ್ಧವಾದದ್ದು ಬಂಧನವಲ್ಲ, ದಾಸ್ಯ, ಗುಲಾಮಗಿರಿ.

ಸಮಾಜವೆಂಬ ಪರಿಕಲ್ಪನೆ ಬರುವುದಕ್ಕಿಂತ ಮುಂಚೆ ಸ್ವೇಚ್ಛೆ ತಾಂಡವವಾಡುತ್ತಿತ್ತು. ಪ್ರಾಣಿ ಜೀವನಕ್ಕೂ ನಮ್ಮ ಜೀವನಕ್ಕೂ ವ್ಯತ್ಯಾಸವಿರಲಿಲ್ಲ. ಸ್ವೇಚ್ಛೆಯ ಸ್ವಾರಸ್ಯ ಸಮಸ್ಯೆಯಾಗುತ್ತಾ ಬಂದಂತೆ ಬಂಧನದ ಸ್ವಾರಸ್ಯ ಹುಟ್ಟಿಕೊಂಡಿತು, ಹಬ್ಬಿಕೊಂಡಿತು. ಕಾಡಿಂದ ಮನೆಗೆ, ಅಲೆಯಿಂದ ನೆಲೆಗೆ, ಹೆಣ್ಣಿಂದ ಹೆಂಡತಿಗೆ, ಕಚ್ಚೆಯಿಂದ 'ಟೈ'(tie) - ಇದೆಲ್ಲಾ ಬಂಧನವೆಂಬ ಬೀಜ ಮೊಳೆತು ಬೆಳೆಯಾದ ಬಗೆ.

ಬಂಧನವೆಂದೆನಿಸಿಕೊಳ್ಳದೆ ನಮ್ಮನ್ನು ಬಂಧಿಸುತ್ತಾ ಬಂದರೆ ಅದು ಸಂಬಂಧ. ತಂದೆ-ತಾಯಿ, ತಂದೆ ತಾಯಿ-ಮಗ ಮಗಳು, ಅಣ್ಣ-ತಮ್ಮ, ಅಕ್ಕ-ತಂಗಿ - ಇದೆಲ್ಲಾ ರಕ್ತ ಸಂಬಂಧ. ಗಂಡ-ಹೆಂಡತಿ ಇದರಲ್ಲಿ ಸೇರಿಕೊಂಡಿತು. ಕುಟುಂಬ ಒಂದು ಬಂಧನವಾದಂತೆ ವಿವಾಹ ಒಂದು ಬಂಧನವಾಯ್ತು. ಗುರು-ಶಿಷ್ಯ ಸಂಬಂಧ ಶಿಕ್ಷಣವನ್ನೂ ಬಂಧನವನ್ನಾಗಿಸಿತು. ನೆರೆ-ಹೊರೆ ಸಂಬಂಧ ಸಾಮಾಜಿಕ ಬಂಧನವಾಯ್ತು, ಹೊಟ್ಟೆಪಾಡಿಗಾಗಿ ಸಂಪಾದನೆ ಒಂದು ಬಂಧನವಾಯ್ತು. ನೀತಿ ನಿಯಮಗಳಿಗಾಗಿ ಧರ್ಮ ಒಂದು ಬಂಧನವಾಯ್ತು. ರಕ್ಷಣೆಗೆ, ಸ್ವಾಭಿಮಾನಕ್ಕೆ ದೇಶವೂ ಒಂದು ಬಂಧನವೇ. ಆಡಳಿತಕ್ಕಾಗಿ, ನ್ಯಾಯಕ್ಕಾಗಿ ಸರ್ಕಾರವೂ ಒಂದು ಬಂಧನವೇ. ಹೀಗೆ ಎಣಿಸುತ್ತಾಹೋದರೆ ನಮ್ಮ ಬಂಧನಗಳ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಬದುಕೇ ಒಂದು ಬಂಧನ ಎಂಬ ತಾತ್ವಿಕ ನಿಲುವಿಗೂ ಬರಬಹುದು.



ಬಂಧನವನ್ನು ವಿಧಿಯಾಗಿ ಕಲ್ಪಿಸಿಕೊಳ್ಳುವುದು ಒಂದು ಬಗೆಯ 'ಮೌಢ್ಯತನ', ನಿಧಿಯಾಗಿ ಕಲ್ಪಿಸಿಕೊಳ್ಳುವುದು ಒಂದು ಬಗೆಯ 'ಜಾಣತನ' ! ಬಂಧನದಲ್ಲಿರುವ 'ಧನ' ಪ್ರಾಮುಖ್ಯವಾಗಿ ಸಂಬಂಧಗಳು ವ್ಯಾವಹಾರಿಕವಾಗಿವೆ. ಹೀಗಾಗಿ ಹಳೆಯ ಬಂಧನಗಳು ಹೊಸ ಹೊಸ ರೂಪ ತಾಳಿವೆ, ತಾಳುತ್ತಿವೆ. ಮದುವೆ ಎಂದರೆ ವರದಕ್ಷಿಣೆ. [illegible] ದುಡಿಯುವ ವಧು ವರ ಜೋಡಿ. ಶೈಶವಾವಸ್ಥೆಯಲ್ಲಿ 'ಬೇಬಿ ಸಿಟ್ಟಿಂಗ್'ನ. ವೃದ್ಧಾಪ್ಯದಲ್ಲಿ ವೃದ್ಧಾಶ್ರಮ, ಶಿಕ್ಷಣವೆಂದರೆ ಡೊನೇಷನ್. ಉದ್ಯೋಗವೆಂದರೆ ಫಾರಿನ್. ಸಂಪಾದನೆ ಎಂದರೆ ಭ್ರಷ್ಟಾಚಾರ, ಹೆರಿಗೆ ಎಂದರೆ ರೋಗಿ ಎಂದರೆ ಮನೆಯಲ್ಲಿ ಆತ್ಮೀಯ [illegible] ಬಿಳಿ ಬಟ್ಟೆಯ ನರ್ಸುಗಳು. ಸಂಪರ್ಕವೆಂದರೆ ಪತ್ರಗಳಲ್ಲ, ದೂರವಾಣಿ. ಮನರಂಜನೆ ಎಂದರೆ ಹರಟೆಯಲ್ಲ, ದೂರದರ್ಶನ. ಮೌಲ್ಯವೆಂದರೆ ಮಾಲು. ಸಾವೆಂದರೆ ಸ್ಮಶಾನಕ್ಕೆ ಶವ ಸಾಗಿಸುವ ಲಾರಿ !

ಹೀಗೆ ಮಾನವೀಯ ಸಂಬಂಧಗಳು ಕಳಚುತ್ತಾ, ಧನಾಧಾರಿತ ಸಂಬಂಧಗಳು ಹೆಚ್ಚುತ್ತಾ, 'ಬಳಸು ಮತ್ತು ಬಿಸಾಡು' ಎಂಬ ಸಂಸ್ಕಾರಕ್ಕೆ ನಾವು ಒಗ್ಗಿಕೊಳ್ಳಲು ಪ್ರಾರಂಭಿಸಿದ್ದೇವೆ. ಕೋತಿ ಮೊಸಳೆಯ ಕಥೆಯಲ್ಲಿ ಬರುವಂತೆ ನಾವು ಕೂಡಾ ಮರದ ಮೇಲೆ ಹೃದಯವನ್ನು ಬಿಟ್ಟು ಅಲೆಯುವವರಾಗುತ್ತಿದ್ದೇವೋ [illegible] ಆಶ್ಚರ್ಯ ಪಡಬೇಕಾಗಿಲ್ಲ.

ಹಾಲಾಡಿ ಮಾರುತಿರಾವ್
[illegible]

ಹೊಸ ಸಂಸ್ಕೃತಿ !

ಮಠಾಧಿಪತಿಗಳು ತಮ್ಮ ಜನ್ಮೋತ್ಸವಗಳನ್ನು, ಪೀಠಾರೋಹಣ ಮಾಡಿದ ಸುವರ್ಣಾದಿ ಮಹೋತ್ಸವಗಳನ್ನು ವಿಜೃಂಭಣೆಯಿಂದ ಆಚರಿಸಿಕೊಳ್ಳುತ್ತಿದ್ದಾರೆ. ಅದಕ್ಕೆ ಕಟೌಟ್‌ಗಳನ್ನು ನಗರಗಳ ಬೀದಿಗಳಲ್ಲಿ ನಿಲ್ಲಿಸುವ ಮಹಾಸಂಸ್ಕೃತಿಯೂ ಬೆಳೆದಿದೆ. ಎಲೆಮರೆಯ ಕಾಯಿಗಳಲ್ಲ ಅವರು. ಬುಡದಲ್ಲೇ ದಪ್ಪನಾಗಿ ಬೆಳೆದು ನಿಂತಿರುವ ಹಣ್ಣುಗಳು. ಬಹಳಷ್ಟು ಕೊಳೆಯುತ್ತಲೂ ಇವೆ. ಈ ಸಮಾರಂಭಗಳಲ್ಲಿ ಮಂತ್ರಿಗಳೆಲ್ಲಾ ಹಾಜರಿದ್ದು ಸ್ವಾಮಿಗಳನ್ನು ಇಂದ್ರ, ಚಂದ್ರ, ದೇವೇಂದ್ರ ಎಂದು ಹೊಗಳಿ ಕಾಲಿಗೆ ಬೀಳುವ ಪದ್ಧತಿಯೂ ಇದೆ. ಪೇಜಾವರರ ನಂತರ ಹುಬ್ಬಳ್ಳಿಯ ಒಬ್ಬ ಸ್ವಾಮಿಗಳು, ಸಿದ್ಧಗಂಗೆಯ ಸ್ವಾಮಿಗಳು, ಎಲ್ಲಾ ಒಂದೇ ರೀತಿಯಲ್ಲಿ ಆಚರಣೆಗಳನ್ನು ಮಾಡಿಕೊಳ್ಳುತ್ತಾ ಬಂದಿದ್ದಾರೆ. ಆ ಬಗ್ಗೆ ಓದುಗ ಮಿತ್ರರೊಬ್ಬರ ವಿಮರ್ಶೆ ಹೀಗಿದೆ: ನೀವು ಬ್ರಾಹ್ಮಣ ಸ್ವಾಮಿಗಳನ್ನಾದರೆ ಟೀಕಿಸುತ್ತೀರಿ. ಅವರು ಸುಲಭವಾಗಿ ಕೈಗೆ ಸಿಗುತ್ತಾರೆ. ಅವರನ್ನು ಬೈದು ಬಚಾವಾಗಬಹುದು. ಬೇರೆ ಸ್ವಾಮಿಗಳ ಬಗ್ಗೆ ನಿಮ್ಮ ಟೀಕೆ ಎಲ್ಲಿ? ಅವರೂ ಪೇಜಾವರರಂತೆಯೇ ಮಾಡಲಿಲ್ಲವೇ? ನಿಮಗೆ ತಾಕತ್ತಿಲ್ಲ, ಇತ್ಯಾದಿ.

ಇದು ಪೇಜಾವರರ ಬಗೆಗಿನ ಅಭಿಮಾನವೋ, ಬ್ರಾಹ್ಮಣ ಸ್ವಾಮಿಗಳ ಬಗೆಗಿನ ಹೆಮ್ಮೆಯೋ, ಬೇರೆ ಸ್ವಾಮಿಗಳ ಬಗೆಗಿನ ಈರ್ಷೆಯೋ, ಅದು ಪ್ರಸ್ತುತವಲ್ಲ, ಸ್ವಾಮಿಗಳನ್ನು ಟೀಕಿಸಬಾರದೆಂಬ ಭಾವನೆಯೂ ಇರಬಹುದೇನೋ!

'ಹೊಸತು' ದೃಷ್ಟಿಯಲ್ಲಿ ಇದು ತಾಕತ್ತಿನ ಪ್ರಶ್ನೆಯಲ್ಲ. ತಾರತಮ್ಯದ ಮಾತಂತೂ ಇಲ್ಲವೇ ಇಲ್ಲ. ಬಯ್ಯುವ ಗೋಜಿಗೆ ಹೋಗುವುದು ನಮ್ಮ ಪದ್ಧತಿಯಲ್ಲ. ಒಬ್ಬರ ಬಗ್ಗೆ ಹೇಳಿದರೆ ಇನ್ನೊಬ್ಬರಿಗೂ ಅದು ಅನ್ವಯವಾಗುವಂತಹ ತರ್ಕ ಇದು. ಹಿಟ್ಟಿಗೆಂದು ಮಾಡಿದ ಗೊಜ್ಜು ಹುಗ್ಗಿಗೂ ಆಗುತ್ತದೆಂಬ ನಿಲುವು ನಮ್ಮದು.

- ಸಂಪಾದಕ

ಅಧಿಕ ಉತ್ಪತ್ತಿ ಬೆಳೆಗಳ ಯೋಜನೆಗಳು

ಪ್ರಾಚೀನ ಕಾಲದಿಂದಲೂ ನಮ್ಮ ರೈತರು ವರ್ಷದ ಆರಂಭ ದಿನವಾದ ಯುಗಾದಿಯಂದು ಪ್ರಸ್ತುತ ವರ್ಷದಲ್ಲಿ ಯಾವ ಯಾವ ಮಳೆ ಚೆನ್ನಾಗಿ ಆಗುತ್ತದೆ, ಯಾವ ಯಾವ ಬೆಳೆಗೆ ಬಲವಿರುತ್ತದೆ ಮತ್ತು ಯಾವ ಬೆಳೆಗೆ ಹೆಚ್ಚು ಬೆಲೆ ಬರುವುದೆಂಬುದನ್ನು ಲೆಕ್ಕ ಮಾಡಿಕೊಳ್ಳುತ್ತಾ ಬಂದಿದ್ದಾರೆ. ಸರ್ವಜ್ಞನು ಸಹ ಕೃಷಿಗೆ ಸಂಬಂಧಿಸಿದ ತನ್ನ ವಚನಗಳಲ್ಲಿ ಈ ಮಳೆ ಬೆಳೆಗಳ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾನೆ. ಇವು ತ್ರಿಕಾಲ ಸತ್ಯಗಳಾಗಿವೆ.

ಇದಕ್ಕನುಗುಣವಾಗಿ ತಮ್ಮಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಕ್ರೋಡೀಕರಿಸಿ ಯಾವ ಯಾವ ಹಂಗಾಮಿನಲ್ಲಿ ಯಾವ ಯಾವ ಬೆಳೆಯು ಎಷ್ಟು ಎಷ್ಟು ಕ್ಷೇತ್ರದಲ್ಲಿ • ಬೆಳೆಯಬೇಕೆಂದು ಯೋಚಿಸುತ್ತಿದ್ದರು. ಕೃಷಿಕರೆಲ್ಲರೂ ವರ್ಷದಲ್ಲಿ ಬರುವ ಮುಂಗಾರು ಹಂಗಾಮು, ಹಿಂಗಾರು ಹಂಗಾಮು ಮತ್ತು ಬೇಸಿಗೆ ಹಂಗಾಮು ಎಂಬ ಮೂರು ಹಂಗಾಮುಗಳಲ್ಲಿ ಬೆಳೆಯಬಹುದಾದ ಬೆಳೆಗಳ ಬಗ್ಗೆ ತಿಳಿದವರಾಗಿದ್ದರು. ವರ್ಷದಲ್ಲಿಯ ಮೂರು ಕೃಷಿ ಹಂಗಾಮುಗಳನ್ನು ಗುರ್ತಿಸಿಕೊಳ್ಳಲು ಮಳೆಯನ್ನಾಧಾರವಾಗಿಟ್ಟುಕೊಳ್ಳುತ್ತಿದ್ದರು. ಮೃಗಪಂಚಕ ಮಳೆಗಳೆಂದರೆ ಮೃಗಶಿರ, ಆರಿದ್ರ, ಪುನರ್ವಸು, ಪುಷ್ಯ, ಆಶ್ಲೇಷ. ಈ ಐದು ಮಳೆಗಳ ಅವಧಿಗೆ ಮುಂಗಾರು ಹಂಗಾಮೆಂದು ಕರೆಯುತ್ತಾರೆ. ಮಘಪಂಚಕ ಮಳೆಗಳೆಂದರೆ ಮಘ, ಪುಬ್ಬ, ಹಸ್ತ, ಉತ್ತರ, ಚಿತ್ತ. ಈ ಐದು ಮಳೆಗಳ ಅವಧಿಗೆ ಹಿಂಗಾರು ಹಂಗಾಮೆಂದು ಕರೆಯುತ್ತಾರೆ.


ಮುಂಗಾರು ಮತ್ತು ಹಿಂಗಾರು ಹಂಗಾಮುಗಳಲ್ಲಿ ಬೆಳೆಗಳನ್ನು ಮಳೆ ಆಶ್ರಯದಲ್ಲಿಯೂ ಮತ್ತು ನೀರಾವರಿ ಆಶ್ರಯದಲ್ಲಿಯೂ ಬೆಳೆಯಬಹುದು. ಆದರೆ ಬೇಸಿಗೆ ಹಂಗಾಮಿನಲ್ಲಿ ನೀರಾವರಿ ಆಶ್ರಯದಲ್ಲಿ ಮಾತ್ರ ಬೆಳೆಗಳನ್ನು ಬೆಳೆಯಲು ಸಾಧ್ಯ.

ನಮ್ಮ ರಾಜ್ಯದಲ್ಲಿ ಕಪ್ಪು ಮಣ್ಣಿನ ಭೂಮಿ ಇರುವ ಜಾಗಗಳಲ್ಲಿ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಲ್ಲಿ ಎರಡು ಬೆಳೆಗಳನ್ನು ಬೆಳೆಯಲು ಸಾಧ್ಯ. ಮುಂಗಾರು ಮತ್ತು ಹಿಂಗಾರು ಹಂಗಾಮುಗಳಲ್ಲಿ ಅಕ್ಕಡಿ ಬೆಳೆಗಳನ್ನು ಬೆಳೆಯುವ ಯೋಜನೆಯೂ ಮೊದಲಿನಿಂದಲೇ ರೂಢಿಯಲ್ಲಿರುತ್ತದೆ. ಉದಾಹರಣೆಗೆ ಹೇಳುವುದಾದರೆ, ಮುಂಗಾರು ಜೋಳದ ಬೆಳೆಯಲ್ಲಿ ನಾಲ್ಕು ಸಾಲಿಗೆ ಒಂದು ಸಾಲಿನಂತೆ ಬೇಳೆಕಾಳು ಬೆಳೆಗಳಾದ ಹೆಸರು, ಅಲಸಂದಿ, ಅವರೆ, ಮಡಿಕೆ ಹುರಳಿ ಮುಂತಾದವುಗಳನ್ನು ಬೆಳೆಯುತ್ತಾರೆ. ಹಿಂಗಾರಿ ಬೆಳೆಯ ಗೋಧಿಯಲ್ಲಿ ಎಂಟು ಸಾಲಿಗೆ ಎರಡು ಸಾಲಿನಂತೆ ಕುಸುಬೆ, ಅಗಸೆ, ಕಡಲೆ ಬೀಜಗಳನ್ನು ಅಕ್ಕಡಿ ಬೆಳೆಯನ್ನಾಗಿ ಬೆಳೆಯುತ್ತಾರೆ. ಇದಕ್ಕೆ ಅಕ್ಕಡಿ ಬೆಳೆ ಯೋಜನೆ ಎಂದು ಕರೆಯುತ್ತಾರೆ. ಮುಂಗಾರು ಮತ್ತು ಹಿಂಗಾರು ಹಂಗಾಮಿನಲ್ಲಿ ಸರಿಯಾಗಿ ಸಾಕಷ್ಟು ಮಳೆಯಾದರೆ ಕಪ್ಪು ಭೂಮಿಯಲ್ಲಿ ಮೂರು ಬೆಳೆಗಳನ್ನು ತೆಗೆಯುವ ಯೋಜನೆಯೂ ಇರುತ್ತದೆ. ಉದಾಹರಣೆಗೆ ಹೇಳುವುದಾದರೆ, ಮುಂಗಾರಿನಲ್ಲಿ ಈರುಳ್ಳಿ ಮತ್ತು ಮೆಣಸಿನ ಬೀಜವನ್ನು ಕೂಡಿಸಿ ಬಿತ್ತುತ್ತಾರೆ. ಬಿತ್ತಿದ ಮೂರು ತಿಂಗಳಲ್ಲಿ ಈರುಳ್ಳಿಯು ಕೊಯ್ಲಿಗೆ ಬರುತ್ತದೆ. ಈ ಕಾಲಕ್ಕೆ ಈರುಳ್ಳಿ ಜೊತೆಯಲ್ಲೇ ಬೆಳೆದ ಮೆಣಸಿನ ಗಿಡದ ಬೆಳೆಯು ಹೂವು-ಮೊಗ್ಗುಗಳಾಗುವ ಹಂತಕ್ಕೆ ಬಂದಿರುತ್ತದೆ. ಈರುಳ್ಳಿ ಕಿತ್ತುಕೊಂಡಮೇಲೆ ಈ ಈರುಳ್ಳಿಯ ಸ್ಥಳದಲ್ಲಿ ಮೆಣಸಿನ ಗಿಡದ ಬೆಳೆಯಲ್ಲಿ ಜವಾರಿ ಹತ್ತಿಯಾದ ಜೈದರ ಹತ್ತಿಯನ್ನು ಬಿತ್ತುತ್ತಾರೆ. ಮೆಣಸಿನ ಗಿಡದ ಬೆಳೆಯು ಕಾಯಿ ಬಿಡಹತ್ತಿದಾಗ ಅದರಲ್ಲಿ ಬಿತ್ತಿದ ಜೈದರ ಹತ್ತಿಯು ಮೊಳಕೆಯೊಡೆದು ಬೆಳೆಯಹತ್ತುತ್ತದೆ. ಹತ್ತಿ ಬೆಳೆಯು ಮೂರು ತಿಂಗಳಾದಾಗ ಅದು ಕಾಯಿ ಕಚ್ಚುವ ಕಾಲಕ್ಕೆ ಮೆಣಸಿನ ಗಿಡದ ಬೆಳೆಯು ಹುಲುಸಾಗಿ ಬೆಳೆಯುತ್ತದೆ. ಹೀಗೆ ಒಂದೇ ನೆಲದಲ್ಲಿ ಮೂರು ಬೆಳೆಗಳನ್ನು ಲಾಭದಾಯಕವಾಗಿ ಕಪ್ಪು ಭೂಮಿಯಲ್ಲಿ ಬೆಳೆಯಬಹುದು. ಒಂದು ಬೆಳೆ ಇರುವಾಗಲೇ ಅದು ಕಟಾವಾಗುವುದಕ್ಕಿಂತ ಮುಂಚಿತವಾಗಿ ಮತ್ತೊಂದು ಬೆಳೆಯನ್ನಿಟ್ಟು ಒಂದರ ನಂತರ ಒಂದು ಮೂರು ಬೆಳೆಗಳನ್ನು ಬೆಳೆಯುವ ಯೋಜನೆಗೆ ರಿಲೇ ಬೆಳೆ ಯೋಜನೆ ಎಂದು ಕರೆಯುತ್ತಾರೆ. ಗದಗ ತಾಲ್ಲೂಕಿನಲ್ಲಿ ಹುಲಕೋಟಿ ಸುತ್ತಮುತ್ತಲೂ ಮತ್ತು ಕುಂದಗೋಳ, ಸವಣೂರ, ಹಾವೇರಿ, ಬ್ಯಾಡಗಿ, ರಾಣೆಬೆನ್ನೂರು, ಹಿರೇಕೆರೂರು ತಾಲ್ಲೂಕುಗಳಲ್ಲಿ ಬೆಳಗಾವಿ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಹಾಗೂ ಚಿತ್ರದುರ್ಗದ ಕೆಲವು ತಾಲ್ಲೂಕುಗಳಲ್ಲಿಯೂ ಮಳೆ ಆಶ್ರಯದಲ್ಲಿ ಈ ಮೂರು ಬೆಳೆಗಳನ್ನು ಒಳ್ಳೆ ಲಾಭದಾಯಕವಾಗಿ ಬೆಳೆದ ಉದಾಹರಣೆಗಳುಂಟು.

ಹೆಚ್ಚು ಇಳುವರಿ ಕೊಡುವ ಅಲ್ಪಾವಧಿಯ ಗಿಡ್ಡ ತಳಿಗಳ ಹಾಗೂ ಸಂಕೀರ್ಣ ತಳಿಗಳ ಸಂಶೋಧನೆಯಾದಾಗಿನಿಂದ ಹಾಗೂ ನೀರಾವರಿ ಸೌಲಭ್ಯ ಹೆಚ್ಚಾದಾಗಿನಿಂದ ವರ್ಷದಲ್ಲಿ ಒಂದೇ ಜಮೀನಿನಲ್ಲಿ ಮೂರು ಬೆಳೆ ಹಾಗೂ ಅದಕ್ಕೂ ಹೆಚ್ಚಾಗಿ ನಾಲ್ಕು ಬೆಳೆಗಳನ್ನು ಲಾಭದಾಯಕವಾಗಿ ಬೆಳೆಯಲು ಸಾಧ್ಯವಾಗಿದೆ. ಇದಕ್ಕೆ ಬಹು ಬೆಳೆ ಯೋಜನೆಯೆಂದು ಕರೆಯುತ್ತಾರೆ. ಎಪ್ಪತ್ತರ ದಶಕದಲ್ಲಿ ಅನೇಕ ಜಿಲ್ಲೆಗಳಲ್ಲಿ ರಾಷ್ಟ್ರೀಯ ಯೋಜನೆಯಡಿ ಈ ಬಹು ಬೆಳೆ ಯೋಜನೆಯ ಪ್ರಾತ್ಯಕ್ಷಿಕೆಗಳನ್ನು ಮಾಡಿ ಇದು ಒಳ್ಳೆಯ ಲಾಭದಾಯಕ ಮತ್ತು ಹೆಚ್ಚು ಉತ್ಪತ್ತಿ ಕೊಡುವಂತಹುದೆಂದು ರೈತರಿಗೆ ಮನಗಾಣಿಸಲಾಯಿತು. ಇನ್ನೂ ಕೆಲವು ಕಡೆಗೆ ಒಂದೇ ಜಾಗದಲ್ಲಿ ಒಂದೇ ಕಾಲಕ್ಕೆ ಬೇರೆ ಬೇರೆ ಎತ್ತರದ ಬೆಳೆಗಳನ್ನು ಲಾಭದಾಯಕವಾಗಿ ಬೆಳೆಯುತ್ತಾರೆ. ಉದಾಹರಣೆಗೆ ಹೇಳುವುದಾದರೆ, ನೀರಾವರಿ ಆಶ್ರಯದಲ್ಲಿ ಹತ್ತು ಹನ್ನೆರಡು ವರ್ಷದ ತೆಂಗಿನ ಬೆಳೆಯಲ್ಲಿ ಆರು ಅಡಿ ಅಂತರದಲ್ಲಿ ಬಾಳೆಯ ಬೆಳೆಯನ್ನು ಬೆಳೆಯುತ್ತಾರೆ. ಈ ಬಾಳೆಯ ಸಾಲುಗಳ ಮಧ್ಯದಲ್ಲಿ ಒಂದರಿಂದ ಒಂದೂವರೆ ಅಡಿ ಸಾಲುಗಳ ಅಂತರದಲ್ಲಿ ಶುಂಠಿ ಅಥವಾ ಅರಿಶಿನ ಬೆಳೆಯನ್ನು ಬೆಳೆಯುತ್ತಾರೆ. ಇದಕ್ಕೆ ಬಹುಮಹಡಿ ಯೋಜನೆಯೆಂದು ಕರೆಯುತ್ತಾರೆ. ನಮ್ಮ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ನೀರಾವರಿಯ ಸೌಕರ್ಯವಿದ್ದಲ್ಲಿ ತೆಂಗಿನಲ್ಲಿ, ಅದಕ್ಕೂ ಕಡಿಮೆ ಎತ್ತರವಿರುವ ಬಾಳೆಯನ್ನು ಮತ್ತು ಈ ಬಾಳೆಯ ಮಧ್ಯಂತರದಲ್ಲಿ ಬಾಳೆಗಿಂತ ಕಡಿಮೆ ಎತ್ತರವಿರುವ ಶುಂಠಿ ಅಥವಾ ಅರಿಶಿನದ ಬೆಳೆಯನ್ನು ಬೆಳೆದು ಲಾಭ ಪಡೆದವರಿದ್ದಾರೆ. ರೈತರು ಹೊಸ ವರ್ಷದ ಪ್ರಾರಂಭದ ದಿನವಾದ ಯುಗಾದಿಯ ಪಾಡ್ಯದಿಂದಲೇ ತಮ್ಮ ಸಂಪನ್ಮೂಲಗಳ ಅನುಕೂಲಕ್ಕೆ ಸರಿಯಾಗುವಂತೆ ಮಳೆಯಾಶ್ರಯದಲ್ಲಿಯೂ ನೀರಾವರಿ ಆಶ್ರಯದಲ್ಲಿಯೂ ಮೇಲೆ ಹೇಳಿದ ಅಕ್ಕಡಿ ಬೆಳೆ ಯೋಜನೆ, ರಿಲೇ ಬೆಳೆ ಯೋಜನೆ, ಬಹು ಬೆಳೆ ಯೋಜನೆ, ಹಾಗೂ ಬಹು ಮಹಡಿ ಯೋಜನೆಗಳನ್ನು ರೂಪಿಸಿಕೊಂಡು ಎಲ್ಲವನ್ನೂ ಪೂರ್ವಭಾವಿಯಾಗಿ ಅಂದರೆ ಬೀಜ, ಗೊಬ್ಬರ, ನೀರಿನ ಅನುಕೂಲತೆ, ಸಾಗುವಳಿಗೆ ಬೇಕಾಗುವ ರಂಟೆ, ಕುಂಟೆ, ಹಿಗ್ಗುಂಟೆ, ಬಳುಗುಂಟೆ, ಕೂರಿಗೆ, ಶಡ್ಡಿ, ಕಣಿಮಿಣೆಗಳನ್ನು ಸಿದ್ಧತೆಯಲ್ಲಿಟ್ಟುಕೊಂಡು ಯೋಜನಾಬದ್ಧವಾಗಿ ಕೃಷಿಯನ್ನು ಅನುಸರಿಸಿದರೆ ಕೃಷಿ ಉತ್ಪತ್ತಿಯು ಖಂಡಿತವಾಗಿ ಹೆಚ್ಚಾಗುತ್ತದೆ.

ಕಟಗಿಹಳ್ಳಿ ಮಠ ಎಸ್. ಎಸ್.
ನಂ. ೧೨೩, ೧೬ನೇ ಕ್ರಾಸ್, ೧ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು - ೧೦

ಪ್ರದರ್ಶನ



ನೈಸ್‌ನ ಜತೆ ಒಂದು ಸಂವಾದ

ಬೆಂಗಳೂರಿಂದ ಮೈಸೂರಿಗೆ ಒಂದೂವರೆ ಗಂಟೆಯಲ್ಲಿ ಪ್ರಯಾಣ ಸಾಧ್ಯವಾಗುವಂತೆ ಹೆದ್ದಾರಿ ನಿರ್ಮಾಣ ಮಾಡುವ ಹುನ್ನಾರ ಐದು ವರ್ಷಗಳಿಂದ ಜಾರಿಯಲ್ಲಿದೆ. ಹೆದ್ದಾರಿಗಿಂತಲೂ ನಿರ್ಮಾಪಕರಿಗೆ ಅಲ್ಲಲ್ಲಿ ಬಿಡಾರ-ಗುಡಾರಗಳದ್ದೇ ಗುಂಗು. ಅಲ್ಲಿ ಹೆಂಡದ ಹೊಳೆ, ಜೂಜಿನ ತಾಣ, ಎಲ್ಲಾ ಸಾಧ್ಯ ! ಆದರೆ ಜನರ ಗತಿ? ಅತಿ ಫಲವತ್ತಾದ ಭೂಮಿ ಹೀಗೆ ನಾಶವಾಗಬೇಕೆ ?

ಎನ್. ರಮೇಶ್

ಭಾರತದಂಥ ಬಡ ದೇಶಗಳನ್ನು ನುಂಗಲು ವಸಾಹತುಶಾಹಿ ಹಾಗೂ ಸಾಮ್ರಾಜ್ಯಶಾಹಿ ಶಕ್ತಿಗಳು ಬಳಸುತ್ತಿರುವ ಉದ್ದನೆಯ ಕೈಗಳಲ್ಲಿ 'ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್' (ನೈಸ್) ಒಂದು. ಇದು ಕರ್ನಾಟಕದ ಫಲವತ್ತಾದ ಪ್ರದೇಶಗಳಲ್ಲಿ ಒಂದಾದ ಬೆಂಗಳೂರು-ಮೈಸೂರುಗಳ ನಡುವಿನ ಭೂಮಿಯನ್ನು ಕಬಳಿಸಲು ಹೊರಟಿದೆ. ಕಳೆದ ಐದು ವರ್ಷಗಳಿಂದ ಈ ಯೋಜನೆ ವಿವಾದಕ್ಕೆ ಸಿಲುಕಿದೆ : ಆದರೆ ಸರ್ಕಾರದ ಕುಮ್ಮಕ್ಕಿನಿಂದಾಗಿ ತಾನು ಸಫಲವಾಗುವುದು ಖಚಿತವೆಂಬ ವಿಶ್ವಾಸದಿಂದಲೇ ಕಂಪೆನಿ ಮುಂದುವರೆಯುತ್ತಿದೆ. ಈ ಯೋಜನೆಗೆ ಜನರ ಪ್ರತಿರೋಧವೂ ನಿಧಾನವಾಗಿ ಗಟ್ಟಿಗೊಳ್ಳುತ್ತಾ, ಸರ್ಕಾರ ಹಾಗೂ ಕಂಪೆನಿಗಳು ಅದನ್ನು ಗಮನಕ್ಕೆ ತೆಗೆದುಕೊಳ್ಳಲೇಬೇಕಾದ ಅನಿವಾರ್ಯತೆ ಉಂಟಾಗಿದೆ. ಈ ನಿಟ್ಟಿನಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಒಕ್ಕೂಟವು ನಡೆಸುತ್ತಿರುವ ಜನಜಾಗೃತಿ ಚಳುವಳಿಯನ್ನು ಕಂಡು ಕಂಪೆನಿ ಮತ್ತು ಒಕ್ಕೂಟದ ನಡುವೆ ಸಂವಾದ ಕಾರ್ಯಕ್ರಮವೊಂದು ಸರ್ಕಾರದ ವತಿಯಿಂದ ಏರ್ಪಡಿಸಲಾಗಿತ್ತು. ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರಚಾರ ವಿಭಾಗದ ರಾಜ್ಯ ಸಚಿವರಾದ ಡಾ॥ ಬಿ. ಕೆ. ಚಂದ್ರಶೇಖರ್‌ರವರ ಪ್ರಯತ್ನದಿಂದ ಈ ಕಾರ್ಯಕ್ರಮ ಫೆಬ್ರವರಿ ೨೩ರಂದು ನಡೆಯಿತು. ಈ ಚರ್ಚೆಯಲ್ಲಿ ಮಂತ್ರಿಗಳೇ 'ಮಾಡರೇಟರ್' ಆಗಿಯೂ ವ್ಯವಹರಿಸಿದರು. ಒಕ್ಕೂಟದ ಪ್ರತಿನಿಧಿಗಳೇ ಅಲ್ಲದೆ ಪತ್ರಕರ್ತರು ಹಾಗೂ ಈ ಎರಡು ನಗರಗಳ ನಡುವೆ ಜೋಡಿ ರೈಲು ಮಾರ್ಗದ ಪ್ರಸ್ತಾವನೆಯನ್ನು ಮುಂದಿಟ್ಟಿರುವ ಡಾ॥ ರೊದ್ದಂ ನರಸಿಂಹ ಮತ್ತು ಶ್ರೀ ವೆಂಕಟರಾವ್ ಹಾಗೂ ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದ ಡಾ॥ ಡಿ. ಎಂ. ನಂಜುಂಡಪ್ಪನವರೂ ಭಾಗವಹಿಸಿದರು.

ನಿರೀಕ್ಷೆಯಂತೆ ಕಂಪೆನಿಯ ಶ್ರೀ ಅಶೋಕ್ ಖೇಣಿಯವರು ಆಕರ್ಷಕ ಚಲನಚಿತ್ರದ ಮೂಲಕ ತಮ್ಮ ಯೋಜನೆಯನ್ನು ಎಲ್ಲರಿಗೂ ಪರಿಚಯಿಸಿದರು. ಯಾರೇ ಆಗಲಿ ತಮ್ಮ ಈ ಯೋಜನೆಯನ್ನು ಸ್ವಾಗತಿಸಲೇಬೇಕು ಎನ್ನುವ ಆತ್ಮವಿಶ್ವಾಸ ಅವರ ಮಾತುಗಳಲ್ಲಿ ಪ್ರಾರಂಭಕ್ಕೆ ಕಾಣುತ್ತಿತ್ತು. ಒಕ್ಕೂಟದ ಪ್ರತಿನಿಧಿಗಳು ತಮ್ಮ ಕೆಲವು ಪ್ರಶ್ನೆಗಳಿಗೆ ಉತ್ತರಗಳನ್ನು ಬಯಸಿ ಆ ಸಭೆಗೆ ಹೋಗಿರಲಿಲ್ಲ; ಬದಲಾಗಿ ಆ ಯೋಜನೆಗೆ ತಮ್ಮ ವಿರೋಧವನ್ನು, ಅದರ ಆಧಾರವನ್ನು ಸ್ಪಷ್ಟ ಮಾತುಗಳಲ್ಲಿ ಸಂಬಂಧಪಟ್ಟವರಿಗೆ ತಿಳಿಸಲು ಹೋಗಿದ್ದರು. ಈ ಸಂದರ್ಭದಲ್ಲಿ ಅವರು ಎತ್ತಿದ ಹಲವು ಪ್ರಶ್ನೆಗಳಿಗೆ ಬಂದ ಉತ್ತರಗಳು ಕೇವಲ ಹಾರಿಕೆಯ ರೀತಿಯವೇ ಆಗಿದ್ದವೇ ಹೊರತು ನಿರ್ದಿಷ್ಟ ರೂಪ ಪಡೆದಿರಲಿಲ್ಲ. ಕಾರಣ, ಅವು ವಿವರಗಳ ಕುರಿತಾದ ಪ್ರಶ್ನೆಗಳು ಮಾತ್ರ ಆಗಿರಲಿಲ್ಲ; ಆ ಕಂಪೆನಿಯು ಪ್ರಸ್ತುತಪಡಿಸುತ್ತಿರುವ ಅಭಿವೃದ್ಧಿಯ ಮಾದರಿಯನ್ನು ಪ್ರಶ್ನಿಸುವ ನಿಲುವುಗಳಾಗಿದ್ದವು.

ಕರ್ನಾಟಕದ ಜನತೆಯ 'ಅಭಿವೃದ್ಧಿಗೆ ಪೂರಕ' ವಾಗುವ ಈ ಯೋಜನೆಯು ತನ್ನ ಹೆದ್ದಾರಿಯಲ್ಲಿ ಸಾಮಾನ್ಯ ಜನರಿಗೆ ಪ್ರವೇಶವನ್ನೂ ನಿರಾಕರಿಸುತ್ತದೆ. ಆ ದಾರಿಯನ್ನು ಬಳಸುವವರು ಅದಕ್ಕೆ ಸುಂಕ ಕಟ್ಟಬೇಕು. ಇಂಥ ಯೋಜನೆಯಿಂದ ಸಾಮಾನ್ಯರಿಗಾಗುವ ಪ್ರಯೋಜನ ವೇನು ಎಂಬ ಪ್ರಶ್ನೆಗೆ ಉತ್ತರವಾಗಿ ಕೆಲವು ನೂರು ಜನರಿಗೆ ಅಲ್ಲಿ ಉಪನಗರಗಳು ಹಾಗೂ ಹೆದ್ದಾರಿಯ ನಿರ್ಮಾಣದ ಸಮಯದಲ್ಲಿ ಪ್ರತ್ಯಕ್ಷವಾಗಿ ಹಾಗೂ ಒಂದು ಲಕ್ಷ ಜನರಿಗೆ ಪರೋಕ್ಷವಾಗಿ ಕೆಲಸ ಸಿಗುತ್ತದೆಂಬ ಉತ್ತರ ಬಂತು. ಆದರೆ ಅಲ್ಲಿ ಲಭ್ಯವಿರುವ ಕೆಲಸದ ರೂಪವೇನು? ಆ ಹಳ್ಳಿಗಳವರಿಗೆ ಸಿಗುವ ಕೆಲಸವೆಂದರೆ ಕೂಲಿ ಕೆಲಸ ಮಾತ್ರ; ಅದೂ ತಮ್ಮದೇ ಆದ ಭೂಮಿಯಲ್ಲಿ ಇತರರಿಗಾಗಿ ದುಡಿಯಬೇಕಾದ ಅನಿವಾರ್ಯತೆ! ದೊಡ್ಡ ರೈತ ಸಣ್ಣ ರೈತನಾಗಿಯೂ, ಸಣ್ಣ ರೈತ ಭೂಹೀನ ಕಾರ್ಮಿಕನಾಗಿಯೂ, ಭೂಹೀನ ಕಾರ್ಮಿಕ ನಿರ್ಗತಿಕನಾಗಿಯೂ ಮಾರ್ಪಾಡಾಗುವುದಕ್ಕೆ ವಿಪುಲ ಅವಕಾಶವಿದೆ. ಈಗಾಗಲೇ ದೇಶದ ಹಲವು ಕಡೆ ಕೈಗೊಳ್ಳಲಾದ ಅಭಿವೃದ್ಧಿ ಯೋಜನೆಗಳ ಪರಿಣಾಮವಾಗಿ ಇಂಥ ವಿದ್ಯಮಾನಗಳು ಘಟಿಸಿರುವುದು ನಮ್ಮ ಕಣ್ಣಮುಂದಿದೆ.

ಯೋಜನೆಗೆ ಒಟ್ಟು ೨೦,೦೦೦ ಎಕರೆಯಷ್ಟು ಭೂಮಿಯನ್ನು ಬಳಸಲಾಗುತ್ತಿದ್ದು, ಅದರಲ್ಲಿ ಉಪ ನಗರಗಳಿಗೆ ಬಳಕೆಯಾಗುವ ಭೂಮಿಯದೇ ಸಿಂಹಪಾಲು. ಈ ಉಪನಗರಗಳು ಯೋಜನೆಯ ಭಾಗವಾಗಿದ್ದರಿಂದಲೇ ಇದನ್ನು ಕಂಪೆನಿಯು ಕೈಗೆತ್ತಿಕೊಂಡಿತು ಎಂಬುದನ್ನು ಒಂದು ಪ್ರಶ್ನೆಗೆ ಉತ್ತರವಾಗಿ ಖೇಣಿಯವರು ಒಪ್ಪಿಕೊಂಡರು. ಅಂದರೆ ರಾಜ್ಯದ ಅಭಿವೃದ್ಧಿಗಿಂತಲೂ ಅವರಿಗೆ ಮುಖ್ಯವಾದದ್ದು 'ರಿಯಲ್ ಎಸ್ಟೇಟ್' ದಂಧೆಯಲ್ಲಿ ತಮಗೆ ಬರುವ ಲಾಭವೇ ಎನ್ನುವುದು ಸ್ಪಷ್ಟ. ಆದರೆ ಈ ಮಾತನ್ನು ಅವರು ಹೇಳಲು ಸಿದ್ಧರಿರಲಿಲ್ಲ.

ಭೂಮಿಯನ್ನು ಕಳೆದುಕೊಳ್ಳುವ ರೈತರಿಗೆ ಕೊಡುವ ಪರಿಹಾರದ ವಿಷಯದಲ್ಲಿ ಯಾವುದೂ ಸ್ಪಷ್ಟವಿಲ್ಲ. ಸರ್ಕಾರ ಮತ್ತು ಕಂಪೆನಿಗಳ ನಡುವಿನ ಒಪ್ಪಂದದ ಪ್ರಕಾರ ಸರ್ಕಾರವೇ ರೈತರಿಂದ ಭೂಮಿಯನ್ನು ವಶಪಡಿಸಿಕೊಂಡು ಕಂಪೆನಿಗೆ ವರ್ಗಾಯಿಸಬೇಕು. ಆದರೆ ಪರಿಹಾರವೆಷ್ಟು ಎಂಬುದು ಮಾತ್ರ ಯಾರೂ ಹೇಳಲು ಸಿದ್ಧರಿಲ್ಲ. ಈ ಮಧ್ಯೆ ರೈತರು ಮಾತ್ರ (ಕೆಲವರು) ತಮಗೆ ಲಕ್ಷಾಂತರ ರೂಪಾಯಿ ಹಣ ಸಿಗಬಹುದೆಂದು ಕನಸು ಕಾಣುತ್ತಿರುವುದಂತೂ ಇದೆ. ಆದರೆ ಆ ಕನಸುಗಳು ಭಗ್ನವಾದಾಗ ಈಗಾಗಲೇ ಈ ಯೋಜನೆಯ ಬಗ್ಗೆ ಕಂಗಾಲಾಗಿ ಆತ್ಮಹತ್ಯೆ ಮಾಡಿಕೊಂಡಿರುವ ಕುದುರೆಗುಂಡಿಯ ಬಸವರಾಜನದೇ ಗತಿ ಅವರಿಗೂ ಕಾದಿರುತ್ತದೆ. ಈ ಆತ್ಮಹತ್ಯೆಯ ಪ್ರಸ್ತಾಪ ಮಾಡಿದಾಗ ಅದೊಂದು ವೈಪರೀತ್ಯದ ನಿದರ್ಶನ ಎಂದು

ಅಮೃತ ಹಸ್ತ

ಚುನಾವಣೆ ಬಂದಿತು,
ರಾಜಕಾರಣಿಗಳ ಮನೆ
ಬಾಗಿಲಿಗೆ ತಂದಿತು.

ಕೈ ಜೋಡಿಸಿದನಾತ,
''ನಿಮ್ಮ 'ಅಮೃತ ಹಸ್ತ'ದಿಂದ
ನನಗೇ ಓಟುಕೊಡಿ'' ಎನ್ನುತ.

ಕೆಲವರು, ಓಟು ಕೊಟ್ಟರು; ಮತ್ತೆ
ಕೆಲವರು, ಕೈ ಕೊಟ್ಟರು
ಎರಡನ್ನೂ ತಮ್ಮ
'ಅಮೃತ ಹಸ್ತ' ದಿಂದಲೇ
ಪೂರೈಸಿದರು.



ಪ್ರವೀಣಕುಮಾರ್.ಡಿ.

ನೋಡಲಾಯಿತೇ ಹೊರತು ಅದೊಂದು ಮಾನವೀಯ ದುರಂತವೆಂಬ ದೃಷ್ಟಿಯೇ ಕಾಣಲಿಲ್ಲ.

ಇನ್ನು ಈ ಭೂಮಿಯನ್ನು ಕಳೆದುಕೊಂಡ ರೈತರ ಪುನರ್ವಸತಿಗಾಗಿ ಯಾವ ಯೋಜನೆ ಸಿದ್ಧವಾಗಿದೆಯೆಂದರೆ ಕಂಪೆನಿ ಸರ್ಕಾರದ ಕಡೆ ಕೈ ತೋರಿಸುತ್ತದೆ. ''ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳಲಾಗುತ್ತದೆ''. ಎಂದು ಹೇಳುತ್ತದೆ. ದೇಶದ 'ಪುನರ್ವಸತಿ ಚರಿತ್ರೆ' ಹಲವು ಸಂದರ್ಭಗಳಲ್ಲಿ ಎಷ್ಟು ವಿಕೃತವಾಗಿದೆ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯವೇ. ಕರ್ನಾಟಕದಲ್ಲಿಯೇ ಇಂಥ ಕೆಟ್ಟ ಉದಾಹರಣೆಗಳು ಸಾಕಷ್ಟಿವೆ. ಇಂಥ ಪರಿಸ್ಥಿತಿಯಲ್ಲಿ ರೈತರು ಯಾವ ಖಾತ್ರಿಯಿಂದ ತಮ್ಮ ಪುನರ್ವಸತಿಯಾಗುತ್ತದೆ ಎಂದು ನಂಬಬೇಕೆಂಬ ಪ್ರಶ್ನೆಗೆ ಉತ್ತರ ಸಿಗಲಿಲ್ಲ.

ಈ ಹೆದ್ದಾರಿಯ ಜತೆಯಲ್ಲಿಯೇ ಈಗಾಗಲೇ ಇರುವ ಎರಡು ರಾಜ್ಯ ಹೆದ್ದಾರಿಗಳು ಮತ್ತು ರೈಲು ಮಾರ್ಗಗಳನ್ನು ಅಭಿವೃದ್ಧಿಪಡಿಸಿದರೆ ತಮ್ಮ ಯೋಜನೆ, ಆ ಮೂಲಕ ತಮ್ಮ ಕಂಪೆನಿ 'ಸತ್ತು ಹೋಗುತ್ತ'ದೆಂಬ ಮಾತನ್ನು ಖೇಣಿ ಹೇಳಿದರು. ಅಲ್ಲದೆ ಈ ಎರಡು ಹೆದ್ದಾರಿಗಳು ಮತ್ತು ರೈಲು ಮಾರ್ಗಗಳ ಅಭಿವೃದ್ಧಿಗೆ ತಮ್ಮ ಬೆಂಬಲವನ್ನೂ ಸೂಚಿಸಿದರು! ಬಂಡವಾಳಶಾಹಿಯ ಮುಖಗಳನ್ನು ಕಂಡ ಯಾರಿಗಾದರೂ ಈ ವಿರೋಧಾಭಾಸದ ಹಿಂದಿನ ಸತ್ಯ ಗೊತ್ತಾಗಲೇಬೇಕು. ನಷ್ಟ ಉಂಟಾಗಬಲ್ಲ ಯಾವುದೇ ಯೋಜನೆಗೂ ಇವರು ಕೈ ಹಾಕುವುದಿಲ್ಲ. ಈಗ ನಷ್ಟ ಉಂಟಾದರೂ ಪರವಾಗಿಲ್ಲ ಎನ್ನುತ್ತಾರೆಂದರೆ ಅಲ್ಲಿ ರಹಸ್ಯ ಅಡಗಿರುವುದು ಐದು ಉಪನಗರಗಳಿಂದ ಅವರು ಪಡೆಯುವ ಲಾಭದಲ್ಲಿ. ಆದರೂ ಈ ಮಾತನ್ನೂ ಖೇಣಿಯವರು ನೇರವಾಗಿ ಹೇಳಲಾರರು.

ಸರ್ಕಾರವೂ ಈ ಸಂದರ್ಭದಲ್ಲಿ ಕಂಪೆನಿಯ ಪರ ವಕಾಲತ್ತು ನಡೆಸುತ್ತಿರುವುದು ಸ್ಪಷ್ಟ. ದೇವೇಗೌಡರ ಸರ್ಕಾರದ ಕಾಲದಿಂದ ಇಂದಿನವರೆಗೂ ಎಲ್ಲ ಸರ್ಕಾರಗಳೂ ಈ ಯೋಜನೆಯ ಪರವಾಗಿಯೇ ಇವೆ. ನೂತನ ಆರ್ಥಿಕ ನೀತಿಯಾದ ಉದಾರೀಕರಣ ಹಾಗೂ ಖಾಸಗೀಕರಣಗಳ ಭಾಗವಾಗಿಯೇ ಈ ಬೆಂಬಲ ಕಂಪೆನಿಯವರಿಗೆ ಸಿಗುತ್ತಿದೆ. ಈಗಾಗಲೇ ಹಲವಾರು ಪರಿಣತರು ಮತ್ತು ಹಲವು ಸಂಘಟನೆಗಳು ಈ ಯೋಜನೆಗೆ ತಮ್ಮ ವಿರೋಧವನ್ನು ಸೂಚಿಸಿದ್ದಾರಾದರೂ ಇದು ಯಾವುದನ್ನೂ ಗಣನೆಗೆ ತೆಗೆದುಕೊಳ್ಳದೆ ಇತ್ತೀಚೆಗೆ ಮುಖ್ಯ ಮಂತ್ರಿಯವರು 'ಕಲ್ಯಾಣಿ' ಸಂಸ್ಥೆಯ ('ನೈಸ್'ನ ಪಾಲುದಾರ) ಬಾಬಾ ಕಲ್ಯಾಣಿಯವರಿಗೆ ತಮ್ಮ ಸರ್ಕಾರದ ನೆರವಿನ ಭರವಸೆ ನೀಡಿರುವುದು ಈ ಮಾತನ್ನು ಪುಷ್ಟೀಕರಿಸುತ್ತಿದೆ. ಸಾಮಾನ್ಯರ 'ದರಿದ್ರೀಕರಣ' ನಡೆಯುತ್ತದೆ ಎಂದು ತಿಳಿದರೂ ಇಂಥ ಯೋಜನೆಗಳನ್ನು ಜಾರಿಗೊಳಿಸುವುದರ ಮೂಲಕ ಆಳುವ ವರ್ಗ ತನ್ನ (ಶ್ರೀಮಂತರ ಪರವಾದ) ನಿಲುವನ್ನು ಕಾರ್ಯಗತಗೊಳಿಸುತ್ತಿದೆ.

ಮತ್ತೊಂದು ಆಘಾತದ ಸಂಗತಿಯೆಂದರೆ ಜೋಡಿ ರೈಲು ಮಾರ್ಗದ ಪ್ರಸ್ತಾಪ ಮಾಡಿರುವ ಪರಿಣತರಾದ ಡಾ॥ ನರಸಿಂಹ ಹಾಗೂ ಶ್ರೀ ಎಂ. ಕೆ. ಪಾಲ್ ಅವರು ತಮ್ಮ ಪ್ರಸ್ತಾಪ ಈ ಯೋಜನೆಗೆ ಪೂರಕವಾಗಿ ಇರುವುದೇ ಹೊರತು ಅದರ ಬದಲಿಯಲ್ಲ ಎಂದು ಹೇಳಿರುವುದು. ಈಚಿನ ಒಂದು ಪತ್ರಿಕಾ ಲೇಖನದಲ್ಲೂ ಅವರು ಇದನ್ನು ಪ್ರಸ್ತಾಪಿಸಿದ್ದರು. ರೈಲು ಮಾರ್ಗದ ಯೋಜನೆ ಒಕ್ಕೂಟವೂ ಸೇರಿದಂತೆ ಹಲವರು ಸೂಚಿಸುತ್ತಿರುವ ಪರ್ಯಾಯಗಳಲ್ಲಿ ಒಂದು. ಜೋಡಿ ರೈಲು ಮಾರ್ಗಕ್ಕೆ (ವಿದ್ಯುದೀಕರಣವೂ ಸೇರಿದಂತೆ) ಖರ್ಚಾಗುವುದು ೫೦೦ ಕೋಟಿ ರೂಪಾಯಿ ಮಾತ್ರ. ಇದರೊಟ್ಟಿಗೆ ಈಗಿನ ಹೆದ್ದಾರಿಯನ್ನು ಅಗಲಗೊಳಿಸುವ ಕಾರ್ಯಕ್ರಮವನ್ನೂ ಹಮ್ಮಿಕೊಂಡರೆ ಬೆಂಗಳೂರು-ಮೈಸೂರುಗಳ ನಡುವಿನ ಸಂಚಾರದ ಸಮಸ್ಯೆಯನ್ನು ಬಗೆಹರಿಸಬಹುದು. ಆದರೂ ಈ ಪರಿಣತರು ಹಾಗೂ ಯೋಜನಾ ಆಯೋಗದ ಡಾ॥ ನಂಜುಂಡಪ್ಪನವರು ರೈಲು ಮಾರ್ಗದ ಜತೆಗೆ 'ನೈಸ್' ಹೆದ್ದಾರಿಯೂ ಇರಬಹುದೆಂದು ಹೇಳಿ ಗೊಂದಲ ಹುಟ್ಟಿಸಿದ್ದಾರೆ. ಈ ಎರಡೂ ಯೋಜನೆಗಳು ಜತೆಯಲ್ಲಿಯೇ ಯಾಕೆ ಇರಬೇಕೆಂಬುದಕ್ಕೆ ಡಾ॥ ನರಸಿಂಹ ಅವರು ತಮ್ಮ ಲೇಖನದಲ್ಲಾಗಲಿ, ಆ ಸಭೆಯಲ್ಲಾಗಲಿ ಯಾವ ಸ್ಪಷ್ಟನೆಯನ್ನೂ ನೀಡಲಿಲ್ಲ. ಇದರ ಮರ್ಮವೇನೆಂದು ಅರ್ಥಮಾಡಿಕೊಳ್ಳುವುದು ಓದುಗರಿಗೆ ಬಿಟ್ಟಿದ್ದು.

ಖೇಣಿಯವರು ತಮ್ಮ ಮುಂದಿದ್ದ ಪ್ರಶ್ನೆಗಳಿಗೆ ಉತ್ತರ ನೀಡಲಾಗದಿದ್ದಾಗ ತಮ್ಮ ತ್ಯಾಗ ಹಾಗೂ ಕರ್ನಾಟಕದ ಜನತೆಯ ಬಗ್ಗೆ ತಮಗಿರುವ ಕಾಳಜಿಯ ವಿಷಯ ಮಾತನಾಡಿದರು. ಸುಮಾರು ವರ್ಷಗಳಿಂದ ತಾವು ದೂರದ ಅಮೆರಿಕದಲ್ಲಿರುವ ತಮ್ಮ ಕುಟುಂಬದ ಮುಖವನ್ನೂ ನೋಡಿಲ್ಲವೆಂದು ನೋವು ತೋಡಿಕೊಂಡರು ! ಅಯ್ಯೋ ಪಾಪ ! ತಮ್ಮ ಲಾಭದ ಮೋಹದಲ್ಲಿ ಕುಟುಂಬದ ಬಗ್ಗೆ ಸಾಂತ್ವನ ಪಡೆಯುವ ತಂತ್ರ ಸಿದ್ಧಿಸುತ್ತದೆಂದು ಬಗೆದರೇನೊ ! ಪ್ರಶ್ನೆಗಳಿಗೆ ಉತ್ತರ ನೀಡದೆ ನುಸುಳಿಕೊಳ್ಳುತ್ತಿದ್ದಾರೆಂದು ಅವರಿಗೆ ಸಭೆಯಲ್ಲಿ ನೆನಪಿಸಲಾಯಿತು. 'ಇಲ್ಲಿ ನಾನು ನಿಮಗೆ ಬೇಡವೆನಿಸಿದರೆ ಈಗಲೇ ಹೊರಟುಹೋಗುತ್ತೇನೆ', ಎಂದು ಇಂಗ್ಲಿಷಿನ ಮುನಿಸು ವಾಕ್ಯವನ್ನೂ ಖೇಣಿಯವರು ಹೇಳಿದರು. ಹೋಗಲಿ, ಯಾರು ಬೇಡವೆನ್ನುತ್ತಾರೆ ? ಸಾಮಾನ್ಯ ಜನ, ಸಾಮ್ರಾಜ್ಯಶಾಹಿ ವಿರೋಧಿ ಒಕ್ಕೂಟ ಮತ್ತು ಜನರ ನಿಜವಾದ ಏಳಿಗೆಯನ್ನು ಬಯಸುವ ಎಲ್ಲರೂ ಇದನ್ನು ಸ್ವಾಗತಿಸುತ್ತಾರೆ. ಆದರೆ ಅಷ್ಟು ಸುಲಭವಾಗಿ ಈ ಸಿಹಿ ಸುದ್ದಿ ಸಿಗಲಾರದು ಎಂದೂ ಒಕ್ಕೂಟಕ್ಕೆ ತಿಳಿದಿದೆ.

ಮೂರುಗಂಟೆಗಳ ಕಾಲ ನಡೆದ ಈ ಸಂವಾದದಲ್ಲಿ ಒಕ್ಕೂಟದ ಪರವಾಗಿ ನಗರಿ ಬಾಬಯ್ಯ, ನಗರಗೆರೆ ರಮೇಶ್, ಶಿವಸುಂದರ್, ಸಿರಿಮನೆ ನಾಗರಾಜ್, ವಾಸು, ರಾಮಕೃಷ್ಣ ಹಾಗೂ ಗೌರಿ ಭಾಗವಹಿಸಿದ್ದರು. ಸಭೆ ಮುಗಿಯುವ ಮುನ್ನ ಖೇಣಿಯವರಿಗೆ ಒಕ್ಕೂಟದ ಪರವಾಗಿ ಇಂಗ್ಲಿಷಿನಲ್ಲಿ ತಿಳಿಸಿದ ಮಾತಿದು :

''ನೀವು ಹೋಗಬೇಕೆಂದಿದ್ದರೆ ದಯವಿಟ್ಟು ಹೋಗಿ. ಈ ಯೋಜನೆ ಯಾರಿಗೂ ಬೇಕಾಗಿಲ್ಲ, ತಿಳಿಯಿತೆ ?''

ನಗರಗೆರೆ ರಮೇಶ್
ಇಂಗ್ಲಿಷ್ ಅಧ್ಯಾಪಕರು, ನ್ಯಾಷನಲ್ ಕಾಲೇಜು,
ಬೆಂಗಳೂರು - ೫೬೦೦೮೨

ಕಮ್ಯುನಿಸ್ಟ್ ಪ್ರಣಾಳಿಕೆ
ಲಂಡನ್ನಿನಲ್ಲಿ ಪ್ರಕಟವಾದ ಮೊದಲನೆಯ
ಮುದ್ರಣ ಫೆಬ್ರವರಿ 1848

ಮೊದಲ ಮುದ್ರಣ ಒಂದು ಸಾವಿರ ಪ್ರತಿಗಳು ಮಾತ್ರ

ಜರ್ಮನ್, ಇಂಗ್ಲಿಷ್, ಫ್ರೆಂಚ್, ರಷ್ಯನ್, ಸ್ಪ್ಯಾನಿಷ್.... ಭಾಷೆಗಳಲ್ಲಿ

ಲೇಖಕ ಎಂದಿರಾ? ಮಾರ್ಕ್ಸ್ ಮತ್ತು ಏಂಗಲ್ಸ್

ಆಮೇಲೆ ಇಟಾಲಿಯನ್ ಡೇನಿಷ್, ಸ್ವೀಡಿಷ್ ಫ್ಲೆಮಿಷ್, ಚೈನೀಸ್, ಚೆಕ್, ಹಂಗೇರಿಯನ್ .. ಮತ್ತು ಕನ್ನಡ

ಎಲ್ಲ ದುಡಿವ ಜನತೆಗೂ ''ವಿಶ್ವ ಕಾರ್ಮಿಕರೇ ಒಂದಾಗಿ!'' ಎಂದು ಕರೆ ನೀಡುವ ಮನಪಿ ಈ ಪ್ರಣಾಳಿಕೆ. ಕಾರ್ಮಿಕ ವರ್ಗದ ವಿಮೋಚನೆ ಕಾರ್ಮಿಕ ವರ್ಗದಿಂದಲೇ ಆಗಬೇಕೆನ್ನುವ ಕಮ್ಯುನಿಸ್ಟರ ನಿಲುವನ್ನು ಪ್ರಣಾಳಿಕೆ ಸಮರ್ಥಿಸುತ್ತದೆ. ಅದರ ಸರಳವಾದ, ಪ್ರಭಾವಶಾಲಿ. ತರ್ಕಬದ್ಧ ಚಿಂತನೆ ಇಂದಿಗೂ ತೂಕದ ಸಾಮಗ್ರಿಯಾಗಿದೆ. ಮೂಲಭೂತವಾಗಿ ಸೌಜನ್ಯಯುತ ಸಂಬಂಧಗಳಿಗೆ ತದ್ವಿರುದ್ಧವಾಗಿರುವ ಮತ್ತು ನ್ಯಾಯಸಮ್ಮತವಲ್ಲದ ಸಂಪತ್ತಿನ ಹಂಚಿಕೆಯನ್ನುಳ್ಳ ಸಮಾಜ ವ್ಯವಸ್ಥೆಯ ವಿರುದ್ಧ ನಿರ್ದಿಷ್ಟ ನಿಲುವನ್ನು ತೆಗೆದುಕೊಳ್ಳಲು ಪ್ರಣಾಳಿಕೆ ನಮ್ಮನ್ನು ಪ್ರೇರೇಪಿಸುತ್ತದೆ.

ಸರ್ಕಾರಿ ಶಿಕ್ಷಣ ಮುಗ್ಗರಿಸಿದ್ದೆಲ್ಲಿ?

೧೯೪೯ರಲ್ಲಿ ನನ್ನ ತಾಲ್ಲೂಕಿನಲ್ಲಿ ಪ್ರಪ್ರಥಮವಾಗಿ ಒಂದು ಪ್ರೌಢಶಾಲೆಯನ್ನು ತೆರೆದರು. ಉಚಿತವಾಗಿ ಭೂಮಿಯನ್ನೂ ಒಂದಿಷ್ಟು ಹಣವನ್ನೂ ಸಂಗ್ರಹಿಸಿದರೆ ಮಿಕ್ಕದ್ದನ್ನು ಜಿಲ್ಲಾ ಬೋರ್ಡ್ ಮತ್ತು ಸರ್ಕಾರ ವಹಿಸಿಕೊಂಡು ಶಾಲೆ ತೆರೆಯುವ ಸಲಹೆ. ಸಾಧಾರಣ ಸ್ಥಿತಿವಂತರೊಬ್ಬರು ಭೂಮಿ ಕೊಡುವುದಾಗಿ ಸ್ಥಳದಲ್ಲೇ ಹೇಳಿಬಿಟ್ಟರು. ಬೇರೆ ಊರಿನ ಬೇರೆ ಯಾರಾದರೂ ಮುಂದೆ ಬರುವ ಮುಂಚೆ ಹೇಳಿಬಿಡುವ ತವಕ ಅವರದು! ಸ್ವಾತಂತ್ರ್ಯ ಯೋಧರೂ, ಹಿರಿಯರೂ, ಸಂಪನ್ನ ಶ್ರೀಮಂತರೂ ಜತೆ ಸೇರಿ ಊರಿನಲ್ಲೂ, ತಾಲ್ಲೂಕಿನಲ್ಲೂ ಜನರಿಂದ ಕೊಡುಗೆ ವಸೂಲು ಮಾಡಿ ಹಣ ಕೂಡಿಸಿದರು. ಅವರ ತ್ಯಾಗ, ಪ್ರೀತಿ, ಶ್ರದ್ಧೆ ಹುಮ್ಮಸ್ಸು ಎಲ್ಲವುಗಳ ಪ್ರತೀಕವಾಗಿ ಮೂಡಿಬಂದದ್ದು ಈ ಶಾಲೆ.

ಚಿನ್ನದ ಹಬ್ಬ ಆಚರಿಸಬೇಕಾದ ಈ ಶಾಲೆ ಈಗ ಸರ್ಕಾರಿ ಪದವಿಪೂರ್ವ ಕಾಲೇಜಾಗಿದೆ. ಅದೇ ಕಟ್ಟಡ, ಅಂದಿನಂತೆಯೇ ಈಗಲೂ ಕಾಂಪೌಂಡಿಲ್ಲ, ನೀರಿನ, ಶೌಚಾಲಯದ ವ್ಯವಸ್ಥೆ ಇಲ್ಲ, ಆದರೆ ಅಂದಿದ್ದ ಕಾಡಿನ ವನರಾಶಿಯ ಸೊಬಗಿಲ್ಲ. ಎಲ್ಲವನ್ನೂ ಸವರಿಬಿಟ್ಟಿದ್ದಾರೆ ನಮ್ಮ ಸ್ವಾತಂತ್ರ್ಯೋತ್ತರ ಸಂತಾನ. ಸಾವಿರಕ್ಕೆ ಹತ್ತಿರವಾಗುವ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಂದ ಶಾಲೆಯ ಕೊಠಡಿಗಳು ತುಂಬಿ ತುಳುಕುತ್ತಿವೆ. ಅಂದಿನಂತೆ ಗುರುಗಳು ತಮ್ಮ ವಿದ್ಯಾರ್ಥಿಗಳ ಪ್ರತಿಯೊಂದು ಮುಖವನ್ನು ಇಂದು ಗುರುತಿಸಲಾರರು. ಅಂದಿಗಿಂತ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಉಪಾಧ್ಯಾಯರುಗಳಿದ್ದಾರೆ. ಉಪಾಧ್ಯಾಯರ ಸಂಬಳ ಒಂದು ಲೆಕ್ಕದಲ್ಲಿ ನೂರುಪಟ್ಟಗೂ ಹೆಚ್ಚಿದೆ. ಅಂದು ಶಾಲೆ ಅನೇಕ ಬಾರಿ ಜಿಲ್ಲೆಯಲ್ಲೇ ಪ್ರಥಮಸ್ಥಾನ ಪಡೆಯುತ್ತಿದ್ದುದುಂಟು. ಉಪಾಧ್ಯಾಯರುಗಳು ಊರಿನಲ್ಲೇ ಇದ್ದುಕೊಂಡು, ಸಂತೆ ಮಾಳದಲ್ಲಿ ವ್ಯರ್ಥ ಕಾಲಹರಣ ಮಾಡುವ ವಿದ್ಯಾರ್ಥಿಯನ್ನು ಗದರಿಸುತ್ತಿದ್ದುದುಂಟು. ಅಂದು ನಮ್ಮ ಊರಿನಲ್ಲಿ ಏನೇನೂ ನಗರದ ಅನುಕೂಲಗಳಿರಲಿಲ್ಲ. ಲಾಂದ್ರ, ಕಂಬದ ಸೀಮೆ ಎಣ್ಣೆ ದೀಪ ಬೀದಿಯಲ್ಲಿ. ಆದರೂ ಈ ಉಪಾಧ್ಯಾಯರೂ ಶಿಷ್ಯರೂ ಕೂಡಿ ಫುಟ್‌ಬಾಲ್, ವಾಲಿಬಾಲ್, ಆಡುತ್ತಿದ್ದೆವು. ಈಗ ಈ ಶಾಲೆಯ ಫಲಿತಾಂಶ ಸರಾಸರಿ ಶೇಕಡ ೨೦ ರಿಂದ ೩೦. ಐವತ್ತಕ್ಕೆ ಏರಿದ್ದನ್ನೂ ಕೇಳುವುದೇ ಅಪರೂಪ. ಈ ಊರಿನಲ್ಲಿ ಶ್ರೀ ಶಿವರಾತ್ರೀಶ್ವರ ಬಾಲಕಿಯರ ಪ್ರೌಢಶಾಲೆ ಇದೆ. ಲಯನ್ಸ್ ಸಂಸ್ಥೆ ನಡೆಸುವ ಶಾಲೆಯೂ ಇದೆ. ಈ ತಾಲ್ಲೂಕಿನಲ್ಲಿ ಈಗ ೨೭ ಪ್ರೌಢಶಾಲೆಗಳಿವೆ. ಕೆಲವು ಪದವಿ ಪೂರ್ವ ಕಾಲೇಜುಗಳೂ ಒಂದೆರಡು ಪ್ರಥಮ ದರ್ಜೆ ಕಾಲೇಜುಗಳೂ ಇವೆ. ವಿಜ್ಞಾನ ಕಾಲೇಜುಗಳು ಇನ್ನೂ ಇಲ್ಲ, ಎಲ್ಲ ಕಡೆಯೂ ದಲಿತರ, ಹಿಂದುಳಿದವರ ಉಚಿತ ಹಾಸ್ಟೆಲುಗಳು ಇವೆ. ಅಂದು ಬಡತನದ ಮೇಲೆ, ಅರ್ಹತೆಯ ಮೇಲೆ, ಅರ್ಧ ಅಥವಾ ಪೂರ್ತ ಫೀ ಮಾಫಿಗೆ ಪರದಾಡುತ್ತಿದ್ದುದುಂಟು. ಈಗ ಶೇ.೬೦ ರಷ್ಟು ವಿದ್ಯಾರ್ಥಿಗಳಿಗೆ ಈ ಸೌಲಭ್ಯವಿದೆ. ಸಮವಸ್ತ್ರ, ಪುಸ್ತಕ ಪೂರೈಕೆ ಇದೆ. **ಈ ಐವತ್ತು ವರ್ಷಗಳಲ್ಲಿ ಏನೂ ಆಗಿಲ್ಲ ಎಂಬುವರು ಕೃತಘ್ನರು!**

ಈ ಊರಿನಲ್ಲಿ ಈಗ ಸಿನಿಮಾ, ಬಸ್‌ಸ್ಟಾಂಡ್, ಬ್ಯಾಂಕ್, ಸೆಟಿಲೈಟ್ ಟೆಲಿವಿಷನ್, ಸಾವಿರ ಟೆಲಿಫೋನ್, ಇಂಗ್ಲಿಷ್ ಮಿಡಿಯಂ ಶಾಲೆ, ಒಟ್ಟಿನಲ್ಲಿ ನಗರದಲ್ಲಿರುವುದೆಲ್ಲ ಇದೆ. ಆದರೂ ಇಲ್ಲಿಯ ಸುಮಾರು ೫೦ಕ್ಕೂ ಮಿಕ್ಕು ಸರ್ಕಾರಿ ನೌಕರರು, ೬೦ ಕಿಲೋ ಮೀಟರ್ 'ಸಮೀಪ'ದ ನಗರದಲ್ಲಿ ವಾಸಿಸುತ್ತಾರೆ. ನಮ್ಮ ಅಪ್ಪ ಮೇಷ್ಟ್ರು, ಆಗ ಅವರಿಗೆ ೪೨ ರೂ. ಸಂಬಳ. ಅವರಿಗೆ ಪಟ್ಟಣದಲ್ಲಿ ಮನೆ ಮಾಡುವ ತಾಕತ್ತಿರಲಿಲ್ಲ, ಅವರು ಪಾಠ ಮಾಡುವ ಶಾಲೆಯಲ್ಲೇ ನನಗೂ ಓದು. ಬಹುಶಃ ಅದಕ್ಕೆಂದೇ ಚೆನ್ನಾಗಿ ಪಾಠ ಮಾಡುತ್ತಿದ್ದರೆಂದು ಗುಮಾನಿಸೋಣವೇ? ಮುಂದೆ ನಗರದ ಓದಿಗೆ ಅನಾಥಾಲಯ, ವಾರಾನ್ನ, ಟ್ಯೂಷನ್ನಿನ ಪುಡಿಕಾಸೇ ಗತಿ. ಇಂದಿನ ಉಪಾಧ್ಯಾಯ ಪಟ್ಟಣದಲ್ಲಿ ಆಸ್ತಿ ಮಾಡಿ, ಮನೆ ಮಾಡಿ, ಮಕ್ಕಳನ್ನು ಅಲ್ಲಿಯ ಇಂಗ್ಲಿಷ್ ಶಾಲೆಯಲ್ಲೇ ಓದಿಸಬಲ್ಲಷ್ಟು ಸಂಬಳ ಬರುತ್ತದೆ. **ಬಸ್ಸು ಹಿಡಿದು ಆಗಾಗ ಹಳ್ಳಿಗೆ ಹೋಗಿ ಹಾಜರಿ ಕೊಟ್ಟು, ಆದಷ್ಟು ಬೇಗ ಬಸ್ಸು ಹಿಡಿದು ಹಿಂದಿರುಗಿದರೆ ಸಾಕು ಕೃತಾರ್ಥ!** ಅವರು ತರಗತಿಯಲ್ಲಿ ಅಷ್ಟೇನೂ ಚೆನ್ನಾಗಿ ಮುತುವರ್ಜಿ ವಹಿಸಬೇಕಾಗಿಲ್ಲ. ಅವರ ಸ್ವಂತ ಮಕ್ಕಳು ಅಲ್ಲಿ ಓದುತ್ತಿಲ್ಲವಲ್ಲ! ಜಿಲ್ಲಾ ವಿದ್ಯಾಧಿಕಾರಿಗಳನ್ನು ಕಂಡು ಈ ಮೇಷ್ಟರುಗಳಿಗೆ ಅಲ್ಲಲ್ಲೇ ಮನೆ ಕಟ್ಟಿ ಕೊಡಿ, ಅಲ್ಲೇ [illegible]ವಂತೆ ಮಾಡಿ ಅಂತ ಕೇಳಿದೆ. ಅವರು ಹೇಳುತ್ತಾರೆ: ಮಂಡ್ಯ ಜಿಲ್ಲೆಯ ಅಧಿಕಾರಿಯಾಗಿದ್ದಾಗ ಐವತ್ತಕ್ಕೂ ಮಿಕ್ಕಿ ಮನೆಗಳನ್ನು [illegible] ಅಲ್ಲಿ [illegible] ಒಲ್ಲರು. [illegible] ಹಾಗಂತ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲು [illegible] ಸಾಧ್ಯವಿಲ್ಲವಂತೆ. ರಾಜಕೀಯ [illegible] ಪಟ್ಟಣಕ್ಕೆ ವರ್ಗಾಯಿಸಿಕೊಳ್ಳುವ ಶತ ಪ್ರಯತ್ನ ಮಾಡುತ್ತಾರೆ ಸರ್ಕಾರಿ ಅಧಿಕಾರಿಗಳು. ಜಿಲ್ಲಾ ಅಧಿಕಾರಿಗಳ ಮಟ್ಟದಲ್ಲಿ ೨೦-೩೦ ಸಹಸ್ರ ರೂಪಾಯಿಗಳಷ್ಟು ಖರ್ಚೂ ಮಾಡುತ್ತಾರೆ.

ಹೀಗೇಕೆ ಆಗುತ್ತಿದೆ? ಕ್ಷೇತ್ರ ವಿಸ್ತಾರವಾದಂತೆಲ್ಲಾ ಗುಣಮಟ್ಟ ಕಡಿಮೆಯಾಗಿಬಿಡಬೇಕೇ? ಸಂಬಳ ಸವಲತ್ತು ಜಾಸ್ತಿ ಆದರೆ ಅಧ್ಯಾಪಕರ ಗುಣಮಟ್ಟ ಕಡಿಮೆಯಾಗಬೇಕೆ? ಊರಿನ ಶ್ರೀಮಂತರ ಸಂಖ್ಯೆ ಹೆಚ್ಚಿದಂತೆ, ದಾನಿಗಳು, ಸಮಾಜ ಸೇವಾಸಕ್ತರ ಸಂಖ್ಯೆ ಕಡಿಮೆಯಾಗಿಬಿಡಬೇಕೇ? ಬಸ್ಸು ಹಿಡಿಯುವ ಆತಂಕದಲ್ಲಿ ಅಧ್ಯಾಪಕರ ಶಾಲಾ ಹಾಜರಿಯಲ್ಲಿ ಬೇಜವಾಬ್ದಾರಿಯಾದರೆ ವಿದ್ಯಾರ್ಥಿಗಳ ಹಾಜರಿ ಸರಿಹೋಗುವುದು ಹೇಗೆ? ಬೆಳಿಗ್ಗೆ ತಡವಾಗಿ ಪ್ರಾರ್ಥನೆಗೆ ಬಂದುದಕ್ಕೆ ಬೆತ್ತದ ಸವಿ ನೀಡುತ್ತಿದ್ದ ನನ್ನ ಅಂದಿನ ಮುಖ್ಯೋಪಾಧ್ಯಾಯರು ಕೆಟ್ಟವರೇ? ಬೆತ್ತದ ಸೇವೆ ಇತ್ತರೆಂದು ಮುನಿಸಿಕೊಳ್ಳದೆ ಇರುತ್ತಿದ್ದ ನಮ್ಮ ಮಾತಾಪಿತೃಗಳು ಬೇಜವಾಬ್ದಾರರಾಗಿದ್ದರೇ? ಹೀಗೆ ಪ್ರಶ್ನೆಗಳನ್ನೂ ಕೇಳುತ್ತಾ ಹೋಗಬಹುದು.

ಈ ಸರ್ಕಾರಿ ಶಾಲೆಯಲ್ಲಿ ಅಭಿವೃದ್ಧಿ ಸಮಿತಿ ರಚಿಸಲಿಲ್ಲವೇಕೆ ಎಂದರೆ ಮುಖ್ಯೋಪಾಧ್ಯಾಯರು ನೂರು ಕಾರಣಗಳನ್ನು ಕೊಡುತ್ತಾರೆ: ಈ ಸಮಿತಿಯಲ್ಲಿ ಹಲವಾರು ರಾಜಕೀಯ ಪ್ರತಿನಿಧಿಗಳೇ ಇರಬೇಕಾಗಿದ್ದು ಅವರಲ್ಲಿರುವ ಭೇದ ಭಾವಗಳು, ಬಿರುಕುಗಳು, ಅಸಹಕಾರ, ಅಸಡ್ಡೆ ಇತ್ಯಾದಿ. ಈ ಸಮಿತಿಯಲ್ಲೇಕೆ ರಾಜಕೀಯ? ಇಲ್ಲಿಯ ಆಗು ಹೋಗುಗಳಲ್ಲಿ ಆಸಕ್ತಿ ಇರಬೇಕಾದವರು ನೇರವಾಗಿ ಮಾತಾಪಿತೃಗಳು, ಅಧ್ಯಾಪಕರು, ವಿದ್ಯಾಧಿಕಾರಿಗಳು, ವಿದ್ಯಾರ್ಥಿಗಳು ರಾಜಕೀಯದಲ್ಲೇ ಮುಳುಗಿರದ ಸಮಾಜ ಸೇವಾಸಕ್ತರು.

ಈ ಶಾಲೆಯ ವಾರ್ಷಿಕ ಫಲಿತಾಂಶ ಏಕೆ ಹೀಗಾಯ್ತು? ಮುಖ್ಯೋಪಾಧ್ಯಾಯರು ಹೇಳುತ್ತಾರೆ: ಉನ್ನತ ಜಾತಿಯ ವರ್ಗದ ವಿದ್ಯಾರ್ಥಿಗಳೆಲ್ಲಾ ಇತರ ಶಾಲೆಗಳಿಗೆ ಹೋಗಿಬಿಡುತ್ತಾರೆ. ನಮ್ಮಲ್ಲಿ ಶೇ. ೭೦ ಕ್ಕೂ ಮಿಕ್ಕು ದಲಿತರು, ಪರಿಶಿಷ್ಟರು. [illegible] **ಮಟ್ಟವೇ ಕಡಿಮೆ!** ಅವರ ಮಾತಾ [illegible] ವಿದ್ಯಾಭ್ಯಾಸದಲ್ಲಿ ಸ್ವಲ್ಪವೂ ಆಕ್ಕರೆ[illegible] ಮೀಟಿಂಗ್‌ಗೆ ಕರೆದರೆ ಬರುವುದಿಲ್ಲ. **ಶಾಲೆಯಲ್ಲಿ ಫಲಿತಾಂಶ ತರಿಸುವುದು ಉಪಾಧ್ಯಾಯರ ಜವಾಬ್ದಾರಿಯಲ್ಲ!** ವಿಚಾರಿಸಲು ಹೋಗಿದ್ದ ಹಳೆಯ ವಿದ್ಯಾರ್ಥಿಗಳು ಕಟುವಾಗಿ ಟೀಕಿಸಲು [illegible]

ನೆರಳು

ಸೂರ್ಯನಿಗೂ
ಕತ್ತಲೆಗೂ
ವೈರವೆ?
ಅದು ಅವನ ನೆರಳೇ
ಅಲ್ಲವೇ?

ಡಾ|| ಸಿ. ಪಿ. ಕೃಷ್ಣಕುಮಾರ್
ಮೈಸೂರು-೧೧

ಒಂದು ಸ್ವಾಸ್ಥ್ಯ ಕಾದಿತ್ತು. ಮುಖ್ಯೋಪಾಧ್ಯಾಯರು ಇಲಾಖೆಯ ಹಿರಿಯ ಅಧಿಕಾರಿಗಳು ತಮಗೆ ಕಾರಣ ಕೇಳಿ ಬರೆದಿದ್ದ ಪತ್ರವನ್ನು ನಮ್ಮ ಮುಂದೆ ಇಟ್ಟರು. ಇವರಿಗಿಂತ ಕಟುವಾಗಿ ನೀವು ಟೀಕಿಸಿ ನೋಡುವ ಎಂಬ ಸವಾಲಿತ್ತು ಅವರ ನೋಟದಲ್ಲಿ. ಈ ಪತ್ರ ಎಲ್ಲಾ ಮುಖ್ಯೋಪಾಧ್ಯಾಯರಿಗೂ ಕಳುಹಿಸಿದ್ದ ಸುತ್ತೋಲೆ. ಸರ್ಕಾರಿ ಶಾಲೆಗಳೆಲ್ಲವುಗಳ ಪರಿಸ್ಥಿತಿಯೂ ಹೀಗೆಯೇ ಎಂಬಂತೆ. ಅಧ್ಯಾಪಕರ ಅಶ್ರದ್ಧೆ, ಅಸಫಲತೆ, ಅಸಮರ್ಪಕತೆ, ವೈಫಲ್ಯಗಳ ಪಟ್ಟಿ. ಬಹುಶಃ ಪ್ರತಿವರ್ಷವೂ ಇದೇ ಪತ್ರವನ್ನೇ ಕಳುಹಿಸಿ ತಮ್ಮ ಕರ್ತವ್ಯವನ್ನು ಮೇಲಧಿಕಾರಿಗಳು ನಿರ್ವಹಿಸಿದರೆ? ಮುಖ್ಯೋಪಾಧ್ಯಾಯರು ತಾವು ಬರೆದ ಪತ್ರವನ್ನು ನಮ್ಮ ಮುಂದೆ ಇಟ್ಟರು. ಕಾನೂನುಬದ್ಧವಾಗಿ ಏನೇನು ಮಾಡಬಲ್ಲೆವೋ ಅದನ್ನೆಲ್ಲಾ ಮಾಡಿದ್ದೇವೆಂಬ ಮಾತು, ಮಾತಾಪಿತೃಗಳ ವೈಫಲ್ಯದ ಮೇಲೆ ಆಪಾದನೆ, ವಿದ್ಯಾರ್ಥಿಗಳು ಬರೇ ಸ್ಕಾಲರ್‌ಷಿಪ್‌ಗೆ ಮಾತ್ರ ಬರುತ್ತಾರೆ, ಉತ್ತಮ ವಿದ್ಯಾರ್ಥಿಗಳೆಲ್ಲಾ ಬೇರೆಲ್ಲೋ ಹೋಗಿಬಿಟ್ಟಿದ್ದಾರೆ, ಇತ್ಯಾದಿ. ಎಲ್ಲಾ ಅಧ್ಯಾಪಕರ ಹೊಣೆಗಾರಿಕೆ, ವೈಫಲ್ಯದ ಒಂದಿಷ್ಟು ವಿಚಾರವೂ ಇಲ್ಲದ ಉತ್ತರ. ಈ ವಿದ್ಯಾರ್ಥಿಗಳನ್ನು ಪ್ರೌಢಶಾಲೆಗೆ ಹೋಗಲು ಪಾಸ್ ಮಾಡಿಸಿದ್ದು ಮಾಧ್ಯಮಿಕ ಶಾಲೆಯವರ ತಪ್ಪೆಂತಲೂ, ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರು ಶೇ. ೯೦ ರಷ್ಟು ಪಾಸ್ ಮಾಡಿಸಲೇಬೇಕೆಂದು ಒತ್ತಾಯ ತಮ್ಮ ಮೇಲಿದೆಯೆಂತಲೂ ಸಮರ್ಥಿಸಿಕೊಂಡರು. ಇದೇ ಸಂದರ್ಭದಲ್ಲಿ ಹಳೆಯ ವಿದ್ಯಾರ್ಥಿಗಳ ಪರವಾಗಿ ಮುಖ್ಯೋಪಾಧ್ಯಾಯರಲ್ಲಿ ಒಂದು ಮನವಿ ಮಾಡಿಕೊಳ್ಳಲಾಯಿತು. ಈ ಸಾರಿ ಜೂನ್ ತಿಂಗಳ ವೇಳೆಗೆ ಶಾಲೆಯ ಚಿನ್ನದ ಹಬ್ಬ ಆಚರಿಸುವ ಉದ್ದೇಶವಿದೆ. ದಯವಿಟ್ಟು ಉಪಾಧ್ಯಾಯರುಗಳು ಒಂದಿಷ್ಟು ಸ್ಪೆಷಲ್ ಕ್ಲಾಸುಗಳನ್ನಾದರೂ ತೆಗೆದುಕೊಂಡು, ಸ್ವಲ್ಪ ಉತ್ತಮ ಫಲಿತಾಂಶ ದೊರಕಿಸಿಕೊಂಡರೆ, ಸಾರ್ವಜನಿಕ ಸಮಾರಂಭದಲ್ಲಿ ಏನಾದರೂ ಹೇಳಿಕೊಳ್ಳಬಹುದು ಅಂತ. ಅದಕ್ಕೆ ಅವರು ಹೇಳಿದ ಮಾತು ದಂಗು ಬಡಿಸುವಂಥದು: ಬೇರೆ ಉತ್ತಮವೆನಿಸುವ ಶಾಲೆಗಳಲ್ಲಿ ಪಬ್ಲಿಕ್ ಪರೀಕ್ಷೆಯಲ್ಲಿ ಸರಿಯಾದ ಸೂಪರ್‌ವಿಷನ್ ಇಲ್ಲದೆ ಕಾಪಿ ಹೊಡೆದು, ಉತ್ತಮ ಫಲಿತಾಂಶ ಕಾಣಿಸಿಕೊಳ್ಳುತ್ತದೆ. ನಾವೂ ಹಾಗೇ ಮಾಡೋಣವೇ? ಈ ದಲಿತರ, ಬಡವರ ಸರ್ಕಾರಿ ಶಾಲೆಯ ಬಾಲಕರು ಕಾಪಿ ಹೊಡೆಯುವ ಅವಕಾಶವೂ ಇಲ್ಲದಂತೆ ದಕ್ಷ ಸೂಪರ್‌ವಿಷನ್ ನಡೆಸುವ 'ದಕ್ಷ' ಉಪಾಧ್ಯಾಯರ ಸಂಕುಲದ ಧೋರಣೆ ದಂಗು ಬಡಿಸಿ ಬಾಯಿ ಮುಚ್ಚಿಸಿತು! ಅದೇ ಶ್ರದ್ಧೆಯನ್ನು ಪಾಠ ಮಾಡುವುದರಲ್ಲೂ ತೋರಿಸಿದ್ದರೆ ಅವರ ಆರೋಗ್ಯ ಕೆಡುತ್ತಿದ್ದಿತೇನೋ!!

ಈ ಐವತ್ತು ವರ್ಷದಲ್ಲಿ ಎಲ್ಲಿಂದ ಎಲ್ಲಿಗೆ ಬಂದಿದ್ದೇವೆ ನಾವು. ಏನೆಲ್ಲಾ ಚಾಲೂಕಿ ಕಲಿತಿದ್ದೇವೆ! ಸರ್ಕಾರಿ ಅಧಿಕಾರಿ ತಾನು ಕೆಲಸ ಮಾಡುವ ಸ್ಥಳದಲ್ಲಿ ೨೪ ಗಂಟೆಯೂ ಹಾಜರಿರಬೇಕು. ಊರು ಬಿಟ್ಟು ಹೋಗಬೇಕೆಂದರೆ ಮೇಲಧಿಕಾರಿಗಳ ಅನುಮತಿ ಪಡೆಯಬೇಕು. ಹಾಗಿಲ್ಲದಿದ್ದರೆ ಶಿಕ್ಷೆ ಉಂಟು. ಅದು ಸರ್ಕಾರಿ ಅಧಿಕಾರಿಗಳ ಆಚಾರಸಂಹಿತೆ. ಹಳ್ಳಿಯ ಸರ್ಕಾರಿ ಅಧಿಕಾರಿಗಳೂ ವೈದ್ಯರೂ, ಕೆಲವೊಮ್ಮೆ ಪೊಲೀಸರೂ ಈ ನಿಯಮವನ್ನು ಮೀರುತ್ತಾರಲ್ಲ, ಇದು ಹೇಗೆ ಸಾಧ್ಯವಾಯಿತು? ಒಂದು ಹಳ್ಳಿಯ ಚಿಕ್ಕ ಸಮಾಜದ ವಿದ್ಯಾವಂತ ಪ್ರಮುಖರೆಲ್ಲಾ ದೂರ ಹೋಗಿಬಿಟ್ಟರೆ, ಆ ಸಮಾಜದ ಒಟ್ಟಾರೆ ಸಂಸ್ಕೃತಿಯ ಜೀವನದ ಗುಣಮಟ್ಟ ಹೆಚ್ಚುವುದು ಹೇಗೆ? ಈ ಸಾಕ್ಷರರು ವಿದ್ಯಾವಂತರಾದ ಕ್ರಮದಲ್ಲೇ ಏನೋ ದೋಷವಿದ್ದೀತು. ಇಲ್ಲದಿದ್ದರೆ ಇವರು ಏಕೆ ಹೀಗೆ ರಾಕ್ಷಸರಾಗಿ ಬಿಡುತ್ತಿದ್ದರು? ಜನತೆಗೆ ಇವರಿಂದ ವಿಮುಕ್ತಿ ಯಾವಾಗ, ಹೇಗೆ? ಊರಿನಲ್ಲಿ ವಾಸಿಸದಿದ್ದರೆ ಬೆಳಿಗ್ಗೆ ಊರಿಗೆ ಬಂದು 'ಡ್ಯೂಟಿ'ಯ ಹೆಸರಿನಲ್ಲಿ ಹಾಜರಾತಿ ಪುಸ್ತಕದಲ್ಲಿ ಸಹಿ ಹಾಕಲು ಬಿಡುವುದಿಲ್ಲ, ಎಂದು ಜನ ಒಟ್ಟಾಗಿ ಗಟ್ಟಿಯಾಗಿ ಹೇಳುವುದು ಯಾವಾಗ?

ಐವತ್ತು ವರ್ಷಗಳ ಹಿಂದೆ ಅಪರಂಜಿ ಎನಿಸಿದ್ದ ಈ ವಿದ್ಯಾಶಾಲೆ ಈಗ ತವರವಾಗಿ ಮಾರ್ಪಾಡಾಗಿರುವ ದುರಂತ ಪರಿಸ್ಥಿತಿಯಲ್ಲಿ, ಆಚರಿಸಬೇಕಾದ ಹಬ್ಬವನ್ನು ಚಿನ್ನದ ಹಬ್ಬವೆಂದು ಹೇಗೆ ಹೇಳುವುದು? ಈ ಸಂಸ್ಥೆಯಿಂದ ಪ್ರಯೋಜನ ಪಡೆಯಬೇಕಾದ ಸಾಧಾರಣ ಜನತೆಯ ಕರ್ತವ್ಯ ಸ್ಪಷ್ಟವಿದೆ. ತಮಗೆ ಅಗತ್ಯವಿರುವ ವಿಷಯಗಳ ಹೊಣೆಗಾರಿಕೆಯನ್ನು ತಾವೇ ವಹಿಸಿಕೊಳ್ಳಬೇಕಾದ ಕಾಲ ಬಂದಿದೆ. ಈ ತಿಳಿವಳಿಕೆಗೆ ಇಂಬುಕೊಡುವಂಥ ರೀತಿಯಲ್ಲಿ ಹಬ್ಬವನ್ನು ಆಚರಿಸಬೇಕು - ಮಾಮೂಲಿಯಂತಲ್ಲ.

ಪಾರ್ಥ
೭೧೩, ವಿಜಯ ಮ್ಯಾನ್‌ಷನ್, ೧ನೆಯ ಮುಖ್ಯರಸ್ತೆ
ಆರ್.ಪಿ.ಸಿ. ಲೇಔಟ್, ಬೆಂಗಳೂರು-೫೬೦ ೦೪೦

ಚರಿತ್ರೆ ಮತ್ತು ಚರಿತ್ರೆ

ನಿತ್ಯಾನಂದ ಬಿ. ಶೆಟ್ಟಿ

ಹತ್ತು ಜನ ಸ್ವಯಂಸೇವಕರು ಮೂರು ಗುಮ್ಮಟಗಳನ್ನು ಉರುಳಿಸಲು ೧೫ ನಿಮಿಷ ತೆಗೆದುಕೊಳ್ಳುತ್ತಾರೆ. ಹಾಗಾದರೆ ೧೦೦ ಜನ ಸ್ವಯಂಸೇವಕರು ೩೦೦೦ ಗುಮ್ಮಟಗಳನ್ನು ಉರುಳಿಸಲು ಎಷ್ಟು ನಿಮಿಷ ತೆಗೆದುಕೊಳ್ಳುತ್ತಾರೆ?

ಗಣಿತದ ಈ ಪ್ರಶ್ನೆಗೆ ನಾನೇನೂ ನಿಮ್ಮಿಂದ ಉತ್ತರವನ್ನು ನೀರಿಕ್ಷಿಸುವುದಿಲ್ಲ. ಹೀಗೊಂದು ಪ್ರಶ್ನೆ ೬ನೇ ತರಗತಿಯ ಗಣಿತ ಪಠ್ಯಪುಸ್ತಕದಲ್ಲಿ ಇರುವುದು ಸಾಮಾನ್ಯವಾದ 'ಒಂದು ಸಂಗತಿ' ಎಂದು ನಿಮಗನ್ನಿಸುತ್ತದೆಯೇ? ಆದರೆ ಪ್ರಚಲಿತ ವಿದ್ಯಮಾನಗಳ ಕುರಿತು ಕೊಂಚ ಆಸಕ್ತಿಯಿದ್ದರೂ ಸಾಕು ಇಲ್ಲಿನ ಸ್ವಯಂಸೇವಕ, ಗುಮ್ಮಟ ಉರುಳುವುದು ಎಂಬೀ ಪದಗಳು ತಕ್ಷಣ ನಿಮ್ಮನ್ನು ತಡೆಹಿಡಿಯುತ್ತವೆ. ಮತ್ತು ಗಣಿತದ ಪುಸ್ತಕದಲ್ಲಿ ಸಾಮಾನ್ಯ ಗಣಿತಕ್ಕೆ ಸಿಗದ ಒಂದು ವಾಸನೆ ನಿಮಗೆ ಹೊಡೆಯುತ್ತದೆ. ಮಧ್ಯಪ್ರದೇಶದಲ್ಲಿ ಹಿಂದೊಮ್ಮೆ ಬಿ.ಜೆ.ಪಿ. ಸರಕಾರವಿದ್ದಾಗ ಪಠ್ಯದಲ್ಲಾದ ಒಂದು 'ಪುಟ್ಟ' ಬದಲಾವಣೆ ಇದು.

ಅದೇ ಮಧ್ಯಪ್ರದೇಶದಲ್ಲಿ ಸಂಘಪರಿವಾರ ನಡೆಸುವ 'ವಿದ್ಯಾಭಾರತಿ' ಎಂಬ ಶೈಕ್ಷಣಿಕ ಸಂಸ್ಥೆಗೆ ಎಲ್ಲಿಲ್ಲದ ಮಾನ್ಯತೆ ಒದಗಿತು. ಈ ಸಂಸ್ಥೆಯ ಅಧೀನದಲ್ಲಿ ಈಗ ಎಂಟು ಸಾವಿರಕ್ಕೂ ಹೆಚ್ಚಿನ ಶಾಲೆಗಳು ಮತ್ತು ಐವತ್ತಕ್ಕೂ ಮಿಕ್ಕಿ ಕಾಲೇಜುಗಳು ಇವೆ. ಒಟ್ಟಾರೆ ಹನ್ನೆರಡು ಲಕ್ಷ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಇಲ್ಲಿ ಕಲಿಯುತ್ತಿದ್ದಾರೆ.

ಇಲ್ಲಿಯ ೫ನೆಯ ತರಗತಿಯ ಇಂಗ್ಲಿಷ್ ಪಠ್ಯ ಪುಸ್ತಕದಲ್ಲಿ ಒಂದು ಕಡೆ ತಾಜ್‌ಮಹಲ್ ಫೋಟೋ ಇದೆ. ಅದರ ಕೆಳಗಡೆ 'ಇದೊಂದು ಸುಂದರ ಕಟ್ಟಡ' ಎಂದಷ್ಟೇ ಬರೆಯಲಾಗಿದೆ. ಅದರ ಪಕ್ಕ ಒಂದು ಆಲ್ಸೇಷಿಯನ್ ನಾಯಿಯ ಚಿತ್ರವಿದೆ. ಅದರ ಕೆಳಗಡೆ 'ಟಿಪ್ಪು ಒಬ್ಬ ಕ್ರೂರ ನಾಯಿಯಂತಿದ್ದ' ಎಂದು ಬರೆಯಲಾಗಿದೆ. 'ಗೌರವ ಗಾಥಾ' ಎನ್ನುವ ೪ನೆಯ ತರಗತಿಯ ಚರಿತ್ರೆಯ ಪುಸ್ತಕ 'ಕುತುಬ್‌ಮಿನಾರ್'ನ್ನು ಸಮುದ್ರಗುಪ್ತ ನಿರ್ಮಿಸಿದ, ಇದರ ಮೊದಲ ಹೆಸರು ವಿಷ್ಣುಸ್ತಂಭಂ, ಎಂದು ಹೇಳುತ್ತದೆ.

ಬಿ.ಜೆ.ಪಿ. ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಸಹಸ್ರಮಾನದ ಚಿಂತಕ ಎಂದು ಖ್ಯಾತನಾದ ಕಾರ್ಲ್ ಮಾರ್ಕ್ಸ್‌ನ ಕುರಿತು ಲೇಖನವೊಂದನ್ನು ಪಠ್ಯಪುಸ್ತಕದಿಂದ ಕಿತ್ತು ಹಾಕಿಸಿತು. ಸರಕಾರಿ ಅಂಗಸಂಸ್ಥೆಗಳಾಗಿದ್ದುಕೊಂಡು ಜನಾಭಿಪ್ರಾಯವನ್ನು ರೂಪಿಸುವ ಕೆಲವೊಂದು ಸಂಸ್ಥೆಗಳಲ್ಲಿದ್ದ ಜಾತ್ಯಾತೀತ ಮನೋಭಾವದ ಕೆಲವರನ್ನು ತೆಗೆದು ಆ ಜಾಗಕ್ಕೆ ತಮಗನುಕೂಲಕರವಾದ ವ್ಯಕ್ತಿಗಳನ್ನು ತಂದು ನೇಮಿಸಲಾಯಿತು. ಇವೆಲ್ಲವನ್ನೂ ಮಾಮೂಲು ಘಟನೆಗಳೆಂದು ಉಪೇಕ್ಷಿಸಿದರೆ ಈ ದೇಶಕ್ಕೆ ಒದಗಲಿರುವ ಬಲುದೊಡ್ಡ ಗಂಡಾಂತರವನ್ನು ಅಲಕ್ಷಿಸಿದಂತೆ.

ಬಿ.ಜೆ.ಪಿ. ತಾನಂದುಕೊಂಡ ಗುರಿಯನ್ನು ಸಾಧಿಸುವುದಕ್ಕಾಗಿಯೇ ಡಾ॥ ಮುರಲೀ ಮನೋಹರ ಜೋಷಿಯನ್ನು ಈ ಇಲಾಖೆಗೆ ಮಂತ್ರಿಯಾಗಿ ನಿಯುಕ್ತಿಗೊಳಿಸಿತು. ಅಲಹಾಬಾದ್ ವಿಶ್ವವಿದ್ಯಾನಿಲಯದ ಭೌತಶಾಸ್ತ್ರ ವಿಭಾಗದ ಪ್ರೊಫೆಸರ್ ಆಗಿದ್ದು ರಾಜಕೀಯ ಕ್ಷೇತ್ರ ಪ್ರವೇಶಿಸಿ ಸಂಸತ್ ಸದಸ್ಯನಾದ ಈತ ಆಮೇಲೂ ಸುಮಾರು ೬ ವರ್ಷ ವಿಶ್ವವಿದ್ಯಾಲಯದಿಂದ ತನ್ನ ಪ್ರೊಫೆಸರ್ ಕೆಲಸಕ್ಕೆ ತಿಂಗಳ ಸಂಬಳವನ್ನು ಪಡೆದುಕೊಂಡು ಜನರಿಗೆ ನೈತಿಕತೆಯ ಬಗ್ಗೆ ಉಪನ್ಯಾಸ ಕೊಡುವ ಮನುಷ್ಯ. ಇಂಥಾ ಮಂತ್ರಿಯ ಯಾವುದೇ ಕೆಲಸದ ಬಗ್ಗೆ ನಿಮಗೆ ಗುಮಾನಿ ಹುಟ್ಟುವ ಹಾಗಿದ್ದರೆ ನಿಮ್ಮ ಆರೋಗ್ಯ ಸ್ಥಿತಿ ಚೆನ್ನಾಗಿದೆ ಎಂದೇ ಅರ್ಥ. ಇಂಥಾ ಮಂತ್ರಿಯ ಕುಮ್ಮಕ್ಕಿನಿಂದ ನಡೆದಿರುವ ಘಟನೆಯೊಂದು ಇತ್ತೀಚೆಗೆ ವ್ಯಾಪಕ ಪ್ರಚಾರವನ್ನು ಪಡೆಯುತ್ತಿದೆ.

ಬ್ರಿಟನ್ನಿನ ಸರ್ಕಾರವು ಭಾರತದ ಸ್ವಾತಂತ್ರ್ಯ ಸಂಗ್ರಾಮ ಕುರಿತು ಗ್ರಂಥಗಳನ್ನು ಪ್ರಕಟಿಸಿದರೆ ಆದರಿಂದ ಏನು ನಿರೀಕ್ಷಿಸಬೇಕು? ಔದಾರ್ಯದಿಂದ ತಾನೇ ಸ್ವಾತಂತ್ರ್ಯವನ್ನು ಬಳುವಳಿಯಾಗಿ ಕೊಟ್ಟಿತು ಎಂಬ ಉಪದೇಶವನ್ನು ಮಾತ್ರ. ಅಂತಹ ಅಪ್ಪಟ ಸುಳ್ಳನ್ನು ಖಂಡಿಸಿದರೆ ಸಾಲದು, ಪುರಾವೆ ಸಹಿತವಾಗಿ ನಮ್ಮ ಹೋರಾಟದ ಹಂತಗಳನ್ನು ದಾಖಲುಗೊಳಿಸಬೇಕು. "ಸ್ವಾತಂತ್ರ್ಯದತ್ತ" ಮಾಲಿಕೆಯ ಪುಸ್ತಕಗಳ ಆಶಯ ಇದು. ಅದನ್ನು ಸಂಯೋಜಿಸಿದ್ದು ಭಾರತೀಯ ಇತಿಹಾಸ ಸಂಶೋಧನಾ ಮಂಡಲಿ. ಈಗ ಅದಕ್ಕೆ ಕೇಂದ್ರ ಸರ್ಕಾರದ ಕೆಲವು ನಾಯಕರಿಂದ ಪ್ರತಿರೋಧ ಕಂಡುಬಂದಿದೆ. ಅದಕ್ಕೆ ಕಾರಣವೇನಿರಬಹುದು? ಇಲ್ಲದ ದಾಖಲೆಗಳನ್ನು ಸೃಷ್ಟಿಸುತ್ತಾರೆಂಬ ಆತಂಕವಲ್ಲ, ಇರುವುದನ್ನೆಲ್ಲಾ ಪ್ರಕಟಿಸುತ್ತಾರಲ್ಲಾ, ಎಂದು. ಇದರ ಒಳಗು-ಹೊರಗುಗಳನ್ನು ಪರಿಚಯಿಸುವ ಲೇಖನ ಇಲ್ಲಿದೆ.

ಈಗ ವಿವಾದದ ಕಡೆಗೆ ಬರೋಣ : 'ಭಾರತೀಯ ಇತಿಹಾಸ ಸಂಶೋಧನಾ ಮಂಡಲಿ' ಚರಿತ್ರೆಯ ಕುರಿತ ಸಂಶೋಧನೆಗಾಗಿ ೧೯೭೦ರಲ್ಲಿ ಸ್ಥಾಪನೆಯಾದ ಒಂದು ಸಂಸ್ಥೆ. ಇದರ ಅಧ್ಯಕ್ಷರನ್ನು, ಸದಸ್ಯರನ್ನು ಸರಕಾರವೇ ನೇಮಕ ಮಾಡುತ್ತದೆ. ಪ್ರೊ॥ ಆರ್. ಎಸ್. ಶರ್ಮಾ ಈ ಸಂಸ್ಥೆಯ ಮೊದಲ ಅಧ್ಯಕ್ಷರು. ಬ್ರಿಟಿಷರು ಭಾರತದ ಕುರಿತು ತಮಗೆ ಬೇಕಾದಂತೆ ಕಟ್ಟಿದ ಇತಿಹಾಸಗಳೇ ಶಾಲಾ-ಕಾಲೇಜುಗಳ ಪಠ್ಯಗಳಾಗಿರುವುದನ್ನು ಗಮನಿಸಿದ ಈ ಸಂಸ್ಥೆ ಭಾರತದ ನೈಜ ಚರಿತ್ರೆಯನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಡಬೇಕೆಂದು ಶಾಲಾ ಕಾಲೇಜುಗಳಲ್ಲಿರುವವರಿಗೆ ಇತಿಹಾಸದ 'ಸರಿ ಓದ'ನ್ನು ಕಲ್ಪಿಸಿಕೊಡಲು ಪ್ರಯತ್ನಿಸಿತು ಮತ್ತು ಅದರಲ್ಲಿ ಯಶಸ್ವಿಯೂ ಆಯಿತು. ಆದರೆ ೧೯೭೭ರಲ್ಲಿ ಮೊರಾರ್ಜಿ ದೇಸಾಯಿಯವರ ಜನತಾ ಸರಕಾರ ಅಧಿಕಾರಕ್ಕೆ ಬಂದಾಗ ಸರಕಾರದಲ್ಲಿ ಪಾಲು ಪಡೆದಿದ್ದ ಜನಸಂಘ (ಈಗಿನ ಬಿ.ಜೆ.ಪಿ.) ಮೊತ್ತ ಮೊದಲಿಗೆ ಈ ಮಂಡಲಿಯ ಕಾರ್ಯ ಚಟುವಟಿಕೆಗಳನ್ನು ವಿರೋಧಿಸಿತು. ತತ್ಫಲವಾಗಿ ಆಗ್ಗೆ ಕೇಂದ್ರೀಯ ಶಾಲೆಗಳಲ್ಲಿ ಪಠ್ಯವಾಗಿದ್ದ ಪ್ರೊ॥ ಬಿಪಿನ್ ಚಂದ್ರರವರ 'ಸ್ವಾತಂತ್ರ್ಯ ಹೋರಾಟ', ಪ್ರೊ॥ ರೋಮಿಲಾ ಥಾಪರ್‌ರವರ 'ಆಧುನಿಕ ಭಾರತ', ಡಾ॥ ಬರುಣ್ ಡೇ ಅವರ 'ಮಧ್ಯಕಾಲೀನ ಭಾರತ' ಎಂಬುವನ್ನು ಹಿಂತೆಗೆದುಕೊಂಡಿತು.

೧೯೬೦-೭೦ರ ಸುಮಾರಿಗೆ ಬ್ರಿಟಿಷ್ ಸರಕಾರ ಭಾರತಕ್ಕೆ ಸ್ವಾತಂತ್ರ್ಯವು ತನ್ನಿಂದ ದಾನರೂಪವಾಗಿ ಕೊಡಲ್ಪಟ್ಟಿತು ಎನ್ನುವ ಚಿತ್ರಣ ಬರುವಂತೆ 'ಅಧಿಕಾರದ ಹಸ್ತಾಂತರ' ಎಂಬ ಪುಸ್ತಕ ಸರಣಿಯನ್ನು ಹೊರತಂದಿತು. ಇದಕ್ಕೆ ಪ್ರತಿಯಾಗಿ ಇತಿಹಾಸ ಮಂಡಲಿಯು ೧೯೭೦ರ ದಶಕದಲ್ಲಿ 'ಸ್ವಾತಂತ್ರ್ಯದತ್ತ' ಎಂಬ ಭಾರತದ ಸ್ವಾತಂತ್ರ್ಯ ಹೋರಾಟದ ಚರಿತ್ರೆಗೆ ಸಂಬಂಧಿಸಿದ ಯೋಜನೆಯೊಂದನ್ನು ಕೈಗೆತ್ತಿಕೊಂಡಿತು. ೧೯೩೭-೪೭ರವರೆಗಿನ ಭಾರತದ ಸ್ವಾತಂತ್ರ್ಯ ಹೋರಾಟದ ವಿವರಗಳನ್ನು ಒಳಗೊಂಡು ೧೦ ಸಂಪುಟಗಳನ್ನು ಹೊರತರುವುದು ಈ ಯೋಜನೆಯ ಉದ್ದೇಶ. ಈ ಸಂಪುಟಗಳು ಬ್ರಿಟನ್ ಸರಕಾರದ ಚರಿತ್ರೆಯ ನಿರ್ಮಿತಿಗೆ ಪ್ರತಿಯಾಗಿ ಭಾರತ, ಸ್ವಾತಂತ್ರ್ಯವನ್ನು ಬ್ರಿಟಿಷ್‌ರಿಂದ ದೇಣಿಗೆಯಾಗಿ ಪಡೆದದ್ದು ಅಲ್ಲ, ದೇಶಾದ್ಯಂತ ನಡೆದ ಬಹುಮುಖೀ ಹೋರಾಟಗಳ ಮೂಲಕ ಅದನ್ನು ಗಳಿಸಿದ್ದು ಎಂಬುದನ್ನು ತೋರಿಸುವ ಉದ್ದೇಶವನ್ನು ಹೊಂದಿವೆ. ಎಲ್ಲವೂ ಸರಿಯಾಗಿದ್ದರೆ ೧೯೭೭-೭೮ರಲ್ಲೇ ಮುಗಿಯಬೇಕೆಂದಿದ್ದ ಈ ಯೋಜನೆ ರಾಜಕೀಯ ಹಸ್ತಕ್ಷೇಪದ ಮೂಲಕವೇ ಇದುವರೆಗೆ ತೆವಳಿಕೊಂಡು ಬಂದಿದೆ.

ಈ ಯೋಜನೆಯ ಪ್ರಥಮ ಸಂಪುಟ ಪ್ರಕಟವಾದುದು ೧೯೮೫ರಲ್ಲಿ. ೧೯೩೭ರ ಅವಧಿಯ ಸ್ವಾತಂತ್ರ್ಯ ಹೋರಾಟದ ವಿವರಗಳನ್ನೊಳಗೊಂಡ ಡಾ॥ ಪಿ. ಎನ್. ಚೋಪ್ರಾರವರ ಈ ಪ್ರಥಮ ಸಂಪುಟ ನಿರೀಕ್ಷಿತ ಗುಣಮಟ್ಟದಲ್ಲಿ ಇಲ್ಲದ್ದರಿಂದ ಈ ಪುಸ್ತಕಗಳು ಧೂಳು ತಿನ್ನಬೇಕಾಯಿತು. ಅನಂತರ ೧೯೩೮ರ ಅವಧಿಯ ಸ್ವಾತಂತ್ರ್ಯ ಹೋರಾಟದ ಕಥನವನ್ನು ೧೯೮೭ರಲ್ಲಿ ಡಾ॥ ಚೋಪ್ರಾ ಸಲ್ಲಿಸಿದರು. ಆಗ ಪ್ರೊ॥ ಇರ್ಫಾನ್ ಹಬೀಬ್ ಮಂಡಳಿಯ ಅಧ್ಯಕ್ಷರಾಗಿದ್ದರು. ಆದರೆ ಈ ಸಂಪುಟ ಮತ್ತಷ್ಟು ಕುಂದು ಕೊರತೆಗಳನ್ನು ಹೊಂದಿದ್ದ ಕಾರಣ ಅದನ್ನು [illegible] ಕಳುಹಿಸಲಿಲ್ಲ. ಹೀಗೆ ಸ್ಥಗಿತಗೊಂಡ ಈ [illegible] ಮತ್ತೆ ಚಾಲನೆ ಬಂದದ್ದು ಪ್ರೊ॥ ಹಬೀಬ್ ಮತ್ತು [illegible] ಗೋಪಾಲ್‌ರನ್ನು ಮಂಡಲಿಯು ಮತ್ತೆ ಈ ಸಂಪುಟಗಳಿಗೆ ಪ್ರಧಾನ ಸಂಪಾದಕರುಗಳನ್ನಾಗಿ ನೇಮಿಸಿದಾಗ. ಆಗ ಈ ಸಂಪುಟಗಳನ್ನು ತಯಾರಿಸುವ ಹೊಣೆಯನ್ನು ಹೊತ್ತವರು ಇವರು:

ಪ್ರೊ॥ ಬಸುದೇವ ಚಟರ್ಜಿ - ೧೯೩೮; ಪ್ರೊ॥ ಮುಶರುಲ್ ಹಸನ್-೧೯೩೯; ಪ್ರೊ॥ ಕೆ. ಎನ್. ಪಣಿಕ್ಕರ್ -೧೯೪೦; ಪ್ರೊ॥ ಬಿಪಿನ್ ಚಂದ್ರ - ೧೯೪೧; ಪ್ರೊ॥ ಜ್ಞಾನೇಂದ್ರ ಪಾಂಡೆ - ೧೯೪೨; ಪ್ರೊ॥ ಪಾರ್ಥ ಸಾರಥಿ ಗುಪ್ತ - ೧೯೪೩ - ೪೪ : ಪ್ರೊ॥ ಬಿಮಲ್ ಪ್ರಕಾಶ್ - ೧೯೪೫; ಪ್ರೊ॥ ಸುಮಿತ್ ಸರ್‌ಕಾರ್ - ೧೯೪೬; ಡಾ॥ ರವೀಂದರ್ ಕುಮಾರ್ - ೧೯೪೭.

ಇವುಗಳಲ್ಲಿ ಪ್ರೊ॥ ಪಾರ್ಥಸಾರಥಿ ಗುಪ್ತ (ಈಗ ದಿವಂಗತರಾಗಿದ್ದಾರೆ) ಮತ್ತು ಪ್ರೊ॥ ಬಸುದೇವ ಚಟರ್ಜಿಯವರ ಸಂಪುಟಗಳು ಈಗಾಗಲೇ ಹೊರ ಬಂದಿವೆ. ಕೆ. ಎನ್. ಪಣಿಕ್ಕರ್ ಮತ್ತು ಸುಮಿತ್ ಸರ್‌ಕಾರ್‌ರವರ ಸಂಪುಟಗಳು ಪ್ರಕಟಣೆಗಾಗಿ ಆಕ್ಸ್‌ಫರ್ಡ್ ಮುದ್ರಣಾಲಯಕ್ಕೆ ಹೋಗಿದ್ದಾಗ ಅವುಗಳನ್ನು ಮಂಡಲಿಯ ಪ್ರಸ್ತುತ ಅಧ್ಯಕ್ಷ ಬಿ. ಆರ್. ಗ್ರೋವರ್‌ರವರ ಆದೇಶದ ಮೇರೆಗೆ ತಡೆಹಿಡಿಯಲಾಯಿತು. ಮತ್ತು ಪ್ರಕಟಣೆಯಿಂದ ಈ ಎರಡೂ ಸಂಪುಟಗಳನ್ನು ಹಿಂದೆಗೆಯಲಾಯಿತು. ವಿವಾದ ಹುಟ್ಟಿಕೊಂಡಿರುವುದು ಹೀಗೆ.

ಇದ್ದಕ್ಕಿದ್ದಂತೆ ಈ ಎರಡೂ ಸಂಪುಟಗಳನ್ನು ಪ್ರಕಟಣೆಯಿಂದ ಹಿಂದೆಗೆದ ಮಂಡಲಿಯು ಈ ಸಂಪುಟಗಳು ಪರಿಶೀಲನಾ ಸಮಿತಿಯ ಗಮನಕ್ಕೆ ಬಾರದೆ ಪ್ರೆಸ್‌ಗೆ ಹೋದ ಕಾರಣದಿಂದ ಪ್ರಕಟಣೆಯಿಂದ ಹಿಂದೆಗೆಯಲಾಯಿತು ಎಂದಿದೆ. ಹಾಗೂ ಪ್ರೊ॥ ಪಾರ್ಥಸಾರಥಿ ಗುಪ್ತರು ಬರೆದ ಸಂಪುಟವನ್ನು ಪ್ರೊ॥ ಸವ್ಯಸಾಚಿ ಭಟ್ಟಾಚಾರ್ಯರು ಪರಿಶೀಲಿಸಿದ ನಂತರವೇ ಪ್ರಕಟಣೆಗೆ ಕಳುಹಿಸಲಾಯಿತು ಎಂದಿದೆ.

ಆದರೆ ಪ್ರೊ॥ ಭಟ್ಟಾಚಾರ್ಯರು ಮಂಡಲಿಯ ಅಧ್ಯಕ್ಷ ಗ್ರೋವರ್‌ರವರ ಈ ಹೇಳಿಕೆಯನ್ನು ಖಂಡಿಸಿ ತಾನು ಪ್ರೊ॥ ಗುಪ್ತರ ಪ್ರಕಟಿತ ಸಂಪುಟವನ್ನು ತನ್ನ ವೈಯಕ್ತಿಕ ನೆಲೆಯಲ್ಲಿ ಪತ್ರಿಕೆಗಳಿಗಾಗಿ ಪರಿಶೀಲಿಸಿದ್ದೇ ಹೊರತು ಮಂಡಲಿಯಿಂದ ಅಧಿಕೃತವಾಗಿ ನೇಮಕಗೊಂಡ ಪರಿಶೀಲಕನಾಗಿ ಅಲ್ಲ ಎಂದಿದ್ದಾರೆ. ಹಾಗಿದ್ದೂ ಪ್ರೊ॥ ಗುಪ್ತರ ಪುಸ್ತಕದ ಕುರಿತು ತಾನು ಪ್ರಕಟಿಸಿದ ಟಿಪ್ಪಣಿಯನ್ನು ಪ್ರೊ॥ ಸರ್‌ಕಾರ್ ಮತ್ತು ಪ್ರೊ॥ ಪಣಿಕ್ಕರ್‌ರಂಥಾ ಖ್ಯಾತ ಇತಿಹಾಸಕಾರರ ಸಂಶೋಧನಾ ಕಾರ್ಯಗಳನ್ನು ಅಳೆಯುವುದಕ್ಕೆ ಮಾನದಂಡವಾಗಿ ಉಪಯೋಗಿಸಬೇಕಾಗಿಲ್ಲ ಎಂದಿದ್ದಾರೆ.

ಈ ಯೋಜನೆಯ ಪ್ರಧಾನ ಸಂಪಾದಕ ಪ್ರೊ॥ ಎಸ್. ಗೋಪಾಲ್ ಈ ಯೋಜನೆಯ ಮೂಲಕ ಹೊರಬರುವ ಸಂಪುಟಗಳನ್ನು ಪರಿಶೀಲಿಸುವುದಕ್ಕೆ ಯಾವ ಸಮಿತಿಯನ್ನೂ ಮಂಡಲಿ ಇದುವರೆಗೆ ನೇಮಕ ಮಾಡಿಲ್ಲ. ಈಗ ಇರುವ ಒಂದು ಸಮಿತಿಯೂ ಈ ಯೋಜನೆಯು ಶೀಘ್ರಗತಿಯಲ್ಲಿ ನಡೆಯುವುದಕ್ಕೆ ಗಮನ ನೀಡುತ್ತದೆಯೇ ಹೊರತು ಅದು ಪರಿಶೀಲನಾ ಸಮಿತಿ ಅಲ್ಲ, ಎಂದಿದ್ದಾರೆ. ಮಂಡಲಿಯ ಅಧ್ಯಕ್ಷರೇ ಈಗ ವಿವಾದಕ್ಕೊಳಗಾದ ಈ ಎರಡು ಸಂಪುಟಗಳನ್ನು ಪರಿಶೀಲಿಸಿ ಸಹಿ ಮಾಡಿ ಪ್ರೆಸ್‌ಗೆ ಕಳುಹಿಸಿದ ಮೇಲೆ ಅದನ್ನು ಮರಳಿ ಪರಿಶೀಲಿಸುವ ಹಿಂದೆ ಇರುವ ರಾಜಕೀಯ ಉದ್ದೇಶಗಳೇನು, ಎಂದು ಪ್ರಶ್ನಿಸಿದ್ದಾರೆ. ಮಂಡಲಿಯ ಈ ಏಕಪಕ್ಷೀಯ ನಿಲುವನ್ನು ಪ್ರಶ್ನಿಸುತ್ತಾ ಸಂಪುಟಗಳನ್ನು ಹಿಂದೆಗೆಯುವ ಅಥವಾ ಮರುಪರಿಶೀಲಿಸುವ ಪ್ರಸ್ತಾವದಲ್ಲಿ ಪ್ರಸ್ತುತ ಯೋಜನೆಯ ಪ್ರಧಾನ ಸಂಪಾದಕನಾದ ನನ್ನನ್ನಾಗಲೀ ಅಥವಾ ವಿವಾದಾತ್ಮಕ ಸಂಪುಟಗಳ ಸಂಪಾದಕರನ್ನಾಗಲೀ ಯಾಕೆ ಸಂಪರ್ಕಿಸಿಲ್ಲ ಎಂದು ಕೇಳಿದ್ದಾರೆ. ಪ್ರೊ॥ ಗೋಪಾಲ್ ರವರ ಪ್ರಶ್ನೆಗೆ ಮಂಡಲಿ ಉತ್ತರ ಕೊಡುವ ಗೋಜಿಗೆ ಹೋಗಲಿಲ್ಲ.

ಮೊದಮೊದಲಿಗೆ ಸರಕಾರ ಮಂಡಲಿಯ ಈ ತೀರ್ಮಾನದಲ್ಲಿ ತನ್ನ ಪಾತ್ರವೇನೂ ಇಲ್ಲವೆಂದು ಸ್ಪಷ್ಟಪಡಿಸುತ್ತಿತ್ತು. ಆದರೆ ಈ ವಿವಾದದ ಸಂಬಂಧ ದೂರದರ್ಶನದಲ್ಲಿ ನಡೆದ ಚರ್ಚೆಯಲ್ಲಿ ಕೇಂದ್ರ ಸಚಿವ ಅರುಣ್ ಶೌರಿ ದೇಶದ ಶೈಕ್ಷಣಿಕ ಕೇಂದ್ರದ ಆಯಕಟ್ಟಿನ ಜಾಗಗಳನ್ನೆಲ್ಲ ಎಡಪಂಥೀಯ ಬುದ್ಧಿಜೀವಿಗಳು ಗುತ್ತಿಗೆ ಹಿಡಿದಿದ್ದಾರೆ. ಈಗ ಕೇಂದ್ರದಲ್ಲಿ ಬಿ.ಜೆ.ಪಿ. ಅಧಿಕಾರ ದಲ್ಲಿರುವುದರಿಂದ ಅವರು ಅನಿವಾರ್ಯವಾಗಿ ತಮ್ಮ ಸ್ಥಾನವನ್ನು ತೆರವುಗೊಳಿಸಬೇಕಾಗಿದೆ, ಹಾಗೂ ಈಗ ಈ ಸಂಪುಟಗಳನ್ನು ತಡೆಹಿಡಿದಿರುವುದು ಅಂಥಾ ಒಂದು ಪ್ರಕ್ರಿಯೆಯ ಆರಂಭ ಎನ್ನುವುದರ ಮೂಲಕ ಈ ವಿವಾದದಲ್ಲಿ ಬಹಳ ಸ್ಪಷ್ಟವಾಗಿ ಸರಕಾರದ ಪಾತ್ರ ವಿರುವುದನ್ನು ಅರಿವಿದ್ದೋ ಅರಿವಿಲ್ಲದೆಯೋ, ಸೂಚಿಸಿಯೇ ಬಿಟ್ಟರು. ಚರಿತ್ರೆಯನ್ನು ಕಟ್ಟುವಲ್ಲಿ ಇದುವರೆಗೆ ಮಾರ್ಕ್ಸ್‌ವಾದಿಗಳ ಹಿಡಿತವೇ ಇದ್ದಿತೆಂದು ಸರಕಾರ ಅದನ್ನು ಮುರಿಯುವ ಅಗತ್ಯ ಇದೆ ಎಂದು ಈಗ ಭಾವಿಸಿದೆ. ಬಿ.ಜೆ.ಪಿ. ಸರಕಾರ ಮತ್ತದರ ಸಮರ್ಥಕರು ಎಡಪಂಥೀಯ ಚರಿತ್ರಕಾರರು ಚರಿತ್ರೆಯನ್ನು ನಿರ್ಮಿಸುವ ಸಂದರ್ಭದಲ್ಲಿ ತಪ್ಪು ಮಾಡಿದ್ದಾರೆ ಎಂದು ಭಾವಿಸಿ ಅದನ್ನೀಗ 'ಸರಿ' ಪಡಿಸುವುದಕ್ಕೆ ಹೊರಟಿದ್ದಾರೆ. ಎಲ್ಲರಿಗೂ ಗೊತ್ತಿರುವಂತೆ ಚರಿತ್ರೆಯನ್ನು ಅಧಿಕಾರ ದಲ್ಲಿರುವ ಪಕ್ಷವೊಂದು ಸರಿಪಡಿಸುವುದಕ್ಕೆ ಹೊರಡುವುದೆಂದರೆ ಒಂದೋ ತಮಗನುಕೂಲಕರವಾಗುವಂತೆ ಚರಿತ್ರೆಯನ್ನು ಹೊಸದಾಗಿ ನಿರ್ಮಿತಿಗೊಳಿಸುವುದು ಅಥವಾ ಚರಿತ್ರೆಯನ್ನು ತಿರುಚುವುದೇ ಆಗಿರುತ್ತದೆ.

ಈ ಯೋಜನೆಯ ಕುರಿತು ಕೇಂದ್ರ ಸರಕಾರ ಆರಂಭದಲ್ಲಿ ಎತ್ತಿದ ಒಂದು ಸಾಮಾನ್ಯ ಆಕ್ಷೇಪ ಎಂದರೆ ಸ್ವಾತಂತ್ರ್ಯ ಹೋರಾಟದ ಈ ಸಂಪುಟಗಳು ಗಾಂಧೀಜಿಯವರ ಹೋರಾಟವನ್ನು ಸಮರ್ಥವಾಗಿ ಬಿಂಬಿಸಿಲ್ಲ ಎಂದು. ಅಗಣಿತ ಸಮುದಾಯದ ಹೋರಾಟವನ್ನು ಅಧ್ಯಯನ ಮಾಡುವ ಮಾರ್ಕ್ಸ್‌ವಾದೀ ಚರಿತ್ರಕಾರ ಪ್ರೊ॥ ಸುಮಿತ್ ಸರ್‌ಕಾರ್‌ರವರ ಪ್ರಕಾರ ಸ್ವಾತಂತ್ರ್ಯ ಹೋರಾಟ ಎನ್ನುವುದು ವ್ಯಕ್ತಿಯೊಬ್ಬನ ವೈಯಕ್ತಿಕ ಹಿರಿಮೆಯ ಮೂಲಕ ಸಾಧ್ಯವಾಗುವಂತಹುದಲ್ಲ; ಅದು ಸಮೂಹದ ಪಾಲ್ಗೊಳ್ಳುವಿಕೆಯ ಮೂಲಕ ಮಾತ್ರವೇ ಈಡೇರುವಂಥಾದ್ದು. ಹಾಗಾಗಿಯೇ ಪ್ರೊ॥ ಸರ್‌ಕಾರ್ ಚರಿತ್ರೆಯ ನಿರ್ಮಾಣದಲ್ಲಿ ಇದುತನಕ ಬದಿಗೆ ತಳ್ಳಲ್ಪಟ್ಟ ಹೋರಾಟಗಳನ್ನು ಗಮನಿಸಿ ಅವುಗಳಿಗೆ ಈ ಸಂಪುಟದಲ್ಲಿ ಯಥೋಚಿತ ನ್ಯಾಯ ಸಲ್ಲಿಸಿದ್ದಾರೆ.

ಪ್ರೊ॥ ಸರ್‌ಕಾರ್ ಮತ್ತು ಪ್ರೊ॥ ಪಣಿಕ್ಕರ್‌ರವರ ಈ ಎರಡು ಸಂಪುಟಗಳು ಕೇಂದ್ರದ ಬಿಜೆಪಿ ಸರಕಾರದ ಕೆಂಗಣ್ಣಿಗೆ ಯಾಕೆ ಗುರಿಯಾಗಿವೆಯೆಂದರೆ ಸಂಘ ಪರಿವಾರ ಸ್ವಾತಂತ್ರ್ಯ ಹೋರಾಟದಲ್ಲಿ ನಿಷ್ಕ್ರಿಯವಾಗಿದ್ದುದನ್ನು ದಾಖಲೆಗಳ ಸಮೇತ ಈ ಪುಸ್ತಕಗಳು ಎತ್ತಿತೋರಿಸುತ್ತಿವೆ. 'ಹಿಂದೂ ಮಹಾಸಭಾ' ಮತ್ತು 'ಆರೆಸ್ಸೆಸ್ಸು'ಗಳು ಸ್ವಾತಂತ್ರ್ಯ ಹೋರಾಟದಿಂದ ವಿಮುಖವಾಗಿದ್ದನ್ನು ಮತ್ತು ವಿಶೇಷತಃ 'ಹಿಂದೂ ಮಹಾಸಭಾ' ವಸಾಹತು ಆಡಳಿತದ ಪರವಾಗಿ ನಿಂತು ಕೆಲಸ ಮಾಡಿದ್ದನ್ನು ಈ ಪುಸ್ತಕಗಳು ಅಧಿಕೃತ ದಾಖಲೆಗಳ ಸಮೇತ ಎತ್ತಿ ತೋರಿಸುತ್ತಿವೆ. ಅಮೋಘ ರಾಷ್ಟ್ರಭಕ್ತಿಯ ಬೊಂಬಡಾ ಬಜಾಯಿಸಿ ಇಡೀ ಭಾರತವನ್ನೇ ತಲೆಯ ಮೇಲೆ ಹೊತ್ತುಕೊಂಡು ತಿರುಗುವಂತೆ ಇರುವ 'ದೇಶಭಕ್ತ' ಸಂಘ ಪರಿವಾರಕ್ಕೆ ಈ ಸಂಪುಟಗಳು ಹೊರಬಂದರೆ ತನ್ನ ಅಸಲೀಗುಣ ಬಯಲಾಗಿಬಿಡುತ್ತದೆ ಎನ್ನುವ ಅಂಜಿಕೆ ಇದೆ ಎನ್ನುತ್ತಾರೆ, ಪ್ರೊ॥ ಪಣಿಕ್ಕರ್.

ತನ್ನನ್ನು ಎಡಪಂಥೀಯ ಚರಿತ್ರಕಾರ ಎಂದು ಟೀಕಿಸುವುದನ್ನು ಹೆಮ್ಮೆಯಿಂದಲೇ ಒಪ್ಪಿಕೊಳ್ಳುವ ಪಣಿಕ್ಕರ್, ತಾನು ಚರಿತ್ರೆಯನ್ನು ದಾಖಲಿಸುವ ಸಂದರ್ಭದಲ್ಲಿ ಮಾರ್ಕ್ಸ್‌ವಾದೀ ಚಿಂತಕ ಆಂಟೋನಿಯೋ ಗ್ರಾಮ್‌ಶಿಯ ಅಧ್ಯಯನ ವಿಧಾನ ಕ್ರಮವನ್ನು ಅನುಸರಿಸಿರುವುದಾಗಿ ಹೇಳುತ್ತಾರೆ. ಈ ಅಧ್ಯಯನ ವಿಧಾನ ಕ್ರಮವು ಸಾಮಾಜಿಕ ಪರಿವರ್ತನೆ ಮತ್ತು ಚಾರಿತ್ರಿಕ ಬದಲಾವಣೆಗಳನ್ನು ಅರ್ಥೈಸಿಕೊಳ್ಳುವಲ್ಲಿ ವೈಜ್ಞಾನಿಕವಾದ ಪದ್ಧತಿಯನ್ನು ಅನುಸರಿಸುತ್ತದೆ ಎನ್ನುತ್ತಾರೆ. ತನ್ನ ಸಂಪುಟವು ಎಲ್ಲೂ ವ್ಯಾಖ್ಯಾನಾತ್ಮಕ ಚರಿತ್ರೆಯಾಗಿಲ್ಲ, ಬದಲು ದಾಖಲಾತ್ಮಕ ಚರಿತ್ರೆಯಾಗಿದೆ ಎಂದು ಬಹಳ ಪ್ರಬಲವಾಗಿ ಪ್ರತಿಪಾದಿಸುವ ಪಣಿಕ್ಕರ್ ದಾಖಲಾತ್ಮಕ ಚರಿತ್ರೆಯು, ದಾಖಲೆಗಳ ಮಂಡನೆಯ ಕ್ರಮ ಮತ್ತು ದಾಖಲೆಗಳ ಆಯ್ಕೆಯ ಕ್ರಮದಲ್ಲೇ ಒಂದು ಬಗೆಯ ವ್ಯಾಖ್ಯಾನವನ್ನು ಮಾಡುವ ಸನ್ನಿವೇಶ ಇದ್ದರೂ ತಾನೆಲ್ಲೂ ಯಾವುದೇ ದಾಖಲೆಯನ್ನು ಕೈಬಿಟ್ಟಿಲ್ಲ ಎನ್ನುತ್ತಾರೆ.

ತಮ್ಮಿಬ್ಬರ ಪುಸ್ತಕಗಳಿಗೆ ಪ್ರಕಾಶಕರು ಸಿಗುವುದು ಕಷ್ಟದ ಸಂಗತಿಯಲ್ಲ: ಹಾಗಾಗಿ ಪುಸ್ತಕಗಳ ಪ್ರಕಟಣೆ ನಮ್ಮ ಸಮಸ್ಯೆಯಾಗಿಲ್ಲ, ಬದಲು ಜ್ಞಾನಕೇಂದ್ರಗಳ ಒಳಗಡೆ ನಡೆಯುತ್ತಿರುವ ಹೊಲಸು ರಾಜಕೀಯ ಮತ್ತು ಸಾಂಸ್ಕೃತಿಕ ರಾಜಕಾರಣವನ್ನು ಜನರಿಗೆ ಪರಿಚಯಿಸುವುದು ನಮ್ಮ ಉದ್ದೇಶ ಎನ್ನುವ ಪಣಿಕ್ಕರ್ ಭಾರತೀಯ ಇತಿಹಾಸ ಸಂಶೋಧನಾ ಮಂಡಲಿಯು ಸಾರ್ವಜನಿಕವಾಗಿ ಮತ್ತು ಬೇಷರತ್ತಾಗಿ ತಮ್ಮಿಬ್ಬರಿಂದಲೂ ಕ್ಷಮೆ ಯಾಚಿಸಬೇಕೆಂದು ಆಗ್ರಹಿಸಿದ್ದಾರೆ.

ಈ ಪುಸ್ತಕಗಳ ವಿವಾದ ರಾಜ್ಯ ಸಭೆಯಲ್ಲೂ ಪ್ರತಿಧ್ವನಿಸಿತು. ವಿಪಕ್ಷದ ಒಕ್ಕೊರಲ ಬೇಡಿಕೆಗೆ ಮಣಿದು ಡಾ॥ ಮುರಲೀ ಮನೋಹರ ಜೋಷಿ ಸದನಕ್ಕೆ ವಿವಾದ ಸಂಬಂಧವಾಗಿ ಹೇಳಿಕೆಯನ್ನು ಕೊಟ್ಟರು. ತಪ್ಪು ತಪ್ಪು ಮಾಹಿತಿಗಳನ್ನೊಳಗೊಂಡ ಈ ಹೇಳಿಕೆ ಸದನವನ್ನೇ ತಪ್ಪು ಹಾದಿಗೆಳೆಯುವಂತಾಗಿದೆಯೆಂದು ಮಂಡಲಿಯ ನಿವೃತ್ತ ಅಧ್ಯಕ್ಷ ಧಾರವಾಡದ ಪ್ರೊ॥ ಎಸ್. ಶೆಟ್ಟರ್ ಹೇಳಿದ್ದಾರೆ.

ಮಾನವ ಸಂಪನ್ಮೂಲಾಭಿವೃದ್ಧಿ ಸಚಿವರು ಈಗ ಮೂರು ಜನ ಸದಸ್ಯರುಳ್ಳ ಒಂದು ಸಮಿತಿಯನ್ನು ಈ ಎರಡು ಸಂಪುಟಗಳ ಪರಿಶೀಲನೆಗೆ ನೇಮಿಸಿದ್ದಾರೆ. ಅದರಲ್ಲಿ

(ಮುಂದಿನ ಪುಟದಲ್ಲಿ)

ರಾಷ್ಟ್ರೀಯ ಪ್ರಶಸ್ತಿ



ಸಾಗರದ ಖ್ಯಾತ ವೈದ್ಯರಾದ ಡಾ॥ ಎಂ. ಕೆ. ಭಟ್ ಅವರು ಈ ಸಾಲಿನ ರಾಷ್ಟ್ರಪತಿಯವರ ಗಣನೀಯ ಸೇವಾ ಪ್ರಶಸ್ತಿ ವಿಜೇತರಾಗಿದ್ದಾರೆ. ಜನಪ್ರಿಯ ವೈದ್ಯರಾಗಿರುವುದರ ಜೊತೆಗೆ ಗೃಹರಕ್ಷಕ ದಳದ ಘಟಕಾಧಿಕಾರಿ, ಬಡಮಕ್ಕಳಿಗೆ ಉಚಿತ ಶೈಕ್ಷಣಿಕ ಪ್ರವಾಸ, ಆರೋಗ್ಯ ಶಿಬಿರಗಳು, ಕ್ರೀಡಾ ಪಂದ್ಯಗಳು - ಮುಂತಾದ ಹಲವಾರು ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. 'ಆರೋಗ್ಯ ಸಂಪತ್ತು' ಎಂಬ ಕನ್ನಡ ವೈದ್ಯಕೀಯ ಮಾಸಪತ್ರಿಕೆಯ ಸಂಪಾದಕರು.



ಅತ್ಯುತ್ತಮ ಪ್ರಕಾಶನ ಪ್ರಶಸ್ತಿ

ಕನ್ನಡ ಪುಸ್ತಕ ಪ್ರಾಧಿಕಾರವು ಅತ್ಯುತ್ತಮ ಪ್ರಕಾಶನಕ್ಕಾಗಿ ನೀಡುವ [illegible] ಸಾಲಿನ ಪ್ರಶಸ್ತಿಯನ್ನು ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘ ಗಳಿಸಿದೆ. ಉತ್ತಮ ಸಾಹಿತ್ಯಿಕ ಮೌಲ್ಯದ ನೂರ ಅರವತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿರುವ ಕನ್ನಡ ಸಂಘದ ತನ್ನ ಕಾರ್ಯ ಚಟುವಟಿಕೆಗೆ ಚೈತನ್ಯ ನೀಡಿದವರು ಡಾ॥ ಜಿ. ಶ್ರೀನಿವಾಸರಾಜು ಇವರ ಸೇವಾವಧಿಯಲ್ಲಿ ಕ್ರೈಸ್ಟ್ ಕಾಲೇಜು ಕನ್ನಡ ಸಂಘಕ್ಕೆ ಲಭಿಸಿರುವ ಈ ಪ್ರಶಸ್ತಿ ಅವರ ನಿಸ್ವಾರ್ಥ ಸೇವೆಗೆ ಸಂದ ಗೌರವ. ಇವರಿಗೆ ಹೊಸತು ಅಭಿನಂದನೆಗಳು.



ಮೆದುಳು ಮತ್ತು ಸೃಜನಶೀಲತೆ

ಇತ್ತೀಚೆಗೆ ಬೆಂಗಳೂರಿನಲ್ಲಿ ಮೆದುಳಿನ ಕಾರ್ಯಚಟುವಟಿಕೆಯ ಕುರಿತು ವಿಚಾರ ಸಂಕಿರಣವೊಂದು ನಡೆಯಿತು. ಖ್ಯಾತ ವೈದ್ಯರು, ಮನೋವೈದ್ಯರು ಮತ್ತು ಕಲಾವಿಮರ್ಶಕರು ಭಾಗವಹಿಸಿದ್ದರು. 'ಸೃಜನಶೀಲತೆ : ಕಲಾಕಾರರ ಮಾನಸಿಕ ಸ್ವಾಸ್ಥ್ಯ ಮತ್ತು ಮಾನಸಿಕ ಅಸ್ವಾಸ್ಥ್ಯ' ಶೀರ್ಷಿಕೆಯಲ್ಲಿ ನಮ್ಮ ವೈದ್ಯಲೇಖಕರಾದ ಡಾ॥ ಸಿ. ಆರ್. ಚಂದ್ರಶೇಖರ್ ಮತ್ತು ಕಲಾವಿಮರ್ಶಕ ಶ್ರೀ ಚಿ. ಸು. ಕೃಷ್ಣಶೆಟ್ಟಿ 'ವಾನ್‌ಗೋ ಕಲಾಕಾರ ಮತ್ತು ಆತನ ಮೆದುಳು' ಕುರಿತು ಉಪನ್ಯಾಸ ನೀಡಿದರು.

(ಹಿಂದಿನ ಪುಟದಿಂದ)

ಇರುವವರು ಇವರು:

ಪ್ರೊ॥ ಸತೀಶ್ ಮಿತ್ತಲ್ (ಕುರುಕ್ಷೇತ್ರ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದ ನಿವೃತ್ತ ಮುಖ್ಯಸ್ಥ),

ಪ್ರೊ॥ ಹರಿ ಓಂ (ಜಮ್ಮು ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದ ಮುಖ್ಯಸ್ಥ), ಮತ್ತು

ಪ್ರೊ॥ ಎ. ಆರ್. ಖಾನ್ (ಹಿಮಾಚಲ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದ ನಿವೃತ್ತ ಮುಖ್ಯಸ್ಥ).

ಇವರೆಲ್ಲರನ್ನೂ ಆಧುನಿಕ ಭಾರತದ ಇತಿಹಾಸಕಾರರು ಎಂದು ಡಾ॥ ಜೋಷಿ ಹೇಳುವುದರ ಮೂಲಕ ಸದನವನ್ನು ಮತ್ತೊಮ್ಮೆ ತಪ್ಪು ಹಾದಿಗೆಳೆದರು. ಇದರಲ್ಲಿ ಮೊದಲಿನವರಿಬ್ಬರು ಪ್ರಾಚೀನ ಭಾರತದ ಇತಿಹಾಸಕಾರರಾದರೆ ಪ್ರೊ॥ ಎ. ಆರ್. ಖಾನ್ ಮಧ್ಯಯುಗೀನ ಭಾರತದ ಇತಿಹಾಸಕಾರರು. ತಮ್ಮ ಕ್ಷೇತ್ರವಲ್ಲದ ಕ್ಷೇತ್ರದಲ್ಲಿ ಈ ಮಧ್ಯಯುಗೀನ ಭಾರತದ ಇತಿಹಾಸಕಾರರು ಯಾವ ಬಗೆಯ ಪರಿಶೀಲನೆ ನಡೆಸಿಯಾರು?

ನಿತ್ಯಾನಂದ ಬಿ. ಶೆಟ್ಟಿ
ಉಪನ್ಯಾಸಕ, ಕನ್ನಡ ವಿಭಾಗ, ಆಳ್ವಾಸ್ ಎಜುಕೇಷನ್ ಫೌಂಡೇಶನ್, ಮೂಡುಬಿದಿರೆ-೫೭೪ ೨೨೭

ಪುಸ್ತಕ ಬಿಡುಗಡೆ

ಬಳ್ಳಾರಿಯ ಲೋಹಿಯಾ ಪ್ರಕಾಶನವು ಕವನ, ಕಥೆ, ಜೀವನಚರಿತ್ರೆ, ಪ್ರವಾಸ, ಪ್ರಬಂಧ ಇತ್ಯಾದಿ ಪ್ರಕಾರಗಳಲ್ಲಿ ಒಮ್ಮೆಲೇ ಹನ್ನೊಂದು ಪುಸ್ತಕಗಳನ್ನು ಪ್ರಕಟಿಸಿ, ಡಾ॥ ಲೋಹಿಯಾ ಜನ್ಮ ದಿನದಂದು ಬಳ್ಳಾರಿ, ಕಲಬುರ್ಗಿ, ಬೀದರ್, ಧಾರವಾಡ, ಮೈಸೂರು ಮತ್ತು ಬೆಂಗಳೂರು ನಗರಗಳಲ್ಲಿ ಏಕಕಾಲದಲ್ಲಿ ಬಿಡುಗಡೆ ಮಾಡಿತು. ಚಿತ್ರ.: ಬಳ್ಳಾರಿಯಲ್ಲಿ ಬಿಡುಗಡೆ ಸಮಾರಂಭ ಡಾ॥ ಜಿ. ಎಸ್. ಶಿವರುದ್ರಪ್ಪನವರ ಅಧ್ಯಕ್ಷತೆಯಲ್ಲಿ. ಲೋಹಿಯಾ ಪ್ರಕಾಶನಕ್ಕೆ ನವಕರ್ನಾಟಕದ ಅಭಿನಂದನೆಗಳು.



ಬಿಡುಗಡೆಯಾದ ಕೃತಿಗಳು : ಆ ಅಜ್ಜ- ಈ ಮೊಮ್ಮಗ [illegible] ಲೋಹಿಯಾ (ಹಸನ್ ನಯೀಂ ಸುರಕೋಡ), ಅಮೃತ ಮತ್ತು [illegible] ಮತ್ತು ತೋಪು (ಚಂದ್ರಶೇಖರ ನಂಗಲಿ), ನನ್ನೊಳಗಿನ [illegible] ಸರಳ ಸಿದ್ಧರಾಮ ಚರಿತೆ (ಡಾ॥ ಎಲ್. ಬಸವರಾಜು), [illegible] ಲಿಂಗಣ್ಣ), ಹಣದಿ (ಶಿವಕುಮಾರ ನಾಗವಾರ), [illegible] ಐರಿ (ಕಲಿಗಣನಾಥ ಗುಡದೂರು), ಮಣ್ಣಿನ ಕುಡಿಕೆ [illegible]

ಅಲಿಪ್ತ ಚಳವಳಿ ಹಾಗೂ ವಾಜಪೇಯಿ ಸರಕಾರ

ಅಮೆರಿಕದ ಅಧ್ಯಕ್ಷ ಬಿಲ್ ಕ್ಲಿಂಟನ್ ನಮ್ಮ ದೇಶಕ್ಕೆ ನೀಡಿದ ಭೇಟಿ ವಾಜಪೇಯಿ ಸರಕಾರದ ವಿದೇಶೀ ನೀತಿಯ ಟೊಳ್ಳುತನವನ್ನು ಸ್ಪಷ್ಟವಾಗಿ ಹೊರಗೆಡಹಿತು. ಅಮೆರಿಕದ ಅಧ್ಯಕ್ಷರೊಂದಿಗೆ ರಾಷ್ಟ್ರದ ಹಿತಾಸಕ್ತಿಯಿಂದ ಗಂಭೀರವಾದ ಮಾತುಕತೆಗಳಲ್ಲಿ ತೊಡಗುವ ಬದಲು ಅವರನ್ನು ಓಲೈಸಿ ತೃಪ್ತಿಗೊಳಿಸುವುದರಲ್ಲೇ ಸರಕಾರ ನಿರತವಾಗಿತ್ತು. ಭಾರತದ ವಿದೇಶಾಂಗ ನೀತಿಯ ಪರಂಪರೆಯನ್ನು, ಅಲಿಪ್ತ ನೀತಿಯ ಮುಖ್ಯತ್ವವನ್ನು, ಪ್ರಚಲಿತ ಅಂತರರಾಷ್ಟ್ರೀಯ ಪರಿಸ್ಥಿತಿಯಲ್ಲಿ ಭಾರತದ ಆತಂಕವನ್ನು ಪ್ರತಿಧ್ವನಿಸಿ, ಭಾರತ-ಅಮೆರಿಕ ಸಂಬಂಧಗಳ ಏರುಪೇರನ್ನು ಪ್ರಸ್ತಾಪಿಸಿದ್ದು ರಾಷ್ಟ್ರಪತಿ ಕೆ. ಆರ್. ನಾರಾಯಣನ್ ಅವರು. ರಾಷ್ಟ್ರಪತಿ ಭವನದಲ್ಲಿ ಕ್ಲಿಂಟನ್ ಗೌರವಾರ್ಥ ನೀಡಿದ ಔತಣಕೂಟದಲ್ಲಿ ಕೆ. ಆರ್. ನಾರಾಯಣನ್ ಮಾಡಿದ ಭಾಷಣ ವಾಜಪೇಯಿ ಹಾಗೂ ಅವರ ಪರಿವಾರಕ್ಕೆ ಮುಜುಗರ ಉಂಟುಮಾಡಿತು. ವಿದೇಶಾಂಗ ಸಚಿವಾಲಯದ ಅಧಿಕಾರಿಗಳನ್ನು ಪೇಚಿಗೆ ಸಿಲುಕಿಸಿತು. ಪತ್ರಿಕೆಗಳೂ ಇದನ್ನು ಗಮನಿಸಿದ್ದು ವಿಶೇಷವೇನಲ್ಲ.

ಹೀಗೇಕೆ ಎಂಬ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ. ಸಂವಿಧಾನ ತಿದ್ದಲು ಹೊರಟಿರುವ ವಾಜಪೇಯಿ ಸರಕಾರವನ್ನು ಎಚ್ಚರಿಸಿದಂತೆಯೇ ರಾಷ್ಟ್ರಪತಿಯವರು ದೇಶದ ಗೌರವ ಮತ್ತು ಹಿತದೃಷ್ಟಿಯಿಂದ ವಿದೇಶಾಂಗ ನೀತಿಯ ಹಿನ್ನೆಲೆಯನ್ನು ನೆನಪು ಮಾಡಿಕೊಟ್ಟು ಭಾರತ ಅಮೆರಿಕ ಸಂಬಂಧಗಳ ಬಗ್ಗೆ ಎಚ್ಚರದ ನುಡಿಗಳನ್ನು ಆಡಿದ್ದು ತಪ್ಪೇನಲ್ಲ. ಭಾರತದ ವಿದೇಶಿ ನೀತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವವರಿಗೆ ವಾಜಪೇಯಿ ಸರಕಾರದ ಕಳವಳ ಅರ್ಥವಾಗುತ್ತದೆ. ವಾಜಪೇಯಿ ಮತ್ತು ಅವರ ಗುಂಪಿಗೆ ಮೊದಲಿನಿಂದಲೂ ಅಲಿಪ್ತ ನೀತಿ ಎಂದರೆ ಅಪಥ್ಯ. ದೇಶದಲ್ಲಿ ಹೆಚ್ಚು ಕಡಿಮೆ ಒಮ್ಮತವಿದ್ದುದರಿಂದ ಅವರು ಅಲಿಪ್ತ ನೀತಿಯನ್ನು ನೇರವಾಗಿ ವಿರೋಧಿಸಲಾಗದೆ 'ನಿಜವಾದ ಅಲಿಪ್ತನೀತಿ'ಯ ವಿಚಾರ ಎತ್ತುತ್ತಿದ್ದರು ಸಮಯ ಸಿಕ್ಕಾಗಲೆಲ್ಲ. ಅವರ 'ನಿಜವಾದ ಅಲಿಪ್ತ ನೀತಿ' ಎಂದರೇನು ಎಂಬುದು ಈಗ ಹೆಚ್ಚು ಸ್ಪಷ್ಟವಾಗುತ್ತಿದೆ. ಅದು ನಮ್ಮೆಲ್ಲ ರಾಷ್ಟ್ರೀಯ ಹಿತಾಸಕ್ತಿಗಳನ್ನೂ ಕಡೆಗಣಿಸಿ ಅಮೆರಿಕದೊಂದಿಗೆ ಅದರ ಎಲ್ಲ ಪರತುಗಳಿಗೂ ಒಪ್ಪಿ ಸಖ್ಯ ಬೆಳೆಸುವುದಾಗಿದೆ.

ಭಾರತದ ವಿದೇಶಾಂಗ ನೀತಿ ರೂಪುಗೊಂಡಿದ್ದು ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧ ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟದ ಹಿನ್ನೆಲೆಯಲ್ಲಿ. ಹೊಸದಾಗಿ ಸ್ವತಂತ್ರಗೊಂಡ ಏಷ್ಯಾ-ಆಫ್ರಿಕ ಖಂಡದ ದೇಶಗಳು ಸಾಮ್ರಾಜ್ಯಶಾಹಿಗಳು ಒಡ್ಡುವ ಆಮಿಷಕ್ಕೆ ಬಲಿಯಾಗಿ ಮಿಲಿಟರಿ ಕೂಟಗಳಲ್ಲಿ ಸೇರುವುದನ್ನು ತಪ್ಪಿಸಲು ಉದ್ಭವಿಸಿದ್ದು ಅಲಿಪ್ತ ಚಳವಳಿ. ಮಿಲಿಟರಿ ಬಣಗಳಿಂದ ದೂರ ಉಳಿದು ತಮ್ಮ ಸ್ವಾತಂತ್ರ್ಯ, ಸಾರ್ವಭೌಮತ್ವಗಳನ್ನು ಬಲಗೊಳಿಸುವುದು ಅಲಿಪ್ತ ರಾಷ್ಟ್ರಗಳ ಗುರಿ. ಚಳವಳಿ ಬೆಳೆಯುತ್ತ ಹೋದ ಹಾಗೆ ಪರಸ್ಪರ ಆರ್ಥಿಕ ಸಹಕಾರ ಮತ್ತು ಶ್ರೀಮಂತ ದೇಶಗಳ ಜೊತೆ ಸಮಾನತೆಯ ವ್ಯವಹಾರಗಳಿಗಾಗಿ ಒಂದುಗೂಡಿ ಪ್ರಯತ್ನಿಸುವುದು ಮುಖ್ಯಾಂಶಗಳಲ್ಲೊಂದಾಯಿತು. ಒಂದು ನೂರಕ್ಕೂ ಹೆಚ್ಚು ದೇಶಗಳ ಸದಸ್ಯತ್ವವನ್ನು ಹೊಂದಿದ್ದ ಅಲಿಪ್ತ ಚಳವಳಿ ಶೀತಯುದ್ಧದ ಕಾಲದಲ್ಲಿ ಎರಡೂ ಬಣಗಳ ಮಿಲಿಟರಿ ಕೂಟಗಳಿಂದ ದೂರ ಉಳಿದರೂ ಮೂಲತಃ ಅದು ಸಾಮ್ರಾಜ್ಯಶಾಹಿ ವಿರೋಧಿಯಾಗಿತ್ತು. ಸಾಮ್ರಾಜ್ಯಶಾಹಿ ದೇಶಗಳೂ ಕೂಡ ಅಲಿಪ್ತ ನೀತಿಯ ಕಡು ವಿರೋಧಿಯಾಗಿದ್ದವು. ಅಮೆರಿಕ ಅಲಿಪ್ತ ನೀತಿಯನ್ನು 'ಅನೈತಿಕ' ಎಂದು ಹೀಯಾಳಿಸಿದ್ದು ಮರೆಯುವಂತಿಲ್ಲ. ಸಾಮ್ರಾಜ್ಯಶಾಹಿ ವಿರೋಧಿಯಾಗಿದ್ದ ಸೋವಿಯತ್ ಒಕ್ಕೂಟ ಮತ್ತು ಇತರ ಕಮ್ಯುನಿಸ್ಟ್ ರಾಷ್ಟ್ರಗಳು ಅಂದು ಅಲಿಪ್ತ ಚಳವಳಿಯನ್ನು ಬೆಂಬಲಿಸಿದ್ದು ಅಸಹಜವೇನಲ್ಲ. ಇದನ್ನೇ ಸಾಮ್ರಾಜ್ಯಶಾಹಿಗಳು ಬಳಸಿಕೊಂಡು ಅಲಿಪ್ತ ನೀತಿಗೆ ಬಣ್ಣ ಹಚ್ಚಿ ಅಪಪ್ರಚಾರ ನಡೆಸುತ್ತಿದ್ದರು. ವಾಜಪೇಯಿ ಮತ್ತು ಅವರ ಪರಿವಾರ ಕೂಡ ಅದನ್ನೇ ಪಾವನವಾಗಿ ಸ್ವೀಕರಿಸಿ 'ನಿಜವಾದ ಅಲಿಪ್ತತೆ' ಪ್ರತಿಪಾದಿಸುತ್ತಿದ್ದರು. ಅವರು ನಿಜವಾಗಿ ಪ್ರತಿಪಾದಿಸುತ್ತಿದ್ದುದು ಸಾಮ್ರಾಜ್ಯಶಾಹಿ ಕೂಟದೊಂದಿಗೆ ಮೈತ್ರಿಯನ್ನೇ.

ಸೋವಿಯತ್ ಒಕ್ಕೂಟದ ವಿಸರ್ಜನೆಯ ನಂತರದ ಪರಿಸ್ಥಿತಿಯಲ್ಲಿ, ಅಂದರೆ, ಏಕ ಶಕ್ತಿ ಕೇಂದ್ರ ಉಪಸ್ಥಿತಿಯ ಸನ್ನಿವೇಶದಲ್ಲಿ ಅಲಿಪ್ತ ನೀತಿ ದುರ್ಬಲಗೊಂಡು ಅದರ ಮುಖ್ಯತ್ವ ಕಳೆದುಕೊಳ್ಳುತ್ತಿರುವುದು ದುರಂತವೇ. ಕಳೆದ ಒಂದು ದಶಕದಲ್ಲಿ ಸಾಮ್ರಾಜ್ಯಶಾಹಿ ದೇಶಗಳು ಪ್ರಪಂಚದ ಮೇಲೆ ತಮ್ಮ ನಿಯಂತ್ರಣವನ್ನು ಸ್ಥಾಪಿಸಲು ತೀವ್ರ ಪ್ರಯತ್ನ ನಡೆಸುತ್ತಿರುವ ಕಾಲದಲ್ಲಿ ಅಲಿಪ್ತ ಚಳವಳಿಯ ಅವಶ್ಯಕತೆ ಅಧಿಕವಾಗಿದ್ದಾಗ ಅದು ದುರ್ಬಲಗೊಂಡಿದೆ. ಶ್ರೀಮಂತ ರಾಷ್ಟ್ರಗಳು ಒಡ್ಡಿದ ಆಮಿಷಗಳಿಗೆ ಭಾರತವೂ ಸೇರಿದಂತೆ ಅಭಿವೃದ್ಧಿಶೀಲ ದೇಶಗಳು ಬಲಿಯಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ವಸಾಹತುಶಾಹಿ ನಿರ್ಮೂಲನ ಮಾನವ ಇತಿಹಾಸದಲ್ಲಿ ಒಂದು ಮೈಲುಗಲ್ಲು ಎಂಬುದು ನಿಜ. ಆದರೆ ವಸಾಹತುಶಾಹಿ ಅಂತ್ಯಗೊಂಡರೂ ಸಾಮ್ರಾಜ್ಯಶಾಹಿ ಜೀವಂತವಾಗಿ ಉಳಿಯಿತು ಎಂಬುದು ಅಷ್ಟೇ ನಿಜ. ವಸಾಹತುಗಳನ್ನು ಕಳೆದುಕೊಂಡರೂ ಸಾಮ್ರಾಜ್ಯಶಾಹಿ ದೇಶಗಳು ಮಾಜಿ ವಸಾಹತುಗಳಲ್ಲಿ ತಮ್ಮ ಆರ್ಥಿಕ ಹಿಡಿತವನ್ನು ಅಷ್ಟೇನೂ ಕಳೆದುಕೊಳ್ಳಲಿಲ್ಲ. ವೈಜ್ಞಾನಿಕ ಮತ್ತು ತಂತ್ರಜ್ಞಾನದ ಪ್ರಗತಿಯ ಫಲಗಳನ್ನು ಮೈಗೂಡಿಸಿಕೊಂಡಿರುವ ಶ್ರೀಮಂತ ರಾಷ್ಟ್ರಗಳು ಇಂದು ಆರ್ಥಿಕವಾಗಿ ಇನ್ನಷ್ಟು ಬಲಗೊಂಡಿವೆ. ಅದರಿಂದಲೇ ಜಗತ್ತಿನ ಎಲ್ಲ ರಾಷ್ಟ್ರಗಳ ಮೇಲೂ ಆರ್ಥಿಕವಾಗಿ ತಮ್ಮ ಯಾಜಮಾನ್ಯ ಸ್ಥಾಪಿಸಲು ಮೂರು ಮುಖದ ದಾಳಿ ನಡೆಸುತ್ತಿವೆ. ಅಂತರರಾಷ್ಟ್ರೀಯ ಹಣಕಾಸಿನ ಸಂಸ್ಥೆ, ವಿಶ್ವಬ್ಯಾಂಕ್ ಮತ್ತು ವಿಶ್ವವ್ಯಾಪಾರ [illegible] ರಾಷ್ಟ್ರಗಳನ್ನು [illegible] ಜಾಗತೀಕರಣ, ವಿದೇಶೀ ಬಂಡವಾಳ ಇವು ತಾರಕಮಂತ್ರವಾಗಿದ್ದು, ಬಡದೇಶಗಳು ಇಂದು ಸಾಮ್ರಾಜ್ಯಶಾಹಿಗಳ ಅಧೀನಕ್ಕೊಳಪಡುತ್ತಿವೆ. ಇಂಥ ಸನ್ನಿವೇಶದಲ್ಲಿ ಅಲಿಪ್ತ ಚಳವಳಿಯ ಅವಶ್ಯಕತೆ ಬಹುವಾಗಿ ಹೆಚ್ಚಿದೆ. ಆದರೆ ಒಂದು ಕಾಲದಲ್ಲಿ ಅದಕ್ಕೆ ಮುಂಚೂಣಿಯಲ್ಲಿದ್ದ ಭಾರತ ತನ್ನ ಐತಿಹಾಸಿಕ ಕರ್ತವ್ಯವನ್ನೂ ನಿರ್ವಹಿಸದೆ ಇದೆ.

ಇತ್ತೀಚೆಗೆ ದಕ್ಷಿಣ ಅಮೆರಿಕದ ಕೊಲಂಬಿಯಾದ ರಾಜಧಾನಿ ಕಾರ್ಟಾಗಿನದಲ್ಲಿ ಜರುಗಿದ ಅಲಿಪ್ತ ರಾಷ್ಟ್ರಗಳ ವಿದೇಶಾಂಗ ಸಚಿವರ ಸಮ್ಮೇಳನದಲ್ಲಿ ಭಾರತಕ್ಕೆ ಚಳವಳಿಗೆ ಹೊಸ ದಿಶೆಯನ್ನೂ ನೀಡಲು ಅವಕಾಶವಿತ್ತು. ಆದರೆ ಸಂಕುಚಿತ ದೃಷ್ಟಿಯಿಂದಾಗಿ ಆ ಅವಕಾಶ ಕಳೆದುಕೊಂಡಿತು. ಪಾಕಿಸ್ತಾನದ ಮಿಲಿಟರಿ ಆಡಳಿತವನ್ನು ಚಳವಳಿಯಿಂದ ಹೊರಗಿರಿಸಲು ಪ್ರಜಾಪ್ರಭುತ್ವದ ಮಂತ್ರ ಜಪಿಸಿ ಸಫಲಗೊಂಡಿದ್ದು ದೊಡ್ಡ ಸಾಧನೆಯೇನಲ್ಲ. ಅದಕ್ಕಿಂತಲೂ ಮುಖ್ಯವಾದ ವಿಷಯಗಳನ್ನು ಚಳವಳಿಯ ಸದಸ್ಯ ರಾಷ್ಟ್ರಗಳು ಎದುರಿಸುತ್ತಿರುವುದರ ಕಡೆಗೆ ಗಮನ ಸೆಳೆದಿದ್ದರೆ ಒಳ್ಳೆಯದಾಗುತ್ತಿತ್ತು. ಈ ಸಂದರ್ಭದಲ್ಲಿ ಗಮನಿಸಬೇಕಾದ ಮುಖ್ಯವಾದ ಅಂಶವೆಂದರೆ, ಅಲಿಪ್ತ ಚಳವಳಿಯ ಸದಸ್ಯ ರಾಷ್ಟ್ರಗಳು ವಿಭಿನ್ನ ರಾಜಕೀಯ, ಸಾಮಾಜಿಕ, ಆರ್ಥಿಕ ವ್ಯವಸ್ಥೆ ಹೊಂದಿರುವಂಥವು. ಪ್ರಜಾಪ್ರಭುತ್ವ ರಾಷ್ಟ್ರಗಳು, ನಿರಂಕುಶಾಡಳಿತೆಯಲ್ಲಿರುವ ಪ್ರದೇಶಗಳು, ಒಂದೇ ಪಕ್ಷ ಅಧಿಕಾರದಲ್ಲಿರುವ ದೇಶಗಳು, ಸರ್ವಾಧಿಕಾರ ಆಡಳಿತದಲ್ಲಿರುವ ದೇಶಗಳು ಅದರ ಸದಸ್ಯ ರಾಷ್ಟ್ರಗಳಾಗಿವೆ. ಅಲಿಪ್ತ ಚಳವಳಿಯ ಒಂದು ಮೂಲತತ್ವ ಸದಸ್ಯ ರಾಷ್ಟ್ರಗಳ, ಅಂದರೆ ಇತರ ದೇಶಗಳ, ಆಂತರಿಕ ವ್ಯವಹಾರಗಳಲ್ಲಿ ತಲೆಹಾಕದಿರುವುದು. ಅದು ಆಯಾಯ ದೇಶಗಳ ಜನತೆಗೆ ಸಂಬಂಧಿಸಿದ್ದು. ಹಾಗಾಗಿ ಮುಂದೆ ಬಾಂಗ್ಲಾದೇಶದ ರಾಜಧಾನಿ ಢಾಕಾದಲ್ಲಿ ನಡೆಯುವ ಅಲಿಪ್ತ ಚಳವಳಿಯ ಶೃಂಗ ಸಮ್ಮೇಳನ ಈ ವಿಷಯವನ್ನು ಪರಿಶೀಲಿಸ ಬೇಕಾಗುತ್ತದೆ. ಶೀತಯುದ್ಧದ ಕಾಲದಲ್ಲಿ ಅಮೆರಿಕ ಯಾವಾಗಲೂ ಪ್ರಜಾಪ್ರಭುತ್ವದ ತುತ್ತೂರಿ ಊದುತ್ತಲೇ ಸರ್ವಾಧಿಕಾರಿ ಆಡಳಿತಗಳಿಗೆ ಬೆಂಬಲಿಸುತ್ತಿದ್ದುದನ್ನು ಇಲ್ಲಿ ನೆನಪಿಸಿಕೊಳ್ಳುವುದು ಸೂಕ್ತ. ಪ್ರಾಯಶಃ ವಾಜಪೇಯಿ ಸರಕಾರದ ವಿದೇಶಾಂಗ ಸಚಿವ ಜಸ್ವಂತ ಸಿಂಗ್ ಕಾರ್ಟಾಗಿನದಲ್ಲಿ ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿದದ್ದೂ ಅಮೆರಿಕದ ಮಾದರಿ ಅನುಸರಿಸಿಯೇ ಇರಬೇಕು. ಒಟ್ಟಿನಲ್ಲಿ ಇಂದು ಆಡಳಿತದಲ್ಲಿರುವ ಸರಕಾರ ಸ್ವಾತಂತ್ರ್ಯಾನಂತರದ ಕಾಲದಲ್ಲಿ ದೇಶದ [illegible] [illegible]

-ಹೀಯಾರ್ಕೆ

ಪ್ರೊ॥ ಗಾಡ್ಗಿಲ್‌ರವರ ಮುಖವಾಡ

ವಲ್ಲಂಪಾಟಿ ವೆಂಕಟಸುಬ್ಬಯ್ಯ

ನನ್ನ ವಿಮರ್ಶಾತ್ಮಕ ಕೃತಿ ''ಕಥಾಶಿಲ್ಪಂ''ಗೆ ಕೇಂದ್ರ ಸಾಹಿತ್ಯ ಅಕಾಡೆಮಿ ನೀಡಿದ ಪ್ರಶಸ್ತಿಯನ್ನು ಸ್ವೀಕರಿಸಲೋಸುಗ ನಾನು ಫೆಬ್ರವರಿ ೨೨-೨೩ರಂದು ದಿಲ್ಲಿಗೆ ಹೋಗಿದ್ದೆ. ಈ ಸಮಾರಂಭಕ್ಕೆ ಪ್ರೊ॥ ಗಂಗಾಧರ ಗಾಡ್ಗಿಲ್‌ರವರನ್ನು ಮುಖ್ಯ ಅತಿಥಿಯನ್ನಾಗಿ ಆಹ್ವಾನಿಸಿದ್ದಾರೆಂದು ತಿಳಿದು ನನಗೆ ಸಂತೋಷವಾಯಿತು. ವರ್ಷದ ಈ ಅತ್ಯಂತ ಮುಖ್ಯ ಸಮಾರಂಭಕ್ಕೆ ಸಾಹಿತ್ಯಕ್ಕೆ ಸಂಬಂಧಿಸದ ಯಾರೋ ರಾಜಕಾರಣಿಯನ್ನು ಆಹ್ವಾನಿಸುವ ಬದಲು ಅಕಾಡೆಮಿಯು ಹಿರಿಯ ಸಾಹಿತಿಯೊಬ್ಬರನ್ನು ಆಹ್ವಾನಿಸಿದ್ದುದು ತುಂಬಾ ಉಚಿತವಾಗಿದ್ದಿತು. ಅವರ ಭಾಷಣ ಕೇಳಲು ನಾನು ಬಿಚ್ಚು ಮನಸ್ಸಿನಿಂದ ಅತ್ಯುತ್ಸುಕನಾಗಿ ಕಾದಿದ್ದೆ. ಆದರೆ ಅವರ ಭಾಷಣ ನನಗೆ ತುಂಬಾ ನಿರಾಶೆ ತಂದಿತು. ಪ್ರಶಸ್ತಿ ಸ್ವೀಕರಿಸುವ ನನ್ನ ಸಂತೋಷವನ್ನೂ ಅದು ನನ್ನಿಂದ ಕಸಿದಿದ್ದಿತು. ಅಷ್ಟೇ ಅಲ್ಲ, ತುಸು ಕೋಪವನ್ನೂ ತಂದಿತು. ನಿಜ, ಪ್ರೊ॥ ಗಾಡ್ಗಿಲ್‌ರು ತಮ್ಮ ಸ್ವಂತ ಅಭಿಪ್ರಾಯಗಳನ್ನು ಹೊಂದಿರಬಹುದು, ಆ ಹಕ್ಕು ಅವರಿಗಿದೆ. ಆದರೆ ಅವನ್ನು ವ್ಯಕ್ತಪಡಿಸಲು ಅವರು ಆಯ್ದುಕೊಂಡಿದ್ದ ಸಂದರ್ಭ ತಪ್ಪಾಗಿದ್ದಿತು. ಅದು ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ವಿತರಣಾ ಸಮಾರಂಭವಾಗಿದ್ದಿತೇ ಹೊರತು ಯಾವುದೇ ವಿಚಾರ ಸಂಕಿರಣವಾಗಿರಲಿಲ್ಲ.

ಅವರ ಭಾಷಣಕ್ಕೆ ನನ್ನ ಪ್ರತಿಕ್ರಿಯೆಯಾಗಿ ಅವರು ಮುಂದಿಟ್ಟ ಕೆಲವು 'ವಿಚಾರ'ಗಳನ್ನು ಇಲ್ಲಿ ಉಲ್ಲೇಖಿಸಬಯಸುತ್ತೇನೆ. ಅವರ ಭಾಷಣವು ಪಾಶ್ಚಿಮಾತ್ಯ ಸಾಹಿತ್ಯ ವಿಮರ್ಶೆಯಿಂದ ಜಾಗರೂಕವಾಗಿ ಆಯ್ದು ತೆಗೆದ ರಹಸ್ಯಗರ್ಭಿತ ಮಿಥ್ಯಾತ್ಮಕ ಪದಪುಂಜಗಳಿಂದ ವಿಜೃಂಭಿಸುತ್ತಿದ್ದಿತು. ಸಮಾಜವನ್ನು ನಗಣ್ಯೀಕರಿಸಿ 'ವ್ಯಕ್ತಿ ಜಾಗೃತಿ'ಯನ್ನು ವೈಭವೀಕರಿಸುವುದು ಅದರ ಮುಖ್ಯೋದ್ದೇಶವಾಗಿದ್ದಿತು.

ಅವರು ತಮ್ಮ ಭಾಷಣವನ್ನು ಸಾಹಿತ್ಯ ವಿಮರ್ಶಕರನ್ನು ಟೀಕಿಸುವುದರೊಂದಿಗೆ ಪ್ರಾರಂಭಿಸಿದರು. ಅವರು ಹೇಳಿದರು : ''ವಿಮರ್ಶಕರನ್ನು ನಾವಿಲ್ಲಿ ಪರಿಗಣಿಸುವುದು ಬೇಡ. ಎಷ್ಟೇ ಆಗಲಿ, ನಾನು ಸಾಹಿತಿಗಳನ್ನು ಉದ್ದೇಶಿಸಿ ಮಾತನಾಡುತ್ತಿರುವುದು. ಮತ್ತೆ ನಿಮ್ಮಲ್ಲಿ ಬಹುಮಂದಿಗೆ ವಿಮರ್ಶಕರ ಬಗೆಗೆ ಸಹಾನುಭೂತಿ ಇಲ್ಲದಿರುವ ಸಂಭವವೇ ಹೆಚ್ಚು.'' ಪ್ರಶಸ್ತಿ ವಿಜೇತರ ಮಧ್ಯೆ ವಿಮರ್ಶಕರೂ ಇದ್ದರಷ್ಟೆ. ಮೇಲಿನ ಮಾತುಗಳು ಅವರ ಬಗೆಗೆ ಅನಾಗರಿಕ ಹಾಗೂ ಒರಟು ಭಾವನೆಯನ್ನು ಉಂಟುಮಾಡುವಂತಿದ್ದವು. ಪ್ರೊ॥ ಗಾಡ್ಗಿಲ್‌ರು ತಾವೇ ಒಬ್ಬ ಸಾಹಿತ್ಯಿಕ ಅಕಾಡೆಮಿಯಲ್ಲಿದ್ದರೂ ಒಬ್ಬ ಸಾಹಿತ್ಯ ವಿಮರ್ಶಕನಂತೆಯೇ ಮಾತನಾಡುತ್ತಿದ್ದರು ಅನ್ನುವುದನ್ನು ಮರೆತಿದ್ದರು. ಗಂಭೀರವಾದ ಇಂತಹ ಸಮಾರಂಭಗಳಲ್ಲಿ ಅನಾಗರಿಕ ಮೂದಲಿಕೆಯ ಮಾತುಗಳನ್ನು ತಪ್ಪಿಸಬಹುದಿತ್ತು. ಅವರ ದೊಡ್ಡಸ್ತಿಗೆ ಇಂತಹ ಅಗತ್ಯ ಇದ್ದಿತ್ತೇನೋ!

ಅನಂತರ ಪ್ರೊ॥ ಗಾಡ್ಗಿಲ್‌ರ ವಾಗ್ಝರಿ ಲೇಖಕರ ಲಕ್ಷಣದ ಕಡೆಗೆ ತಿರುಗಿತು. ''ಲೇಖಕನೊಬ್ಬನ ಲಕ್ಷಣವು ಒಬ್ಬ ಉತ್ತಮ ಕೆಲಸಗಾರ, ಒಳ್ಳೆಯ ಪತಿ, ಒಳ್ಳೆಯ ತಂದೆ ಅಥವಾ ಒಳ್ಳೆಯ ಪ್ರಜೆ ಹೊಂದಿರಬೇಕಾದಂಥ ಲಕ್ಷಣವಲ್ಲ.'' ಮತ್ತೆ ಇವರು ಹೇಳುವುದು ಎಂತಹ ಲಕ್ಷಣ ಎಂದು ನನ್ನಂಥವರು ಆಶ್ಚರ್ಯಪಡುತ್ತಿದ್ದಾಗ ಅವರು ಬೇಗನೆಯೇ ಮಾತು ಮುಂದುವರೆಸಿದರು : ''ಅಂದರೆ ನಿಷ್ಠಾವಂತ ಗಂಡನೊಬ್ಬ, ಪ್ರಾಮಾಣಿಕ ಹಾಗೂ ಸಮರ್ಥ ಕೆಲಸಗಾರನೊಬ್ಬ ಲೇಖಕನಾಗಲಾರ ಎಂದೇನೂ ನಾನು ಹೇಳುತ್ತಿಲ್ಲ!'' ಭಾಷೆಯ ಬಗೆಗೂ ಅವರು ಇದೇ ರೀತಿಯ ಒಗಟುಗಳೊಂದಿಗೆ ಮಾತನಾಡಿದರು.

ಸಮಾಜ ಮತ್ತು ಸಾಹಿತಿಯ ನಡುವಿನ ಸಂಬಂಧದ ವಿಷಯ ಬಂದಾಗ ಪ್ರೊ॥ ಗಾಡ್ಗಿಲ್‌ರು ಮೊದಲು ಸ್ವಲ್ಪ ಸಂದಿಗ್ಧವಾಗಿ, ಅನಂತರ ತುಂಬ ಸ್ಪಷ್ಟವಾಗಿಯೇ ತಮ್ಮ ವಿಚಾರಗಳನ್ನು ಮುಂದಿಟ್ಟರು. ''ಸೃಜನಾತ್ಮಕ ಬರವಣಿಗೆಯು **ವ್ಯಕ್ತಿಯ ಅನನ್ಯ ಅನುಭವವನ್ನು** ಭಾಷೆಯ ಮೂಲಕ ವ್ಯಕ್ತಪಡಿಸುವ ಹಾಗೂ ಅದೇ ಹೊತ್ತಿನಲ್ಲಿ ಅದು ಅರ್ಥಗ್ರಾಹ್ಯವಾಗುವಂತೆ ಮಾಡುವ, ಒಂದು ನಿರಂತರ ಯತ್ನ'' (ಒತ್ತು ನನ್ನದು). ಈ ಪ್ರಕ್ರಿಯೆಯನ್ನು ''ನಿರೋಧಿಸುವ, ಅಸಭ್ಯಗೊಳಿಸುವ ಹಾಗೂ ಕಲುಷಿತಗೊಳಿಸುವ'' ಸಮಸ್ಯೆಗಳೂ ಹಲವಿವೆ ಎಂದವರು ದುಃಖಿಸಿದರು. ಆ ಸಮಸ್ಯೆಗಳು, ಅವರ ಪ್ರಕಾರ ಯಾವುದೇ ಕಾಲದಲ್ಲಿ ಅಸ್ತಿತ್ವದಲ್ಲಿರುವ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಬೌದ್ಧಿಕ ಪರಿಸರದಿಂದ ಉದ್ಭವಿಸುತ್ತವೆ. ಸಾಹಿತ್ಯದಲ್ಲಿ ವ್ಯಕ್ತಪಡಿಸಲು ಯೋಗ್ಯವಾದಂಥ ''ವ್ಯಕ್ತಿಯ ಅನನ್ಯ ಅನುಭವ'' ಅನ್ನುವಂತಹದೊಂದು ಲೇಖಕನಲ್ಲಿ ಅಸ್ತಿತ್ವದಲ್ಲಿದೆಯೇ ಎಂದು ಆಶ್ಚರ್ಯಪಡಬೇಕಾಗುತ್ತದೆ. ಅಂತಹುದೊಂದು ಅಸ್ತಿತ್ವದಲ್ಲಿದ್ದರೂ ಅದನ್ನು ಸಂವಹಿಸಲು ಯಾವುದೇ ಸಾಹಿತಿಗೆ ಸಾಧ್ಯವೇ? ಯಾರೋ ಒಬ್ಬನ 'ಅನನ್ಯ ವೈಯಕ್ತಿಕ ಅನುಭವ'ದಿಂದ ಓದುಗ ಏನು ಗಳಿಸಬಲ್ಲ? ಮನಶ್ಶಾಸ್ತ್ರೀಯ ರೀತ್ಯಾ ಅನುಭವ ಅನ್ನುವುದು ಸುತ್ತ ಮುತ್ತಲ ಜಗತ್ತು ಒದಗಿಸುವ ಪ್ರೇರಣೆಗೆ ಒಂದು ರೀತಿಯ ಪ್ರತಿಕ್ರಿಯೆ. ಮಾನವ ಮಾನವರ ನಡುವೆ ಅಂತರಕ್ರಿಯೆ ಇಲ್ಲದಿದ್ದರೆ ಹೇಳಿಕೊಳ್ಳಬಹುದಾದಂತಹ ಅನುಭವವೂ ಇರಬಾರದು. ಲೇಖಕನೊಬ್ಬ ನಿಸರ್ಗಕ್ಕೆ ಸಂಬಂಧಿಸಿ ಪ್ರತಿಕ್ರಿಯಿಸುವಾಗಲೂ ಅದು ಮಾನವ ಸ್ಥಿತಿಗತಿಗಳ ಮೇಲಿನ ಚಿಂತನೆಯೇ ಆಗಿರುತ್ತದೆ. ಸಾಮಾಜಿಕ, ಸಾಂಸ್ಕೃತಿಕ ಹಾಗೂ ಬೌದ್ಧಿಕ ಪರಿಸರವು ಹೇಗೆ ಸೃಷ್ಟ್ಯಾತ್ಮಕ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರುತ್ತದೆ ಅನ್ನುವುದನ್ನು ವರ್ಣಿಸುತ್ತಾ ಪ್ರೊ॥ ಗಾಡ್ಗಿಲ್‌ರು ಬಳಸಿದ ಮೂರು ಪದಗಳು (ನಿರೋಧಿಸುವ, ಅಸಭ್ಯಗೊಳಿಸುವ ಹಾಗೂ ಕಲುಷಿತಗೊಳಿಸುವ ಎಂಬ ಮೂರು ಪದಗಳು) ವೈಯಕ್ತಿಕವಾಗಿ ನನಗೆ ಆಘಾತಕರವಾಗಿದ್ದವು.

ತೆಲುಗು ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಹತ್ತಾರು ಕೃತಿಗಳನ್ನು ರಚಿಸಿ ಆಂಧ್ರಪ್ರದೇಶದಲ್ಲಿ ಖ್ಯಾತನಾಮರಾಗಿರುವ ಶ್ರೀ ವೆಂಕಟಸುಬ್ಬಯ್ಯನವರು ವೃತ್ತಿಯಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿದ್ದವರು. ಅವರಿಗೆ ಈವರೆಗೆ ಸಂದಿರುವ ಪ್ರಶಸ್ತಿ - ಗೌರವಗಳು ಹಲವು. ಈ ವರ್ಷ ಕೇಂದ್ರ ಸಾಹಿತ್ಯ ಅಕಾಡೆಮಿಯು ಅವರ ಒಂದು ವಿಮರ್ಶಾ ಕೃತಿಗೆ ಪ್ರಶಸ್ತಿಯನ್ನು ನೀಡಿದೆ. ಅದನ್ನು ಸ್ವೀಕರಿಸಿದ ಶ್ರೀಯುತ ವಲ್ಲಂಪಾಟಿಯವರು ''ಹೊಸತು''ಗಾಗಿಯೇ ವಿಶೇಷ ಲೇಖನವೊಂದನ್ನು ಬರೆದಿದ್ದಾರೆ.

ಪ್ರೊ॥ ಗಾಡ್ಗಿಲ್‌ರು ಲೇಖಕನನ್ನು ಸಮಾಜದಿಂದ ಪ್ರತ್ಯೇಕಗೊಳಿಸುವುದರಿಂದಷ್ಟೇ ತೃಪ್ತಿಪಟ್ಟುಕೊಳ್ಳಲಿಲ್ಲ. ಅವರು ಸಾಹಿತಿಗೂ ಅವನ ಅನುಭವಕ್ಕೂ ನಡುವೆ ಒಂದು ಬೆಣೆ ತೂರಿಸಲು ಯತ್ನಿಸಿದರು. ಸಾಣೆ ಗುರೂಜಿ ಹಾಗೂ ಮಹಾಶ್ವೇತಾದೇವಿಯವರಂಥ ಕ್ರಿಯಾಶೀಲ ಲೇಖಕರನ್ನು ಮೆಚ್ಚಬಹುದಾದರೂ ಲೇಖಕನೊಬ್ಬ ಸಾಮಾಜಿಕವಾಗಿ ಕ್ರಿಯಾಶೀಲನಾಗಿರಬೇಕಿಲ್ಲ ಎಂದವರು ಹೇಳಿದರು. ತಮ್ಮ ವಾದಕ್ಕೆ ಸಮರ್ಥನೆಯಾಗಿ ಅವರು ಶೇಕ್‌ಸ್ಪಿಯರ್ ಹಾಗೂ ಕಾನನ್ ಡಾಯ್ಲ್‌ರವರನ್ನು ಉದಾಹರಣೆಯನ್ನಾಗಿ ನೀಡಿದರು. ಶೇಕ್‌ಸ್ಪಿಯರ್ ಸಾಮಾಜಿಕ ಕಾರ್ಯಕರ್ತ ನಾಗಿರಲಿಲ್ಲ, ಕೊನೆಗೆ ಡಾಯ್ಲ್ ಪತ್ತೇದಾರನಾಗಿರಲಿಲ್ಲ; ಆದರೂ ಅವರು ಮಹಾನ್ ಲೇಖಕರಾಗಿದ್ದರು, ಎಂದವರು ತಿಳಿಸಿದರು. ಆದರೆ, ಪ್ರತಿಯೊಬ್ಬ ಸಾಹಿತಿಯೂ ಒಬ್ಬ ಸಾಮಾಜಿಕ ಕಾರ್ಯಕರ್ತ ನಾಗಿರಬೇಕು ಎಂದು ಯಾರು ಯಾವಾಗ ಹೇಳಿದ್ದಾರೆ? ಅಷ್ಟೇ ಅಲ್ಲ, ಶೇಕ್‌ಸ್ಪಿಯರ್ ಆಗ ತಾನೇ ಉದಯಿಸುತ್ತಿದ್ದ ಮಾನವೀಯ ತತ್ವಶಾಸ್ತ್ರದ ಪ್ರಬಲ ಪ್ರತಿಪಾದಕನಾಗಿದ್ದ ಎಂಬುದನ್ನು ಪ್ರೊ॥ ಗಾಡ್ಗಿಲ್ ತಿಳಿಯಲು ವಿಫಲರಾಗಿದ್ದಾರೆ. ಯಾರೇ ಆಗಲಿ ಸಮಾಜವನ್ನು ನಿರಾಕರಿಸಿದರೆ ಇತಿಹಾಸವನ್ನೇ ನಿರಾಕರಿಸಿದಂತಾಗುತ್ತದೆ. ಅಂಥವನು ವಿಚಾರವೊಂದನ್ನು ಐತಿಹಾಸಿಕ ಪ್ರಕ್ರಿಯೆ ಯನ್ನಾಗಿ ಇರಿಸಲಾರ ಹಾಗೂ ವಿಚಾರದ ಇತಿಹಾಸವನ್ನು ಅಭ್ಯಸಿಸಲಾರ. ಶೇಕ್‌ಸ್ಪಿಯರ್ ಜೀವಿಸಿದ್ದ ಎಲಿಜಬೆತ್‌ನ ಯುಗವು ಸಾಮಾಜಿಕ ಕ್ರಿಯಾಶೀಲತೆಯ ಯುಗವಾಗಿ ರಲಿಲ್ಲವೆಂಬುದನ್ನು ಪ್ರೊ॥ ಗಾಡ್ಗಿಲ್ ತಿಳಿದಿರಬೇಕಿದ್ದಿತು. ಶೇಕ್‌ಸ್ಪಿಯರನು ಹೇಗೆ ಇರಾಸ್ಮಸ್ ಮತ್ತಿತರರು ಜನಪ್ರಿಯಗೊಳಿಸಿದ ಮಾನವೀಯತೆಗೆ ಸಾಹಿತ್ಯಿಕ ಅಭಿವ್ಯಕ್ತಿ ನೀಡಿದ ಎಂಬುದನ್ನು ಎಲ್. ಸಿ. ನೈಟ್ಸ್ ಹಾಗೂ ಸ್ಮಿರ್ನೋವ್ ತುಂಬ ಮನವೊಪ್ಪುವಂತೆ ತೋರಿಸಿಕೊಟ್ಟಿದ್ದಾರೆ.

(ಇಲ್ಲಿ ಮಾನವೀಯ ವರ್ತನೆ ಹಾಗೂ ಸೈದ್ಧಾಂತಿಕ ಪ್ರಕಲ್ಪನೆಯಾಗಿ ಮಾನವೀಯತೆ ಇವುಗಳ ನಡುವೆ ತಮ್ಮ ಚಿಂತನೆಯನ್ನು ಗೊಂದಲಗೊಳಿಸಿಕೊಳ್ಳಬಾರದೆಂದು ನಾನು ಪ್ರೊ॥ ಗಾಡ್ಗಿಲ್‌ರಿಗೆ ಮನವಿ ಮಾಡಿಕೊಳ್ಳುತ್ತೇನೆ).

ಈ ಹಂತಕ್ಕೆ ಬಂದಾಗ ಪ್ರೊ॥ ಗಾಡ್ಗಿಲ್ ತಾವು ಅಲ್ಲಿನವರೆಗೂ ಧರಿಸಿದ್ದ ಮುಖವಾಡವನ್ನು ತೆಗೆದುಹಾಕಿ ತಮ್ಮ ನಿಜ ಸ್ವರೂಪವನ್ನು ಬಯಲು ಮಾಡಿದರು. ಭಾರತದಲ್ಲಿಂದು ಸೃಜನಾತ್ಮಕ ಲೇಖಕನನ್ನು ನಿಜಕ್ಕೂ ಬಾಧಿಸುತ್ತಿರುವ ಅಂಶವೆಂದರೆ - ವೈಚಾರಿಕ ಸಿದ್ಧಾಂತಗಳ ದಾಳಿ ಎಂದವರು ಹೇಳಿದರು. ಅನಂತರ ಅವರು ಮಾರ್ಕ್ಸ್‌ವಾದದ ಮೇಲೆ ಭರ್ಜರಿ ಪ್ರಹಾರ ನಡೆಸಿದರು: ''ಮಾರ್ಕ್ಸ್‌ವಾದವು ಆರ್ಥಿಕ ಕುರುಡು ಸಿದ್ಧಾಂತವಾಗಿ ನಾಶವಾಗಿದ್ದರೂ ಅಥವಾ ಸೋತಿದ್ದರೂ ಭಾರತದಲ್ಲಿಂದು ಅದು ಲೇಖಕರ, ಜನರ ಹಾಗೂ ಸರಕಾರಗಳ ಚಿಂತನೆಯ ಮೇಲೂ ಕ್ರಿಯೆಯ ಮೇಲೂ ಪ್ರಭಾವ ಬೀರುತ್ತಿರುವುದಾಗಿ ಕಂಡುಬರುತ್ತಿರುವುದು'' ತಮ್ಮನ್ನು ಚಿಂತಾಕ್ರಾಂತರನ್ನಾಗಿ ಮಾಡಿದೆ, ಎಂದು ಪ್ರೊ॥ ಗಾಡ್ಗಿಲ್ ಹೇಳಿದರು. ಮೊದಲನೆಯದಾಗಿ, ಮಾರ್ಕ್ಸ್‌ವಾದವನ್ನು ಕೆಲವರು ಒಂದು ಕುರುಡು ಸಿದ್ಧಾಂತವನ್ನಾಗಿ ಮಾಡಲು ಯತ್ನಿಸಿದರೂ ಅದು ಕುರುಡು ಸಿದ್ಧಾಂತವಲ್ಲ. ಅದು ಯಾವುದೇ ಪ್ರಕ್ರಿಯೆಯನ್ನು ಸಾಧ್ಯವಾದಷ್ಟೂ ವಸ್ತುನಿಷ್ಠವಾಗಿ ಅರ್ಥ ಮಾಡಿಕೊಳ್ಳಲು ನೆರವಾಗುವ ಒಂದು ವಿಧಾನಶಾಸ್ತ್ರ. ಅದು ''ನಾಶವಾಗಿಯೂ ಇಲ್ಲ, ಸೋತೂ ಇಲ್ಲ''. ಏಕೆಂದರೆ ಪ್ರೊ॥ ಗಾಡ್ಗಿಲ್‌ರವರೇ ಒಪ್ಪಿ ನುಡಿದಿರುವಂತೆ, ಅದು ''ಭಾರತದಲ್ಲಿಂದು ಲೇಖಕರ, ಜನರ ಹಾಗೂ ಸರಕಾರಗಳ ಮೇಲೆ ಮಹೋನ್ನತ ಪ್ರಭಾವ ಬೀರುತ್ತಿದೆ.''

ಲೇಖಕನು ಸಿದ್ಧಾಂತಗಳಿಗೆ ಬದ್ಧನಾಗಿದ್ದರೆ, ಅದು ಸಾಮಾಜಿಕ ಪರಿಸ್ಥಿತಿಗಳಿಗೂ ಘಟನೆಗಳಿಗೂ ಅವನ ಪ್ರತಿಕ್ರಿಯೆಯನ್ನು ಪೂರ್ವ ನಿರ್ಧರಿಸುತ್ತದೆ, ಅಂತಹ ಬದ್ಧತೆ ಲೇಖಕನ ಸೃಜನಾತ್ಮಕತೆಯನ್ನು ಹತ್ತಿಕ್ಕುತ್ತದೆ ಎಂದು ಪ್ರೊ॥ ಗಾಡ್ಗಿಲ್ ಭಾವಿಸುತ್ತಾರೆ. ಅವರು ಎಲ್ಲ ಸಿದ್ಧಾಂತಗಳಿಗೂ ವಿರೋಧವಿದ್ದಾರೆಂದು ಇದರಿಂದ ಭಾವನೆ ಬರಬಹುದು. ಆದರೆ ಹಾಗಲ್ಲ. ಅವರ ವಿಶ್ಲೇಷಣೆಯನ್ನೂ ಅವರು ನೀಡಿರುವ ಉದಾಹರಣೆಗಳನ್ನೂ ಗಮನಿಸಿದಾಗ ಅವರು ಮಾರ್ಕ್ಸ್‌ವಾದಿ ಸಿದ್ಧಾಂತಕ್ಕಷ್ಟೆ ವಿರೋಧಿಗಳು ಎಂಬುದು ಕಂಡುಬರುತ್ತದೆ. ಇದೊಂದು ಹಳೆಯ ತಂತ್ರ. ಪ್ರೊ॥ ಗಾಡ್ಗಿಲ್‌ರಿಗೂ ಮುನ್ನ ಅನೇಕ ''ಬುದ್ಧಿ ಜೀವಿಗಳು'' ಈ ನಾಟಕ ಆಡಿದ್ದಾರೆ. ಅವರು ಮೊದ ಮೊದಲು ಒಟ್ಟಿನ ಮೇಲೆ ಎಲ್ಲ ಸೈದ್ಧಾಂತಿಕ ಪೂರ್ವಭಾವನೆಗಳ ಬಗೆಗೂ ಮಾತಿನಲ್ಲಿ ಗುಡುಗುತ್ತಾರೆ, ಕೊನೆಗೆ ಕ್ರಿಯೆಯಲ್ಲಿ ಮಾರ್ಕ್ಸ್‌ವಾದವನ್ನಷ್ಟೆ ವಿರೋಧಿಸುತ್ತಾರೆ. ಇತರ ಸಿದ್ಧಾಂತಗಳ ಬಗೆಗೆ, ಅವು ಎಷ್ಟೇ ಪ್ರತಿಗಾಮಿಯಾಗಿರಲಿ, ಎಷ್ಟೇ ಫ್ಯಾಸಿಸ್ಟ್ ಸ್ವರೂಪದ್ದಾಗಿರಲಿ, ಅವರ ಜಗಳ ಇಲ್ಲ. ಅವರು ವಾಸ್ತವವಾಗಿ ಮಾರ್ಕ್ಸ್‌ವಾದವನ್ನು ವಿರೋಧಿಸುವ ಮೂಲಕ ಅಂತಹವುಗಳಿಗೆ ಪ್ರೋತ್ಸಾಹ ನೀಡುತ್ತಾರೆ.

ಪ್ರಾಮಾಣಿಕನಾದ ಬುದ್ಧಿಜೀವಿಯೊಬ್ಬ ನಿಜಕ್ಕೂ ಸೈದ್ಧಾಂತಿಕವಾಗಿ ತಟಸ್ಥನಾಗಿರಲು ಸಾಧ್ಯವೇ ಅನ್ನುವುದನ್ನು ಸ್ಥೂಲವಾಗಿ ಪರಿಶೀಲಿಸೋಣ. ಬುದ್ಧಿಜೀವಿ (ಅಥವಾ ಲೇಖಕ) ವಿಚಾರಗಳೊಂದಿಗೆ ವ್ಯವಹರಿಸುತ್ತಾನೆ. ಅವು ಸಮಾಜದ ಕಾಲದ ಉತ್ಪನ್ನ. ನಾವು ಯಾವ ವಿಚಾರಗಳನ್ನು ಶುದ್ಧ ಖಾಸಗಿ ಹಾಗೂ ವೈಯಕ್ತಿಕ ಎಂದು ಭಾವಿಸುತ್ತೇವೋ ಅವೂ, ಗಾಢವಾಗಿ ವಿಶ್ಲೇಷಿಸಿ ನೋಡಿದರೆ, ಹಾಗಲ್ಲವೆಂದೇ ಕಂಡುಬರುತ್ತದೆ. ಲೇಖಕನೊಬ್ಬ ವಿಚಾರಗಳ ಬಗೆಗೆ ಬರೆಯುವಾಗ ತಟಸ್ಥನಾಗಿರಲು ಸಾಧ್ಯವೇ ಇಲ್ಲ. ಏಕೆಂದರೆ ವಿಚಾರಗಳು ತಟಸ್ಥವಲ್ಲ. ತಟಸ್ಥ ಇತಿಹಾಸದ ಬಗೆಗೆ ಮಾತನಾಡುವಂಥ ಚರಿತ್ರಕಾರರ ಕುರಿತು ಹರ್ಬರ್ಟ್ ಬಟರ್‌ಫೀಲ್ಡ್‌ರು ಹೇಳಿರುವ ಮಾತುಗಳನ್ನು ನಾನಿಲ್ಲಿ ಉದ್ಧರಿಸಬಯಸುತ್ತೇನೆ: ''ತಮ್ಮಲ್ಲೇ ತಮ್ಮವೇ ಆದ ಪೂರ್ವ ಕಲ್ಪನೆಗಳು ಎಷ್ಟಿವೆ ಎಂಬುದನ್ನು ಪರೀಕ್ಷಿಸಿ ಕಂಡುಕೊಳ್ಳಲಾರದೆ, ತಾವು ಯಾವುದೇ ಪೂರ್ವ ಕಲ್ಪನೆಗಳಿಂದ ಮುಕ್ತರು ಎಂದು ನಿರಾತಂಕದಿಂದ ಭಾವಿಸಿಕೊಳ್ಳುವವರೇ ಕುರುಡರಲ್ಲಿ ಕುರುಡರು.''

ಚರಿತ್ರಕಾರರ ಹಾಗೂ ಚರಿತ್ರಲೇಖನ ತಜ್ಞರ ಬಗೆಗೆ ಬಟರ್‌ಫೀಲ್ಡ್ ಏನು ಹೇಳುತ್ತಾರೋ ಅದು ಲೇಖಕರ ವಿಷಯದಲ್ಲೂ ತುಂಬ ಮಟ್ಟಿಗೆ ನಿಜ. ಪ್ರೊ॥ ಗಾಡ್ಗಿಲ್‌ರೂ ಒಂದು ಸಿದ್ಧಾಂತಕ್ಕೆ ಬದ್ಧರೆಂದೇ ನನ್ನ ಭಾವನೆ. ಮಾರ್ಕ್ಸ್‌ವಾದ ವಿರೋಧವೇ ಅವರ ಸಿದ್ಧಾಂತ. ಎರಡು ಬಗೆಯ ಲೇಖಕರಷ್ಟೆ ಸಿದ್ಧಾಂತದಲ್ಲಿ ನಂಬಿಕೆ ಹೊಂದಿರುವುದಿಲ್ಲ (ಅಥವಾ ತಮಗೆ ನಂಬಿಕೆ ಇಲ್ಲ ಎಂದು ಹೇಳುತ್ತಾರೆ): ಒಂದು ಬಗೆಯವರು ವ್ಯಾಪಾರೀ ಲೇಖಕರು. ಅವರು ಹಣಕ್ಕಾಗಿಯಷ್ಟೇ ಬರೆಯುತ್ತಾರೆ. ಯಾವುದು ಮಾರಾಟವಾಗುತ್ತದೋ ಅದೇ ಅವರ ಲೇಖನ ಸಾಮಗ್ರಿ. ಇನ್ನೊಂದು ಬಗೆಯವರು 'ಅಕ್ಕಿಯ ಮೇಲೆ ಆಸೆ, ನೆಂಟರ ಮೇಲೆ ಪ್ರೀತಿ' ಅನ್ನುವಂಥವರು. ಇವರು ಪ್ರತಿಯೊಂದನ್ನೂ ಪ್ರತಿಯೊಬ್ಬರನ್ನೂ ತಮ್ಮ ಸ್ವಂತ ಪುರೋಭಿವೃದ್ಧಿಗೆ ಬಳಸಿಕೊಳ್ಳುವವರು. ಈ ಎರಡು ಮಾದರಿಯ ಲೇಖಕರ ಒಂದು ಸಾಮಾನ್ಯ ಲಕ್ಷಣವೆಂದರೆ ಅವರಿಗೆ ಸಾಮಾಜಿಕ ಧೈರ್ಯ ಇಲ್ಲದಿರುವುದು. ವಾಲ್ಮೀಕಿಯಿಂದ ಹಿಡಿದು ಪ್ರೇಮಚಂದ್‌ವರೆಗೆ ನಮ್ಮೆಲ್ಲ ಸಾಹಿತ್ಯ ಶ್ರೇಷ್ಠರೂ ಸಿದ್ಧಾಂತದಲ್ಲಿ ನಂಬಿಕೆ ಇದ್ದವರೇ. ಅದನ್ನು ಅರಿತು ತಮ್ಮ ಓದುಗರಿಗೆ ತಲುಪಿಸಲೆಂದೇ ಸಾಹಿತ್ಯ ಕೃಷಿಗೈದರು. ಇದಕ್ಕಾಗಿ ಅವರು ತಮ್ಮೆಲ್ಲ ಸೌಂದರ್ಯಾಭಿಜ್ಞತಾ ಸಾಮರ್ಥ್ಯವನ್ನು ಪೂರ್ಣ ವಾಗಿ ಬಳಸಿಕೊಂಡರು. ಸಿದ್ಧಾಂತದಲ್ಲಿ ನಂಬಿಕೆ ಎಂದ ಮಾತ್ರಕ್ಕೆ ಯಾವುದೇ ರಾಜಕೀಯ ಪಕ್ಷದ ನೀತಿಯನ್ನು ಕುರುಡಾಗಿ ಅನುಸರಿಸುವುದು ಅಥವಾ ಅಗ್ಗವಾದ ಪ್ರಚಾರಾತ್ಮಕ ಕಥೆ ಕವನಗಳನ್ನು ಹೊಸೆಯುವುದು ಎಂದೇನೂ ಅರ್ಥವಲ್ಲ.

ಮಾರ್ಕ್ಸ್‌ವಾದದ ವಿರುದ್ಧ ತಮ್ಮ ದಾಳಿಯನ್ನು ಮುಂದುವರಿಸುತ್ತ ಪ್ರೊ॥ ಗಾಡ್ಗಿಲ್ ಹೇಳಿದರು : ''ಮಾರ್ಕ್ಸ್‌ವಾದಿಗಳು ಸಮಾಜವನ್ನು ವರ್ಗಗಳಾಗಿ ವಿಭಜಿಸುತ್ತಾರೆ, ಈ ವರ್ಗಗಳ ನಡುವೆ ಯಾವುದೇ ಸಾಮಾನ್ಯ ಅಂಶವನ್ನು ನಿರಾಕರಿಸುತ್ತಾರೆ.'' ಪ್ರೊ॥ ಗಾಡ್ಗಿಲ್‌ರು ಒಂದು ವಿಷಯ ತಿಳಿದಿರಬೇಕು : ಮಾರ್ಕ್ಸ್‌ವಾದವೇನೂ ವರ್ಗಗಳನ್ನು ಸೃಷ್ಟಿಸಿಲ್ಲ. ಅವರ ವರ್ಗಗಳೇ ಮಾರ್ಕ್ಸ್‌ವಾದವನ್ನು ಸೃಷ್ಟಿಸಿದವು. ಅಲ್ಲದೆ ವಿವಿಧ ವರ್ಗಗಳ ನಡುವೆ ಯಾವುದೇ ಸಾಮಾನ್ಯಾಂಶ ವಿಲ್ಲವೆಂದು ಮಾರ್ಕ್ಸ್‌ವಾದಿಗಳು ಎಂದೂ ಹೇಳಿದುದಿಲ್ಲ. ಬದಲು ಅವುಗಳ ನಡುವೆ ಇರುವ ಸಂಕೀರ್ಣ ಸಂಬಂಧಗಳನ್ನೇ ಅವರು ದೀರ್ಘಕಾಲದಿಂದ ಅಭ್ಯಸಿಸುತ್ತಿರುವುದು. ವರ್ಗಗಳು ಪರಸ್ಪರ ಸಹಕರಿಸುತ್ತಾ ಸಂಪತ್ತನ್ನು ಸೃಜಿಸಬೇಕು ಎಂದು ಪ್ರೊ॥ ಗಾಡ್ಗಿಲ್ ಸಲಹೆ ಮಾಡಿದರು. ಅದು ಸರಿ, ಆದರೆ ಹೀಗೆ ಸೃಜಿಸಿದ ಸಂಪತ್ತನ್ನು ಸ್ವಂತಕ್ಕೆ ಕಬಳಿಸುತ್ತಿರುವವರು ಯಾರು ಎಂಬುದನ್ನು ಮಾತ್ರ ಪ್ರೊ॥ ಗಾಡ್ಗಿಲ್ ಹೇಳಲಿಲ್ಲ. ಅವರೂ ಆ ''ಕುಟುಂಬ''ಕ್ಕೆ ಸೇರಿದವರೇನು? ಮುಂದುವರಿಯುತ್ತಾ ಅವರು ''ಪ್ರಮಾಣಾತ್ಮಕ ಸಾಹಿತ್ಯ ಸಿದ್ಧಾಂತ'' ಎನ್ನುವಂತಹುದರ ವಿರುದ್ಧ ಕೆಂಡ ಕಾರಿದರು. ಅವರ ಪ್ರಕಾರ ''ಬಹುಮತೀಯ ಬಡಜನರ ಜೀವನ ಕುರಿತ ಸಾಹಿತ್ಯ ಕೃತಿಗಳು ಅಂತಸ್ಸತ್ವದಲ್ಲಿ ಉಚ್ಚತರ'' ಎಂದು ಆ ಸಿದ್ಧಾಂತ ಹೇಳುತ್ತದಂತೆ. ಲೇಖಕನೊಬ್ಬ ಬಡಜನರ ಬಗೆಗೆ ಬರೆಯುವುದು ತನ್ನ ಅಂತಸ್ಸತ್ವಕ್ಕೆ ವಿರೋಧ ಎಂದು ಭಾವಿಸಿದರೆ, ಹಾಗೆ ಬರೆಯಲೇ ಬೇಕೆಂದು ಒತ್ತಾಯಿಸುವುದು ತಪ್ಪು ಎನ್ನುತ್ತಾರೆ ಪ್ರೊ॥ ಗಾಡ್ಗಿಲ್. ಬರಹಗಾರ ಲೇಖಕನೊಬ್ಬನ ಕಾಳಜಿಗಳೂ ಸಮಾಜದ ಸದಸ್ಯನಾಗಿ ಅವನ ಕಾಳಜಿಗಳೂ ಒಂದೇ ಆಗಿರಬೇಕಿಲ್ಲ, ಬಹುವೇಳೆ ಅವು ಬೇರೆಯೇ ಆಗಿರುತ್ತವೆ ಎಂದವರು ಭಾವಿಸುತ್ತಾರೆ.

ಕೊನೆಯಲ್ಲಿ ಪ್ರೊ॥ ಗಾಡ್ಗಿಲ್‌ರು ''ಸಿದ್ಧಾಂತಗಳ ವಿರುದ್ಧ ಯುದ್ಧ ಸಾರುವಂತೆ'' ಲೇಖಕರಿಗೆ ಕಹಳೆ ಕರೆ ನೀಡಿದರು. ಆದರೆ ಈ 'ಸಿದ್ಧಾಂತಗಳು' ಎನ್ನುವುದು ಅವರ ದೃಷ್ಟಿಯಲ್ಲಿ ಏಕವಚನದ್ದು; ಅಂದರೆ ಮಾರ್ಕ್ಸ್‌ವಾದಿ ಸಿದ್ಧಾಂತಕ್ಕಷ್ಟೆ ಅನ್ವಯವಾಗುವಂತಹುದು ಅನ್ನುವುದರಲ್ಲಿ ಆಶ್ಚರ್ಯವಿಲ್ಲ. ಬರೀಸ್ ಪಾಸ್ತರ್‌ನಾಕ್‌ರಂತೆ ಸಮರ ಸಾರಬೇಕು ಎಂದವರು ಲೇಖಕರಿಗೆ ಸೂಚಿಸಿದಾಗ ಅವರ ಮನಸ್ಸಿನಲ್ಲಿ ಹುದುಗಿದ್ದ ಭಾವನೆ ಸುಸ್ಪಷ್ಟವಾಯಿತು. ಸಿದ್ಧಾಂತಗಳ ಬಗೆಗೆ ಪ್ರೊ॥ ಗಾಡ್ಗಿಲ್‌ರ ಈ ಮನೋಭಾವ ಮಾರ್ಕ್ಸ್‌ವಾದಿ ವಿರೋಧಿ ಬುದ್ಧಿಜೀವಿಗಳೆಲ್ಲರ ಮನೋಭಾವವೇ ಆಗಿದೆ. ಅವರು ಸಿದ್ಧಾಂತಗಳ ವಿರುದ್ಧ ಹೋರಾಡಿ ಎಂದು ಕರೆ ನೀಡುತ್ತಾರೆ, ಕೊನೆಯಲ್ಲಿ ಮಾರ್ಕ್ಸ್‌ವಾದವನ್ನಷ್ಟೆ ತಮ್ಮ ಪ್ರಹಾರದ ಗುರಿಯನ್ನಾಗಿ ಮಾಡಿಕೊಳ್ಳುತ್ತಾರೆ. ಇವರು ಆಂಗ್ಲಕವಿ ಅಲೆಕ್ಸಾಂಡರ್ ಪೋಪ್ ಹೇಳಿರುವಂತೆ ''ಗಾಯಗೊಳಿಸಲು ಇಚ್ಛಿಸುವ ಆದರೆ ಪ್ರಹಾರ ನೀಡಲು ಹೆದರುವಂಥ'' ಜನ. ಹಾಗಾಗಿ ಸಹ ಮಾನವರ ಆಗು ಹೋಗುಗಳಲ್ಲಿ ನಿಜಕ್ಕೂ ಆಸಕ್ತಿ ಇರುವಂಥ ಲೇಖಕರು ಇಂಥ ಜನರ ಮುಖವಾಡವನ್ನು ಕಿತ್ತೆಸೆಯಬೇಕು ಮತ್ತು ಅವರು ನಿಜಕ್ಕೂ ಎಂಥ ಜನ ಅನ್ನುವುದನ್ನು ಸಾಹಿತ್ಯ ಜಗತ್ತಿಗೆ ತೋರಿಸಿಕೊಡಬೇಕು. ಇದು ನೈಜ ಸಾಹಿತ್ಯಾಸಕ್ತರೆಲ್ಲರ ಕರ್ತವ್ಯ.

ವಲ್ಲಂಪಾಟ [illegible]
ನಂ. ೧. ಟೀಚರ್ಸ್ ಕಾಲೊನಿ, [illegible]

ಮಾರ್ಚ್ ತಿಂಗಳ ಪ್ರಶ್ನೆಗೆ ಉತ್ತರ

ಕಣ್ಣೋಟಕ್ಕೆ ಒಂದನ್ನೊಂದು ಹೋಲುವ ಹನ್ನೆರಡು ನಾಣ್ಯಗಳಲ್ಲಿ ಹನ್ನೊಂದು ಸಮಾನತೂಕವುಳ್ಳವಾಗಿದ್ದು ಒಂದು ಮಾತ್ರ ಭಿನ್ನ ತೂಕವನ್ನು ಹೊಂದಿದೆ. ಈ ವಿಭಿನ್ನ ನಾಣ್ಯವು ಉಳಿದವುಗಳಿಗಿಂತ ಹಗುರವೋ, ಭಾರವೋ ಎಂಬ ಮಾಹಿತಿಯೂ ಅಲಭ್ಯ. ತಕ್ಕಡಿಯೊಂದನ್ನು ಉಪಯೋಗಿಸಿ (ತೂಕದ ಬಟ್ಟುಗಳಿಲ್ಲ) ತೂಕಗಳನ್ನು ಪರಸ್ಪರ ಹೋಲಿಸುವುದರಿಂದ ವಿಭಿನ್ನ ನಾಣ್ಯದ ಪತ್ತೆ ಮತ್ತು ಅದು ಉಳಿದವುಗಳಿಗಿಂತ ಹಗುರವೋ, ಭಾರವೋ ಎಂಬ ನಿರ್ಣಯವನ್ನು ಮಾಡಬೇಕು. ಇದನ್ನು ಕನಿಷ್ಠ ಬಾರಿ ತೂಗುವುದರಿಂದ ನಿರ್ಧರಿಸಬೇಕು.

ಕನಿಷ್ಠ ಬಾರಿ ತೂಗಬೇಕೆಂಬ ನಿರ್ಬಂಧವಿರುವುದರಿಂದ ಪ್ರತಿಬಾರಿ ತೂಗಿದಾಗಲೂ ಗರಿಷ್ಠ ಮಾಹಿತಿಯನ್ನು ಪಡೆಯುವಂತೆ ಯೋಜಿಸಬೇಕು.

ಮೂರುಬಾರಿ ತೂಗುವುದರಿಂದ ಪ್ರಶ್ನೆಗೆ ಉತ್ತರ ದೊರಕುತ್ತದೆ. ನಮಗೆ ಬೇಕಾಗಿರುವ ವಿಭಿನ್ನ ನಾಣ್ಯವನ್ನು 'ಲ' ಎಂದು ಕರೆಯೋಣ.

ಮುಂದಿನ ಯೋಜನೆಯಲ್ಲಿ ಪ್ರತಿಬಾರಿ ತೂಗಿದಾಗಲೂ 'ಲ' ನಾಣ್ಯವು ಆರಂಭದಲ್ಲಿ ಯಾವ ರಾಶಿಯಲ್ಲಿದ್ದಿತ್ತೋ ಆ ರಾಶಿಗಿಂತ ಕಡಿಮೆ ನಾಣ್ಯಗಳಿರುವ ರಾಶಿಯಲ್ಲಿ ಗುರುತಿಸಲು ಸಾಧ್ಯವಾಗುವಂತೆ ಹಾಗೂ ಇದನ್ನು ಅತ್ಯಂತ 'ಲಾಭ'ದಾಯಕವಾಗಿ ನಡೆಸುವಂತೆ ಯೋಜಿಸಲಾಗಿದೆ. ಇದಕ್ಕಾಗಿ ಹನ್ನೆರಡು ನಾಣ್ಯಗಳನ್ನು ನಾಲ್ಕು ನಾಣ್ಯಗಳಿರುವ ಮೂರು ಸಮ ರಾಶಿಗಳನ್ನಾಗಿ ವಿಂಗಡಿಸಬೇಕು. ಈ ಮೂರು ರಾಶಿಗಳನ್ನು 'ಯ' 'ಮ' 'ತ' ಎಂದು ಕರೆಯೋಣ.

(ಕ) 'ಯ' 'ಮ' 'ತ'ಗಳಲ್ಲಿ ಯಾವುದಾದರೂ ಎರಡು ರಾಶಿಗಳನ್ನು ಉದಾ: 'ಯ' ಮತ್ತು 'ಮ' ಗಳನ್ನು ತಕ್ಕಡಿಯ ವಿಭಿನ್ನ ತಟ್ಟೆಗಳಲ್ಲಿಟ್ಟು ತೂಕ ಹೋಲಿಸಿ (ಇದು ಮೊದಲನೆ ತೂಕ). ಈ ಹೋಲಿಕೆ ಕೆಳಗಿನ ಎರಡು ಬಗೆಯಲ್ಲಿ ಒಂದಾಗಿರುತ್ತದೆ.

(ಕಂ) 'ಯ' ಮತ್ತು 'ಮ' ಸಮಾನ ತೂಕ

(ಕಃ) 'ಯ' ಮತ್ತು 'ಮ' ಅಸಮ ತೂಕ

(ಕಂ) ನಂತಾದರೆ : 'ಲ' ನಾಣ್ಯವು 'ತ' ರಾಶಿಯಲ್ಲಿದೆ.

(ಕಃ) ನಂತಾದರೆ : 'ಲ' ನಾಣ್ಯವು 'ಯ' ಅಥವಾ 'ಮ' ರಾಶಿಯಲ್ಲಿದೆ. ಹೀಗೆ ಒಂದು ಬಾರಿ ತೂಗುವುದರಿಂದ 'ಲ' ನಾಣ್ಯವನ್ನು ಹೆಚ್ಚೆಂದರೆ ಎಂಟು ನಾಣ್ಯಗಳಿರುವ ಒಂದುರಾಶಿ (ಯ+ಮ)ಯಲ್ಲಿ ಗುರುತಿಸಬಹುದು. ಇದಕ್ಕಿಂತ 'ಉತ್ತಮ' ಎನ್ನಬಹುದಾದ ಮೊದಲನೆಯ ತೂಕದ ಯೋಜನೆ ಇಲ್ಲ!

(ಗ) ಮೇಲೆ ಹೇಳಿದ (ಕಂ) ನಂತಿರಲಿ. ಹೀಗಾಗಿ 'ಲ' ನಾಣ್ಯವು 'ತ' ರಾಶಿಯಲ್ಲಿರುವ ನಾಲ್ಕು ನಾಣ್ಯಗಳಲ್ಲಿ ಒಂದು. ಈಗ 'ತ' ರಾಶಿಯಿಂದ ಯಾವುದಾದರೂ ಮೂರು ನಾಣ್ಯಗಳನ್ನು ಸಂಗ್ರಹಿಸಿ ಬರುವ ರಾಶಿಯನ್ನು 'ರ' ಎಂದು ಕರೆಯೋಣ. ಹಾಗೆಯೇ 'ಯ' ಅಥವಾ 'ಮ' ರಾಶಿಯಿಂದ ತೆಗೆದ ಯಾವುದಾದರೂ ಮೂರು ನಾಣ್ಯಗಳನ್ನು ಸಂಗ್ರಹಿಸಿ ಬರುವ ರಾಶಿಯನ್ನು 'ಜ' ಎಂದು ಕರೆಯೋಣ. ಈಗ ತಕ್ಕಡಿಯನ್ನುಪಯೋಗಿಸಿ 'ರ' ಮತ್ತು 'ಜ'ಗಳ ತೂಕವನ್ನು ಹೋಲಿಸಿದಾಗ (ಇದು ಎರಡನೆಯ ತೂಕ) ಕೆಳಕಂಡಂತಿರಬಹುದು.

(ಗಂ) 'ರ' ಮತ್ತು 'ಜ' ಸಮಾನ ತೂಕ

(ಗಃ) 'ರ' ಮತ್ತು 'ಜ' ಅಸಮಾನ ತೂಕ

(ಗಂ) ನಂತಾದರೆ: 'ತ' ರಾಶಿಯಲ್ಲಿ ಉಳಿದಿರುವ ('ರ' ನಲ್ಲಿ ಇಲ್ಲದ) ಒಂದು ನಾಣ್ಯವೇ 'ಲ'. ಈ 'ಲ' ನ ತೂಕವನ್ನು ಉಳಿದ ಯಾವುದಾದರೂ ಒಂದು ನಾಣ್ಯದೊಡನೆ ತಕ್ಕಡಿಯ ಸಹಾಯದಿಂದ ಹೋಲಿಸಿ (ಇದು ಮೂರನೆ ತೂಕ) ಅದು ಉಳಿದವುಗಳಿಗಿಂತ ಹಗುರವೋ ಭಾರವೋ ಎಂದು ನಿರ್ಧರಿಸಬಹುದು.

(ಗಃ) ನಂತಾದರೆ : 'ಲ' ನಾಣ್ಯವು 'ರ' ರಾಶಿಯಲ್ಲಿದೆ. ಅಲ್ಲದೆ 'ರ' 'ಜ'ಗಿಂತ ಭಾರ (ಹಗುರ) ವಾಗಿದ್ದರೆ 'ಲ' ನಾಣ್ಯವು ಉಳಿದವುಗಳಿಗಿಂತ ಭಾರ(ಹಗುರ)ವಾಗಿರುತ್ತದೆ. ಇನ್ನು ಉಳಿದಿರುವುದು 'ಲ' ನಾಣ್ಯವನ್ನು 'ರ' ರಾಶಿಯಲ್ಲಿ ಯಾವುದೆಂದು ಗುರುತಿಸುವ ಕೆಲಸ. ಇದಕ್ಕಾಗಿ 'ರ' ರಾಶಿಯ ಯಾವುದಾದರೂ ಎರಡು ನಾಣ್ಯಗಳನ್ನು ತೆಗೆದು ಅವುಗಳ ತೂಕವನ್ನು ಹೋಲಿಸಿ (ಇದು ಮೂರನೆ ತೂಕ. ಅಲ್ಲದೆ ಈ ತೂಕದ ಯೋಜನೆಯು ಮೊದಲನೆ ತೂಕದ ವ್ಯೂಹವನ್ನೇ ಹೋಲುತ್ತದೆಂಬುದನ್ನು ಗಮನಿಸಿ). ಅವು ಸಮ ತೂಕವಾದರೆ 'ರ' ರಾಶಿಯಲ್ಲಿರುವ ಮೂರನೇ ನಾಣ್ಯವೇ 'ಲ' ನಾಣ್ಯ. ಅಸಮ ತೂಕವಾದರೆ ಅವೆರಡರಲ್ಲಿ ಒಂದು 'ಲ' ನಾಣ್ಯ. ಅಲ್ಲದೆ ಈಗಾಗಲೇ 'ಲ' ನಾಣ್ಯವು ಉಳಿದವುಗಳಿಗಿಂತ ಹಗುರವೋ ಭಾರವೋ ಎಂಬ [illegible] ನಾಣ್ಯವನ್ನು ಗುರುತಿಸಬಹುದು.

(ಕಂ) ನಂತಾದರೆ ಸಮಸ್ಯೆಗೆ ಉತ್ತರ ದೊರಕಿದಂತಾಯಿತು. (ಟ) (ಕಃ) ನಂತಾದರೆ : ಈ ಸಂದರ್ಭದಲ್ಲಿ ವಿಶ್ಲೇಷಣೆಯನ್ನು ಸ್ಪಷ್ಟ ಪಡಿಸಲು ಉದಾಹರಣೆಯಾಗಿ : 'ಯ' ರಾಶಿಯು 'ಮ' ರಾಶಿಗಿಂತ ಹೆಚ್ಚು ಭಾರವೆಂದು ಇಟ್ಟುಕೊಳ್ಳೋಣ.

'ಯ' ಮತ್ತು 'ಮ' ರಾಶಿಗಳಲ್ಲಿರುವ ಪ್ರತಿ ನಾಣ್ಯವನ್ನು ಪ್ರತ್ಯೇಕವಾಗಿ ಹೆಸರಿಸಿ 'ಯ' ರಾಶಿಯನ್ನು (ಗ,ಣ,ಪ,ರ) ಎಂದೂ 'ಮ' ರಾಶಿಯನ್ನು (ಬ,ನ,ಸ,ಡ) ಎಂದೂ ಗುರುತಿಸೋಣ. ಈ ರಾಶಿಗಳಿಂದ ಸಂಗ್ರಹಿಸಿ ರಚಿಸಿದ ಮೂರು ನಾಣ್ಯಗಳ ಎರಡು ರಾಶಿಗಳಾದ (ಗ,ಣ,ಬ) ಮತ್ತು (ಪ,ರ,ನ)ಗಳನ್ನು ಗಮನಿಸೋಣ. ಈ ರಾಶಿಗಳ ತೂಕವನ್ನು ತಕ್ಕಡಿಯ ಸಹಾಯದಿಂದ ಹೋಲಿಸಿ (ಇದು ಎರಡನೆಯ ತೂಕ) ಕೆಳಕಂಡಂತೆ ವಿಶ್ಲೇಷಿಸಬಹುದು.

(ಟಂ) ಅವು ಸಮತೂಕವಾದರೆ 'ಲ' ನಾಣ್ಯವು ಆ ಎರಡೂ ರಾಶಿಗಳಲ್ಲಿ ಇಲ್ಲ. ಅಂದರೆ 'ಲ' ವು (ಸ,ಡ) ರಾಶಿಯಲ್ಲಿದೆ. ಆದರೆ ಈಗಾಗಲೇ 'ಮ' ರಾಶಿಯು 'ಯ' ರಾಶಿಗಿಂತ ಹಗುರ ಎಂದು ತಿಳಿದಿರುವುದರಿಂದ 'ಲ' ನಾಣ್ಯವು ಉಳಿದವುಗಳಿಗಿಂತ 'ಹಗುರ' ಎಂದು ತೀರ್ಮಾನವಾಯಿತು. ಇನ್ನು (ಸ,ಡ) ರಾಶಿಯಲ್ಲಿ 'ಲ' ಯಾವುದು ಎಂಬ ನಿರ್ಧಾರ ಮಾಡಬೇಕಿದೆ. ಇದಕ್ಕಾಗಿ 'ಸ' ಮತ್ತು 'ಡ' ಗಳ ತೂಕಗಳನ್ನು ಹೋಲಿಸಿ (ಇದು ಮೂರನೆಯ ತೂಕ) ಅದರಲ್ಲಿ ಹಗುರವಾದ ನಾಣ್ಯವೇ 'ಲ' ಎಂದು ತಿಳಿಯಬಹುದು.

(ಟಃ) (ಗ,ಣ,ಬ) ಮತ್ತು (ಪ,ರ,ನ) ಅಸಮ ತೂಕದ ರಾಶಿಗಳಾಗಿರಲಿ. ಉದಾಹರಣೆಗಾಗಿ : (ಗ,ಣ,ಬ) ರಾಶಿಯು (ಪ,ರ,ನ) ರಾಶಿಗಿಂತ ಹೆಚ್ಚು ಭಾರವಾಗಿದೆ ಎಂದು ಇಟ್ಟುಕೊಳ್ಳೋಣ. ಈ ಮಾಹಿತಿಯೊಡನೆ ಈಗಾಗಲೇ ಗೊತ್ತಿರುವ (ಗ,ಣ,ಪ,ರ)ವು (ಬ,ನ,ಸ,ಡ)ಗಿಂತ ಹೆಚ್ಚು ಭಾರವೆಂಬ ಮಾಹಿತಿಯು ಸಮಂಜಸವಾಗಿರಬೇಕಾಗಿರುವುದರಿಂದ, ಸ್ಪಷ್ಟವಾಗುವುದೇನೆಂದರೆ :

(೧) 'ಬ' ನಮಗೆ ಬೇಕಾದ 'ಲ' ನಾಣ್ಯ ಅಲ್ಲ.

ಏಕೆಂದರೆ, 'ಬ' ನಮಗೆ ಬೇಕಾದ ನಾಣ್ಯವಾಗಿದ್ದರೆ ಅದು ಉಳಿದ ನಾಣ್ಯಗಳಿಗಿಂತ ಹಗುರ ಅಥವಾ ಭಾರವಾಗಿರಬೇಕು. ಆದರೆ ಇವೆರಡೂ ಸಂದರ್ಭದಲ್ಲಿ ಮೇಲೆ ಪ್ರಸ್ತಾಪಿಸಿದ ಸಮಂಜಸತೆಗೆ ಧಕ್ಕೆ ಉಂಟಾಗುತ್ತದೆ.

(೨) (ಪ,ರ) ರಾಶಿಯಲ್ಲೂ 'ಲ' ಇರಲು ಸಾಧ್ಯವಿಲ್ಲ. (೧) ರಲ್ಲಿದ್ದಂತೆಯೇ ಇದನ್ನು ಸಾಧಿಸಿಕೊಳ್ಳಬಹುದು. ಹೀಗಾಗಿ 'ಲ' ನಾಣ್ಯವು (ಗ,ಣ) ಅಥವಾ (ನ)ರಾಶಿಯಲ್ಲಿರುತ್ತದೆ. ಈಗ ಕೊನೆಯದಾಗಿ 'ಗ' ಮತ್ತು 'ಣ'ಗಳ ತೂಕಗಳನ್ನು ಹೋಲಿಸಿ (ಇದು ಮೂರನೆಯ ತೂಕ). ಅವು ಸಮ ತೂಕವಾದರೆ 'ನ' ನಮಗೆ ಬೇಕಾದ ನಾಣ್ಯ ಮತ್ತು ಅದು ಉಳಿದವುಗಳಿಗಿಂತ ಹಗುರ. 'ಗ' ಮತ್ತು 'ಣ' ಅಸಮತೂಕ ಹೊಂದಿದ್ದರೆ ಅವುಗಳಲ್ಲಿ ಯಾವ ನಾಣ್ಯವು ಹೆಚ್ಚು ಭಾರವೋ ಅದೇ 'ಲ' ನಾಣ್ಯ. [(ಗ,ಣ,ಬ) ರಾಶಿ (ಪ,ರ,ನ)ಗಿಂತ ಹೆಚ್ಚು ಭಾರವೆಂಬುದನ್ನು ಗಮನಿಸಿ].

ಸೂಚನೆ : ಮೇಲೆ ಉದಾಹರಿಸಿದ ವಿಶ್ಲೇಷಣೆಯನ್ನೇ ಅನುಕರಿಸಿ (ಪ,ರ,ನ) ರಾಶಿಯು (ಗ,ಣ,ಬ) ರಾಶಿಗಿಂತ ಭಾರವಾಗಿರುವಾಗ ಮತ್ತು (ಟ)ನಲ್ಲಿ ಉದಾಹರಿಸಿರುವ ಸಂದರ್ಭಕ್ಕೆ ವಿರುದ್ಧ ಸಂದರ್ಭದಲ್ಲಿಯೂ, ವಿಶ್ಲೇಷಿಸಿ ಸಮಸ್ಯೆಗೆ ಉತ್ತರ ಪಡೆಯಹುದು.

ತಾರ್ಕಿಕ ನೆಲೆಯಲ್ಲಿ ಇವೇನು ಹೊಸ ಸಮಸ್ಯೆಯನ್ನು ಒಡ್ಡುವುದಿಲ್ಲ.

ಈ ತಿಂಗಳ ಹೊಸ ಪ್ರಶ್ನೆ

ಕೆಳಗೆ ಅನುಕ್ರಮವಾಗಿ ಎಂಟು ಸಂಖ್ಯೆಗಳನ್ನು ಕೊಟ್ಟಿದ್ದೇವೆ. ಅದರಲ್ಲಿ ಮೊದಲನೆಯ ಸಂಖ್ಯೆ '೧'. ಅಲ್ಲಿಂದ ಮುಂದಿನ ಪ್ರತಿಸಂಖ್ಯೆಯನ್ನೂ ಅದರ ಹಿಂದಿನ ಸಂಖ್ಯೆಯನ್ನುಪಯೋಗಿಸಿ ಒಂದು ನಿರ್ದಿಷ್ಟ ಯೋಜನೆ (ಈ ಯೋಜನೆಯ ರೇಷೆ ಪ್ರತಿಸಂಖ್ಯೆಯನ್ನು ರಚಿಸುವಾಗಲೂ ಒಂದೇ ಆಗಿದೆ) ಯನ್ನು ಅನುಸರಿಸಿ ರಚಿಸಲಾಗಿದೆ. ಈ ಯೋಜನೆ ಯಾವುದೆಂದು ಊಹಿಸಿ ಎಂಟು ಸಂಖ್ಯೆಗಳ ಈ ಶ್ರೇಣಿಯನ್ನು ಮುಂದುವರಿಸಿ ಒಂಬತ್ತನೇ ಮತ್ತು ಹತ್ತನೇ ಸಂಖ್ಯೆಗಳನ್ನೂ ಬರೆಯಬೇಕು!

(೧) ೧	(೫) ೧೧೧೨೨೧
(೨) ೧೧	(೬) ೩೧೨೨೧೧
(೩) ೨೧	(೭) ೧೩೧೧೨೨೨೧
(೪) ೧೨೧೧	(೮) ೧೧೧೩೨೧೩೨೧೧

ಪ್ರಜಾಪ್ರಭುತ್ವದಲ್ಲಿ ಮಾಹಿತಿ ಪಡೆವ ಸ್ವಾತಂತ್ರ್ಯ

ಯಾವುದೇ ಪ್ರಜಾಪ್ರಭುತ್ವ ವ್ಯವಸ್ಥೆಯಾಗಲಿ ತನ್ನ ಆಡಳಿತ ವೈಖರಿಯಲ್ಲಿ ಪ್ರಜಾಪ್ರಭುತ್ವ ಲಕ್ಷಣಗಳು ಇವೆಯೆಂದು ಹೇಳಿಕೊಳ್ಳಬೇಕಾದರೆ ಜನರ ಆಸೆ ಆಕಾಂಕ್ಷೆಗಳಿಗೆ ಜವಾಬ್ದಾರಿಯುತವಾಗಿ ಮತ್ತು ಮುಕ್ತವಾಗಿ ಸ್ಪಂದಿಸಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಹಾಗೆಯೇ ಜನತೆಯ ದೈನಂದಿನ ವ್ಯವಹಾರಗಳಲ್ಲಿ ಸರಕಾರವೂ ಸಹಭಾಗಿಯಾಗಿ ಸ್ಪಂದಿಸಬೇಕಾಗಿದ್ದರೆ ಮಾಹಿತಿ ಪಡೆವ ಹಕ್ಕು ಬಹುಮಟ್ಟಿಗೆ ನೆರವಾಗುತ್ತದೆ. ಈ ಹಕ್ಕು ಜನರ ಮತ್ತು ಸರಕಾರಗಳ ನಡುವೆ ಸಾಮರಸ್ಯ ಮತ್ತು ಸಂಪರ್ಕ ಏರ್ಪಡಲು ಒಂದು ಮುಖ್ಯ ಸಾಧನವಾಗುತ್ತದೆ ಕೂಡ.

ನಮ್ಮ ಸಂವಿಧಾನದಿಂದ ಖಾತರಿಯಾಗಿರುವ ವಾಕ್‌ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಎರಡೂ ಮಾಹಿತಿ ಪಡೆವ ಹಕ್ಕಿಗೆ ಸಂಬಂಧಿಸಿದಂತೆ ಬಹಳ ಪ್ರಸ್ತುತವಾಗಿವೆ. 'ಮಾಹಿತಿ'ಗೆ ಪ್ರತ್ಯೇಕವಾಗಿ ಹೆಚ್ಚು ಒತ್ತು ಕೊಡಲಿಲ್ಲವಾದರೂ ಸಂವಿಧಾನದ ೧೯ನೆಯ ವಿಧಿಯು ಪ್ರತಿಯೊಬ್ಬ ಪ್ರಜೆಗೂ ವಾಕ್‌ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನೀಡಿದೆ.

ಎಸ್. ಪಿ. ಗುಪ್ತ ಮತ್ತು ಯೂನಿಯನ್ ಆಫ್ ಇಂಡಿಯಾ (೧೯೮೧) ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು : ''ಮುಚ್ಚುಮರೆಯಿಲ್ಲದೆ ಆಡಳಿತ ನಡೆಸುವ ಸರಕಾರವು ಅಲ್ಲಿನ ಮುಕ್ತ ಸಮಾಜದ ಪ್ರಜಾಪ್ರಭುತ್ವವಾದಿ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಪ್ರತಿಯೊಂದು ಪ್ರಜಾಪ್ರಭುತ್ವವಾದಿ ವ್ಯವಸ್ಥೆಯೂ ಆ ದಿಕ್ಕಿನತ್ತ ಸಾಗುತ್ತದೆ'', ಎಂದು ಅಭಿಪ್ರಾಯಪಟ್ಟಿದೆ. ನ್ಯಾಯಮೂರ್ತಿ ಪಿ. ಎನ್. ಭಗವತಿ ಅವರು ತಮ್ಮ ತೀರ್ಪನ್ನು ನೀಡುತ್ತಾ ಈ ಮಾತುಗಳನ್ನು ಹೇಳುತ್ತಾರೆ : ''ದೇಶದ ಆಡಳಿತಕ್ಕೆ ಸಂಬಂಧಿಸಿದ ಸಂಗತಿಗಳನ್ನು, ಸತ್ಯಾಂಶಗಳನ್ನು ತಿಳಿಯಲು ನಾಗರಿಕನಿಗೆ ಇರುವ ಹಕ್ಕು ಪ್ರಜಾಪ್ರಭುತ್ವ ಸರಕಾರದ ಆಧಾರಸ್ತಂಭಗಳಲ್ಲೊಂದಾಗಿದೆ... ಆದರೆ, ಈ ನಿಟ್ಟಿನಲ್ಲಿ ಜನತೆ ಸಮರ್ಪಕವಾಗಿ ತಮ್ಮ ಪಾತ್ರವನ್ನು ನಿರ್ವಹಿಸಬೇಕಾದರೆ ಅದು ಪ್ರಜಾಪ್ರಭುತ್ವದಲ್ಲಿ ಮಾತ್ರ ಸಾಧ್ಯ. ಸರಕಾರದ ದಿನನಿತ್ಯದ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಅವಶ್ಯಕವಾಗಿರುವ ಮಾಹಿತಿಯನ್ನು ಪಡೆಯಲು ಎಲ್ಲ ಅವಕಾಶಗಳೂ ಇರಲೇಬೇಕಾಗುತ್ತದೆ.''

೧೯ (೧) (ಎ)ನಲ್ಲಿ ಖಾತರಿಗೊಳಿಸಲಾಗಿರುವ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದಲ್ಲಿ ಮಾಹಿತಿ ಪಡೆಯುವ ಹಕ್ಕು ಅಡಕವಾಗಿರುವಂತೆ ತೋರುತ್ತದೆ; ಮತ್ತು ಮುಕ್ತ ಸರ್ಕಾರದ ಕಲ್ಪನೆಯು ಇದರಿಂದಲೇ [illegible]ವಾಗಿ ಹೊಮ್ಮುತ್ತದೆ.

ಉತ್ತರ ಪ್ರದೇಶ ಮತ್ತು ರಾಜ್‌ನಾರಾಯಣ (೧೯೭೫) ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಸರಕಾರದ ವಾದವನ್ನು ತಿರಸ್ಕರಿಸಿದ

ಜನರ ಭಾಗವಹಿಸುವಿಕೆಯು ಪ್ರಜಾಪ್ರಭುತ್ವದ ಮೂಲ ಆಶಯ. ಯಾವುದೇ ಬದಲಾವಣೆಗಾಗಿಯಾದರೂ ಜನಸಮುದಾಯವು ಮಧ್ಯಪ್ರವೇಶ ಮಾಡಬೇಕಾದರೆ ನಿಖರವಾದ ಮಾಹಿತಿಯು ಅದಕ್ಕೆ ಅತ್ಯವಶ್ಯಕ. ಮಾಹಿತಿಯನ್ನೇ ಮುಚ್ಚಿಟ್ಟರೆ ಜನರ ಉಸಿರನ್ನು ಕಟ್ಟಿಸಿದಂತೆ, ಕೈಕಾಲು ಕಟ್ಟಿಹಾಕಿ ನಿರ್ಬಂಧಿಸಿದಂತೆ. ಆದ್ದರಿಂದ ಈಗಿನ ಅತ್ಯಗತ್ಯ ಹೆಜ್ಜೆಯೆಂದರೆ ಮಾಹಿತಿಯನ್ನು ಪಡೆಯುವ ಅವಕಾಶ.

ಸಂದರ್ಭದಲ್ಲಿ ನ್ಯಾಯಮೂರ್ತಿ ಕೆ. ಕೆ. ಮ್ಯಾಥ್ಯೂ ಅವರು ಹೀಗೆ ಅಭಿಪ್ರಾಯಪಡುತ್ತಾರೆ: ''ಜವಾಬ್ದಾರಿಯುತವಾದ ಸರಕಾರವಿರುವ ಈ ವ್ಯವಸ್ಥೆಯಲ್ಲಿ ಜನತಾಪ್ರತಿನಿಧಿಗಳು ತಮ್ಮ ವರ್ತನೆಗೆ ತಾವೇ ಹೊಣೆಗಾರರಾಗಬೇಕಾಗಿರುವಾಗ ಆಡಳಿತ ಕ್ರಮದಲ್ಲಿ ಇರಬಹುದಾದ ರಹಸ್ಯಗಳನ್ನು ಬಹಿರಂಗಪಡಿಸದಿರುವುದು ಅರ್ಥಹೀನವೆನಿಸಿಕೊಳ್ಳುತ್ತದೆ. ಅಧಿಕಾರಿಗಳ ಎಲ್ಲ ಕ್ರಿಯೆಗಳ ಬಗ್ಗೆ, ಸಾರ್ವಜನಿಕವಾಗಿ ಜರುಗುವ ಎಲ್ಲ ಸಂಗತಿಗಳ ಬಗ್ಗೆ ವಿವರಗಳನ್ನು ತಿಳಿಯುವ ಹಕ್ಕು ಜನಸಾಮಾನ್ಯರಿಗಿದೆ. ಎಲ್ಲ ಸಾರ್ವಜನಿಕ ವ್ಯವಹಾರಗಳ ಬಗ್ಗೆಯೂ ಮಾಹಿತಿ ಪಡೆಯಲು ಅವರಿಗೆ ಅವಕಾಶವಿರಬೇಕು. ಅದೇ ಸಂದರ್ಭದಲ್ಲಿ ವಾಕ್ ಸ್ವಾತಂತ್ರ್ಯದ ಕಲ್ಪನೆಯಿಂದ ಮೂಡಿಬಂದಿರುವ ಹಕ್ಕು ಸಮಗ್ರವಾಗಿದೆ ಎನ್ನಲಾಗದಿದ್ದರೂ ಕೆಲವೊಮ್ಮೆ ಅದರ ಪ್ರಯೋಗದಿಂದ ರಾಷ್ಟ್ರದ ಹಿತಾಸಕ್ತಿಯ ಮೇಲೆ ಪರಿಣಾಮ ಬೀರುವ ಸಂದರ್ಭದಲ್ಲಿ ಗೋಪ್ಯತೆಯನ್ನು ಕಾಪಾಡಿಕೊಳ್ಳಬೇಕಾಗಿಬಂದಾಗ ಸಂಬಂಧಪಟ್ಟವರು ಜಾಗರೂಕತೆಯಿಂದಿರಬೇಕಾಗುತ್ತದೆ.''

ಸರಕಾರಿ ವ್ಯವಹಾರಗಳ ಬಗೆಗಿನ ಮಾಹಿತಿ ಪಡೆವ ಹಕ್ಕನ್ನು ೧೭೬೬ರಲ್ಲಿಯೇ ಪ್ರಜೆಗಳಿಗೆ ನೀಡಿದ ಮೊದಲ ರಾಷ್ಟ್ರವೆಂದರೆ ಸ್ವೀಡನ್. ನಂತರ ಯೂರೋಪಿನ ಇತರ ರಾಷ್ಟ್ರಗಳಾದ ಫಿನ್‌ಲೆಂಡ್, ಡೆನ್‌ಮಾರ್ಕ್, ನಾರ್ವೆ, ಆಸ್ಟ್ರಿಯಾ ಮತ್ತು ಫ್ರಾನ್ಸ್‌ಗಳಲ್ಲಿಯೂ ಈ ಕಾಯಿದೆ ಜಾರಿಗೆಬಂದಿತು. ಕೆನಡಾ ಕೂಡ ಅಲ್ಲಿಯ ಜನತೆಗೆ ಅಧಿಕೃತವಾಗಿ ಮಾಹಿತಿ ಪಡೆಯಲು ಅನುವು ಮಾಡಿಕೊಟ್ಟದ್ದು ಈ ದಿನಗಳಲ್ಲಿಯೇ.

ಜಾಗತಿಕ ಚಳುವಳಿಗೆ ಮತ್ತು ಬೇಡಿಕೆಗಳಿಗೆ ಓಗೊಟ್ಟು ೧೯೪೬ರಲ್ಲಿ ವಿಶ್ವಸಂಸ್ಥೆ ಮಾಹಿತಿ ಪಡೆವ ಹಕ್ಕು ಮೂಲಭೂತ ಮಾನವನ ಹಕ್ಕು ಮಾತ್ರವಲ್ಲದೆ ಬೇರೆಲ್ಲಾ ಸ್ವಾತಂತ್ರ್ಯಗಳಿಗೆ ಅದು ಒಂದು ಒರೆಗಲ್ಲಿನಂತೆ ಎಂದು ಘೋಷಿಸಿತು. ಜಿನೀವಾದಲ್ಲಿ (೧೯೪೮) ಜರುಗಿದ ಮಾಹಿತಿ ಪಡೆವ ಸ್ವಾತಂತ್ರ್ಯ ಕುರಿತ ಸಂಯುಕ್ತ ರಾಷ್ಟ್ರ ಸಮ್ಮೇಳನದ ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯಲ್ಲಿರುವ ಹೇಳಿಕೆ ಹೀಗಿದೆ: ''ವಾಕ್ ಸ್ವಾತಂತ್ರ್ಯ ಮತ್ತು ಮಾಹಿತಿ ಪಡೆವ ಹಕ್ಕು ಪ್ರತಿಯೊಬ್ಬರಿಗೂ ಇದೆ. ಯಾವುದೇ ಆಡಳಿತ ಅಡೆತಡೆಗಳಿಲ್ಲದೆ ತನ್ನದೇ ಆದ ಅಭಿಪ್ರಾಯಗಳನ್ನು ಹೊಂದಿರುವ ಮತ್ತು ಸರಹದ್ದುಗಳನ್ನು ಮೀರಿ ಮಾಧ್ಯಮಗಳ ಮೂಲಕ ವಿಷಯಗಳನ್ನು ಮತ್ತು ಚಿಂತನೆಗಳನ್ನು ಅನ್ವೇಷಿಸುವ, ಪಡೆಯುವ ಮತ್ತು ತಿಳಿಯಹೇಳುವ ಸ್ವಾತಂತ್ರ್ಯವೂ ಈ ಹಕ್ಕಿನ ಅವಿಭಾಜ್ಯ ಅಂಗವಾಗಿದೆ.''

೧೯೪೮ರ ಘೋಷಣೆಯಲ್ಲಿ ಮಾಹಿತಿಯ ಹಕ್ಕನ್ನು ಮಾನವ ಹಕ್ಕೆಂದು ಮಾನ್ಯಮಾಡುವಾಗ ಅದು ಪರಿಪೂರ್ಣವಾದುದಲ್ಲವೆಂದು ಮತ್ತು ಕೆಲವು ನಿರ್ಬಂಧನೆಗಳನ್ನು ಹೊಂದಿರುವ ಅನಿವಾರ್ಯತೆ ಇದೆಯೆಂದು ವಿಷದೀಕರಿಸಲಾಗಿದೆ. ಸಂವಿಧಾನದ ೩ನೆಯ ಭಾಗದಲ್ಲಿ ಮೂಲಭೂತ ಹಕ್ಕುಗಳು ನ್ಯಾಯಸಮ್ಮತವೆಂದಾದರೂ ಹಲಕೆಲವು ಇತಿಮಿತಿಗಳನ್ನು ಹೊಂದಿವೆ ಎಂಬುದನ್ನು ನಾವಿಲ್ಲಿ ಸ್ಮರಿಸಬೇಕಾಗಿದೆ. ಇತರರ ಘನತೆ, ವ್ಯಕ್ತಿಗತವಾದ ಹಕ್ಕುಗಳು, ಸಾರ್ವಜನಿಕ ವ್ಯವಸ್ಥೆ, ನೈತಿಕತೆ ಮತ್ತಿತರ ಚೌಕಟ್ಟಿನಲ್ಲಿಯೇ ಈ ಇತಿಮಿತಿಗಳು ಇರಬೇಕಾಗುತ್ತದೆಂಬುದು ಇದರ ಒಟ್ಟು ಸಾರಾಂಶ.

ಬ್ರಿಟನ್ನಿನ ಅಧಿಕೃತ ದಾಖಲೆಗಳ ರಹಸ್ಯ ಸಂರಕ್ಷಣಾ ಕಾಯಿದೆಯನ್ನು ಹೋಲುವ ಕಾನೂನು ಭಾರತದಲ್ಲಿ ಇಂದಿಗೂ ಚಲಾವಣೆಯಲ್ಲಿದೆ. ಸರಕಾರ ಈ ಕಾಯಿದೆಯ ಆಶ್ರಯದಲ್ಲಿ ಮಾಹಿತಿ ಪಡೆವ ಹಕ್ಕನ್ನು ಬಗ್ಗುಬಡಿಯಬಹುದು. ಈ ಕಾಯಿದೆ ಬಂದದ್ದು ೭೬ ವರುಷಗಳ ಹಿಂದೆ. ಅಷ್ಟು ಹಳೆಯದೆನಿಸಿಕೊಂಡಿದ್ದರೂ ಪತ್ರಿಕಾ ಮಾಧ್ಯಮವನ್ನಾಗಲಿ ಅಥವಾ ಇನ್ನಾವುದೇ ಮಾಧ್ಯಮವನ್ನಾಗಲಿ ಹತ್ತಿಕ್ಕುವ ಮಾರಕ ಶಕ್ತಿಯನ್ನು ಅದು ಇನ್ನೂ ಕಳೆದುಕೊಂಡಿಲ್ಲ. ಉದಾಹರಣೆಗೆ, ೧೯೮೭ರಲ್ಲಿ ದಿನಪತ್ರಿಕೆಯೊಂದು ಸರಕಾರಿ ದಾಖಲೆಗಳ ಆಧಾರದ ಮೇಲೆ ಬೃಹತ್ ವ್ಯಾಪಾರಿ ಸಂಸ್ಥೆಯೊಂದು ಎಸಗಿದ ವಂಚನೆಯನ್ನು ಬಯಲಿಗೆಳೆದಾಗ ಸಂಬಂಧಪಟ್ಟ ಆ ಮಾಧ್ಯಮವನ್ನು ಬೆದರಿಸಲು ಅಂದಿನ ಸರಕಾರ ಈ ಕಾಯಿದೆಯನ್ನು ಉಪಯೋಗಿಸಿದ್ದು ಇತ್ತೀಚಿನ ಇತಿಹಾಸ.

೧೯೪೮ರ ಘೋಷಣೆಯನ್ನು ಸಿದ್ಧಪಡಿಸಿದ ಮತ್ತು ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಮಂಡಳಿ ನಿಯಮಿಸಿದ ಮಾನವ ಹಕ್ಕುಗಳ ನಿಯೋಗದಲ್ಲಿ

ನ್ಯಾಯಮೂರ್ತಿ ಎಚ್. ಜಿ. ಬಾಲಕೃಷ್ಣ

ಭಾರತವೂ ಒಂದು ಸದಸ್ಯ ರಾಷ್ಟ್ರ. ಈ ವಿಶ್ವಸಂಸ್ಥೆಯ ೫೫ನೆಯ ವಿಧಿಯ ಪ್ರಕಾರ ಮೂಲಭೂತ ಹಕ್ಕಾದ ಮಾನವ ಹಕ್ಕುಗಳ ಪಾಲನೆಗೆ ಎಲ್ಲೆಡೆ ಆದ್ಯತೆ ಕೊಟ್ಟು ಉತ್ತೇಜಿಸಬೇಕೆಂಬ ಒತ್ತಾಸೆ ಇದೆ. ಈ ವಿಧಿಯಲ್ಲಿ ನಮೂದಿಸಲಾಗಿರುವ ಮೂಲಭೂತ ಹಕ್ಕುಗಳನ್ನು ಕಾರ್ಯರೂಪಕ್ಕೆ ತರಲು ಎಲ್ಲ ಸದಸ್ಯ ರಾಷ್ಟ್ರಗಳೂ ಜಂಟಿಯಾಗಿಯೂ ಮತ್ತು ಪ್ರತ್ಯೇಕವಾಗಿಯೂ ವಿಶ್ವರಾಷ್ಟ್ರ ಸಂಸ್ಥೆಯೊಡನೆ ಸಹಕರಿಸಿ ಶ್ರಮಿಸಬೇಕೆಂದು ಘೋಷಿಸಲಾಗಿದೆ.

ಪ್ರತಿಯೊಬ್ಬ ನಾಗರಿಕನಿಗೂ ತನ್ನ ದೇಶದ ವ್ಯವಹಾರಗಳಲ್ಲಿ ಪಾಲ್ಗೊಳ್ಳುವ ಹಕ್ಕಿದೆ. ಯಾವುದೇ ಪ್ರಜ್ಞಾವಂತ ಜನಸಮುದಾಯ ಆಯಾ ದೇಶದ ಆತ್ಮಸಾಕ್ಷಿಯನ್ನು ಸಂರಕ್ಷಿಸಲು ಸಜ್ಜಾಗಿ ನಿಂತಿರುತ್ತದೆ. ಮಾಧ್ಯಮಗಳು ಜನತಾ ಪ್ರತಿನಿಧಿಗಳೂ ಆಗಿರುವುದರಿಂದ, ಅವು ಎಲ್ಲ ವಿಷಯಗಳನ್ನೂ ನಿಷ್ಪಕ್ಷಪಾತವಾಗಿ ಜನಸಾಮಾನ್ಯರ ಅವಗಾಹನೆಗೆ ತಲುಪಿಸುವ ನಿಟ್ಟಿನಲ್ಲಿ ಬಹು ಮುಖ್ಯ ಪಾತ್ರ ವಹಿಸಬೇಕಾಗುತ್ತದೆ. ಆಡಳಿತದಲ್ಲಿನ ಮತ್ತು ಸರಕಾರದ ಖರ್ಚುವೆಚ್ಚಗಳ ಬಗೆಗಿನ ಮುಕ್ತತೆ ಪ್ರಜೆಗಳ ದೃಷ್ಟಿಯಲ್ಲಿ ಒಂದು ಮುಖ್ಯವಾದ ಮೌಲ್ಯ. ಆಡಳಿತದಲ್ಲಿ ಪಾರದರ್ಶಕತೆ ಅಧಿಕಾರಿಗಳ ಜವಾಬ್ದಾರಿತನವನ್ನೂ ಹೆಚ್ಚಿಸುವಲ್ಲಿ ಪರಿಣಾಮಕಾರಿ ಪಾತ್ರವನ್ನು ವಹಿಸುತ್ತದೆ. ಕಾನೂನಿನಲ್ಲಿರುವ ಕೆಲವು ವಿನಾಯಿತಿಗಳನ್ನು ಬಿಟ್ಟರೆ ಉಳಿದೆಲ್ಲ ಮಾಹಿತಿಗಳನ್ನು ಪಡೆಯುವುದಕ್ಕೆ ಮಾಧ್ಯಮಗಳಿಗೂ, ಪ್ರಜೆಗಳಿಗೂ ಅವಕಾಶವಿದೆ.

ಅಗತ್ಯವೆನಿಸಿದ ಮಾಹಿತಿಯನ್ನು ಮತ್ತಿತರ ವಿಷಯಗಳನ್ನು ಸರಕಾರದಿಂದ ಕೇಳಿ ಪಡೆಯುವ ಹಕ್ಕನ್ನು ಅಮೆರಿಕಾದ ಸಂವಿಧಾನದ ಮೊದಲನೆಯ ತಿದ್ದುಪಡಿ ಮಾನ್ಯಮಾಡುತ್ತದೆ. ಈ ಧ್ಯೇಯೋದ್ದೇಶವನ್ನಿಟ್ಟುಕೊಂಡೇ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ನೈತಿಕ ಹಿನ್ನೆಲೆಯಲ್ಲಿ ಅವಶ್ಯವೆನಿಸಿದ ಮಾಹಿತಿಯನ್ನು ಪಡೆವ ಸ್ವಾತಂತ್ರ್ಯವನ್ನು ೧೯೬೭ರಲ್ಲಿಯೇ ಅಲ್ಲಿಯ ಸರಕಾರ ಘೋಷಿಸಿದೆ.

ರಾಷ್ಟ್ರೀಯ ಭದ್ರತೆ, ವಿದೇಶಾಂಗ ನೀತಿ, ವ್ಯಕ್ತಿ ಸ್ವಾತಂತ್ರ್ಯ ಇನ್ನಿತರ ವಿಷಯಗಳಿಗೆ ಸಂಬಂಧಪಟ್ಟ ಒಂಭತ್ತು ವಿನಾಯಿತಿಗಳನ್ನು ಬಿಟ್ಟು ಮಿಕ್ಕೆಲ್ಲ ವಿಷಯಗಳ ಬಗ್ಗೆ ಪ್ರಜೆಗಳು ಅಪೇಕ್ಷಿಸಿದಲ್ಲಿ ಮಾಹಿತಿ ಕೊಡಬೇಕೆಂದು ಅಮೆರಿಕದ ಕಾಂಗ್ರೆಸ್ ವಿಶದೀಕರಿಸಿದೆ. ಮಾಹಿತಿ ಪಡೆಯುವುದಕ್ಕೂ ಮತ್ತು ನಿರಾಕರಿಸುವುದಕ್ಕೂ ಉಭಯ ಪಕ್ಷಗಳಿಗೆ ನಿರ್ದಿಷ್ಟವಾದ ನೀತಿ ನಿಯಮಗಳಿವೆ. ೧೯೮೪ರಲ್ಲಿಯೇ ೨,೮೧,೧೦೩ ಕೇಳಿಕೆಗಳು ಸರಕಾರದಿಂದ ಸ್ವೀಕೃತವಾಗಿ ಕಾನೂನಿನ ಮಧ್ಯಪ್ರವೇಶವಿಲ್ಲದೆಯೇ ಹಾಗೆ ಅಪೇಕ್ಷಿಸಿದ ಮಾಹಿತಿಗಳನ್ನು ಒದಗಿಸಲಾಯಿತೆಂದು ಅಂದಿನ ಅಂಕಿಅಂಶಗಳು ತೋರಿಸುತ್ತವೆ. ಅನೇಕ ಮೊಕದ್ದಮೆಗಳು ಮತ್ತು ಕಟ್ಲೆಗಳ ಸಂಬಂಧದಲ್ಲಿ ಮಾಧ್ಯಮಗಳು, ಸಂಸ್ಥೆಗಳು ಮತ್ತು ನ್ಯಾಯವಾದಿಗಳು ಈ ಕಾಯಿದೆಯ ಸದುಪಯೋಗ ಪಡೆದಿರುವುದು ಗಮನಾರ್ಹವಾದ ಅಂಶ.

ಈ ಹಿನ್ನೆಲೆಯಲ್ಲಿ ಹೇಳುವುದಾದರೆ ಭಾರತದಲ್ಲಿಯೂ ಮಾಹಿತಿ ಪಡೆವ ಹಕ್ಕಿನ ಅವಶ್ಯಕತೆ ದಿನೇ ದಿನೇ ಹೆಚ್ಚುತ್ತಿದೆ. ಜನಸಮುದಾಯ ಹೆಚ್ಚು ಪ್ರಜ್ಞಾವಂತರಾಗುತ್ತಿರುವ ಕುರುಹು ಇದು. ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ ಚೌಕಟ್ಟಿನಲ್ಲಿಯೇ ಅಮೆರಿಕದಲ್ಲಿರುವ ಮಾದರಿಯನ್ನನುಸರಿಸಿ ಅತೀವ ಪರಿಣಾಮಕಾರಿ ಎನ್ನಿಸಿಕೊಳ್ಳುವ ಈ ಹಕ್ಕು ಇಲ್ಲಿನ ಜನಸಾಮಾನ್ಯರಿಗೆ ಲಭ್ಯವಾದರೆ ನಮ್ಮ ಪ್ರಜಾಪ್ರಭುತ್ವ ಒಂದು ಹೆಜ್ಜೆ ಮುಂದಿಟ್ಟಂತಾಗುತ್ತದೆ. ಇಡೀ ವ್ಯವಸ್ಥೆ ಗಟ್ಟಿಗೊಳ್ಳಲು ಅನುವಾಗುತ್ತದೆ.

ನ್ಯಾಯಮೂರ್ತಿ ಎಚ್. ಜಿ. ಬಾಲಕೃಷ್ಣ
ನಿವೃತ್ತ ನ್ಯಾಯಮೂರ್ತಿಗಳು, ೭೭೪, ೧೫ನೇ ಅಡ್ಡರಸ್ತೆ ಜೆ.ಪಿ. ನಗರ
೧ನೇ ಹಂತ, ಬೆಂಗಳೂರು - ೫೬೦ ೦೭೮

ಹೊಸತು ಪದ ಹೊಸೆತ

1		2			3		4	
					5			
	6			7				
8						9		10
11				12		13		
				14				

ಅಡ್ಡ

೧. ಒಬ್ಬ ದಣಿಯುತ್ತಾನೆ, ಆದರೆ 'ಧಣಿ'ಯಲ್ಲ! ಮತ್ತೊಬ್ಬ 'ಧಣಿ', ಆದರೆ ದಣಿಯುವುದಿಲ್ಲ!
೪. 'ಸೈನ್ಯಗಳಿಗಿಂತ ಬಲವಾದುವು ಆಲೋಚನೆ' ಎಂದು ಕಮ್ಯೂನಿಸಂನ ಪ್ರವಾದಿ ಎನ್ನಿಸಿದ ಈ ಕಾರ್ಲ್‌ಗೆ ಆಂಗ್ಲರ 'ಅಂಕಗಳು' ಸಿಗುತ್ತವೆ!
೫. ಧ್ಯಾನ, ಯೋಗ, ಚಿಂತನೆಗೆ ಸೂಕ್ತವಾದ ಅರಣ್ಯ.
೬. ಪಗಾರ ಸಿಕ್ಕ ದಿವಸ.
೮. ಕೆಲಸಗಾರರಿಗೆ ಕೊಡದೇ ಶಿಲ್ಕಿನಲ್ಲಿರುವ ಕೂಲಿ, ಮಜೂರಿ!
೯. ಈ ತಿಂಗಳ ಮೊದಲನೇ ತಾರೀಖು-ಅಡ್ಡ ೧ರಲ್ಲಿ ಮೊದಲು ಸಿಗುವವರ ದಿನಾಚರಣೆ ಯಾಗಿರುತ್ತದೆ!
೧೧. ರಾಮನ ಮೇಲೆ ಕೀರ್ತನೆಗಳನ್ನು ರಚಿಸಿ, ಹಾಡಿದ ಸಂತ.
೧೩. ಜಗಜ್ಯೋತಿ ಜಗದಣ್ಣನವರ 'ಕೂಡಲ' ಎಂದರೂ ಇದೇ ಆಗಿದೆ!
೧೪. ಕುದುರೆಯ ಜೀನಿಗಳಿಗಳವಡಿಸಿದ ಅಂಕವಣೆ-ಬಳೆ.

ಲಂಬ

೧. ಕುವೆಂಪು ಅವರ ಈ ಹೆಗ್ಗಡಿತಿ ಚಿತ್ರಮಂದಿರಕ್ಕೆ ಬಂದಳು!
೨. "'ಅಯ್ಯ' ಎಂದಡೆ ಸ್ವರ್ಗ; 'ಎಲವೋ' ಎಂದಡೆ ನರಕ" ಎಂದು, 'ದಯವೇ ಧರ್ಮದ ಮೂಲವಯ್ಯ' ಎಂದು ನುಡಿದ ಈ ಭಕ್ತಿ ಭಂಡಾರಿ, ಬಿಜ್ಜಳನ ರಾಜಧಾನಿಯಿಂದ ಕೆಳಗಿಳಿದು ಬರುತ್ತಾರೆ.
೩. 'ಅರಸು ಮುನಿದರೆ ನಾಡಿನೊಳಗಿರ ಬಾರದಯ್ಯಾ' ಎಂದ ಮತ್ತು 'ಕಾಯಕವೇ ಕೈಲಾಸ' ಎಂದು ಪ್ರತಿಪಾದಿಸಿ 'ಅಂತರಂಗ ಶುದ್ಧಿ ಬಹಿರಂಗ ಶುದ್ಧಿ'ಗಾಗಿ ಮೊದಲು ಇದನ್ನು ಮಾಡಬಾರದಾಗಿ ಬಿಜ್ಜಳರಸನ ಪ್ರಧಾನ ಮಂತ್ರಿ ಹೇಳಿಕೆ!
೪. ಯಾವುದೇ ಒಂದು ಧರ್ಮಕ್ಕೆ ಅಂಟಿಕೊಳ್ಳದೇ, ಮನುಷ್ಯನ ಆಶೋತ್ತರ, ಕೆಲಸಕಾರ್ಯ, ಸಾಮ್ರಾಜ್ಯ, ಭಾವನೆ, ಸುಖ ದುಃಖಗಳನ್ನು ಪ್ರತಿಪಾದಿಸುವಾತ.
೭. ಮಂತ್ರಿ
೮. ಹಸುಗೂಸಿನ ಮೇಲೆ ಶಿಶು ಕೂರಿಸಿದ ಹುಡುಗರು!
೧೦. ಗಗನದಲ್ಲಿ ಕಂಡ ಈ ಸೂರ್ಯ ಕೆಳಗೆ 'ಮಣಿ'ದು ಮರೆಯಾಗುತ್ತಾನೆ.
೧೨. ರೊಟ್ಟಿ, ದೋಸೆ, ಕಡುಬಿಗೆ ಮೆದುಕೊಡಲು ಅಕ್ಕಿ, ಉದ್ದು, ಮೆಂತ್ಯ ಬೆರಸಿದ ಹುದುಗು ತಪ್ಪೇನಿಲ್ಲ!
೧೩. ಬೇಡಿಕೆ ಈಡೇರಿಕೆಗಾಗಿ ನಡೆಸುವ ಮುಷ್ಕರ-ಚಳುವಳಿಯ 'ಸೊಗಸು'!

ಜ. ಮಲ್ಲಿಕಾರ್ಜುನ
ಘಂಟಾಚಾರ್ಯರು, ಸಿರಿಗೆರೆ-೫೭೭ ೫೪೧, ಚಿತ್ರದುರ್ಗ ಜಿಲ್ಲೆ.

ಏಪ್ರಿಲ್ ತಿಂಗಳ ಪದ-ಹೊಸೆತದ ಉತ್ತರ

		ಚಿ		ಅ		[illegible]	[illegible]	
	ಅ	ಕ್ಕ	ಮ	ಹಾ	ದೇ	ವಿ		[illegible]
ಹೊ	ನ್ನ	ಮ್ಮ				ತ್ರಿ	ವೇ	[illegible]
ನ್ನಿ			ಜಾ	ತ್ನ	[illegible]		[illegible]	
ಯ	ಕ್ಷ	ಗಾ	ನ		[illegible]	[illegible]	[illegible]	[illegible]
ಮ			ದ	ಚಿ	[illegible]			[illegible]
ದು	ರ	ನ	ದ			[illegible]		[illegible]
ವೆ			[illegible]	[illegible]	[illegible]	[illegible]	[illegible]	[illegible]
	[illegible]	[illegible]	[illegible]		[illegible]		[illegible]	

ಅಹಿಂಸೆ ಮತ್ತು ಪ್ರಜಾಪ್ರಭುತ್ವ

ರಾಜ್ಯ ವ್ಯವಸ್ಥೆ ಮಾನವ ಇತಿಹಾಸದ ಅತಿ ಪ್ರಾಚೀನ ಸಂಸ್ಥೆ. ಸಮಾಜದ ನೆಮ್ಮದಿಗೆ ಒಂದು ಶಾಸನ ಸುವ್ಯವಸ್ಥೆ ಅತ್ಯಗತ್ಯವೆನ್ನುವುದನ್ನು ಸುಮಾರು ನಲವತ್ತು ಸಾವಿರ ವರ್ಷಗಳಿಗೂ ಪೂರ್ವದಲ್ಲಿ ಆದಿಮಾನವ ಸಮೂಹ ಕಂಡುಕೊಂಡಿರಬೇಕೆಂದು ಸಮಾಜ ಶಾಸ್ತ್ರಜ್ಞರು ಊಹಿಸುತ್ತಾರೆ. ಈ ಶಾಸನ ವ್ಯವಸ್ಥೆ ಯಾವ ಮೌಲ್ಯಗಳ ಮೇಲೆ ನಿರ್ಧಾರವಾಗಬೇಕು ಎಂಬ ಚಿಂತನೆಯೂ ಬಹಳ ಪ್ರಾಚೀನವಾದುದು. ಭಾರತದ ಅತ್ಯಂತ ಪ್ರಾಚೀನ ಗ್ರಾಮ ಸಮಾಜಗಳಲ್ಲಿನ ಕರ್ತವ್ಯ ವಿಭಜನೆಯ ಪರಸ್ಪರ ಸಹಕಾರೀ ಜೀವನ ವ್ಯವಸ್ಥೆ ನಮಗೆ ಕಾಣುವ ಮೊಟ್ಟ ಮೊದಲ ಶಾಸನಬದ್ಧ ವ್ಯವಸ್ಥೆ. ಪ್ರತಿಯೊಬ್ಬ ಪ್ರಜೆಗೂ ಒಂದು ನಿರ್ದಿಷ್ಟ ಸ್ಥಾನ, ಅದಕ್ಕನುಗುಣವಾದ ಕರ್ತವ್ಯಗಳು, ಆ ಕರ್ತವ್ಯ ನಿರ್ವಹಣೆಯ ಫಲವಾಗಿಯೇ ಬರುವ ಹಕ್ಕುಗಳು. ಈ ಮಾದರಿ ಬಹುಶ ಗ್ರೀಸ್ ಮತ್ತು ಈಜಿಪ್ಟ್‌ಗಳ ಮೂಲವಾಸಿಗಳಲ್ಲೂ ಇದ್ದಿರಬಹುದು. ಕರ್ತವ್ಯಗಳಿಗನುಗುಣವಾದ ಒಂದು ನೀತಿ ಸಂಹಿತೆ ಮತ್ತು ಆತ್ಮಸಾಕ್ಷಿಯ ಧರ್ಮಪ್ರಜ್ಞೆ ಜಾಗೃತಗೊಂಡ ಸಮಾಜಗಳಲ್ಲಿ ಅಲಿಖಿತ ರಾಜ್ಯಾಂಗವೊಂದು ಪ್ರಚಲಿತವಾಗಿರುತ್ತಿತ್ತು. ಇವುಗಳ ಪರಿಣಾಮವಾಗಿ ಸಾವಿರಾರು ವರ್ಷಗಳಿಂದ ಅನೂಚಾನವಾಗಿ ಜಗತ್ತಿನಲ್ಲೆಲ್ಲ ರಾಜ, ರಾಜ್ಯ ಮತ್ತು ರಾಜನೀತಿ ಎಂಬ ಸಮಾಜ ಅಂಗೀಕರಿಸಿದ್ದ ಪ್ರಾಮಾಣಿಕ ಮೌಲ್ಯಗಳ ರಾಜ್ಯಶಾಸ್ತ್ರ ನಡೆದು ಬರುತ್ತಲಿತ್ತು. ರಾಜಕೀಯ ಕ್ಷೇತ್ರಕ್ಕೂ ಆತ್ಮಶ್ರೀ ನಿಯಮಗಳು ಅನ್ವಯವಾಗುತ್ತಿದ್ದುದರಿಂದ, ಪ್ರಜೆಗಳಲ್ಲೂ ರಾಜರುಗಳಲ್ಲೂ ನೀತಿಶ್ರದ್ಧೆ ಪಸರಿಸಿ ಕರ್ತವ್ಯ ಪಾಲನೆ ಮತ್ತು ಪರಸ್ಪರ ಸಹಕಾರ ಈ ವ್ಯವಸ್ಥೆಯನ್ನು ಸಾವಿರಾರು ವರ್ಷಗಳ ಕಾಲ ನಡೆಸಿಕೊಂಡು ಬಂದವು.

ರಾಜ್ಯ ವ್ಯವಸ್ಥೆಗೆ ನಾಲ್ಕು ಆಧಾರಗಳಿರುತ್ತವೆ. ಶಾಸನಾಧಿಕಾರ, ರಕ್ಷಣಾ ವ್ಯವಸ್ಥೆ, ಆರ್ಥಿಕರಚನೆ ಮತ್ತು ಸಂಪದುತ್ಪಾದನೆಯ ದುಡಿಮೆ. ಇವುಗಳ ಪೋಷಕ ಪ್ರವೃತ್ತಿಗಳ ಸಮತೋಲನ ಏರ್ಪಡಿಸುವುದೇ ರಾಜ್ಯಶಾಸ್ತ್ರ. ಕಾಲಾನುಗುಣವಾಗಿ ಅನೇಕ ಪ್ರಯೋಗಗಳು ನಡೆಯುತ್ತಲೇ ಬಂದಿವೆ. ಬೇರೆ ಬೇರೆ ಸ್ವರೂಪಗಳಲ್ಲಿ ಶಾಸನ, ರಕ್ಷಣೆ, ಧನ ಮತ್ತು ದುಡಿಮೆಗಳ ವಲಯಗಳು ಎಲ್ಲ ರಚನೆಗಳಿಗೂ ಅನಿವಾರ್ಯ ತಳಹದಿ. ಇವುಗಳನ್ನು ಸರ್ವೋದಯ ಸಾಧನೆಗಾಗಿ ಬಳಸಿಕೊಳ್ಳುವ ಪ್ರಯೋಗಗಳು ಭಾರತದ ಜನಜೀವನದಲ್ಲಿ ಆಗಿರುವಷ್ಟು ಮತ್ತೆಲ್ಲಿಯೂ ಕಾಣುವುದಿಲ್ಲ. ರಾಮಾಯಣದಂತಹ ನೀತಿಶಾಸ್ತ್ರ ಸಂಹಿತೆ, ಮಹಾಭಾರತದಂತಹ ಸಮಾಜಶಾಸ್ತ್ರ ಇಂದಿಗೂ ಗ್ರಾಮಸ್ಥರ ಬಾಳಿನಲ್ಲಿ ಹಾಸುಹೊಕ್ಕಾಗಿ ಒಂದು ಸುದೃಢ ನೈತಿಕ ನಿಷ್ಠೆಯನ್ನು ನೆಲೆಗೊಳಿಸಿವೆ. ನಮ್ಮ ಸಾಂಸ್ಕೃತಿಕ ಬೇರುಗಳು ಅವುಗಳಿಂದ ಪೋಷಿತವಾಗಿ ಇಂದಿಗೂ ಜೀವಂತವಾಗಿವೆ. ಇದನ್ನೇ ಆಧಾರವಾಗಿಟ್ಟುಕೊಂಡು ಗಾಂಧೀಜಿ ತಮ್ಮ ದೀರ್ಘ ಚಿಂತನೆ ಮತ್ತು ಪ್ರಯೋಗಗಳಿಂದ ಆಧುನಿಕ ಸಂದರ್ಭದಲ್ಲಿ ಮಾನವೀಯ ಮೌಲ್ಯಗಳ ರಾಜ್ಯ ಶಾಸ್ತ್ರವನ್ನು ಪ್ರತಿಪಾದಿಸಿದ್ದಾರೆ.

ಸ್ವಯಂ ಪ್ರೇರಿತರಾಗಿ ರಾಜನೊಬ್ಬನ ಕೈಗೆ ಸರ್ವಾಧಿಕಾರ ನೀಡಿ, ಅವನು ಒಂದು ಲೋಕ ಸಮ್ಮತ ಧರ್ಮ ನಿಷ್ಠೆಗನುಗುಣವಾಗಿ ರಕ್ಷಣೆ, ನ್ಯಾಯ ವಿತರಣೆ ಮತ್ತು ಶಾಂತ ಸ್ಥಿತಿಗೆ ಹೊಣೆಗಾರನಾಗಿರಬೇಕೆಂಬ ವ್ಯವಸ್ಥೆ ಸರ್ವಸಾಮಾನ್ಯವಾಗಿ ನಡೆದು ಬಂತು. ಆನುವಂಶಿಕವಾದ ಸಾಮರ್ಥ್ಯಗಳು ಪೋಷಿತವಾಗಿ ವಿವಿಧ ರೀತಿಯ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಗಳು ರೂಪಿತವಾದವು. ಕ್ರಮೇಣ ಎಲ್ಲವನ್ನೂ ನಿಯಂತ್ರಿಸುವ ಅಧಿಕಾರ ಕೇಂದ್ರೀಕೃತವಾಗಿ ರಾಜನ ಕೈ ಸೇರಿತು. ವಂಶ ಪಾರಂಪರ್ಯದ ಚೌಕಟ್ಟಿಗೆ ಬದ್ಧವಾಗಿ ಈ ವ್ಯವಸ್ಥೆ ನಡೆದು ಬರುತ್ತಿತ್ತು. ಪ್ರಜೆಗಳ ನೇರ ಜವಾಬ್ದಾರಿಗಳು ಶಿಥಿಲಗೊಂಡು ನಿರಂಕುಶ ರಾಜಮನೆತನಗಳ ಊಳಿಗಮಾನ್ಯ ಪದ್ಧತಿ ಭಾರತದಲ್ಲಿ ಹಲವು ಶತಮಾನಗಳಿಂದ ನಡೆದು ಬಂದಿದೆ. ಹದಿನಾರನೇಯ ಶತಮಾನದಲ್ಲಿ ಪ್ರಾರಂಭವಾದ ಔದ್ಯೋಗಿಕ ಕ್ರಾಂತಿಯಿಂದಾಗಿ ವಿಶ್ವದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಕ್ರಮೇಣ ವ್ಯಾಪಿಸತೊಡಗಿತು. ಪ್ರಜೆಗಳು ಚುನಾಯಿಸಿದ ಪ್ರತಿನಿಧಿಗಳ ಪ್ರಭುತ್ವಗಳು ಬೆಳೆಯತೊಡಗಿದವು. ರಾಜತ್ವ ಮತ್ತು ಅನುವಂಶೀಯ ಹಕ್ಕುಗಳು ಕರಗಿಹೋದವು. ಹೊಸ ಹೊಸ ಪ್ರಜಾಪ್ರಭುತ್ವ ಮಾದರಿಗಳು ಸೃಷ್ಟಿಯಾದವು, ಆಗುತ್ತಿವೆ.

ಈಗಿನ ರಾಜ್ಯ ಶಕ್ತಿ (ಸ್ಟೇಟ್ ಪವರ್) ಶಾಸನಾಧಿಕಾರ ಮತ್ತು ಸೈನ್ಯ ಬಲಗಳ ಆಸರೆ ಪಡೆದು ನಿಂತಿದೆ. ಪ್ರಜಾಪ್ರಭುತ್ವ ತತ್ವಗಳು ಅಂಗೀಕೃತವಾಗಿದ್ದರೂ ಪ್ರಭುತ್ವದಲ್ಲಿ ಪ್ರಜೆಗಳ ಪಾಲುಗಾರಿಕೆ ಅತ್ಯಲ್ಪ. ಪ್ರತಿನಿಧಿಗಳಾದವರು ಸೀಮಿತಕಾಲಕ್ಕೆ ಅಧಿಕಾರ ವಹಿಸಿದರೂ ಮತ್ತೆ ಮತ್ತೆ ಹಿಂದಿನ ಊಳಿಗಮಾನ್ಯ ಪದ್ಧತಿ (ಫ್ಯೂಡಲ್ ಸಿಸ್ಟಮ್)ಯ ಜಾಡನ್ನೇ ಹಿಡಿದು ಸಾಗುತ್ತಾರೆ.. ಬುನಾದಿಯ ಸ್ತರದಲ್ಲಿ ಪ್ರಜೆಗಳಲ್ಲಿನ ಅಭಿಕ್ರಮ ಶಕ್ತಿಗೆ ಅವಕಾಶಗಳನ್ನು ನೀಡುವುದೇ ಇಲ್ಲ. ಪಾಶ್ಚಾತ್ಯ ದೇಶಗಳಲ್ಲಿನ ಪಕ್ಷ ಪ್ರಧಾನ ಸಂಸದೀಯ ಪ್ರಭುತ್ವವೊಂದೇ ಈಗ ಮಾದರಿ ಎನಿಸಿದೆ. ಪಕ್ಷಗಳ ರಚನೆ, ಮೂಲ ಆರ್ಥಿಕ ಸಾಮಾಜಿಕ ಸಿದ್ಧಾಂತಗಳು, ವ್ಯಕ್ತಿ ಪ್ರಭಾವ, ಧನಬಲ, ಜಾತಿಬೆಂಬಲ, ಹಿಂಸಾಶಕ್ತಿ ಇವುಗಳು ರಾಜ್ಯಾಧಿಕಾರ ಸ್ಪರ್ಧೆಯಾದ ಚುನಾವಣೆಗಳಲ್ಲಿ ಪ್ರಬಲಪಾತ್ರ ವಹಿಸುತ್ತವೆ. ಎಲ್ಲವೂ ಮೇಲ್ವರ್ಗಗಳ ಗುಂಪುಗಾರಿಕೆಯ ಅಧೀನವಾಗಿ ನಡೆಯುತ್ತವೆ. ಅಹಿಂಸಾತ್ಮಕ ಪ್ರತಿಭಟನಾ ಶಕ್ತಿಯನ್ನು ಮೈಗೂಡಿಸಿಕೊಂಡು ಜನಸಾಮಾನ್ಯರ ಆತ್ಮವಿಶ್ವಾಸದ ಭೂಮಿಕೆಯ ಮೇಲೆ ನಿಲ್ಲುವ ನಿಜವಾದ ಪ್ರಜಾಪ್ರಭುತ್ವ ಅಥವಾ ''ಸ್ವರಾಜ್ಯ'' ಇನ್ನೂ ವಿಕಾಸಗೊಂಡಿಲ್ಲ. ಯುದ್ಧ, ಹಿಂಸೆ, ಬಲಾತ್ಕಾರ ಶಾಸನಗಳು, ಅಧಿಕಾರ ಕೇಂದ್ರೀಕರಣ, ಸಂಪತ್ತಿನ ಕೇಂದ್ರೀಕರಣ, ವ್ಯಕ್ತಿ ಪೂಜೆ, ಮತಾಂಧತೆ ಇವುಗಳ ರಾಕ್ಷಸ ಹಿಡಿತ ತಾನೇ ತಾನಾಗಿ ವಿಜೃಂಭಿಸುತ್ತದೆ. ನೈತಿಕ ಶಾಸನದ, ಮಾನವೀಯ ಮೌಲ್ಯಗಳ, ಸರ್ವ ಸಮಾನತೆಯ ರಾಜ್ಯ ಇನ್ನೂ ವಿಕಾಸಗೊಳ್ಳಬೇಕಾಗಿದೆ. ಗಾಂಧೀಜಿಯ ಚಿಂತನೆ ಮತ್ತು ಪ್ರಯೋಗಗಳು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಕಾಲಕ್ಕೆ ಹೊಚ್ಚ ಹೊಸ 'ಪೂರ್ಣ ಸ್ವರಾಜ್ಯ'ದ ಈ ಕಲ್ಪನೆಯನ್ನು ಮೂಡಿಸಿದ್ದವು. ರಾಜಕೀಯ ಸ್ವಾತಂತ್ರ್ಯವನ್ನಷ್ಟೇ ಗಳಿಸಿಕೊಂಡು ಈಗ ಗಾಂಧೀ ವಿಚಾರ ಮಾರ್ಗವನ್ನು ನಮ್ಮ ರಾಜನೀತಿ ಕ್ಷೇತ್ರ ಮುಂದಿನ ಹೆಜ್ಜೆಗೆ ಕೊಂಡೊಯ್ಯುವುದರಲ್ಲಿ ವಿಫಲವಾಗಿದೆ.

ಕೆ. ಎಸ್. ನಾರಾಯಣಸ್ವಾಮಿ

ಲೋಕಮಾನ್ಯ ತಿಲಕರು ಆಧ್ಯಾತ್ಮಿಕ ಸ್ಫೂರ್ತಿಯಿಂದ ಈ ನಾಡಿನ ವಿಕಾಸಕ್ರಮವನ್ನು ಗುರ್ತಿಸಿ 'ಸ್ವರಾಜ್ಯ ನಮ್ಮ ಜನ್ಮಸಿದ್ಧ ಹಕ್ಕು, ನಾವದನ್ನು ಪಡೆದೇ ತೀರುತ್ತೇವೆ' ಎಂದು ಘೋಷಿಸಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ನಾಂದಿ ಹಾಡಿದರು. ಅದೇ ನಿಟ್ಟಿನಲ್ಲಿ ಮುಂದುವರಿದು ಗಾಂಧೀಜಿ 'ಸ್ವರಾಜ್ಯ'ಎಂಬ ಆದರ್ಶಕ್ಕೆ ಅತ್ಯಾಧುನಿಕ ಸಂದರ್ಭದಲ್ಲಿ ಸತ್ಯ ಮತ್ತು ಅಹಿಂಸಾ ನಿಷ್ಠೆಯ ಪ್ರಜಾಪ್ರಭುತ್ವ ತತ್ವಗಳನ್ನು ಅಳವಡಿಸಿಕೊಟ್ಟಿದ್ದಾರೆ. ತಮ್ಮ ಅದಮ್ಯ ಶ್ರದ್ಧೆಯನ್ನು ವ್ಯಕ್ತ ಮಾಡುತ್ತಾ ಅವರು ಹೀಗೆ ನುಡಿದಿದ್ದಾರೆ:

''ಸಮರ ವಿಜ್ಞಾನ ಅನಿವಾರ್ಯವಾಗಿ ಸರ್ವಾಧಿಕಾರೀ ಪ್ರಭುತ್ವಕ್ಕೆ ದಾರಿ ಮಾಡಿಕೊಡುತ್ತದೆ. ಅಹಿಂಸಾ ವಿಜ್ಞಾನ ಮಾತ್ರವೇ ನಿಜವಾದ ನಿರ್ಮಲವಾದ ಪ್ರಜಾರಾಜ್ಯ ನಿರ್ಮಾಣ ಮಾಡಬಲ್ಲದು.''

(ಹರಿಜನ ೧೫.೧೦.೧೯೩೮)

ನಾಳಿನ ಜಗತ್ತು ಯುದ್ಧರಹಿತವಾದ ಶೋಷಣಾ ರಹಿತವಾದ ವಿಶ್ವಶಾಂತಿ ಸಾಧಕವಾದ ಮಾನವೀಯ ಮೌಲ್ಯಗಳ ರಾಜ್ಯಶಾಸ್ತ್ರವನ್ನು ರೂಪಿಸಿಕೊಳ್ಳುವುದು ಈಗ ಅನಿವಾರ್ಯವೆನಿಸಿದೆ. ಈ ಸಾಹಸಪೂರ್ಣ ಉದ್ಯಮದಲ್ಲಿ ಗಾಂಧೀಜಿ ತೋರಿಸಿದ ದಾರಿ ಅತ್ಯಮೂಲ್ಯವೆಂದು ಜಗತ್ತಿನ ಅನೇಕ ಚಿಂತನಶೀಲರು ಅಂಗೀಕರಿಸುತ್ತಿದ್ದಾರೆ. ''ಈಗ ಮಾನವ ಇತಿಹಾಸದಲ್ಲಿ ವಿಧ್ವಂಸಕ ಪ್ರವೃತ್ತಿಗಳನ್ನು ಸಂಪೂರ್ಣವಾಗಿ ತ್ಯಜಿಸುವ ಕಾಲ ಸನ್ನಿಹಿತವಾಗಿದೆ. ಕೇವಲ ಯುದ್ಧವೆಂಬ ಸಂಸ್ಥಾಬದ್ಧ ವ್ಯವಸ್ಥೆಯಲ್ಲಿ ಮಾತ್ರವೇ ಅಲ್ಲ, ಮಾನವ ಬಾಂಧವ್ಯಗಳ ಎಲ್ಲ ವಲಯಗಳಲ್ಲೂ ಅದು ಅತ್ಯಗತ್ಯವೆನಿಸಿದೆ. ಈ ನಿಟ್ಟಿನಲ್ಲಿ ಮಹಾತ್ಮಾ ಗಾಂಧಿಯವರ ಪ್ರಯೋಗ ಮತ್ತು ಸಾಧನೆಗಳು ಜಗತ್ತಿಗೆ ದಾರಿದೀಪವಾಗಿವೆ'' ಎಂದಿದ್ದಾರೆ, ವಿಖ್ಯಾತ ಇತಿಹಾಸ ತಜ್ಞ ಆರ್ನಾಲ್ಡ್ ಟಾಯನ್‌ಬಿ. (ಮಹಾತ್ಮಾ-ಜನ್ಮಶತಾಬ್ದಿ ಗ್ರಂಥ).

ವಿಶ್ವಮಾನ್ಯ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನ್ ''ಅತ್ಯಂತ ಶ್ರೇಷ್ಠ ತತ್ವವೇತ್ತರನ್ನೂ, ವಿಜ್ಞಾನಿಗಳನ್ನೂ, ರಾಜ್ಯ ಶಾಸ್ತ್ರ ತಜ್ಞರನ್ನೂ ಪಡೆದಿದ್ದರೂ, ನಮ್ಮ ಕಾಲದ ರಾಜ್ಯ ಶಾಸ್ತ್ರ, ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳ ಪರಿಹಾರ ಕಾರ್ಯದಲ್ಲಿ ವಿಫಲವಾಗಿದೆ. ವಿಶ್ವಶಾಂತಿ ಮತ್ತು ಅಂತರರಾಷ್ಟ್ರೀಯ ಸೌಹಾರ್ದಯುತ ಸಹಕಾರಕ್ಕೆ ಬುನಾದಿಯಾಗುವ ರಾಜಕೀಯ ಮತ್ತು ಆರ್ಥಿಕ ರಚನೆಗಳನ್ನು ರೂಪಿಸಿಕೊಳ್ಳಲು ಅಸಮರ್ಥರಾಗಿದ್ದೇವೆ..... ನಮ್ಮ ಕಾಲದ ಎಲ್ಲ ರಾಜ ನೀತಿಜ್ಞರಲ್ಲಿ ಮಹಾತ್ಮ ಗಾಂಧಿಯವರ ವಿಚಾರಗಳೇ ಅತ್ಯಂತ

ಪ್ರಜ್ಞಾಪೂರ್ವಕ ನಿಲುವು ಎನಿಸುತ್ತದೆ. ಅವರು ಸೂಚಿಸಿರುವ ರೀತಿಯಲ್ಲಿ ಅವರ ನಿಷ್ಠೆಗಳನ್ನಂಗೀಕರಿಸಿ ನಾವೆಲ್ಲ ಪ್ರಾಮಾಣಿಕ ಪ್ರಯತ್ನ ಮಾಡಬೇಕು'' ಎಂದಿದ್ದಾರೆ.

(ಗಾಂಧೀಜಿ ಮತ್ತು ಐನ್‌ಸ್ಟೀನ್ ಗ್ರಂಥ)

ಮಾನವ ಸಾಪೇಕ್ಷವಾದ ರಾಜ್ಯಶಾಸ್ತ್ರ ತನ್ನ ಮೂಲಭೂತ ಮೌಲ್ಯಗಳನ್ನು ಸತತವಾಗಿ ಶೋಧಿಸುತ್ತಾ ತನ್ನ ಮುಖ್ಯ ಉದ್ದೇಶವಾದ 'ಕಟ್ಟಕಡೆಯವನಿಗೆ ರಾಜಕೀಯ ಆರ್ಥಿಕ ಮತ್ತು ಸಾಮಾಜಿಕ ನ್ಯಾಯ'ವನ್ನು ದೊರಕಿಸಿಕೊಡಬೇಕಾದುದು ಇಂದಿನ ಅಗತ್ಯ. ಯಾವುದೇ ಒಂದು ಪದ್ಧತಿ ಸಾರ್ವಕಾಲಿಕವಾಗಿ ನಿಲ್ಲುವುದು ಸಾಧ್ಯವಿಲ್ಲ. ಸಾಮಾನ್ಯಜನ ತತ್ವಜ್ಞಾನಿಗಳೂ ಅಲ್ಲ, ವಾದ ನಿಷ್ಠರೂ ಅಲ್ಲ. ಯಾವುದೇ ಒಂದು ವಾದದ ಸಿದ್ಧಾಂತಗಳು ಬೇರೆ ಬೇರೆ ಪರಿಸ್ಥಿತಿಗಳಿಗೆ ಅನ್ವಯವಾಗಲಾರವು. ಒಂದು ನಿರ್ದೋಷ ಪದ್ಧತಿಯ ಲಕ್ಷಣಗಳನ್ನು ಕುರಿತು ಆಚಾರ್ಯ ವಿನೋಬಾ ತಮ್ಮ 'ಸ್ವರಾಜ್ಯ ಶಾಸ್ತ್ರ' ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ.-

೧) ಸಮರ್ಥರ ಸಾಮರ್ಥ್ಯ ಪ್ರಕೃತಿದತ್ತ ವರವಾದುದರಿಂದ ಜನಸೇವೆಗಾಗಿಯೇ ಮೀಸಲಾಗಿರಬೇಕು. ಕೇವಲ ಸ್ವಾರ್ಥಸಾಧನೆಗೆ ಬಳಸತಕ್ಕದ್ದಲ್ಲ.

೨) ಜನತೆ ತನ್ನ ಮೂಲ ಆವಶ್ಯಕತೆಗಳಲ್ಲಿ ಸ್ವಾವಲಂಬಿಯೂ ಸಾಮಾಜಿಕವಾಗಿ ಪರಸ್ಪರ ಸಹಕಾರಿಯೂ ಆಗಿದ್ದು, ವಿಶ್ವ ಕುಟುಂಬ ಭಾವನೆಯಿಂದ ಬದುಕಲು ಕಲಿಯುವಂತಿರಬೇಕು.

೩) ರಾಜ್ಯ ಶಕ್ತಿಯನ್ನು ನಿಯಂತ್ರಣಗೊಳಿಸಲು ಅಹಿಂಸಾತ್ಮಕ ಅಸಹಕಾರದ ನೈತಿಕ ಶಕ್ತಿ ಜನತೆಯಲ್ಲಿದ್ದು ರಚನಾತ್ಮಕವಾದ ದಿನ ನಿತ್ಯದ ಕಾರ್ಯಗಳಲ್ಲಿ ಸಹಕಾರ ನೀಡುವ ಅರಿವು ಜೀವಂತವಾಗಿರಬೇಕು.

೪) ಪ್ರತಿ ಪೂಜೆಯ ಸಮಾಜೋಪಯುಕ್ತ ಪರಿಶ್ರಮದ ಬೆಲೆಯೂ ನೈತಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಏಕ ಪ್ರಕಾರವಾಗಿದ್ದು ಸರ್ವಸಮಾನ ಗೌರವಕ್ಕೆ ಪಾತ್ರವಾಗುವಂತಿರಬೇಕು.

ಸೇವಾಭಾವನೆ, ಸರಳಜೀವನ, ಸ್ವಾವಲಂಬನೆ, ಸತ್ಯಾಗ್ರಹಶಕ್ತಿ, ಸಾಮಾಜಿಕ ಸಮಾನತೆ ಮತ್ತು ಆಧ್ಯಾತ್ಮಿಕತೆ- ಇವು ಗಾಂಧೀ ಪ್ರಣೀತ ಸ್ವರಾಜ್ಯದ ತಳಹದಿ. ಆಯಾ ಕಾಲದ ಜಾನಪದ ತಿಳುವಳಿಕೆಗಳಿಗನುಗುಣವಾಗಿ ಆಡಳಿತ ಪದ್ಧತಿಗಳೂ, ಸಾಂಸ್ಕೃತಿಕ ಸಂಸ್ಥೆಗಳೂ, ಸಾಮಾಜಿಕ ವ್ಯವಸ್ಥೆಗಳೂ ಕಡೆದು ನಿಲ್ಲುತ್ತವೆ. ಆದರ್ಶದ ಕಡೆಗೆ ಅವು ಹೆಜ್ಜೆಯಿಡುತ್ತಿರಬೇಕು. ಆದರೆ ಆದರ್ಶ ಎಲ್ಲ ಕಾಲಕ್ಕೂ ಸಾಧನೆಯ ಕ್ಷಿತಿಜದಾಚೆಗೆ ನಿಂತು ಆಹ್ವಾನಿಸುತ್ತಿರುತ್ತದೆ. ಪ್ರಾಮಾಣಿಕ ಪ್ರಯತ್ನವಿರಬೇಕು, ನಿರಾಶೆಯಿಂದ ಹಿಮ್ಮೆಟ್ಟಬಾರದು ಎಂದರು ಗಾಂಧೀಜಿ. ಪರಿಸ್ಥಿತಿ ಸಾಪೇಕ್ಷವಾಗಿಯೇ ರಾಜ್ಯಶಾಸ್ತ್ರ ರೂಪಗೊಳ್ಳುತ್ತದೆ.

ಸ್ವರಾಜ್ಯ ಎಂದರೆ ಒಂದು ವಿಶಿಷ್ಟ ಜೀವನ ವಿಧಾನ, ಒಂದು ಮೌಲ್ಯ ಸಂಹಿತೆಯ ಅಂಗೀಕಾರ. ಕೇವಲ ರಾಜಕೀಯ ಬದಲಾವಣೆ ಅಲ್ಲ. ಒಂದು ನೈತಿಕ ನಿಷ್ಠೆಯ ಸುಸಂಘಟಿತ ನಿತ್ಯ ಜಾಗೃತ ಮತ್ತು ಪರಿಣಾಮಕಾರೀ ಜನಶಕ್ತಿ ನಿರ್ಮಾಣವೇ ಗಾಂಧೀಮಾರ್ಗದ ಪರಮಗುರಿಯಾದ ಸ್ವರಾಜ್ಯ. ತಮ್ಮ ಜೀವನದುದ್ದಕ್ಕೂ ಈ ಗುರಿ ಸಾಧನೆಗಾಗಿ ಶ್ರಮಿಸಿ ತಮ್ಮ ಚಿಂತನ ಮತ್ತು ಪ್ರಯೋಗಗಳ ಬಳುವಳಿಯನ್ನು ರಾಷ್ಟ್ರಕ್ಕೆ ಧಾರೆಯೆರೆದಿದ್ದಾರೆ ಗಾಂಧೀಜಿ, ತಮ್ಮ ಪ್ರಮುಖ ಗುರಿಯನ್ನು ಕುರಿತು ಹೀಗೆ ಹೇಳಿದ್ದಾರೆ:

''ರಾಷ್ಟ್ರೀಯ ಸ್ತರದಲ್ಲಿ ಅಹಿಂಸಾಶಕ್ತಿಯನ್ನು ಅಂಗೀಕರಿಸದಿದ್ದಲ್ಲಿ ಒಂದು ರಾಜ್ಯಾಂಗ ಬದ್ಧ ಅಥವಾ ಪ್ರಜಾಸತ್ತಾತ್ಮಕ ಸರ್ಕಾರ ಇರುವುದೇ ಇಲ್ಲ ಎಂಬುದು ನನ್ನ ನಂಬಿಕೆ. ಆದ್ದರಿಂದ 'ಅಹಿಂಸೆಯೇ ಜೀವನದ ನಿಯಮ' ಎಂಬ ಸತ್ಯವನ್ನು ಪ್ರಚಾರ ಮಾಡಲು ನನ್ನ ಎಲ್ಲ ಶಕ್ತಿ ಸಾಮರ್ಥ್ಯಗಳನ್ನು ವಿನಿಯೋಗಿಸುತ್ತೇನೆ. ವ್ಯಕ್ತಿಗತವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ರಾಷ್ಟ್ರೀಯವಾಗಿ, ಅಂತರರಾಷ್ಟ್ರೀಯವಾಗಿ ಅದೇ ಸತ್ಯ......ನನ್ನ ಪ್ರಯೋಗಗಳ ಯಶಸ್ಸನ್ನು ನಾನು ಅರಿತಿರುವಂತೆಯೇ ನನ್ನ ವಿಫಲತೆಗಳನ್ನೂ ತಿಳಿದಿದ್ದೇನೆ. ಆದರೆ ಆಗಿರುವ ಯಶಸ್ವೀ ಪ್ರಯೋಗಗಳು ನನ್ನಲ್ಲಿ ಅಮರವಾದ ಆಶಾಭಾವನೆಯನ್ನು ತುಂಬುವಷ್ಟು ಸಮೃದ್ಧವಾಗಿವೆ.''

(ಹರಿಜನ ೧೧. ೨. ೧೯೩೯)

ಕೆ. ಎಸ್. ನಾರಾಯಣಸ್ವಾಮಿ
ಗಾಂಧೀ ಶಾಂತಿ ಪ್ರತಿಷ್ಠಾನ, ಬೆಂಗಳೂರು ಕೇಂದ್ರ . ಗಾಂಧೀಭವನ,
ಕುಮಾರಾ ಪಾರ್ಕ್ ಪೂರ್ವ, ಬೆಂಗಳೂರು-೫೬೦ ೦೦೧


ತಕ್ಕಡಿಯೊಳಗಿನ ಕಪ್ಪೆಗಳು

ಕಪ್ಪೆಗಳನ್ನು ತಕ್ಕಡಿಯೊಳಗೆ ಹಾಕಿದಂತೆ ಎಂಬುದೊಂದು ನಾಣ್ನುಡಿ. ತಕ್ಕಡಿಯ ತಟ್ಟೆಯಿಂದ ಜಿಗಿದು ಓಡಿಹೋಗಲು ಸನ್ನದ್ಧವಾಗಿರುವ ಕಪ್ಪೆಗಳನ್ನು ತೂಗುವುದು ಹೇಗೆ ? ತಟ್ಟೆಯ ಗಾತ್ರವನ್ನು ದೊಡ್ಡದು ಮಾಡುವುದೊಂದು ಉಪಾಯ. ಜಿಗಿದಮೇಲೂ ಅವು ತಟ್ಟೆಯೊಳಗೇ ಬೀಳುವಂತಿದ್ದರೆ ಕ್ಷಣಕಾಲವಾದರೂ ಅವು ತಟ್ಟೆಯಲ್ಲಿ ಉಳಿದಂತಾಗುವುದು.

ಗ್ರಹಗಳನ್ನು ಈ ಕಪ್ಪೆಗಳಿಗೆ ಹೋಲಿಸಬಹುದು. ನಿರಂತರ ಚಲನೆಯಲ್ಲಿ ಬರುವ ಇವು ಒಂದೇ ಸರಳ ರೇಖೆಯಲ್ಲಿ ಬರುವುದು ಸಾಧ್ಯವೇ ಇಲ್ಲವಾದ್ದರಿಂದ (ತಕ್ಕಡಿಯ ತಟ್ಟೆಯ ಗಾತ್ರವನ್ನು ಹೆಚ್ಚಿಸಿದಂತೆ) ಅವು ಕನಿಷ್ಠ ಕೋನದಲ್ಲಿ ಬರುವ ಸಾಧ್ಯತೆಯನ್ನು ಲೆಕ್ಕಹಾಕಬಹುದು. ಮೇ ತಿಂಗಳಲ್ಲಿ ಹೀಗೆ ಐದು ಗ್ರಹಗಳು ಮಾತ್ರ ಕನಿಷ್ಠ ಕೋನದಲ್ಲಿ ಸೇರಿವೆ. ಸೂರ್ಯೋದಯಕ್ಕೆ ಸ್ವಲ್ಪ ಆಚೀಚೆ ಉದಯಿಸುವ ಈ ಗ್ರಹಗಳೆಲ್ಲಾ ಹಗಲಿನಲ್ಲೇ ನೆತ್ತಿಯನ್ನು ದಾಟುವುದರಿಂದ ಅವುಗಳನ್ನು ನೋಡುವ ಅವಕಾಶವೇ ಇಲ್ಲದಂತಾಗಿದೆ. ಆದ್ದರಿಂದ ಗ್ರಹವೀಕ್ಷಕರಿಗೆ ಈ ತಿಂಗಳು ಬೇಸಗೆಯ ರಜಾ ಎನ್ನಬಹುದು.

ತಕ್ಕಡಿ (ಸೂರ್ಯನ ಪ್ರಭೆ)ಯಿಂದ ಜಿಗಿದು ಬರುವಲ್ಲಿ ಯಶಸ್ವಿಯಾದ ಒಂದು ಕಪ್ಪೆ (ಗ್ರಹ) ಸಂಜೆ ನೋಡಲು ಸಿಗುತ್ತದೆ. ಮೇ ೫ರಂದು ಪಶ್ಚಿಮ ದಿಗಂತದ ಅಂಚಿನಲ್ಲಿ ಕಾಣುವ ಇದರ ಪಕ್ಕದಲ್ಲೇ ಕೆಂಪು ನಕ್ಷತ್ರ ರೋಹಿಣಿಯು ಕಾಣುತ್ತದೆ. ದಿನೇ ದಿನೇ ಸ್ಥಳ ಬದಲಿಸುವ ಇದನ್ನು ತೊರೆದು ರೋಹಿಣಿ ಮಾಯ (!)ವಾಗುತ್ತದೆ. ತಿಂಗಳ ಕೊನೆಯಲ್ಲಿ ಇನ್ನೊಂದು ಗ್ರಹ ಬುಧ ಜೊತೆಗೂಡುತ್ತದೆ. ಪ್ರತಿಸಂಜೆ ಆಕಾಶವನ್ನು ಗಮನಿಸುವವರಿಗೆ ಮಾತ್ರ ಈ ಪಲ್ಲಟ ಗೋಚರವಾಗುತ್ತದೆ. ಆದರೂ ಅಷ್ಟೇನೂ ಶುಭ್ರವಾಗಿರದ ಬೂದು ಬಣ್ಣದ ಆಕಾಶದಲ್ಲಿ, ಸಂಜೆಯ ಹೊಂಬಣ್ಣದಲ್ಲಿ ಈ ಕ್ಷೀಣ ಚುಕ್ಕಿಗಳನ್ನು ಗುರುತಿಸುವುದು ಒಂದು ಸವಾಲು ಎನ್ನಬಹುದು.

ಪಶ್ಚಿಮದಂಚಿನಲ್ಲಿ ಮಂಗಳದ ಸ್ವಲ್ಪ ದಕ್ಷಿಣಕ್ಕೆ ಒರೈಯನ್ (ಮಹಾವ್ಯಾಧ) ಮುಳುಗುವ ಸಿದ್ಧತೆಯಲ್ಲಿರುತ್ತದೆ. ಅದರ ಪೂರ್ವಕ್ಕೆ (ಮೇಲಕ್ಕೆ) ಮಿಥುನದ ಪುನರ್ವಸು (ಪಕ್ಕದಲ್ಲಿ) ಉತ್ತರಕ್ಕೆ, ಆರಿಗ (ವಿಜಯಸಾರಥಿ) ಪುಂಜದ ಕಪೆಲ್ಲಾ (ಬ್ರಹ್ಮಹೃದಯ) ಇವು ಕಾಣುತ್ತವೆ. ನೆತ್ತಿಯಲ್ಲಿ ಪ್ರಶ್ನಾರ್ಥಕ ಚಿಹ್ನೆಯ ಆಕಾರದ ಸಿಂಹರಾಶಿಯ ಮಘ ನಕ್ಷತ್ರ. ಅದರ ಪೂರ್ವಕ್ಕೆ ಕನ್ಯಾರಾಶಿಯ ಏಕಾಂಗಿ ನಕ್ಷತ್ರ ಪ್ರಕಾಶಮಾನನಾದ ಚಿತ್ರಾ




ಸ್ಫುಟವಾಗಿ ಕಾಣುತ್ತವೆ. ಇದರ ಸಮೀಪ ತುಸು ಉತ್ತರಕ್ಕೆ ಕಾಣುವ ಕೆಂಪು ನಕ್ಷತ್ರ ಸ್ವಾತಿ. ಇವೆಲ್ಲವುಗಳಿಗಿಂತ ಆಕರ್ಷಕವಾಗಿರುವುದು. ಉತ್ತರದ ಸಪ್ತರ್ಷಿಮಂಡಲ. ಉರ್ಸಾ ಮೇಜರ್ (ದೊಡ್ಡ ಕರಡಿ) ಎಂಬುದು ಇದರ ಪಾಶ್ಚಾತ್ಯ ನಾಮ. ಈ ಏಳು ನಕ್ಷತ್ರಗಳಲ್ಲಿಯ ಮೊದಲೆರಡು ಚುಕ್ಕಿಗಳನ್ನು ಸೇರಿಸಿ ಎಳೆದ ಕಾಲ್ಪನಿಕ ರೇಖೆ ಧ್ರುವ ನಕ್ಷತ್ರವನ್ನು ಸಂಧಿಸುತ್ತದೆ. ಆದ್ದರಿಂದ ಕ್ಷೀಣವಾದ ಧ್ರುವ ನಕ್ಷತ್ರವನ್ನು ಗುರುತಿಸುವುದು ಸಾಧ್ಯ.

ಪೂರ್ವದಿಗಂತದ ಅಂಚಿನಲ್ಲಿ ಕಾಣುವ ನೀಲಿ ನಕ್ಷತ್ರವೊಂದನ್ನು ನೆನಪಿಟ್ಟುಕೊಳ್ಳಿ. ತುಲಾರಾಶಿಯ ಇತರ ನಕ್ಷತ್ರಗಳು ಇದಕ್ಕಿಂತ ಕ್ಷೀಣವಾಗಿವೆ. ನಮ್ಮ ಮಾರ್ಗದರ್ಶಿ ಚಂದ್ರ ೧೮ರ ಹುಣ್ಣಿಮೆಯಂದು ಈ ನಕ್ಷತ್ರದ ಬಳಿ ಪ್ರತ್ಯಕ್ಷನಾದಾಗ ಅದರ ವೈಶಿಷ್ಟ್ಯ ನಿಮಗೆ ತಿಳಿಯುತ್ತದೆ. ಈ ತಿಂಗಳು ವೈಶಾಖ. ಈ ನಕ್ಷತ್ರ ವಿಶಾಖಾ. ಈ ನಮ್ಮ ಮಾರ್ಗದರ್ಶಿ ಪ್ರತಿ ತಿಂಗಳಿನಂತೆಯೇ ಈ ತಿಂಗಳೂ ಎಲ್ಲ ಗ್ರಹಗಳನ್ನೂ ಬಳಸಿಬರುತ್ತಾನಾದರೂ ಅವೆಲ್ಲಾ ಹಗಲಿನಲ್ಲಿ ನಡೆಯುವ ಘಟನೆಗಳಾದದ್ದರಿಂದ ದರ್ಶನ ಯಾರಿಗೂ ಲಭ್ಯವಿಲ್ಲ.

ಅಮಾವಾಸ್ಯೆ ೪ರಂದು, ಬಾಲಚಂದ್ರನನ್ನು ೬ರಂದು ಗುರುತಿಸಲು ಪ್ರಯತ್ನಿಸಿ. ಪಶ್ಚಿಮದ ಅಂಚಿನಲ್ಲಿ ಕೃತ್ತಿಕಾ, ರೋಹಿಣಿಗಳ ಜೊತೆಗೆ ಮಂಗಳ ಮತ್ತು ಬಾಲಚಂದ್ರ ಎಲ್ಲವೂ ಕಾಣುತ್ತವೆ.

ಹ್ಯಾಲೀ ಎಂಬ ಧೂಮಕೇತು ತನ್ನ ಕಕ್ಷೆಯುದ್ದಕ್ಕೂ ಚೆಲ್ಲಿಕೊಂಡು ಹೋಗಿರುವ ಧೂಳಿನ ಕಣಗಳನ್ನು ಭೂಮಿ ಮೇ ೫ರಂದು ಸಮೀಪಿಸುವುದು. ಈ ಕಣಗಳು ಉಲ್ಕಾವೃಷ್ಟಿಯಾಗಿ ಕಾಣುವುವು. ಈಟಾ ಅಕ್ವಾರಿಡ್ಸ್ ಎಂಬ ಹೆಸರಿನ ಈ ವೃಷ್ಟಿಯ ಉಲ್ಕೆಗಳು ಅಕ್ವೇರಿಯಸ್ ಅಂದರೆ ಕುಂಭರಾಶಿಯಿಂದ ಹೊರಟಂತೆ ಕಾಣುವುವು. ೪,೫,೬ ಈ ದಿನಗಳ ಬೆಳಗಿನ ಝಾವ ಪೂರ್ವ ದಿಕ್ಕನ್ನು ಗಮನಿಸುವವರಿಗೆ ಗಂಟೆಗೆ ೧೫ರಿಂದ ೨೦ ಉಲ್ಕೆಗಳು ಕಾಣಬಹುದು.

- ಡಾ|| ಬಿ. ಎಸ್. ಶೈಲಜಾ



ಒಂಭತ್ತು ಗ್ರಹಗಳ ಕಕ್ಷೆಗಳನ್ನು ಒಂದೇ ಅಳತೆಯಲ್ಲಿ ಈ ಕಾಗದದ ಮೇಲೆ ಮೂಡಿಸುವುದು ಸಾಧ್ಯವೇ ಇಲ್ಲ. ಎಡಗಡೆಯ ಚಿತ್ರ ಒಳವಲಯದ ಗ್ರಹಗಳಿಗಾಗಿ ರಚಿತವಾಗಿದೆ. ಇಲ್ಲಿ ಬಾಣದ ಉದ್ದ, ಮೇ ತಿಂಗಳಲ್ಲಿ ಈ ಗ್ರಹಗಳು ಕ್ರಮಿಸುವ ದೂರವನ್ನು ಸೂಚಿಸುತ್ತವೆ. ಇದೇ ಅವಧಿಯಲ್ಲಿ ಹೊರವಲಯದ ಗ್ರಹಗಳ ಚಲನೆ ಕಡಿಮೆ ಇರುವುದರಿಂದ ಅವನ್ನು ಚುಕ್ಕೆಗಳಂತೆ ಬಲಗಡೆಯ ಚಿತ್ರದಲ್ಲಿ ಗುರುತಿಸಲಾಗಿದೆ. ಕಕ್ಷೆಗಳು ಅಳತೆಗೆ ತಕ್ಕಂತೆ ಇಲ್ಲ. ಉದಾಹರಣೆಗೆ ನೆಪ್ಚೂನ್, ಪ್ಲೂಟೋ ನಡುವಿನ ದೂರ ೨,೨೦,೦೦೦ ಕಿ.ಮೀ.ಗಳಿಗಿಂತ ಹೆಚ್ಚು.

ತಿದ್ದುಪಡಿ

ಏಪ್ರಿಲ್ ತಿಂಗಳ ನಕ್ಷೆ ೯೦ ಡಿಗ್ರಿಗಳಷ್ಟು ತಿರುಗಿದೆ. ವಾಸ್ತವವಾಗಿ ಉತ್ತರ ಎಂಬಲ್ಲಿ ಪೂರ್ವ, ದಕ್ಷಿಣ ಎಂಬಲ್ಲಿ ಪಶ್ಚಿಮ ಇರಬೇಕು. ಅಂದರೆ ಪುಸ್ತಕವನ್ನು ಅಡ್ಡವಾಗಿ ಹಿಡಿದು ನಕ್ಷೆಯನ್ನು ಬಳಸಬೇಕು.

ಗ್ರಹಚಾರ "ಕೆಟ್ಟಾಗ"

ಗ್ರಹಚಾರ ಎಂದರೆ ಗ್ರಹಗಳ ಚಲನೆ ಎಂದರ್ಥ. ಆದರೆ ಇದಕ್ಕೆ ಆಡುಮಾತಿನಲ್ಲಿ ಬೇರೆಯೇ ಅರ್ಥವಿದೆಯಲ್ಲವೇ? ಆದ್ದರಿಂದ ಯಾರಿಗಾದರೂ ''ಗ್ರಹಚಾರ'' ಕೆಡುವುದು ಸಾಧ್ಯ; ಯಾರಿಗಾದರೂ 'ಗ್ರಹಚಾರ' ಬಿಡಿಸುವುದೂ ಸಾಧ್ಯ.

ಗ್ರಹಗಳೆಲ್ಲಾ ಒಟ್ಟಿಗೆ ಸೇರಿಬಿಡುತ್ತವಂತೆ; ಪ್ರಳಯ ಆಗುವುದಂತೆ ಎಂಬ ಗುಲ್ಲು ಎದ್ದಿರುವ ಸಂದರ್ಭದಲ್ಲಿ ಹಿಂದೆ ಇಂತಹ ''ಗ್ರಹಚಾರ''ಗಳು ಉಂಟಾಗಿದ್ದವೇ? ಆಗ ಏನು ಅನಾಹುತ ನಡೆಯಿತು? - ಎಂಬುದರತ್ತ ದೃಷ್ಟಿ ಹೊರಳುವುದು ಸಾಮಾನ್ಯವೇ. ಕ್ರಿ.ಪೂ. ೧೯೫೩ ಅಥವಾ ಕ್ರಿ.ಪೂ. ೧೫೨೬ ಇವೂ ತೀರಾ ಹಳೆಯದು ಎನಿಸುವುದು. ಕ್ರಿ.ಶ. ೧೧೮೬ರಲ್ಲಿ ಗ್ರಹಗಳು ಒಟ್ಟಿಗೆ ಸೇರಿದ್ದರಿಂದ ಮಂಗೋಲಿಯಾದ ಚೆಂಘೀಸ್‌ಖಾನ್ ಪಟ್ಟಕ್ಕೇರಿ ಚಕ್ರವರ್ತಿಯಾದನೆಂದು ಕೆಲವರ ನಂಬುಗೆ.

ಕ್ರಿ.ಶ. ೧೫೨೪ರ ಫೆಬ್ರವರಿ ೧೯ರಂದು ಗ್ರಹಗಳು ಗುಂಪುಗೂಡಿದ ಕಾರಣ ಭೀಕರ ಪ್ರಳಯ ಉಂಟಾಗುವುದೆಂದು ಇಡೀ ಯೂರೋಪು ತಲ್ಲಣಿಸಿತ್ತು. ಬರ್ಲಿನ್ ನಗರದ ಮಹಾರಾಜನ ಪರಿವಾರದ ಜೊತೆಗೆ ನಾಗರಿಕರೆಲ್ಲರೂ ಬೆಟ್ಟ ಹತ್ತಿ ಪ್ರವಾಹಕ್ಕಾಗಿ ಕಾದು ಕುಳಿತರು. ಎರಡು ವಾರದಲ್ಲಿ ಅವರು ಕೊಂಡೊಯ್ದಿದ್ದ ಆಹಾರ ಮುಗಿಯಿತು. ಮಳೆಯಂತೂ ಬರಲಿಲ್ಲ. ಬೆಟ್ಟ ಇಳಿದು ಬಂದರು. (ರಾಜನ ಸಾರೋಟು ಅರಮನೆ ಸಮೀಪಿಸುತ್ತಿದ್ದ ಹಾಗೇ ಸಿಡಿಲು ಬಡಿದು ಸಾರಥಿ ಮತ್ತು ನಾಲ್ಕು ಕುದುರೆಗಳು ಸತ್ತವಂತೆ. ಈ ಅಂಶವನ್ನು ಚರಿತ್ರೆಯ ಪುಸ್ತಕದಲ್ಲಿ ಆಮೇಲೆ ಯಾರೋ ಸೇರಿಸಿರಬೇಕು ಎಂದು ಅನೇಕರ ಅನುಮಾನ).

ತೀರಾ ಇತ್ತೀಚಿನ ೧೯೬೨ರ ಗ್ರಹಕೂಟ ಸದ್ದುಗದ್ದಲ ಮೂಡಿಸಿದರೂ ಶಾಂತವಾಗಿ ಪರ್ಯವಸಾನವಾಯಿತು; ೧೯೮೨ರದ್ದೂ ಅಷ್ಟೇ. ಆದರೆ ಐವತ್ತು ವರ್ಷಗಳ ಹಿಂದೆ ಗ್ರಹಗಳ ಚಲನೆ ಅನೇಕರ 'ಗ್ರಹಚಾರ' ಬಿಡಿಸಿದ್ದ ಸಂಗತಿ ಸ್ವಾರಸ್ಯವಾಗಿದೆ.

ರುಡೋಲ್ಫ್ ಹೆಸ್ (೧೮೯೪-೧೯೮೭) - ಈ ಹೆಸರು ಎರಡನೆಯ ವಿಶ್ವಯುದ್ಧದ ದಾಖಲೆಗಳಲ್ಲಿ ಮೂರನೆಯ ನಾಜಿ (Nazi number 3) ಎಂದೇ ದಾಖಲಾಗಿದೆ. ಅಡಾಲ್ಫ್ ಹಿಟ್ಲರ್ ಮತ್ತು ಹೆರ್ಮನ್ ಗೋರಿಂಗ್ ನಂತರ ಹೆಚ್ಚಾಗಿ ಕೇಳಿಬರುತ್ತಿದ್ದ ಹೆಸರು ಈತನದೇ ಆಗಿತ್ತು. ೧೯೨೦ರಲ್ಲಿ ನಾಜಿ ಪಕ್ಷ ಸೇರಿದ ಈತ ಬಹು ಬೇಗ ಹಿಟ್ಲರನಿಗೆ ಆತ್ಮೀಯನಾದ. ೧೯೩೩ರಲ್ಲಿ ಕ್ಯಾಬಿನೆಟ್ ಸೇರಿದ. ಅಷ್ಟೇನೂ ಚಾಣಾಕ್ಷನಾಗಿರಲಿಲ್ಲವಾದ್ದರಿಂದ ೧೯೪೧ರ ಹೊತ್ತಿಗೆ ಇತರರು ಮೇಲುಗೈ ಪಡೆದು ಈತ ಹಿಂದೆ ಉಳಿಯಬೇಕಾಯಿತು.

೧೯೪೧ರಲ್ಲಿ ಯೂರೋಪಿನ ಅರ್ಧಭಾಗವೆಲ್ಲಾ ನಾಜಿಗಳ ಕೈವಶವಾಗಿತ್ತು. ಇಂಗ್ಲೆಂಡ್ ಹೆಚ್ಚು ಕಡಿಮೆ ಏಕಾಂಗಿಯಾಗಿಯೇ ಸೆಣಸಾಡುತ್ತಿತ್ತು. ಇತ್ತ ಜರ್ಮನಿಯಲ್ಲಿ ರಷ್ಯಾದ ಮೇಲೆ ಆಕ್ರಮಣ ಮಾಡುವ ಸನ್ನಾಹ ನಡೆಯುತ್ತಿತ್ತು. ತನ್ನ ಹಿರಿಮೆಯನ್ನು ಈ ಸಂದರ್ಭದಲ್ಲಿ ಹೆಚ್ಚಿಸಿಕೊಳ್ಳಲು ಹೆಸ್ ಬೇರೊಂದು ಯೋಜನೆ ಹೂಡಿದ. ಶಾಂತಿದೂತನಾಗಿ ಯುದ್ಧವನ್ನು ನಿಲ್ಲಿಸಿ ತನ್ನ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಲು ಆಲೋಚಿಸಿದ. ಇಂಗ್ಲೆಂಡಿಗೆ ಹಾರಿ ಹೋಗಿ ದೊರೆ ನಾಲ್ಕನೆಯ ಜಾರ್ಜ್ ಮತ್ತು ವಿನ್‌ಸ್ಟನ್ ಚರ್ಚಿಲ್ ಅವರೊಡನೆ ಹೇಗಾದರೂ ಚರ್ಚಿಸಬೇಕೆಂದು ನಿಶ್ಚಯಿಸಿದ. ಆದರೆ ನೇರವಾಗಿ ಈ ದೊಡ್ಡ ಮನುಷ್ಯರನ್ನು ಸಂಪರ್ಕಿಸುವುದು ಹೇಗೆ? ಇದಕ್ಕಾಗಿ ಅವನು ಸ್ಕಾಟ್‌ಲೆಂಡ್‌ನ ಡ್ಯೂಕ್ ಆಫ್ ಹ್ಯಾಮಿಲ್ಟನ್‌ನ ಮಿತ್ರತ್ವವನ್ನು ಬಳಸಿಕೊಳ್ಳಲು ನಿರ್ಧರಿಸಿದ. ಗ್ಲಾಸ್ಗೋ ನಗರದ ದಕ್ಷಿಣದಲ್ಲಿದ್ದ ವಿಶಾಲ ಭವನದಲ್ಲಿಳಿದರೆ ತನ್ನ ಯೋಜನೆ ಸಫಲವಾದಂತೆ ಎಂದವನ ಎಣಿಕೆ.

ಜನವರಿ ೧೯೪೧ರಲ್ಲಿ ಈ ರಹಸ್ಯ ಕಾರ್ಯಾಚರಣೆ ಆರಂಭವಾಯಿತು. ಹೆಸ್‌ನ ಖಾಸಗಿ ಸಲಹೆಗಾರನಾಗಿದ್ದ ಶೂಲ್ಟ್ ಸ್ಟ್ರಾಟ್ ಹೌಸ್ ಎಂಬುವನು ಫಲಜ್ಯೋತಿಷ್ಯವನ್ನು ತಿಳಿದು ಕೊಂಡಿದ್ದ. ಈತ ಮೇ ೧೦ರಂದು ಗ್ರಹಗಳು ಒಟ್ಟುಗೂಡುತ್ತವೆ ಎಂದು ತಿಳಿಸಿದ. ರವಿ, ಬುಧ, ಶುಕ್ರ, ಗುರು, ಶನಿ ಮತ್ತು ಯುರೇನಸ್‌ಗಳು ಒಟ್ಟಾಗುವ ಈ ಸಂದರ್ಭ ಅತಿ ಪ್ರಶಸ್ತ ಎಂದಾತ ಮನವೊಲಿಸಿದ. ಬೇರೆ ಒಂದಿಬ್ಬರು ಜ್ಯೋತಿಷಿಗಳೂ ಇಂಗ್ಲೆಂಡ್ ಮತ್ತು ಜರ್ಮನಿಯ ನಡುವೆ ಸೌಹಾರ್ದಯುತ ವಾತಾವರಣ ಬೆಳೆಯಲು ಇದು ಅತಿ ಪ್ರಶಸ್ತ ಮುಹೂರ್ತ ಎಂದು ಅನುಮೋದಿಸಿದರು. ಈ ನಡುವೆ ರಹಸ್ಯವಾಗಿ ಈತ ಬರೆದಿದ್ದ ಕಾಗದ ಸ್ಕಾಟ್ಲೆಂಡ್‌ಅನ್ನು ತಲುಪಿ ಉತ್ತರವೂ ಬಂದಿತು.

೧೯೪೧ರ ಮೇ ೧೦ ಹುಣ್ಣಿಮೆಯೂ ಆಗಿದ್ದುದು ಹೆಸ್‌ಗೆ ಅನುಕೂಲವಾಯಿತು. ಸ್ಕಾಟ್ಲೆಂಡ್‌ನ ಭೂಭಾಗವನ್ನು ಗಮನಿಸಲು ಚಂದ್ರನ ಬೆಳಕು ಆವಶ್ಯಕವಾಗಿತ್ತು. ಅದೇ ಹೊತ್ತಿನಲ್ಲಿ ಚಂದ್ರನ ಬೆಳಕನ್ನು ಬಳಸಿ ಲಂಡನ್ ನಗರದ ಮೇಲೆ ಬಾಂಬ್ ಮಾಡಲು ಜರ್ಮನಿಯೂ ಯೋಜನೆ ಹಾಕಿತ್ತು.

ಔಗ್ಸ್‌ಬರ್ಗ್‌ನಿಂದ ಸರಿಯಾಗಿ [illegible] (ಮುಹೂರ್ತವೂ ಸಿಗದಿದ್ದಾಗಿತ್ತು!) ಫೈಟರ್ ವಿಮಾನವನ್ನೇರಿದ ಹೆಸ್ ಹೊತ್ತಿ ಉರಿಯುತ್ತಿದ್ದ ಲಂಡನ್ ನಗರವನ್ನು ಬಳಸಿ ಗ್ಲಾಸ್ಗೋ ತಲುಪಿದ. ಡ್ಯೂಕ್‌ನ ಬಂಗಲೆಯೂ ಕಂಡಿತು. ಪ್ಯಾರಾಶೂಟ್‌ನ ಸಹಾಯದಿಂದ ಕೆಳಗಿಳಿದ. ತುಸು ಎಡವಟ್ಟಾಗಿ ಬಂಗಲೆಯ ಹೊರಗೆ ಯಾವುದೋ ಹೊಲದ ಮಧ್ಯೆ ಇಳಿದುಬಿಟ್ಟ. ರಕ್ಷಣಾಪಡೆ ಧಾವಿಸಿ ಬಂದು ಸೆರೆಹಿಡಿಯಿತು. ಅವನನ್ನು ಗುರುತುಹಚ್ಚುವುದೇ ಪ್ರಯಾಸವಾಗಿತ್ತು.

ಮರುದಿನ ಬೆಳಗ್ಗೆ ವಿನ್‌ಸ್ಟನ್ ಚರ್ಚಿಲ್ ಮುಂದೆ ಆತನನ್ನು ಹಾಜರುಪಡಿಸಲಾಯಿತು. ಆತನ ಶಾಂತಿ ಸಂದೇಶವನ್ನು ಸಂಶಯಗ್ರಸ್ತ ಚರ್ಚಿಲ್ ನಿರಾಕರಿಸಿದ. ಹೆಸ್ ಜೈಲಿನಲ್ಲಿ ವಿಶೇಷ ಬಂದಿಯಾದ.

ಈ ಸುದ್ದಿ ತಿಳಿದ ಹಿಟ್ಲರ್ ಹೌಹಾರಿದ. ಇಂತಹ ತೀರ್ಮಾನವನ್ನು ಹೆಸ್ ಹೇಗೆ ತೆಗೆದುಕೊಂಡ ಎಂದವನಿಗೆ ದಿಗ್ಭ್ರಮೆಯಾಯಿತು. ಆದರೆ ಅದನ್ನಾತ ಬಿಟ್ಟು ಕೊಡಲಿಲ್ಲ. ಈಚಿನ ದಿನಗಳಲ್ಲಿ ಹೆಸ್‌ಗೆ ಮತಿಭ್ರಮಣೆಯಾಗಿತ್ತು; ಫಲಜ್ಯೋತಿಷಿಗಳು ಅದನ್ನು ದುರುಪಯೋಗಪಡಿಸಿಕೊಂಡರು ಎಂದು ಹೇಳಿಕೆ ಕೊಟ್ಟ.

ಈ ಘಟನೆ ಇಲ್ಲಿಗೇ ಮುಗಿದಿದ್ದರೆ ಚೆನ್ನಾಗಿತ್ತು. ಆದರೆ ಹಾಗಾಗಲಿಲ್ಲ. ಜೂನ್ ೯ರಂದು 'Action Hess' ಎಂದು ಹಿಟ್ಲರ್ ಘೋಷಿಸಿದ. ನೂರಾರು ಜನರನ್ನು ನಾಜಿ ಸೈನಿಕರು ಮೃತ್ಯುಕೂಪಕ್ಕೆ ತಳ್ಳಿದರು. ಈ ಸಂಖ್ಯೆ ೩೦೦ ಇರಬಹುದು ಎಂದು ಒಂದು ಅಂದಾಜಾದರೆ ಒಂದು ಸಾವಿರ ಎಂಬುದು ಇನ್ನೊಂದು ಅಂದಾಜು. ಇವರಲ್ಲಿ ಹೆಸ್‌ನ ಅನುಯಾಯಿಗಳು ಮಾತ್ರವಲ್ಲ, ಫಲಜ್ಯೋತಿಷಿಗಳೆಲ್ಲಾ ಸೇರಿದ್ದರು !


ಇದನ್ನು ''ಗ್ರಹಚಾರ''ವೆನ್ನದೆ ಏನೆಂದು ಕರೆಯೋಣ?

(ಆಧಾರ : Sky and Telescope)

ಡಾ|| ಬಿ. ಎಸ್. ಶೈಲಜಾ
ಜವಹರಲಾಲ್ ನೆಹರು ತಾರಾಲಯ, ಹೈಗ್ರೌಂಡ್,
ಬೆಂಗಳೂರು - ೫೬೦ ೦೦೧.

ಲೀನಿಯರ್ (Linear 1999 S4) ಎಂಬ ಹೆಸರಿನ ಧೂಮಕೇತು ದೂರದರ್ಶಕಗಳ ನೋಟಕ್ಕೆ ಮಾತ್ರ ನಿಲುಕುವಷ್ಟು ಕ್ಷೀಣವಾಗಿ ಕಾಣುತ್ತಿದೆ. ಬೆಳಗಿನ ಜಾವದಲ್ಲಿ ಮೇಷರಾಶಿಗಿಂತ ಸ್ವಲ್ಪ ಉತ್ತರದ ಟ್ರೆಯಾಂಗ್ಯುಲರ್ (ತ್ರಿಕೋಣ) ಎಂಬ ರಾಶಿಯಲ್ಲಿ ನಿಧಾನವಾಗಿ ಸಾಗುತ್ತಿರುವ ಇದು ಬರುವ ತಿಂಗಳುಗಳಲ್ಲಿ ಇನ್ನೂ ಪ್ರಕಾಶಮಾನವಾಗಬಹುದು ಎಂದು ಲೆಕ್ಕಾಚಾರ ತಿಳಿಸುತ್ತದೆ.

ಚುಟುಕು



ಮುದುಕರ ಊಟ
ಕೋಳಿಯ ಊಟದಂತೆ
ತಿನ್ನುವುದಕ್ಕಿಂತಲೂ
ಕೆದಕುವುದೇ ಹೆಚ್ಚು.

ಹಾಲಾಡಿ ಮಾರುತಿರಾವ್

ಅಂಡಮಾನಿನ ಕೆಲವು ಜನ

ಡಾ|| ರಹಮತ್ ತರೀಕೆರೆ

"ಅಂಡಮಾನ್ ಪ್ರವಾಸದಲ್ಲಿ ನಾವು ಕಾಣಲಿರುವುದು ಕಾಡು ಹೊಳೆ ಮಾತ್ರ ಅಲ್ಲ, ಇದರ ಒಳಗೆ ಬದುಕಲು ಸೆಣಸುತ್ತಾ ಇರುವ ಮಾನವರನ್ನು. ಈ ಸೆಣಸಾಟ ಕಡಲಿಗಿಂತಲೂ ನಿಗೂಢ, ಕಾಡಿಗಿಂತಲೂ ದಟ್ಟ ಆಗಿರಬಹುದು" ಎಂಬ ಸೂಚನೆ ಹಡಗಿನ ಪ್ರಯಾಣದಲ್ಲಿಯೇ ನಮಗೆ ಸಿಕ್ಕಿತ್ತು. ನಾವು ಕಂಡ ಜನ ಕೂಡ "ನೀವು ಇಲ್ಲಿ ಬಂದರೂ ನೋಡುವುದು ನಿಮ್ಮೂರ ಬಳ್ಳಿ ಚಾಚಿರುವ ಕುಡಿಯನ್ನೆ" ಎಂಬ ಸತ್ಯವನ್ನು ಕಾಣಿಸಿದರು. ಅಂತಹ ಕೆಲವರು ನಮ್ಮ ನೆನಪಿನಲ್ಲಿ ಗಾಢವಾಗಿ ಉಳಿದು ಹೋಗಿದ್ದಾರೆ. ಅವರ ನೆನಪಿಲ್ಲದೆ ಅಂಡಮಾನ್ ಕಥನ ಮುಗಿಯುವುದಿಲ್ಲ.

ಆಶುತೋಶ್

ದಿಗ್ಲಿಪುರ ನೋಡಿಕೊಂಡು ಮರಳಿ ನಾವು ಕಾಳಿಘಾಟಿನ ಮೂಲಕ ಮ್ಯಾಂಗ್ರೋವ್ ಕೊಲ್ಲಿಗಳ ಮಾರ್ಗವಾಗಿಯೇ ಬರಬೇಕಾಯಿತು. ಬರುತ್ತಾ ನಮ್ಮನ್ನು ಕರೆದುಕೊಂಡು ಬಂದ ಡೋಂಗಿ(ನಾಡದೋಣಿ)ಗಳು ಈಗ ಇರಲಿಲ್ಲ. ಬದಲಿಗೆ ಕೊಲ್ಲಿಯಲ್ಲಿ ಅರಣ್ಯ ಇಲಾಖೆಗೆ ಸೇರಿದ ದೋಣಿಯೊಂದು ನಿಂತಿತ್ತು. ಅದರೊಳಗೆ ಕೆಲವರು ಮಲಗಿದ್ದರು. ಒಬ್ಬನನ್ನು ಅಲುಗಿಸಿ "ಮಾಯಾಬಂದರಿಗೆ ಹೋಗಬೇಕಿತ್ತು, ಬರ್ತೀರಾ?" ಎಂದು ಕೇಳಿದೆವು. ಗಾಢ ನಿದ್ದೆಯಲ್ಲಿದ್ದ ಅವನು ತನ್ನ ಕೆಂಪನೆಯ ಕಣ್ಣನ್ನು ತೆರೆದು, ನಿದ್ದೆಗೆಟ್ಟ ಅಸಮಾಧಾನದಲ್ಲಿ "ಸ್ವಲ್ಪ ತಡೆಯಿರಿ" ಎಂಬಂತೆ ಕೈಸನ್ನೆ ಮಾಡಿದ. ಅದರೊಳಗೆ ಮಲಗಿದ್ದವರೆಲ್ಲಾ ಒಬ್ಬೊಬ್ಬರಾಗಿ ಎದ್ದು ಮೈ ಎಳೆಯುತ್ತಾ ಹೋಗಿ ಟೀ ಕುಡಿದು ಬಂದರು. ನಾವು ದೋಣಿ ಹತ್ತಿಕೊಂಡೆವು.

ಇದೊಂದು ಕಾವಲು ದೋಣಿಯಾಗಿತ್ತು. ದ್ವೀಪಗಳ ನಡುವೆ ಸುತ್ತುತ್ತ ಕಾಡುಗಳ್ಳರನ್ನು ಹಿಡಿಯಲು ಈ ದೋಣಿಯನ್ನು ಬಳಸಲಾಗುತ್ತಿತ್ತು. ಅಂಡಮಾನಿನ ಕಾಡುಗಳ ಬಗ್ಗೆ ತಿಳಿಯಬೇಕೆಂದು ನಾವು ಅದರ ಚಾಲಕನ ಜತೆ ಮಾತಿಗೆ ತೊಡಗಿದೆವು. ಮೊದ ಮೊದಲು ಅವನ ಬಿಗಿ ಮುಖ ನೋಡಿದರೆ ಮಾತಾಡಲು ಹಿಂಜರಿಕೆಯಾಯಿತು. ಆದರೆ ಮಾತಿಗೆ ಎಳೆದಾಗ ತಿಳಿಯಿತು ಅವನೊಬ್ಬ ಮಾತಿನ ಮಲ್ಲನೆಂದು; ಅವನ ಹೆಸರು ಆಶುತೋಶ್. ಜನಗಳಿಂದ ದೂರವಾದ ಈ ದ್ವೀಪಗಳಲ್ಲಿ ಮರ ಕದಿಯಲು ಯಾರು ಬರುತ್ತಾರೆ ಎಂದು ನಮಗೆ ಕುತೂಹಲ. ಕೆದಕಿದರೆ, ಅಂಡಮಾನಿನ ಕಾಡುಗಳಲ್ಲಿ ಇರುವ ಪೊಡಾಕ್ ಎಂಬ ಅಮೂಲ್ಯವಾದ ಮರವನ್ನು ಕದಿಯಲು ಪಕ್ಕದ ಬರ್ಮಾದಿಂದ ಮರಗಳ್ಳರು ಬರುತ್ತಾರೆಂದೂ, ಅವರನ್ನು ತಾನು ಬಹಳ ಸಲ ಹಿಡಿದಿದ್ದೇನೆಂದೂ ಆತ ಹೇಳಿದ. ಆಶುತೋಶ್ ಮಧ್ಯವಯಸ್ಕನಾದರೂ ಕಲ್ಲು ಮೂರ್ತಿಯಂತಹ ದೇಹ ಹೊಂದಿದ್ದ; ಅಂಡಮಾನ್ ಅರಣ್ಯ ಇಲಾಖೆಯಲ್ಲಿ ೨೦ ವರ್ಷದಿಂದ ಬೋಟ್‌ಮನ್ ಆಗಿ ಕೆಲಸ ಮಾಡುತ್ತಿದ್ದ. ಬರ್ಮಾ ದೇಶದಲ್ಲಿ ಹುಟ್ಟಿ [illegible] ಚಿತ್ತಗಾಂಗ್‌ನಲ್ಲಿ ಬೆಳೆದ ಈತ [illegible] ಅಂಡಮಾನಿಗೆ ಬಂದು ನೆಲೆಸಿದ್ದ. ಮೂರು ದೇಶಗಳ ಕೊಂಡಿಯಂತಿದ್ದ ಆಶುತೋಶನ ಮನೆಯ ಮಾತು ಬಂಗಾಳಿ.

ಈತ ಬರಿ ಹರಟೆಮಲ್ಲನಾಗಿರಲಿಲ್ಲ, ಅದ್ಭುತ ಕತೆಗಾರನಾಗಿದ್ದ. ಯಾವ ಪ್ರಶ್ನೆ ಕೇಳಿದರೂ ಅದನ್ನು ರಂಜಕವಾದ ಕತೆ ಮಾಡಿ ನಿರೂಪಿಸುತ್ತಿದ್ದ. ಮೂರು ನಾಡುಗಳ ಕಥನ ಪ್ರತಿಭೆ ಅವನಲ್ಲಿ ಸೇರಿಕೊಂಡಂತಿತ್ತು. ಅವನಿಗೆ ತಾನು ಹುಟ್ಟಿದ ಬರ್ಮಾದೇಶವೆಂದರೆ ಬಹಳ ಪ್ರೀತಿ. ಅಂಡಮಾನಿನ ನಡುಗಡ್ಡೆಗಳನ್ನೆಲ್ಲ ಸುತ್ತು ಹಾಕಿದ್ದ ಅವನು, ತನ್ನ ಜೀವಮಾನದ ಬಹುಭಾಗವನ್ನೆಲ್ಲ ಕಡಲ ನೀರಿನ ಮೇಲೆಯೇ ಕಳೆದಂತಿದ್ದ. ಅನುಭವದ ಕಣಜದಂತಿದ್ದ ಅವನಲ್ಲಿ ಅನೇಕ ಸಾಹಸಗತೆಗಳಿದ್ದವು.



ಕೆರೈನರ ಒಂದು ಮನೆ

ಅವನ್ನೆಲ್ಲ ಕೇಳುತ್ತಿದ್ದರೆ, ಅವನ ಪೈರವಿಕಾರನಾಗಿ ಹಿಂದಿಂದೆ ಅಲೆಯಬೇಕೆಂಬ ಆಸೆಯಾಗುತ್ತಿತ್ತು.

ಆಶುತೋಶ್ ಹೇಳಿದ ಒಂದು ಕತೆ ಪ್ರಕಾರ, ಬರ್ಮಾದ ರಾಜಕುಮಾರಿಯನ್ನು ಅವಳು ತಪ್ಪಿ ನಡೆದಳು ಎಂದು, ಕಣ್ಣಿಗೆ ಬಟ್ಟೆ ಕಟ್ಟಿ ಅಂಡಮಾನಿನ ಕಾಡಿನಲ್ಲಿ ಬಿಟ್ಟು ಹೋದರಂತೆ. ಈ ಅನಾಥ ರಾಜಕುಮಾರಿಯನ್ನು ಈ ದ್ವೀಪಗಳ ಜನ ತಂದು ಕರುಣೆಯಿಂದ ಸಾಕಿಕೊಂಡರು. ಮುಂದೆ ಈ ಕಾಡು ಜನರಲ್ಲೇ ಒಬ್ಬ ಸುಂದರ ತರುಣ ಆಕೆಯನ್ನು ಮದುವೆಯಾದ. ಇವರಿಬ್ಬರ ಸಂತಾನವೇ ಅಂಡಮಾನಿನ ನಿಕೋಬಾರಿಗಳು. ಇಂತಹವೇ ನೂರಾರು ಕತೆಗಳು. ಅವುಗಳಲ್ಲಿ ನನಗೆ ಕುತೂಹಲ ಮೂಡಿಸಿದ್ದು, ಬರ್ಮಾದ ನಾಟಿ ವೈದ್ಯಕ್ಕೆ ಸಂಬಂಧಪಟ್ಟ ಕತೆಗಳು. ಅವುಗಳಲ್ಲಿ ಒಂದು ಹೀಗಿದೆ :

ತಿಮಿಂಗಲಗಳು ಕೊಬ್ಬು ಜಾಸ್ತಿಯಾದಾಗ ಕಡಲಲ್ಲೆ ವಾಂತಿ ಮಾಡಿಕೊಳ್ಳುತ್ತವಂತೆ. ಹಳದಿ ಬಣ್ಣದ ಈ ವಾಂತಿಯ ಕಟುವಾಸನೆ ಬಹುದೂರದವರೆಗೆ ಹರಡುತ್ತದಂತೆ. ಅಪೂರ್ವ ಔಷಧಿ ಗುಣವುಳ್ಳ ಈ ವಾಂತಿ ಲಕ್ಷಾಂತರ ರೂಪಾಯಿ ಬೆಲೆ ಬಾಳುವಂತಹದ್ದು. ಇದರಿಂದ ತಯಾರಿಸಿದ ಔಷಧಿಯನ್ನು ಸೇವಿಸಿದವರಿಗೆ ಕಾಯಿಲೆ ಇರಲಿ, ಮುಪ್ಪೂ ಸಾವುಗಳು ಕೂಡ ದೂರ ಸರಿಯುತ್ತವೆಯಂತೆ. ಆಶುತೋಶ್ ಹೇಳುವುದನ್ನು ನೋಡಿದರೆ, ಇಡೀ ಬರ್ಮಾ ದೇಶವೇ ಮಾಟ ಮಂತ್ರಗಳೂ ನಿಗೂಢ ವಿದ್ಯೆಗಳೂ ರೋಚಕ ಕತೆಗಳೂ ತುಂಬಿದ ದೇಶವೆಂದು ಭಾಸವಾಯಿತು. ಶತ್ರುಗಳ ನಾಶಕ್ಕಾಗಿ ಮಾಡಲಾಗುವ ಒಂದು ಮಾಟವನ್ನು ಆತ ನಮಗೆ ವರ್ಣಿಸಿದ. ಅರ್ಜುನ್ ಗರ್ಜನ್ ಎಂಬ ಮರಗಳ ಚಕ್ಕೆಗಳಿಂದ ತಯಾರಿಸಿದ ಒಂದು ರಸವನ್ನು, ಬಾಳೆಗಿಡದ ಸುಳಿಗೆ ನಮ್ಮ ವೈರಿಗಳನ್ನು ನೆನೆಯುತ್ತ ಹಿಂಡಿದರೆ ಅವರ ವಂಶವೇ ನಾಶವಾಗಿ ಬಿಡುತ್ತದೆಯಂತೆ. ಅವನಿಗೆ ನಾವು ಇಂತಹ ಔಷಧಿ ಮಾಟಗಳನ್ನು ಮಾಡಿಸಲು ಬಂದ ಗಿರಾಕಿಗಳು ಅನಿಸಿತೋ ಏನೋ ! ದೋಣಿಯಲ್ಲಿದ್ದ ಕೆರೈನ್ ಬುಡಕಟ್ಟಿನ ಒಬ್ಬ ಸೇವಕನನ್ನು ತೋರಿಸಿ, ಇವನ ಜನ ಈ ವಿದ್ಯೆಗಳಲ್ಲಿ ತುಂಬ ಪರಿಣಿತರು. ಬೇಕಾದರೆ ಭೇಟಿ ಮಾಡಿಸುತ್ತೇನೆ ಎಂದು ಹೇಳಿದ. ಆದರೆ ನಿತ್ರಾಣದಿಂದ ಕುಕ್ಕುರುಗಾಲಿನಲ್ಲಿ ಕುಳಿತು ದೋಣಿಯಲ್ಲಿ ಚೆಲ್ಲಿದ್ದ ನೀರನ್ನು ಗುಡಿಸುತ್ತಿದ್ದ ಆ ಮುದುಕನನ್ನು ಕಂಡರೆ, ಅವನ ಜನಕ್ಕೆ ಮುಪ್ಪು ತಡೆಯುವ ವಿದ್ಯೆ ಗೊತ್ತಿದೆ ಎಂದು ನಂಬಿಕೆ ಹುಟ್ಟಲಿಲ್ಲ.

ಆಶುತೋಶ್ ಈಗ ನಮಗೆಲ್ಲ ಆತ್ಮೀಯ ಗೆಳೆಯನಾಗಿ ಹೋದ. ದೋಣಿ ಪ್ರಯಾಣಕ್ಕೆ ದುಡ್ಡು ಕೊಡಲು ಹೋದರೆ ಮುಗುಳ್ನಕ್ಕು ತಿರಸ್ಕರಿಸಿದ. ಅವನ ವ್ಯಕ್ತಿತ್ವಕ್ಕೆ ನಾವು ಮಾರುಹೋದೆವು. ಮಾಯಾಬಂದರಿನಲ್ಲಿ ಇರುವಾಗ ಒಮ್ಮೆ ತನ್ನ ಮನೆಗೆ ಬರಬೇಕು ಎಂದು ಆಹ್ವಾನಿಸಿದ. ಒಂದು ಸಂಜೆ ಜಯ್, ಗಣನಾಥ, ನಾನು ಸೇರಿ ಅವನ ಮನೆ ಹುಡುಕುತ್ತ ಹೊರಟೆವು. ಒಂದು ಕಿಷ್ಕಿಂಧ ಓಣಿಯಲ್ಲಿ ಅವನ ಮನೆಯಿತ್ತು. ಮನೆಯ ವಾತಾವರಣ ನೋಡಿದರೆ ಅಷ್ಟೇನು ಚೆನ್ನಾಗಿಲ್ಲ ಎಂದು ಸ್ಪಷ್ಟವಾಗುತ್ತಿತ್ತು. ಇಬ್ಬರು ಮಕ್ಕಳ ಪುಟ್ಟ ಸಂಸಾರ. ತನ್ನ ಮಕ್ಕಳನ್ನು ಪರಿಚಯ ಮಾಡಿಸಿದ. ಬೇಡ ಬೇಡವೆಂದರೂ ಮನೆಯೊಳಗೆಲ್ಲ ಓಡಾಡಿ ಟೀ ಮಾಡಿಸಿದ. ಮಗ ಚಿಕ್ಕವನು. ಅವನ ಮುಖವನ್ನೇ ಹೊತ್ತು ಬಂದಿದ್ದ ಮಗಳು ಬೆಳೆದು ಪ್ರಾಯಕ್ಕೆ ಬಂದಿದ್ದಳು. ಅವನು ಅವಳನ್ನು ತುಂಬ ಪ್ರೀತಿಸುತ್ತಿದ್ದ. ಆದರೆ ಇತ್ತೀಚೆಗೆ ಅವಳ ಮೇಲೆ ಕೆಟ್ಟ ಕೋಪ ಮಾಡಿಕೊಂಡಿದ್ದ. ಕಾರಣ, ಅವಳು ಒಬ್ಬ ಕೆರೈನ್ ತರುಣನನ್ನು ಪ್ರೀತಿಸುತ್ತಿದ್ದಳು. ಆಶುತೋಶ್‌ಗೆ ಸ್ವಲ್ಪವೂ ಇಷ್ಟವಿರಲಿಲ್ಲ. ಕೆರೈನರೆಂದರೆ ಒಂದು ಬಗೆಯಲ್ಲಿ ಅಂಡಮಾನಿನ ದಲಿತರು.

ನಾವು ಒಂದು ಪಾರ್ಟಿ ಕೊಡಬೇಕೆಂದು ಅವನನ್ನು ಮನೆಯಿಂದ ಹೊರಡಿಸಿದೆವು. ನಿಜವೋ ಕಲ್ಪನೆಯೋ, ಅವನ ಬಾಯಲ್ಲಿ ಅಂಡಮಾನಿನ ಬಗ್ಗೆ ಮತ್ತಷ್ಟು ಕತೆಗಳನ್ನು

ಕೇಳಬೇಕೆನಿಸಿತ್ತು. ಗುಂಡು ಒಳಗೆ ಇಳಿಯತೊಡಗಿದೊಡನೆ ಕತೆಗಳು ಹೊರಬರತೊಡಗಿದವು. ಆಶುತೋಶ್ ಅಂಡಮಾನಿನ ಕಾಡುಗಳನ್ನು ತುಂಬಾ ಪ್ರೀತಿಸುತ್ತಿದ್ದ. ಅವನು ಚಿಕ್ಕಂದಿನಲ್ಲಿ ಕಂಡ ಕಾಡು ಇನ್ನೂ ಸುಂದರವಾಗಿ ದಟ್ಟವಾಗಿ ಇತ್ತಂತೆ. ಅವನ ಅಸಹನೆ ಇದ್ದಿದ್ದು ಕಾಡನ್ನು ಒಳಗೊಳಗೇ ಖಾಲಿ ಮಾಡುತ್ತಿರುವ ಸಾಮಿಲ್ಲಿನವರ ಮೇಲಲ್ಲ. ಅವರಿಗೆ ಸಹಾಯ ಮಾಡುವುದಕ್ಕೆಂದೇ ಹುಟ್ಟಿ ಬಂದಂತಿರುವ ಅರಣ್ಯ ಇಲಾಖೆಯ ಅಧಿಕಾರಿಗಳ ಬಗ್ಗೆ. ಇವರಿಬ್ಬರ ಗುಪ್ತ ಮೈತ್ರಿಯಿಂದ ಅಂಡಮಾನಿನ ಅರಣ್ಯದೊಳಗೆ ಬೆಲೆಬಾಳುವ ನಾಟಾಮರಗಳೇ ಖಾಲಿಯಾಗಿವೆ ಎಂದ. ಡಿಪಾರ್ಟ್‌ಮೆಂಟಿನ ರಸಿಕ ಅಧಿಕಾರಿಗಳ ವಿಹಾರಕ್ಕೆ ದೋಣಿ ನಡೆಸಬೇಕಾಗುತ್ತಿದ್ದುದು ಅವನ ಬೇಸರಕ್ಕೆ ಇನ್ನೊಂದು ಕಾರಣವಾಗಿತ್ತು.

ನಿಶೆಯಲ್ಲಿ ಮನಸ್ಸು ಬಿಚ್ಚಿ ಮಾತಾಡಿದ ಅವನಿಗೆ, ಅದು ಇಳಿಯುತ್ತಿದ್ದಂತೆ ''ಡಿಪಾರ್ಟ್‌ಮೆಂಟಿನ ಯಾವ್ಯಾವ ರಹಸ್ಯಗಳನ್ನು ಹೇಳಿಬಿಟ್ಟೆನೋ'' ಎಂಬ ಆತಂಕ ಮುಖದಲ್ಲಿ ಗೋಚರಿಸಿತು. ''ನೀವು ಪೇಪರಿನವರಲ್ಲ ತಾನೇ'' ಎಂದು ಮತ್ತೆ ಮತ್ತೆ ಕೇಳತೊಡಗಿದ. ಇದನ್ನೆಲ್ಲಾ ನೀವು ಬರೆದುಬಿಟ್ಟರೆ ನನಗೆ ತೊಂದರೆ ಯಾಗುತ್ತದೆ ಎಂದು ಗೋಗರೆಯತೊಡಗಿದ. (ಎಂತಲೇ ಇಲ್ಲಿರುವುದು ಅವನ ಕಾಲ್ಪನಿಕ ಹೆಸರು). ಜರವಾಗಳ ಜತೆ ಮಾತಾಡಿ ಬಂದ, ದ್ವೀಪಗಳನ್ನೆಲ್ಲ ಸುತ್ತಿ ಮರಗಳ್ಳರನ್ನು ಹಿಡಿಯುವ ಸಾಹಸಿಯೊಬ್ಬ, ಇದ್ದಕ್ಕಿದ್ದಂತೆ ದೀನನಾದ ಸರಕಾರಿ ನೌಕರನಾಗಿಬಿಟ್ಟಿದ್ದ. ''ಇಲ್ಲ ಮಾರಾಯಾ, ನಾವು ಪೇಪರಿನವರಲ್ಲ , ಕಾಲೇಜು ಮೇಷ್ಟರುಗಳು'' ಎಂದು ಸಮಾಧಾನ ಮಾಡಬೇಕಾಯಿತು.

ನರಸಿಂಗಲು

ಅಂಡಮಾನಿಗೆ ವ್ಯಾಪಾರ ಉದ್ಯಮಗಳಿಗಾಗಿ ಬಂದವರು ಕೆಲವರಾದರೆ, ಹೆಚ್ಚಿನವರು ಕೂಲಿಗಾಗಿ ಬಂದವರು. ಬಂಗಾಳ ಕೊಲ್ಲಿಗೆ ಅಂಟಿಕೊಂಡಿರುವ ಬರ್ಮಾ ಬಾಂಗ್ಲಾ ದೇಶಗಳಿಂದ, ಒರಿಸ್ಸಾ ಬಂಗಾಳ ಆಂಧ್ರ ತಮಿಳುನಾಡುಗಳಿಂದ ಜನ ಇಲ್ಲಿಗೆ ಯಾವ್ಯಾವ ಕಾಲದಿಂದಲೋ ಬಂದು ನೆಲೆಸಿದ್ದಾರೆ. ಒಟ್ಟಿನಲ್ಲಿ ದಕ್ಷಿಣ ಏಶಿಯಾದ ಅನೇಕ ಭಾಷೆ ಸಂಸ್ಕೃತಿ ಧರ್ಮಗಳು ಚಾಪೆಯಗಲದ ಈ ನೆಲದಲ್ಲಿ ವಿಚಿತ್ರ ಸಾಮರಸ್ಯದ ಸಂಸಾರ ಮಾಡುತ್ತಿವೆ. ಈ ದೃಷ್ಟಿಯಿಂದ ಈ ದ್ವೀಪಗಳು ವಿಶಿಷ್ಟ ಪ್ರಯೋಗ ತಾಣಗಳು; ಕೂಡು ಸಂಸ್ಕೃತಿಯ ಬಗ್ಗೆ ಚಿಂತನೆ ಮಾಡುವವರಿಗೆ ಇಲ್ಲಿನ ಸಂಗತಿಗಳು ಕುತೂಹಲ ಮೂಡಿಸುತ್ತವೆ. ಆದರೆ ವಿಭಿನ್ನ ಸಮುದಾಯಗಳ ವಲಸೆಯು ರಾಜಕೀಯವಾಗಿ ಅನೇಕ ಸಮಸ್ಯೆಗಳನ್ನು ಉಂಟುಮಾಡಬಲ್ಲದು. ಅಂಡಮಾನಿನಲ್ಲಿ ಮಿತಿಯೇ ಇಲ್ಲದೆ ಸಮುದ್ರ ಹರಡಿದೆಯಾದರೂ, ಅದರ ಕಿರಿದಾದ ಭೂಮಿ ಹಲವು ಸಮಸ್ಯೆಗಳಿಗೆ ಕಾರಣವಾದಂತಿದೆ.

ಹ್ಯಾರಿಯೆಟ್ ಬೆಟ್ಟದ ಬುಡದಲ್ಲಿ ಬಂದರಿನ ಕೊಲ್ಲಿಯ ಎದುರುಗಡೆ ಇರುವ ಕೆಲವು ಪ್ರದೇಶಗಳು ಪೋರ್ಟ್ ಬ್ಲೇರಿನ ನಮ್ಮ ವಸತಿಗೆ ಸದಾ ಕಾಣುತ್ತಿದ್ದವು. ಅವು ಬ್ಲೇರ್ ಪಟ್ಟಣ ಸೃಷ್ಟಿ ಮಾಡಿದ ದಲಿತರ ಕೇರಿಗಳಂತೆ ಇದ್ದವು. ೧೦ ನಿಮಿಷಕ್ಕೆ ಒಮ್ಮೆ ಜನರನ್ನು ತುಂಬಿಕೊಂಡು ದೋಣಿಗಳು ಸಿಟಿ ಬಸ್ಸಿನಂತೆ ಓಡಾಟ ಮಾಡುತ್ತಿದ್ದವು. ಒಟ್ಟಿನಲ್ಲಿ ಅದೊಂದು ಚಟುವಟಿಕೆಯ ಜಾಗವೆಂದು ಖಚಿತವಾಗಿತ್ತು. ಅದಕ್ಕೆ ಜಂಬೂಘಾಟ್, ಪಾನಿಘಾಟ್ ಎಂತೆಲ್ಲಾ ಹೆಸರಿದ್ದವು. ಇವನ್ನು ನೋಡಬೇಕೆಂದು ಒಮ್ಮೆ ಹೊರಟೆವು. ಸಂಜೆ ಹೊತ್ತಿಗೆ ಕಡಲಿಗೆ ಹೋದ ದೋಣಿಗಳು ಮರಳಿ ಬರುವುದರಿಂದ ಅಂಡಮಾನಿನ ಮೀನುಗಳನ್ನು ನೋಡುವುದು ನಮ್ಮ ಇನ್ನೊಂದು ಉದ್ದೇಶವಾಗಿತ್ತು.

ವಾಸ್ತವವಾಗಿ ಇದು ಆಂಧ್ರಪ್ರದೇಶದ ಬೆಸ್ತರು ವಾಸಿಸುವ ಜಾಗ. ಆಂಧ್ರದ ಕರಾವಳಿ ಜಿಲ್ಲೆಗಳಾದ ನೆಲ್ಲೂರು ಗೋದಾವರಿ ವಿಶಾಖಪಟ್ಟಣಂ ಶ್ರೀಕಾಕುಳಂಗಳಿಂದ ಬಂದ ಬೆಸ್ತರು ಇಲ್ಲಿ ಬೀಡು ಬಿಟ್ಟಿದ್ದರು. ಬಳ್ಳಾರಿಗೆ ತಗುಲಿಕೊಂಡಿರುವ ರಾಯಲುಸೀಮಾ ಜಿಲ್ಲೆಗಳ ತೆಲುಗರನ್ನು ಕಂಡಿದ್ದ ನಮಗೆ, ಕರಾವಳಿಯ ತೆಲುಗರು ಹೇಗಿರುತ್ತಾರೆ ಎಂದು ತಿಳಿಯಬೇಕಿತ್ತು. ಅದರಲ್ಲೂ ಬೆಸ್ತರ ಹೆಂಗಸರು ಧರಿಸುವ ಮೂಗುತಿಗಳು, ಕಡಗಗಳು, ಅವರ ಭಾರಿ ಕುಂಕುಮ, ಮೀನು ಮಾರಾಟ ಮಾಡುವಾಗಿನ ಅವರ ರೋಪುತನ ಇವನ್ನೆಲ್ಲ ಕಂಡು, ಕಲಾವಿದ ಗೆಳೆಯ ಜಯ್ ಚಕಿತರಾಗಿದ್ದರು.



ದಿಗ್ಲಿಪುರದ ಕಾಳಿದೇವತೆ

ದೋಣಿಗಳು ಒಂದೊಂದಾಗಿ ಬಂದವು. ದೋಣಿಯನ್ನೂ ಬಲೆಯನ್ನೂ ದಡಕ್ಕೆ ಎಳೆದು ಹಾಕುವುದರಲ್ಲಿ ಮಗ್ನರಾದ ಬೆಸ್ತರು, ಮೀನು ತುಂಬಿಕೊಳ್ಳಲು ಬಂದ ಮಾರಾಟಗಾರ ಹೆಂಗಸರ ಗಲಾಟೆ, ಅವಸರ, ಮೀನು ಕೊಳ್ಳುವವರ ಗೌಜು ಗಜಿಬಿಜಿ ಪ್ರೇಕ್ಷಣೀಯವಾದುದು. ನನಗೆ ಈ ಗೌಜಿನಲ್ಲಿ ಈಗಲೂ ನೆನಪಿರುವ ಸಂಗತಿ ಎಂದರೆ, ಬೆಸ್ತರ ಮುಖಗಳಲ್ಲಿ ಇರುವ ದಣಿತದ ಮೌನ. ನಾನು ಅನೇಕ ಬಾರಿ ಕಡಲಿಂದ ಬಂದ ಮೀನುಗಾರರನ್ನು ಮಾತಾಡಿಸಿದ್ದೇನೆ. ಆಗೆಲ್ಲ ಅವರು ಮಹಾಗಂಭೀರರಾಗಿ ಕಂಡಿದ್ದಾರೆ. ನಮ್ಮ ಕುತೂಹಲದ ಪ್ರಶ್ನೆಗಳನ್ನು ಕ್ಷುದ್ರವಾಗಿ ಪರಿಗಣಿಸುವ ಅವರ ಗಾಂಭೀರ್ಯ ಅನೇಕ ಸಲ ಅಹಂಕಾರದಂತೆ ಭಾಸವಾಗುತ್ತದೆ. ಆದರೆ ಜೀವದ ಹಂಗು ಬಿಟ್ಟು ಕಡಲಲ್ಲಿ ರಾತ್ರಿಯೆಲ್ಲ ಇದ್ದು ಅಲೆಗಳ ಜತೆ ಸೆಣಸಾಡಿ ಬರುವ ಅವರು, ನಮ್ಮ ಚಿಲ್ಲರೆ ಪ್ರಶ್ನೆಗಳಿಗೆ ಯಾಕಾದರೂ ಗಮನ ಕೊಡಬೇಕು? ಎಂದು ಸಮಾಧಾನ ಹೇಳಿಕೊಂಡಿದ್ದೇನೆ.

ಅದಿರಲಿ, ನಾವು ನರಸಿಂಗಲುವನ್ನು ಭೇಟಿಯಾಗಿದ್ದು ಇಲ್ಲೇ. ಅವನ ಜತೆ ಮಾತಾಡುತ್ತಿರುವಾಗ ಹ್ಯಾರಿಯೆಟ್ ಬೆಟ್ಟದ ಬುಡದಲ್ಲಿರುವ ಈ ಪ್ರದೇಶದಲ್ಲಿ ಏನೆಲ್ಲ ಕೋಲಾಹಲ ನಡೆದಿದೆ ಎಂಬುದು ಅರಿವಾಯಿತು. ಅಲ್ಲಿ ಕೆಲವು ಮಲೆಯಾಳಿ ಶ್ರೀಮಂತರು ಬಹಳಕಾಲದಿಂದ ಭಾರಿ ತೋಟಗಳನ್ನು ಮಾಡಿಕೊಂಡಿರುವರು. ಬೆಟ್ಟದ ಬೆನ್ನ ಮೇಲೆ ಅವರು ತೆಂಗು ಬೆಳೆಸಿರುವುದು ಒಂದು ಸಾಹಸದಂತೆ ಇತ್ತು. ತೆಲುಗು ಬೆಸ್ತರಿಗೂ ತೋಟಗಾರ ಕೇರಳಿಗರಿಗೂ ನಡುವೆ ತೀವ್ರ ಸಂಘರ್ಷಗಳಿದ್ದಂತೆ ತೋರಿತು. ನರಸಿಂಗಲುವಿಗೆ ಹಿಂದಿ ಸರಿಯಾಗಿ ಬರುತ್ತಿರಲಿಲ್ಲ. ತೆಲುಗು ಮನೆ ಮಾತಿನ ಜಯ್ ಅವನ ಜತೆ ಮಾತಾಡುತ್ತಿದ್ದರು. ನರಸಿಂಗಲು ಶ್ರೀಕಾಕುಳಂ ಜಿಲ್ಲೆಯ ನರಸನಪೇಟೆ ಕಡೆಯವನು. ಇಲ್ಲಿ ಇವನು ನಾಯಕನಾಗುವ ಪ್ರಸಂಗ ನಡೆಯಿತು. ಅದು ಹೀಗಿತ್ತು, ಒಮ್ಮೆ ಇಂಡಿಯನ್ ಆಯಿಲ್ ಕಂಪೆನಿಗೆ ಪೋರ್ಟ್ ಬ್ಲೇರ್ ಬಂದರಿನ ಎದುರಾ ಎದುರು ಇರುವ ಬೆಸ್ತರ ವಸತಿಗಳ ಮೇಲೆ ಕಣ್ಣು ಬಿತ್ತು. ಇದು ಅವರ ತೈಲಟ್ಯಾಂಕು ನಿರ್ಮಿಸಲು ಆಯಕಟ್ಟಿನ ಜಾಗವಾಗಿತ್ತು. ಕೂಡಲೇ ಅಂಡಮಾನ್ ಸರಕಾರ ಇದ್ದಿನ್ನ ಬೆಸ್ತರಿಗೆ ಜಾಗ ಖಾಲಿ ಮಾಡಲು ಆದೇಶಿಸಿತು. ಬೆಸ್ತರಿಗೆ ಇದು ದೋಣಿ ನಿಲ್ಲಿಸಲು, ಮೀನು ಒಣಗಿಸಲು, ದಡದ ಮೇಲೆ ಇರುವ ಮನೆಗೆ ತೆರಳಲು ಸರಿಯಾದ ಜಾಗ. ಜನ ಜಾಗ ಬಿಡುವುದಿಲ್ಲ ಎಂದು ಪ್ರತಿರೋಧ ಶುರು ಮಾಡಿದರು. ನರಸಿಂಗಲು ಈ ಹೋರಾಟದ ನಾಯಕರಲ್ಲಿ ಒಬ್ಬ. ಈತ ಈ ಪ್ರಸಂಗದಲ್ಲಿ ಜೈಲು ಕಂಡವನು. ಸದ್ಯಕ್ಕೆ ಈ ಹೋರಾಟ ಜಯ ಕಂಡಿದೆ. ಜನರ ಸಿಟ್ಟು ಕಂಡು ಸರಕಾರವೂ ಸುಮ್ಮನಾಗಿದೆ. ಆದರೆ ತನ್ನ ಯೋಜನೆಯನ್ನು ಇನ್ನೂ ಕೈಬಿಟ್ಟಿಲ್ಲ. ''ನೋಡಿ, ಆ ಮಲೆಯಾಳಿ ಪ್ಲಾಂಟರ್ ಹತ್ತು ಎಕರೆ ಜಾಗದಲ್ಲಿ ತೋಟ ಮಾಡಿದ್ದಾನೆ. ಅವನನ್ನು ಮುಟ್ಟಲು ಇವರಿಗೆ ತಾಕತ್ತಿಲ್ಲ. ನಮ್ಮನ್ನು ಮಾತ್ರ ಎತ್ತಿ ಸಮುದ್ರಕ್ಕೆ ಒಗೆಯುತ್ತದೆ. ನಾವು ಎಲ್ಲಿಗೆ ಹೋಗಬೇಕು?'' ಎಂದು ನರಸಿಂಗಲು ಆಕ್ರೋಶ ತೋರಿದ. ಅವನ ಸಾಹಸವೆಂದರೆ ಎಲ್‌ಜಿ(=ಲೆಫ್ಟಿನೆಂಟ್ ಗವರ್ನರ್. ಈತ ಕೇಂದ್ರಾಡಳಿತ ಪ್ರದೇಶವಾದ ಅಂಡಮಾನಿನ ಮುಖ್ಯಮಂತ್ರಿಯಿದ್ದಂತೆ) ಮುಂದೆ ಜೋರು ಮಾಡಿದ್ದು. ಪೋಲೀಸರು ಎಲ್‌ಜಿ ಮುಂದೆ ಹಾಜರು ಪಡಿಸಿದಾಗ, ನರಸಿಂಗಲು ''ನನ್ನ ಮಗನಿಗೆ ಒಂದು ಕೆಲಸ ಕೊಡಿ ಇವತ್ತೇ ಜಾಗ ಖಾಲಿ ಮಾಡುತ್ತೇವೆ'' ಎಂದನಂತೆ. ಸಿಟ್ಟು ತೋರಿದ ''ಇವನನ್ನು ಹೊರಗೆ ಕರೆದುಕೊಂಡು ಹೋಗಿ'' ಎಂದು ಎಲ್‌ಜಿಯವರು ಹೇಳಿದರಂತೆ. ಅವನ ಮಗನಿಗೆ ಕೆಲಸ ಸಿಗಲಿಲ್ಲ ನಿಜ. ಆದರೆ ಹಾಗೆ ಎಲ್‌ಜಿಯನ್ನು ಜಬರಿಸಿ ಕೇಳಿದ್ದನ್ನು ಹೇಳುವಾಗ ಅವನ ಕಣ್ಣುಗಳಲ್ಲಿ ಹೆಮ್ಮೆ ಮಿನುಗುತ್ತಿತ್ತು.

(ಮುಂದುವರೆಯಲಿದೆ)

ಕಾನೂರು ಹೆಗ್ಗಡಿತಿ : ಕಾರ್ನಾಡರ ಕ್ಯಾಮರಾ ಕಣ್ಣಿನಲ್ಲಿ

ಕುವೆಂಪು ಅವರ ಕಾದಂಬರಿಗಳನ್ನು 'ಮಹಾಕಾವ್ಯ'ಕ್ಕೆ ಸಂವಾದಿಯಾಗಿ ಗುರುತಿಸಿದ ಪ್ರಯತ್ನ ನಮ್ಮಲ್ಲಿ ಹಳೆಯದು. ಅಂತಹ ಕಾದಂಬರಿಗಳನ್ನು ದೃಶ್ಯಮಾಧ್ಯಮಕ್ಕೆ ಅಳವಡಿಸುವ ಪ್ರಯತ್ನವೂ ಬಹುದಿನದಿಂದ ಸಾಗಿದ್ದೇ. ಆ ನಿಟ್ಟಿನಲ್ಲಿ 'ಮಲೆಗಳಲ್ಲಿ ಮದುಮಗಳು' ಕಿರುತೆರೆಗೆ ಬಂದದ್ದು ನೆನಪಿರುವಂತೆಯೇ ಕಾರ್ನಾಡರು ಕಾನೂರು ಹೆಗ್ಗಡಿತಿಯನ್ನು ಬೆಳ್ಳಿತೆರೆಗೆ ತಂದಿದ್ದಾರೆ. ಆ ಕುರಿತ ಯಶಸ್ಸು, ಅಪಯಶಸ್ಸುಗಳ ದೊಡ್ಡ ಚರ್ಚೆಯೇ ನಡೆಯುತ್ತಿದೆ.

ಒಂದು ಅಪರೂಪದ, ಅಷ್ಟೇ ಶ್ರೇಷ್ಠವಾದ ಕಾದಂಬರಿ ತೆರೆಗೆ ಬಂದಾಗ ಚರ್ಚೆಗೆ ಒಳಗಾಗುವುದು ಸಹಜ. ಅದಕ್ಕೆ ಮತ್ತೊಂದು ವಿಶೇಷ ಒದಗುವುದು ನಿರ್ದೇಶಕನ ಕಾರಣದಿಂದ.

ಮತ್ತೊಬ್ಬ ಜ್ಞಾನಪೀಠ ಪ್ರಶಸ್ತಿ ವಿಜೇತ, ಕನ್ನಡದ ಒಬ್ಬ ಶ್ರೇಷ್ಠ ನಾಟಕಕಾರ, ಸಿನಿಮಾ ಮಾಧ್ಯಮದ ಮೇಲೆ ತನ್ನದೇ ಪ್ರಭುತ್ವ ಹೊಂದಿರುವ, ಸಿನಿಮಾ ನಟನೂ ಆದ ನಿರ್ದೇಶಕನೊಬ್ಬ 'ಹೆಗ್ಗಡಿತಿ'ಯನ್ನು ಕೈಗೆತ್ತಿಕೊಂಡಾಗಲೇ ಕುತೂಹಲದೊಂದಿಗೆ ನಿರೀಕ್ಷೆಯೂ ದಟ್ಟವಾಗಿತ್ತು.

ಸರಿ ಸುಮಾರು ೬೦೦ ಪುಟಗಳ ಸುದೀರ್ಘ ಕಾದಂಬರಿಯೊಂದನ್ನು ಕೇವಲ ಎರಡೂವರೆ ತಾಸುಗಳಷ್ಟರ ಚಿತ್ರಕತೆಗೆ ಒಗ್ಗಿಸುವುದು ಸಾಮಾನ್ಯ ಸಂಗತಿಯಲ್ಲ, ಅಲ್ಲದೆ 'ಕಾನೂರು ಹೆಗ್ಗಡಿತಿ'ಯಂತಹ ಕಾದಂಬರಿಯಲ್ಲಿ ಯಾವ ಪಾತ್ರವೂ ಸುಲಭಕ್ಕೆ ಉಪೇಕ್ಷೆಗೆ ಒಳಗಾಗಬಹುದಾದುದಲ್ಲ. ಪ್ರತೀ ಪಾತ್ರಗಳಿಗೂ ತಮ್ಮದೇ ಒಂದು ಅಸ್ತಿತ್ವವಿದೆ. ಅಷ್ಟೇ ವ್ಯಾಪಕತೆಯಿದೆ. ಕುವೆಂಪು ಅವರ ಎರಡೂ ಕಾದಂಬರಿಗಳು ಬರೀ ಕತೆ ಹೆಣಿಗೆಯಲ್ಲ, ಅದೊಂದು ದಟ್ಟ ಜೀವನ ಕ್ರಮ, ನಿಜವಾದ ಬದುಕಿನ ದರ್ಶನ ಎನ್ನುವ ಹತ್ತು ಹಲವು ಕಾರಣಗಳಿಂದಲೂ 'ಕಾನೂರು ಹೆಗ್ಗಡಿತಿ' ಸಿನಿಮಾ ವಾಗಲು ಹೊರಟಿದ್ದು ಹುಚ್ಚು ಸಾಹಸವೆಂದೇ ಭಾವಿಸುವುದು ಸಾಧ್ಯವಾಗಿತ್ತು.

ಅಂತೂ ಹೆಗ್ಗಡಿತಿ ಸಿನಿಮಾವಾಗಿ ಬಿಟ್ಟಿದ್ದಾಳೆ. ಅದರ ಸಾಧಕ ಬಾಧಕಗಳನ್ನು ಗುರುತಿಸುವಾಗ ಮುಖ್ಯವಾಗಿ ಎರಡು ಗುಂಪುಗಳಾಗಿ ವಿಂಗಡಿಸಿ ಚಿಂತಿಸಬೇಕಿದೆ. ಕಾದಂಬರಿಯ ಓದುಗನೇ ಪ್ರೇಕ್ಷಕನಾಗುವುದು ಒಂದಾದರೆ, ಓದುಗನಲ್ಲದ ಸಹಜ ಪ್ರೇಕ್ಷಕ ಮತ್ತೊಂದು ಗುಂಪು. ಈಗಾಗಲೇ ಕಾದಂಬರಿಯ ಓದುಗನು ಪ್ರೇಕ್ಷಕನಾದ ನೆಲೆಯಿಂದಲೇ ಬಹಳಷ್ಟು ಚರ್ಚೆಗಳು 'ಅಕಡೆಮಿಕ್' ಎನ್ನಬಹುದಾದ ಸ್ವರೂಪದಿಂದಲೂ ಚರ್ಚಿತವಾಗುತ್ತಲಿರುವುದರಿಂದ ಓದುಗನಲ್ಲದ ಪ್ರೇಕ್ಷಕನನ್ನು ಪ್ರಧಾನವಾಗಿಸಿಕೊಂಡ ವಿಶ್ಲೇಷಣೆಯೂ ಮುಖ್ಯವಾಗುತ್ತದೆ.

ಕನ್ನಡ ಸಾಹಿತ್ಯದ ಸಂದರ್ಭಕ್ಕೆ ಕುವೆಂಪುವನ್ನು ಅಭ್ಯಸಿಸಿದ ಗಂಭೀರ ಓದುಗನೊಬ್ಬನಿಗೆ ಅವರ ಶ್ರೇಷ್ಠತೆಯ ಅರಿವಿರುವುದು ಸಾಮಾನ್ಯ ಸಂಗತಿಯಾದರೆ, ಅಂತಹ ಯಾವುದೇ ಗಂಭೀರ ಅಧ್ಯಯನದ ಅರಿವಿಲ್ಲದ ಸಾಮಾನ್ಯ ಪ್ರಜೆಗೂ ಕುವೆಂಪು ಬಗೆಗೊಂದು ಅಪರಿಮಿತವಾದ ಗೌರವವಿದೆ. ಅದು ನಾಡು-ನುಡಿಯ ಬಗೆಗಿನ ಸಾಮಾನ್ಯ ಕಾಳಜಿಯೆಂದು ತೇಲಿಸಿ ಚಿಂತಿಸಬಹುದಾದುದಲ್ಲ. ಕುವೆಂಪು ಹೆಸರು ಇಲ್ಲಿನ ಸಾಮಾನ್ಯರಿಗೂ, ಸಾಹಿತ್ಯದಿಂದಾಚೆಗೆ ಚಿಂತಿಸುವ ಇತರೆ ವಿದ್ಯಾವಂತರಿಗೂ, ವೃತ್ತಿನಿರತರಿಗೂ, ಚಿರಪರಿಚಿತ. ಇಂತಹ ಅಭಿಮಾನ ಅಪರೂಪಕ್ಕೆ ಉಂಟಾಗುವಂತದ್ದು. ಅಂತಹ ಅಭಿಮಾನಿ ವೃಂದದ ನಡುವೆ ಅದೇ ಕವಿಯ ಕೃತಿಯೊಂದು ಎಲ್ಲರನ್ನು ತಲುಪಬಹುದಾದ ಸರಳ ಮಾಧ್ಯಮವಾದ ಸಿನಿಮಾದ ಮೂಲಕ ಬೆಳ್ಳಿತೆರೆಗೆ ಬಂದಾಗ ಜನರ ಪ್ರತಿಕ್ರಿಯೆ ಅಧ್ಯಯನಾರ್ಹ.

ಮೊದಲಿಗೆ ಸಿನಿಮಾದಲ್ಲಿ ಪ್ರಧಾನವಾಗುವುದು ಹೆಗ್ಗಡಿತಿಯಲ್ಲ, ಚಂದ್ರೇಗೌಡ. ಬಹುಶಃ ಗಿರೀಶ್ ಕಾರ್ನಾಡರೇ ಆ ಪಾತ್ರವನ್ನು ವಹಿಸಿದ್ದೂ ಇದಕ್ಕೆ ಕಾರಣವಾಗಬಹುದು. ಅದು ಕಾರ್ನಾಡ ಅಭಿನಯಿಸುವ ಯಾವ ಪಾತ್ರವಾದರೂ ಇದ್ದದ್ದೇ. ಈ ಹೊತ್ತಿಗೂ ಸಂಸ್ಕಾರದ ಪ್ರಾಣೇಶಾಚಾರ್ಯನ ನೆನಪಾಗುವಾಗೆಲ್ಲ ಮೊದಲಿಗೆ ಕಣ್ಮುಂದೆ ಸುಳಿಯುವುದು ಕಾರ್ನಾಡರೇ ಎಂಬುದನ್ನು ಇಲ್ಲಿ ಉದಾಹರಣೆಯಾಗಿ ನೆನೆಯಬಹುದು. ಕಾರ್ನಾಡರ ನಟನೆಯ ವ್ಯಕ್ತಿತ್ವಕ್ಕೆ ಅಂತಹದ್ದೊಂದು ಗತ್ತಿದೆ. ಆ ಕಾರಣದಿಂದಲೂ ಕಾದಂಬರಿಗಿಂತ ಭಿನ್ನವಾದ ಚಂದ್ರೇಗೌಡ ಪ್ರೇಕ್ಷಕನನ್ನು ತಲುಪಿ, ಉಳಿದುಬಿಡುತ್ತಾನೆ. ಆ ಕಾರಣದಿಂದಲೇ ಹೆಗ್ಗಡಿತಿಯ ಪಾತ್ರ ಮಸುಕಾಗಿ ಬಿಡುತ್ತದೆ. ಗೌಡನ ಸಾವಿನೊಂದಿಗೆ ಅವಳು ಮತ್ತೆ ಮಹತ್ವವಾಗಬಹುದೇ ಎನ್ನುವ ನಿರೀಕ್ಷೆಯೂ ಹುಸಿಯಾಗಿ ಅದು ಅವಳ ಮತ್ತು ಸೇರಗಾರನ ನಡುವಿನ ಸಂಬಂಧವನ್ನೇ ಪ್ರಧಾನವಾಗಿಸಿಕೊಂಡು ಬಿಡುವುದರಿಂದಲೂ ಕಾದಂಬರಿಯ ಸೃಷ್ಟಿಯಲ್ಲಿನ ಮಹತ್ವಗಳು ಸಾಮಾನ್ಯ ಪ್ರೇಕ್ಷಕನನ್ನು ತಲುಪುವುದೇ ಇಲ್ಲ, ವಿಶೇಷವೇನಿದೆ? ಎನ್ನುವ ಸಾಮಾನ್ಯ ತರ್ಕವನ್ನು ಬಹಳಷ್ಟು ಮನಸ್ಸುಗಳಲ್ಲಿ ಸಿನಿಮಾ ಉಳಿಸಿಬಿಡುವುದು ಈ ಕಾರಣಕ್ಕಾಗಿಯೇ.

ಮಾಮೂಲಿಯಾದ ಒಂದು ವೃದ್ಧಾಪ್ಯ - ತಾರುಣ್ಯದ ನಡುವಿನ ಮನಸ್ಸು-ದೇಹಗಳ ತಾಕಲಾಟ, ಗೊಂದಲ, ಆ ಕಾರಣಕ್ಕೆ ಕೊನೆಗೆ ಅನ್ಯಪುರುಷನೊಂದಿಗೆ ಸಂಪರ್ಕ ಪಡೆಯುವ ಒಂದು ಸಾಮಾನ್ಯ ಹೆಣ್ಣು ಎನಿಸುವಷ್ಟರ ಮಿತಿಯಲ್ಲೇ ಸುಬ್ಬಮ್ಮ ಪ್ರೇಕ್ಷಕನ ಮನಸ್ಸಿನಲ್ಲಿ ಉಳಿದು ಬಿಡುತ್ತಾಳೆ. ಬಹಳಷ್ಟು ಪ್ರೇಕ್ಷಕರ ಅಭಿಪ್ರಾಯ ಇದೇ ತೆರನಾದದ್ದು. ಆ ಕಾರಣದಿಂದ ಹೆಗ್ಗಡಿತಿಯ ಸಾವಿನ ಸ್ವರೂಪವೂ ಬಹಳಷ್ಟು ಜನರಿಗೆ ಗಂಭೀರವಾಗಿ ತಾಕುವುದಿಲ್ಲ. 'ಅವಳು ಮಾಡಿದ ಅಪರಾಧಕ್ಕೆ ಸರಿಯಾದ ಶಿಕ್ಷೆ' ಎಂದೇ ಸಿನಿಮಾ ನೋಡಿದ ನಾಲ್ಕಾರು ಜನ ಮಹಿಳೆಯರು ಪ್ರತಿಕ್ರಿಯಿಸುತ್ತಾರೆ. ಕಾದಂಬರಿ ಒಳಗೊಳ್ಳುವ ಮುಖ್ಯವಾದ ದುರಂತದಿಂದಲೇ ಸಿನಿಮಾ ವಿಮುಖವಾಗಿಬಿಡುತ್ತದೆ. ಹಾಗೆಯೇ ಬಹಳಷ್ಟು ಪ್ರೇಕ್ಷಕರನ್ನು ಕಾಡುವ ಸಮಸ್ಯೆ ಹೂವಯ್ಯನ ಪಾತ್ರದ್ದೇ ಆಗಿದೆ. ಭಿನ್ನವಾದ ಪಾತ್ರವಾಗಿಯೇ ಇಡೀ ಕಾದಂಬರಿಗೆ ಪೂರಕ-ಪ್ರಧಾನ ಪಾತ್ರವಾಗುವ ಹೂವಯ್ಯನ ಪಾತ್ರ ಕಥೆಯಿಂದ ಸಿಡಿದಂತೆ ದೂರ ನಿಲ್ಲುತ್ತದೆ. ಹೂವಯ್ಯ - ಸೀತೆ ಎರಡೂ ಪಾತ್ರಗಳ ಆಯ್ಕೆ ಮತ್ತು ಪೋಷಣೆಯಲ್ಲಿ ನಿರ್ದೇಶಕರ ಸೋಲು ಎದ್ದು ಕಾಣುತ್ತದೆ. ಹೂವಯ್ಯನ ಪಾತ್ರ ಮೂಲತಃ ಸೂಕ್ಷ್ಮ. ಆತನ ದಿಢೀರ್ ತನ್ಮಯತೆ, ರಸಾವೇಶ, ದರ್ಶನ, ಅನುಭೂತಿಗಳ ಅನುಭವ ಇಡೀ ಕಾದಂಬರಿಯೊಳಗೆ ಗಂಭೀರ ಓದುಗನನ್ನೇ ವಿಚಲಿತಗೊಳಿಸುವಾಗ, ಅಂತಹ ಪಾತ್ರವನ್ನು ಪ್ರೇಕ್ಷಕನಿಗೆ ತಲುಪಿಸಬೇಕಾದ ಜವಾಬ್ದಾರಿ ಮಾತ್ರ ದೊಡ್ಡ ಸವಾಲೇ ಆಗಿತ್ತು. ಅಂತಹ ಯಾವ ಪ್ರಯತ್ನವೂ ಇಲ್ಲಿ ಕಾಣಿಸುವುದಿಲ್ಲ. 'ಆತ ಸುಮ್ಮನೆ ಅಳುವುದೇಕೆ? ಅವನ ಹಾಡು ಕೇಳುತ್ತಾ ಸೀತೆಯೂ ಕಣ್ಣೀರಿಡುವುದೇಕೆ?' ಎನ್ನುವ ಸಾಮಾನ್ಯ ಪ್ರಶ್ನೆಯನ್ನು ಎತ್ತುವ ಸಹಜ ಪ್ರೇಕ್ಷಕನಿಗೆ, ಆ ಪಾತ್ರಕ್ಕೂ ಅದರ ಆನಂದಾನುಭೂತಿಗೂ ಇರುವ ಸಂಬಂಧವನ್ನು ಸ್ಪಷ್ಟಗೊಳಿ ಸುವುದು ಹೇಗೆ? ಆ ದೃಷ್ಟಿಯಿಂದ ರಾಮಯ್ಯನ ಪಾತ್ರವೇ ನೋಡುಗನಲ್ಲಿ ಸಹಜವಾಗಿ ಉಳಿದು ಬಿಡುತ್ತದೆ.

ಉಳಿದಂತೆ ಸಿನಿಮಾದ ಉದ್ದಕ್ಕೂ ಮನಸ್ಸಿನಲ್ಲಿ ನಿಲ್ಲುವ ಲವಲವಿಕೆಯ ಪಾತ್ರ ಓಬಯ್ಯನದು. ಅದರಂತೆಯೇ ಗೊಂದಲದ ಅಲೆ ಎಳಿಸುವ ಪಾತ್ರ, ಸೇರಗಾರನದು. ಮೂಲ ಕಾದಂಬರಿಯ ಸೇರಗಾರನೊಂದಿಗೆ ಈತ ಎಷ್ಟರ ಮಟ್ಟಿಗೆ ಹೋಲಬಲ್ಲನೆಂಬುದೇ ಮುಖ್ಯ ಪ್ರಶ್ನೆ. ಸೇರಗಾರ ಮೂಲಕ್ಕಿಂತ ಸಿನಿಮಾದಲ್ಲಿ ಬಹಳಷ್ಟೇ ಮೆದುವಾಗಿ ಬಿಡುವ ಕಾರಣವಾದರೂ ಅರ್ಥವಾಗುವುದಿಲ್ಲ. ಅವನ ಪಾತ್ರವೇ ಸಿನಿಮಾದ ಸಂದರ್ಭಕ್ಕೆ ಪ್ರೇಕ್ಷಕನಿಂದ ಅನುಕಂಪನವನ್ನು ಗಳಿಸಿಕೊಂಡುಬಿಡುತ್ತದೆ. ಇಂತಹ ಪಾತ್ರ ರೂಪ ಬದಲಾವಣೆಯನ್ನು ಸರಳವೆಂದು ತಳ್ಳಿಹಾಕಬಹುದೆನಿಸುವುದಿಲ್ಲ.

ಸಿನಿಮಾ ನಿರ್ದೇಶಕನ ಮಹತ್ವದ ಮಾಧ್ಯಮ ಎನ್ನುವುದು ನಿಜವೇ ಆದರೂ, ಮಹಾ ಕವಿಯೊಬ್ಬನ ಕೃತಿ ಅವನಿಂದಾಚೆಗೆ ಅವನ ಅನುಮತಿಯಿಂದ ಹೊರತಾಗಿ ಹೀಗೆ ಬದಲಾಗಬಹುದಾದ್ದನ್ನು ನಿರ್ದೇಶಕನ ಮಹತ್ವದ ಕಾರಣದಿಂದ ಒಪ್ಪಲಾಗುವುದಿಲ್ಲ. ಇಂತಹ ಕಾರಣವೇ ಸೇರಗಾರನನ್ನು ಒಳ್ಳೆಯವನನ್ನಾಗಿಸುವುದರೊಂದಿಗೆ ಸುಬ್ಬಮ್ಮ ಪಡೆಯಬಹುದಾದ ಸಹಾನುಭೂತಿಯನ್ನೆಲ್ಲಾ ಅವನಿಗೆ ವರ್ಗಾಯಿಸಿಬಿಡುವುದು ಸಣ್ಣ ತಪ್ಪಲ್ಲ.

ನಾವು ಪ್ರಾರಂಭದಲ್ಲಿ ಚರ್ಚಿಸಿದಂತೆ ಇಂತಹ ಸನ್ನಿವೇಶಗಳು, ಓದುಗನಲ್ಲದ ಪ್ರೇಕ್ಷಕನ ಮೇಲೆ ಬೀರುವ ಪ್ರಭಾವವನ್ನಿಲ್ಲಿ ಮಹತ್ವವಾಗಿ ಪರಿಗಣಿಸಲೇಬೇಕು. ಇಂತಹದ್ದೇ ಒಂದು ಸಾಮಾನ್ಯವಾದ ಬದಲಾವಣೆ ಸ್ವರೂಪವನ್ನು ಸಿನಿಮಾದ ಅಂತ್ಯದಲ್ಲಿಯೂ

ಡಾ|| ಜಿ. ಪ್ರಶಾಂತ ನಾಯಕ

ಕಾಣಬಹುದು.

ಕಾದಂಬರಿಯ ಕೊನೆಗೆ ಹೂವಯ್ಯ ಮತ್ತು ಚಿನ್ನಮ್ಮನ ನಿಷ್ಕಲ್ಮಷವಾದ ಪ್ರೇಮವನ್ನು ಕುರಿತು ಕುವೆಂಪು 'ಎರಡು ಆತ್ಮಗಳ ಪ್ರೋಜ್ವಲ ಜೀವನವಾಗಿತ್ತು' ಎಂದು ತೀರ್ಮಾನ ನೀಡುತ್ತಾರೆ. ವಿವೇಕಾನಂದ, ಪರಮಹಂಸ, ಬುದ್ಧರಂತಹ ಪ್ರಭಾವವಿದ್ದ ಕುವೆಂಪು ಅವರ ಗ್ರಹಿಕೆಗೆ ಇಂತಹ ದರ್ಶನ ಸಾಧ್ಯ ಎನ್ನುವುದು ಈಗಾಗಲೇ ಸರ್ವವಿದಿತ. ಆದರೆ ಸಿನಿಮಾದ ಅಂತ್ಯ ಹೂವಯ್ಯನ ಹಿಂದಿರುಗುವಿಕೆಯನ್ನು ಸಾಮಾನ್ಯ ಚಲನ ಚಿತ್ರದ ಒಲಿದವರ ಸಮಾಗಮದ ಸ್ವರೂಪದಂತೇ ಚಿತ್ರಿತವಾಗಿಸಿಬಿಟ್ಟದೆ ಎನಿಸುತ್ತದೆ. ಇಂತಹ ಮುಕ್ತಾಯ ಕವಿ-ಕೃತಿಗೆ ಖಂಡಿತ ನ್ಯಾಯ ಒದಗಿಸುವಂತಹದ್ದಲ್ಲ.

ಮೇಲ್ಕಂಡ ಚರ್ಚೆಗಳೆಲ್ಲಾ ದೂಷಣೆಯ ಕಾರಣಕ್ಕೆಂದು ಬಳಸಿಕೊಂಡವಲ್ಲ, ಒಬ್ಬ ಸಹಜ ಪ್ರೇಕ್ಷಕನನ್ನು ಕಾದಂಬರಿ ಸಿನಿಮಾವಾಗಿ ಮುಟ್ಟುವ ಬಗೆಗೆ ಒಂದು ಒಳನೋಟವನ್ನು ಬೀರುವ ಪ್ರಯತ್ನವಿದಷ್ಟೆ. ಕಾದಂಬರಿ ಓದದ ಪ್ರೇಕ್ಷಕರ ಅಭಿಪ್ರಾಯಗಳ ಸಂಗ್ರಹದಿಂದ ಚರ್ಚೆ ಬೆಳೆಸುವ ಯತ್ನವಿಲ್ಲದೆ ಕಾದಂಬರಿಯನ್ನು ಇಡಿಯಾಗಿ ಸಿನಿಮಾ ಮಾಡುವ ಅಸಾಧ್ಯತೆ ಮನಗಂಡಾಗ್ಯೂ, ಇನ್ನಷ್ಟು ಪ್ರಯತ್ನದ ಅಗತ್ಯವಿಲ್ಲಿತ್ತು. ಮತ್ತು ಆ ಶಕ್ತಿಯೂ ಕಾರ್ನಾಡರಿಗಿತ್ತು ಎನ್ನುವ ಅಂಶಗಳು ಮತ್ತೆಮತ್ತೆ ಕಾಡತೊಡಗುತ್ತವೆ.

ಕೊನೆಪಕ್ಷ ಕಾದಂಬರಿಯ ಒಳ ಉದ್ದೇಶವನ್ನು, ಅದರ ಮಹತ್ವವನ್ನು, ಸೂಕ್ಷ್ಮತೆಗಳನ್ನು ಅರ್ಥಪೂರ್ಣವಾಗಿ ದಾಖಲಿಸಿ ನೋಡುಗನಿಗೆ ದಾಟಿಸಲಾಗದಿದ್ದರೆ ಇಂತಹ ಗಂಭೀರ ಪ್ರಯತ್ನದ ಸಾರ್ಥಕತೆಯೇನು? ಎನ್ನುವ ಕಾರಣದಿಂದಲೂ ಬಹಳಷ್ಟು ಪ್ರಶ್ನೆಗಳು ಏಳುತ್ತವೆ.

ಒಂದು ಕೃತಿ ಸಿನಿಮಾವಾಗಿ ಸಮರ್ಪಕವಾಗಲಿಲ್ಲ ಎಂದ ಮಾತ್ರಕ್ಕೆ ಮೂಲಕತೆಗಾಗಲೀ, ಕಾದಂಬರಿಕಾರನಿಗಾಗಲೀ ಅಥವಾ ಓದುಗನಿಗಾಗಲೀ ದೊಡ್ಡ ನಷ್ಟವಾಯಿತೆಂದರ್ಥವಲ್ಲ. ಆದರೆ ಒಬ್ಬ ಮಹಾನ್ ಸಾಹಿತಿಯೊಬ್ಬನ ಬಗೆಗೆ ಅಪಾರವಾದ ಅಭಿಮಾನ ಹೊಂದಿದ ಒಂದು ದೊಡ್ಡ ಜನಸಮುದಾಯ ಅವನ ಕೃತಿ ಒದದೆ ಅವನನ್ನು ಪ್ರೀತಿಸುವಲ್ಲಿ ಇಂತಹ ಪ್ರಯತ್ನಗಳು ಅವನಲ್ಲಿ ಮತ್ತಷ್ಟು ಪ್ರೀತಿ-ಅಭಿಮಾನವನ್ನು ಉಂಟುಮಾಡುವ ಬದಲು ಆಘಾತವನ್ನುಂಟು ಮಾಡಿಬಿಟ್ಟರೆ? ಎನ್ನುವ ಆತಂಕವೇ ಇಷ್ಟೆಲ್ಲಾ ಆಲೋಚನೆಗಳನ್ನು ಹುಟ್ಟುಹಾಕಿಬಿಡುತ್ತದೆ.

ಕಾನೂರು ಹೆಗ್ಗಡಿತಿಯ ನಿರ್ದೇಶನದೊಂದಿಗೆ ಕಾರ್ನಾಡರ ವ್ಯಕ್ತಿತ್ವದ ಮೆರುಗು ಮತ್ತಷ್ಟು ಹೆಚ್ಚುವುದೆಂಬುದರಲ್ಲಿ ಅನುಮಾನವಿಲ್ಲ. ಆದರೆ ಅದು ಕವಿ ಕುವೆಂಪುವಿಗೂ ಮತ್ತಷ್ಟು [illegible] ಎಂಬುದಷ್ಟೇ ಸಹೃದಯ ನಿರೀಕ್ಷೆ.

ಬಹುಶಃ ಇಂತಹ ಕೃತಿಗಳಿಗೆ ಒಂದು ಸಿನಿಮೀಯ ಚೌಕಟ್ಟು ಒದಗಿಸಲಾಗದಿದ್ದರೆ, ಆ ಪ್ರಯತ್ನವೇ ಬೇಕಿಲ್ಲ ಎನ್ನುವ ಮಾತುಗಳನ್ನು, ಕಷ್ಟವಾದರೂ ಹೇಳಲೇಬೇಕು. ಅಂತಲ್ಲಿ ಕಿರು-ತೆರೆಯ ಧಾರಾವಾಹಿಯಾಗಿ ಹೆಚ್ಚು ಜನರನ್ನು ಮುಟ್ಟುವ ಪ್ರಾಮಾಣಿಕ ಯತ್ನವೇ ಹೆಚ್ಚು ಸಮಂಜಸ. ಗೀತೆಗಳ ಆಯ್ಕೆ, ಧ್ವನಿಗ್ರಹಣ ತಂತ್ರಜ್ಞಾನವೂ ತೀರಾ ಪೇಲವವಾಯಿತೆನಿಸುವುದರೊಂದಿಗೆ ಬಿ.ವಿ.ಕಾರಂತರು ರಾಗ ಸಂಯೋಜನೆ ಮತ್ತು ಸಂಗೀತದಲ್ಲಿ ಇಷ್ಟು ನಿರಾಶೆ ಉಂಟುಮಾಡಿದ್ದೇಕೆ?

ಇಷ್ಟೆಲ್ಲದರ ನಡುವೆಯೂ, ರಿಮೇಕ್ ಅಬ್ಬರ, ಅಶ್ಲೀಲ, ಅಸಂಬದ್ಧ ತರಲೆ ಅಭಿರುಚಿಯ ಸಿನಿಮಾಗಳ ನಡುವೆ, ಒಂದು ಹೊಸ ಆಹ್ಲಾದದ, ಮಲೆನಾಡು ಬದುಕಿನ ತಂಪು-ಇಂಪುಗಳನ್ನು ಕನ್ನಡ ಚಲನಚಿತ್ರರಂಗಕ್ಕೆ ತುಂಬಿದ ಕಾನೂರು ಹೆಗ್ಗಡಿತಿ ಸದ್ಯಕ್ಕೆ ಕನ್ನಡ ಚಿತ್ರಗಳೆಲ್ಲದರ 'ಹೆಗ್ಗಡಿತಿ'ಯೂ ಹೌದು.

ಡಾ॥ ಜಿ. ಪ್ರಶಾಂತ ನಾಯಕ
ಉಪನ್ಯಾಸಕ, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾಲಯ
ಶಂಕರಘಟ್ಟ-೫೭೭೪೫೧

ಯೋಗಪ್ರವೇಶ-೧೦

ಜಿ. ರಾಮಕೃಷ್ಣ

ಪ್ರಾಣಾಯಾಮವು ಉಸಿರಾಟದ ವ್ಯಾಯಾಮವೇನೋ ಹೌದು, ಆದರೆ ಅದು ಮೂಲತಃ ದೀರ್ಘಶ್ವಾಸ ಹಾಗೂ ಅದರಿಂದ ಲಭ್ಯವಾಗುವ ಹೆಚ್ಚು ಆಮ್ಲಜನಕದ ಸೇವನೆಯ ಕಲ್ಪನೆಯಿಂದ ಮೂಡಿರುವುದಲ್ಲ. ಇದರಲ್ಲಿ ''ಕುಂಭಕ''ಕ್ಕೆ ಆದ್ಯತೆ ನೀಡಲಾಗಿದೆ; ಅಂದರೆ, ಹಂಗಾಮಿಯಾಗಿ ಉಸಿರಾಟ ವನ್ನು ನಿಲ್ಲಿಸುವುದು. ಹಠಯೋಗ ಪ್ರದೀಪಿಕೆಯ ಪ್ರಕಾರ ಕುಂಭಕವೇ ಪ್ರಾಣಾಯಾಮ (೧.೫೬-೫೭). ಇದು ಮೂರು ರೀತಿಗಳಲ್ಲಿ ಸಾಧ್ಯ:

(ಅ) ಉಸಿರನ್ನು ದೀರ್ಘವಾಗಿ ತೆಗೆದುಕೊಂಡ ನಂತರ ಕೆಲಕಾಲ ಅದನ್ನು ಅಲ್ಲೇ ತಡೆಯುವುದು; ಅದರಿಂದ ಶ್ವಾಸಕೋಶದಲ್ಲಿ ಒತ್ತಡ ಹೆಚ್ಚುತ್ತದೆ.

(ಆ) ಉಸಿರನ್ನು ಪೂರ್ತಿಯಾಗಿ ಹೊರಬಿಟ್ಟು ಆಮೇಲೆ ಕೆಲಕಾಲ ಹಾಗೇ ಉಳಿಯುವುದು: ಅದರಿಂದ ಶ್ವಾಸಕೋಶದಲ್ಲಿ ಒತ್ತಡ ಕಡಿಮೆಯಾಗುತ್ತದೆ.

(ಇ) ಉಸಿರನ್ನು ತೆಗೆದುಕೊಳ್ಳುತ್ತಾ ಅಥವಾ ಹೊರಬಿಡುತ್ತಾ ಮಧ್ಯದಲ್ಲೇ ಅದನ್ನು ನಿಲ್ಲಿಸುವುದು: ಇದರಿಂದ ಶ್ವಾಸಕೋಶದೊಳಗಿನ ಒತ್ತಡವು ಹೊರ ವಾತಾವರಣದ ಒತ್ತಡಕ್ಕೆ ಸಮನಾಗಿರುತ್ತದೆ.

ಇವುಗಳಲ್ಲಿ ಮೊದಲೆರಡನ್ನು ಚೆನ್ನಾಗಿ ಅಭ್ಯಾಸ ಮಾಡಿ ಪಟುತ್ವವನ್ನು ಸಾಧಿಸಿದರೆ ಮೂರನೆಯದು ತಾನೇ ತಾನಾಗಿ ಉಂಟಾಗುತ್ತದೆಂದು ಹೇಳುತ್ತಾರೆ. ಉಸಿರನ್ನು ಒಳ ತೆಗೆದುಕೊಳ್ಳುವುದನ್ನು ಪೂರಕವೆಂದೂ, ಹೊರ ಬಿಡುವುದನ್ನು ರೇಚಕವೆಂದೂ ಕರೆಯುವುದುಂಟು. ಪೂರಕ - ಕುಂಭಕ -ರೇಚಕಗಳು ಪ್ರಾಣಾಯಾಮದ ಅಂಗಗಳೆನ್ನಬಹುದು. ಇವನ್ನು ಅಭ್ಯಾಸ ಮಾಡುವಾಗ ಕೆಲವು ''ಬಂಧ''ಗಳನ್ನೂ ಜೊತೆ ಜೊತೆಯಲ್ಲೇ ಅಭ್ಯಸಿಸಬೇಕೆಂದು ಹೇಳಲಾಗಿದೆ. ಉದಾಹರಣೆಗೆ, ಪೂರಕದೊಟ್ಟಿಗೆ ಮೂಲಬಂಧ, ಕುಂಭಕದೊಂದಿಗೆ ಜಾಲಂಧರ ಬಂಧ, ಮತ್ತು ರೇಚಕದೊಂದಿಗೆ ಉಡ್ಡೀಯಾನ ಬಂಧ ಅಗತ್ಯ. ಪ್ರಾರಂಭದಲ್ಲಿಯೇ ಬಂಧಗಳನ್ನು ಅಭ್ಯಾಸ ಮಾಡದೆ, ಉಜ್ಜಾಯೀ ಮುಂತಾದ ವಿಧಾನಗಳನ್ನು ಕರಗತ ಮಾಡಿಕೊಂಡು ನಂತರ ಬಂಧಗಳಿಗೆ ಗಮನ ನೀಡುವುದು ಆರೋಗ್ಯಕರ.

ಮೂಲಬಂಧವೆಂದರೆ ಗುದನಾಳವನ್ನು (ಅಂದರೆ, ಗುದದಲ್ಲಿ ಕೊನೆಗೊಳ್ಳುವ ದೊಡ್ಡ ಕರುಳಿನ ಕೊನೆಯ ಭಾಗವನ್ನು) ಮೇಲಕ್ಕೆತ್ತುವ ಹಾಗೂ ಗುದ ಸ್ನಾಯುಗಳನ್ನು ಕುಗ್ಗಿಸುವ ಯಶಸ್ವೀ ಪ್ರಯತ್ನ. ಜಾಲಂಧರ ಬಂಧವನ್ನು ಈಗಾಗಲೇ ತಿಳಿದಿದ್ದೇವೆ: ಗಲ್ಲವನ್ನು ಎದೆಯ ಮೇಲ್ಭಾಗಕ್ಕೆ ಆನಿಸುವುದು. ಇದರಿಂದ ತಲೆಗೆ ರಕ್ತವನ್ನು ಒಯ್ಯುವ ಎರಡು ಪ್ರಧಾನ ರಕ್ತನಾಳಗಳ ಬಳಿಯ ಕುಳಿಗಳನ್ನು ಕುಗ್ಗಿಸಿದಂತಾಗುತ್ತದೆ. ಯೋಗ ಶಾಸ್ತ್ರದಲ್ಲಿ ಇವನ್ನು ವಿಜ್ಞಾನ ನಾಡಿಗಳು ಎನ್ನುತ್ತಾರೆ. ಉಡ್ಡೀಯಾನವೆಂದರೆ ಉದರದ ಆವರಣ ಭಾಗವನ್ನು, ವಿಶೇಷತಃ ನಾಭಿಯ ಕೆಳಗಿನ ಭಾಗವನ್ನು, ಒಳಕ್ಕೆಳೆದುಕೊಳ್ಳುವುದು; ಇದರಿಂದ ವಪೆಯು ಮೇಲಕ್ಕೇರುತ್ತದೆ ಕೂಡ.

ಶ್ವಾಸಕೋಶ, ಗಂಟಲು ಮತ್ತು ಉದರ ಭಾಗಗಳಲ್ಲಿ ಒತ್ತಡವನ್ನು ಕ್ರಮವಾಗಿ ಬದಲಾಯಿಸಿ ಕೆಲಕಾಲದವರೆಗೆ ಅದನ್ನು ಹಾಗೆ ಹಿಡಿದಿಡುವುದು ಪ್ರಾಣಾಯಾಮದ ಮುಖ್ಯಾಂಶ. ಆಮ್ಲಜನಕದ ಸೇವನೆ ಮತ್ತು ಇಂಗಾಲಾಮ್ಲದ ಹೊರದೂಡುವಿಕೆ, - ಇವು ಈ ಪ್ರಕ್ರಿಯೆಯಲ್ಲಿ ಸಹಜವಾಗಿಯೇ ಹೆಚ್ಚು-ಕಡಿಮೆ ಆಗುತ್ತವೆಂಬುದು ನಗಣ್ಯವಲ್ಲ. ಆದರೆ ಕಿಬ್ಬೊಟ್ಟೆ ಮತ್ತು ವಪೆಗಳ ಚಲನೆ ಅತಿ ಪ್ರಮುಖವಾದ ಭಾಗ. ವಪೆಯ ಮೇಲೆತ್ತುವಿಕೆಯಿಂದ ಶ್ವಾಸಕೋಶದಲ್ಲಿ ಕನಿಷ್ಠ ಪ್ರಮಾಣದ ಗಾಳಿ ಉಳಿದಿರುತ್ತದೆಂಬುದನ್ನು ಗಮನಿಸಬೇಕು.

ಇದರ ಹಿನ್ನೆಲೆಯಲ್ಲಿ ಈಗ ಉಜ್ಜಾಯೀ ಅಭ್ಯಾಸಕ್ಕೆ ಹಿಂದಿರುಗೋಣ. ಹಿಂದೆ ವಿವರಿಸಿದ ವಿಧಾನವನ್ನನುಸರಿಸಿ ಈ ಪ್ರಾಣಾಯಾಮದಲ್ಲಿ ಮಗ್ನರಾದರೆ ಏಕಾಗ್ರತೆಯತ್ತ ಚಲಿಸಲು ಸಾಧ್ಯ. ಮನಸ್ಸು ಹಗುರವಾಗಿ ಉಲ್ಲಾಸದ ಭಾವನೆಯೂ ಮೂಡಬಹುದು. ಹಠಪ್ರದೀಪಿಕೆಯು ಹೇಳುವಂತೆ, ಕಂಠ ಪ್ರದೇಶದಲ್ಲಿ ಶ್ಲೇಷ್ಮದೋಷವಿದ್ದರೆ ಅದರ ನಿವಾರಣೆ ಹಾಗೂ ಜಠರಾಗ್ನಿಯ ವರ್ಧನೆ, ಇವೆರಡೂ ಉಜ್ಜಾಯೀಯಿಂದ ಉಂಟಾಗುತ್ತದೆ (ಶ್ಲೇಷ್ಮದೋಷಹರಂ ಕಂಠೇ ದೇಹಾನಲವಿವರ್ಧನಮ್॥



೨.೫೨). ಇದನ್ನು ಸಿದ್ಧಾಸನದಲ್ಲಿ ಕುಳಿತು ಅಭ್ಯಾಸ ಮಾಡುವುದು ಉಚಿತವೆನಿಸಿದರೂ ಹಠ ಪ್ರದೀಪಿಕೆಯ ಸೂಚನೆಯಂತೆ ಕೂತು, ನಿಂತು, ಓಡಾಡುತ್ತಾ ಯಾವಾಗ ಬೇಕಾದರೂ ಅದನ್ನು ಅಭ್ಯಾಸ ಮಾಡಬಹುದು (ಗಚ್ಛತಾ ತಿಷ್ಠತಾ ಕಾರ್ಯಂ ಉಜ್ಜಾಯ್ಯಾಖ್ಯಂ ತು ಕುಂಭಕಮ್॥ ೨.೫೨).

ಪ್ರಾಣಾಯಾಮದ ಭಾಗವಾಗಿ ಉಸಿರಾಟಕ್ಕೆ ನಿಗದಿತವಾದ ವಿಧಾನವಿರುವಂತೆ ಮೂಗಿನ ಹೊಳ್ಳೆಗಳನ್ನು ತೆಗೆದಿರಲು ಅಥವಾ ಮುಚ್ಚಿರಲು ಒಂದು ವಿಧಾನವನ್ನು ಅನುಸರಿಸುವುದು ರೂಢಿಯಲ್ಲಿದೆ. ಆ ಪದ್ಧತಿಯಲ್ಲಿ ಅನುಕೂಲವಿದೆ, ಶಿಸ್ತಿದೆ. ಸಾಮಾನ್ಯವಾಗಿ ಒಂದು ಹೊಳ್ಳೆಯನ್ನು ಮತ್ತು ಕೆಲವೊಮ್ಮೆ (ಅಂದರೆ, ಕುಂಭಕದ ಸಂದರ್ಭದಲ್ಲಿ) ಎರಡನ್ನೂ ಮುಚ್ಚುವುದು ಅಗತ್ಯವಿರುತ್ತದೆ. ಅದಕ್ಕೆ ಚಿತ್ರದಲ್ಲಿ ತೋರಿಸಿರುವಂತೆ ಬಲಗೈಯ ಬೆರಳುಗಳನ್ನು ಜೋಡಿಸಿಕೊಂಡರೆ ಹೆಬ್ಬೆರಳನ್ನು ಬಲ ಹೊಳ್ಳೆಯ ಬಳಿ ಮತ್ತು ಇನ್ನೆರಡನ್ನು ಎಡ ಹೊಳ್ಳೆಯ ಬಳಿ ಇರಿಸಿಕೊಳ್ಳಬಹುದು. ಈ ಎರಡು ಬೆರಳುಗಳಿಂದ ಎಡ ಹೊಳ್ಳೆಯನ್ನು ಮುಚ್ಚಿ ಬಲ ಹೊಳ್ಳೆಯಿಂದ ಉಸಿರು ತೆಗೆದುಕೊಳ್ಳುವಾಗ ಅಥವಾ ಬಿಡುವಾಗ ಹೆಬ್ಬೆರಳನ್ನು ಹುಬ್ಬುಗಳ ನಡುವೆ, ಇಲ್ಲವೆ ಮೂಗಿನ ಸೇತುವೆಯ ಮೇಲೆ, ಇರಿಸಿಕೊಳ್ಳಬಹುದು. ಉಜ್ಜಾಯೀಯಲ್ಲಿ ಎಡ ಹೊಳ್ಳೆಯಿಂದ ಉಚ್ಛ್ವಾಸದ ನಂತರ ಬಲ ಹೊಳ್ಳೆಯಿಂದ ನಿಃಶ್ವಾಸ ಮಾಡುವುದು ಒಂದು ಕ್ರಮ. ಇದನ್ನು ನಿಧಾನವಾಗಿ ಎಷ್ಟು ಬಾರಿ ಮತ್ತು ಎಷ್ಟು ಕಾಲ ಸಾಧ್ಯವೋ ಅಷ್ಟು ಬಾರಿ ಮತ್ತು ಅಷ್ಟು ಕಾಲ ಮಾಡಬಹುದು (ಇದರ ವಿಧಾನವನ್ನು ಹಿಂದೆಯೇ ವಿವರಿಸಲಾಗಿತ್ತೆಂಬುದನ್ನು ಗಮನಿಸಿ). ಎರಡೂ ಹೊಳ್ಳೆಗಳನ್ನು ಮುಚ್ಚುವಾಗ ಬೆರಳುಗಳನ್ನು ಹೇಗಿರಿಸಿಕೊಳ್ಳಬಹುದೆಂಬುದನ್ನು ಚಿತ್ರದಲ್ಲಿರುವಂತೆ ಮಾಡಿ ಅಭ್ಯಾಸ ಮಾಡಬಹುದು.

ಉಜ್ಜಾಯೀ ಅಭ್ಯಾಸದಲ್ಲಿ ಎರಡೂ ಹೊಳ್ಳೆಗಳಿಂದ ಉಚ್ಛ್ವಾಸ-ನಿಃಶ್ವಾಸ ಕ್ರಿಯೆಗಳು ನಡೆಯುತ್ತವಾದ್ದರಿಂದ ಬೆರಳುಗಳನ್ನು ಮೂಗಿನ ಬಳಿ ಇರಿಸಿಕೊಳ್ಳುವ ಪ್ರಮೇಯವಿಲ್ಲ. ಕ್ರಮೇಣ ಬೇಕಾದರೆ ಹೊಳ್ಳೆಗಳನ್ನು ಮುಚ್ಚಿ-ತೆಗೆದು ಅಭ್ಯಾಸ ಮಾಡಬಹುದು. ಉಚ್ಛ್ವಾಸ ಕ್ರಿಯೆಯಲ್ಲಿ ಎದೆಯನ್ನು ಉಬ್ಬಿಸಿದರೆ ಗಾಳಿ ಅನಾಯಾಸವಾಗಿ ಒಳಹೋಗುತ್ತದೆ (ಗ್ಲಾಟಿಸ್ ಅನ್ನು ಭಾಗಶಃ ಮುಚ್ಚಿರಬೇಕೆಂಬುದನ್ನು ಮರೆಯಬಾರದು). ಉಚ್ಛ್ವಾಸ-ನಿಃಶ್ವಾಸಗಳಲ್ಲಿ ಮುಖದ ಹಾಗೂ ಮೂಗಿನ ಮಾಂಸಖಂಡಗಳನ್ನು ಹಿಂಡಬಾರದು; ಅಂದರೆ, ಸುಖ-ಸುಲಭ ಉಸಿರಾಟ ಇದಾಗಿರಬೇಕು. ಹೊಟ್ಟೆಯ ಮಾಂಸಖಂಡಗಳನ್ನು ಹಿಗ್ಗಿಸುವ, ಕುಗ್ಗಿಸುವ ಕ್ರಿಯೆ ಉಚ್ಛ್ವಾಸದ ಸಮಯದಲ್ಲಿ ತೀರಾ ಅನಗತ್ಯ. ಹೊಟ್ಟೆಯನ್ನು ಮುಂದಕ್ಕೆ ತರುವಂತೆ ಉಸಿರು ತೆಗೆದುಕೊಳ್ಳಬೇಕೆಂಬ ಭಾವನೆಯನ್ನು ಕೈ ಬಿಡುವುದು ಒಳ್ಳೆಯದು. ಹಾಗೆ ಮಾಡಿದರೆ ಹೆಚ್ಚು ಆಮ್ಲಜನಕವು ಶ್ವಾಸಕೋಶವನ್ನು ಹೋಗುತ್ತದೆಂಬುದು ಕೇವಲ ಭ್ರಮೆ.

ಉಜ್ಜಾಯೀ ಸಂದರ್ಭದಲ್ಲಿ ಕುಂಭಕ ಮಾಡುವುದಾದರೆ ಅದನ್ನು ಉಚ್ಛ್ವಾಸದ ನಂತರ ಮಾಡಬೇಕು. ಗ್ಲಾಟಿಸ್ ಅನ್ನು ಪೂರ್ಣವಾಗಿ ಮುಚ್ಚಬೇಕಾದ್ದು ಇದಕ್ಕೆ ಅವಶ್ಯಕ. ಜೊತೆಗೆ ಜಾಲಂಧರ ಬಂಧ ಹಾಗೂ ಎರಡೂ ಹೊಳ್ಳೆಗಳನ್ನು ಮುಚ್ಚುವ ಕ್ರಿಯೆ ಸಹ ಅಗತ್ಯ. ಉಸಿರು ಹೊರಬರದಂತೆ ಮೂರು ತಡೆಗಳನ್ನು ಒಡ್ಡಿದಂತಾಯಿತು: ಗ್ಲಾಟಿಸ್‌ನ ಮುಚ್ಚುವಿಕೆ, ಗಂಟಲಿನ ಸಂಕೋಚ ಮತ್ತು ಹೊಳ್ಳೆಗಳ ಮುಚ್ಚುವಿಕೆ. ಆದರೆ ಅತ್ಯುತ್ಸಾಹದಿಂದ ಶ್ವಾಸಕೋಶದ ಸಹಜ ಶಕ್ತಿಯನ್ನು ಮೀರಿ ಉಸಿರನ್ನು ಬಿಗಿಯಾಗಿ ತಡೆಹಿಡಿಯುವುದರಿಂದ ಮುಂದಿನ ನಿಃಶ್ವಾಸ ಕ್ರಿಯೆ ನಿಧಾನವಾಗಿ ನಡೆಯಲು ಅಡ್ಡಿಯಾಗುತ್ತದೆ. ಅದರಿಂದಾಗಿ ಉಚ್ಛ್ವಾಸ-ನಿಃಶ್ವಾಸಗಳ ಪ್ರಮಾಣಕ್ಕೆ ಊನವುಂಟಾಗುತ್ತದೆ. ಆದ್ದರಿಂದ ಪೂರಕ-ಕುಂಭಕ-ರೇಚಕಗಳಿಗೆ ೧:೧:೨ರ ಪ್ರಮಾಣವನ್ನು ಇರಿಸಿಕೊಳ್ಳುವುದು ಉತ್ತಮ. ಉಸಿರಾಟವು ನಿಧಾನವಾಗಿ ನಿಗದಿತ ಪ್ರಮಾಣದಲ್ಲಿ ಸುಲಭವಾಗಿ ಸಾಧ್ಯವಾಗದಿದ್ದರೆ ಶ್ವಾಸಕೋಶಕ್ಕೆ ಒಳ್ಳೆಯದಲ್ಲ. ಕ್ರಮೇಣ ಅದು ಹೃದಯಕ್ಕೂ ಸ್ವಲ್ಪ ತೊಂದರೆ ಉಂಟುಮಾಡಬಹುದು. ಆದ್ದರಿಂದ ೧:೧:೨ ಎಂಬುದು ಎಷ್ಟು ಸೆಕೆಂಡುಗಳಾಗಬೇಕೆಂಬುದನ್ನು ಒಬ್ಬೊಬ್ಬರೂ ತಮ್ಮ ಅನುಕೂಲಕ್ಕೆ ತಕ್ಕಂತೆ ನಿಗದಿ ಗೊಳಿಸಿಕೊಳ್ಳಬೇಕು. ಒಮ್ಮೆಗೆ ೧೫ ಅಥವಾ ೨೦ ನಿಮಿಷಗಳ ಕಾಲ ಉಜ್ಜಾಯೀಯನ್ನು ಅಭ್ಯಾಸ ಮಾಡುವುದು ಹಿತಕರವೆಂದು ತೋರಿಬಂದಿದೆ. ಏಕಾಗ್ರತೆಗೆ ಇದರಿಂದ ಪುಷ್ಟಿ ದೊರೆಯಿತೆ, ಇಲ್ಲವೆ, ಎಂಬುದನ್ನು ಸ್ವಾನುಭವದಿಂದಲೇ ಕಂಡುಕೊಳ್ಳಬೇಕು.

ೞ

ನವೋದಯ

ಮುಂದಿನವು ಕುವೆಂಪು ಅವರ 'ಕಾನೂರು ಹೆಗ್ಗಡಿತಿ' ಕಾದಂಬರಿಯ ಅಂತ್ಯದಲ್ಲಿ ಬರುವ ಪದ್ಯ ಪಂಕ್ತಿಗಳು. ನವ ಯುಗವನ್ನು ಮತ್ತು ಯುಗ ಧರ್ಮವನ್ನು ಉದ್ ಘೋಷಿಸುವಂಥವು ಮತ್ತು ಹೊಸ ಶತಮಾನಕ್ಕೆ, ಸಹಸ್ರ ಮಾನಕ್ಕೆ ಅತ್ಯಂತ ಪ್ರಸ್ತುತವಾದವು:

ಉದಯಿಸುತಿದೆ ನೂತನ ಯುಗದೇವತೆ
ಮಿಥ್ಯೆಯ ಮೌಢ್ಯತೆಯನು ಸೀಳಿ;
ಜ್ಞಾನದ ವಿಜ್ಞಾನದ ಮತಿ ಖಡ್ಗದಿ
ಮೈದೋರುವಳೈ ನವ ಕಾಳಿ!
ಕೆಚ್ಚಿನ ನೆಚ್ಚಿನ ತನುಮನ ಪಟುತೆಯ
ಸಂಪಾದಿಸಿ ಓ ಮೇಲೇಳಿ:
ಕಣ್ದೆರೆಯಿರಿ ನವಕಾಂತಿಗೆ, ಶಾಂತಿಗೆ,
ಓ ಕ್ರಾಂತಿಯ ಪುತ್ರರೆ ಬಾಳಿ!

ಯಾವುದು ಈ ನವದೇವತೆ, ಮೂವತ್ತು ಮೂರು ಕೋಟಿ ಪುರಾಣ ದೇವತೆಗಳಿಂದ ಭಿನ್ನವಾದದ್ದು? ಅದು ಸಮಾನತಾ ಮೂಲ ಸರ್ವೋದಯ ಸಾಕ್ಷಾತ್ಕಾರಕ್ಕೆ ಬದ್ಧವಾದ, ಯುಗ ಧರ್ಮ ಪ್ರತೀಕವಾದ ಮತ್ತು ಸಮಸ್ತ ಮೌಢ್ಯ ನಾಶಕ ವೈಚಾರಿಕ ವೈಜ್ಞಾನಿಕ ಮನೋಧರ್ಮ ರೂಪದ ಪ್ರಚಂಡ 'ನವಕಾಳಿ' ಶಕ್ತಿಯಲ್ಲದೇ ಬೇರೆಯಲ್ಲ. ಈ ಇಂದಿನ ಕಾಳಿ ಕೇಳುವುದು ನರಬಲಿ ಅಥವಾ ಪ್ರಾಣಿಬಲಿಯನ್ನಲ್ಲ, ಅಂಧ ಶ್ರದ್ಧೆ ಕಂದಾಚಾರಗಳ ಹಾಗೂ ಜಾತಿ ಮತಾದಿ ಉಪಾಧಿಗಳ ಬಲಿಯನ್ನು; ಅವರ 'ಮತಿಖಡ್ಗ' ಕತ್ತರಿಸುವುದು ಕತ್ತನ್ನಲ್ಲ, ಜನಾಂತರಂಗದ ಕತ್ತಲೆಯ ಮೊತ್ತವನ್ನು!

ವಾಸ್ತವವಾಗಿ, ಈ ನವೀನ ದೇವತೆಯ ಮುಂಗುರುಹು ನಮಗೆ ವೇದೋಪನಿಷತ್ತಿನಷ್ಟು ಹಿಂದೆಯೇ ಗೋಚರಿಸುತ್ತದೆ: ''ಕಸ್ಮೈ ದೇವಾಯ ಹವಿಷಾ ವಿಧೇಮ?'' (ಯಾವ ದೇವನಿಗೆ ನಮ್ಮ ಹವಿಸ್ಸನ್ನು ಸಲ್ಲಿಸೋಣ) ಎಂಬ ಋಗ್ವೇದದ ಧೀರ ಪ್ರಶ್ನೆಯನ್ನು ಜ್ಞಾಪಿಸಿಕೊಳ್ಳಬಹುದು. ಆಗ ದೇವತೆಗಳಿಗೆ ಅಭಾವವಿರಲಿಲ್ಲ, ಇಂದ್ರ, ಅಗ್ನಿ, ವರುಣ ಮುಂತಾದ ಪ್ರಬಲ ದೇವತೆಗಳಿದ್ದರು. ಆದರೂ ವೇದೋಪನಿಷತ್ತುಗಳ ಋಷಿ ಬೇರೊಬ್ಬ ದೇವತೆಯ ಬಗೆಗೆ ಆಲೋಚಿಸಿದ ಎಂಬುದು ಕುತೂಹಲಕರ. ಅವನ ಜಿಜ್ಞಾಸೆ ಫಲಿಸಿದ್ದು ಆಧುನಿಕ ಮನ್ವಂತರದಲ್ಲಿ!

ತಮ್ಮ 'ಕಸ್ಮೈ ದೇವಾಯ' ಎಂಬ ಕವನದಲ್ಲಿ ವಿ.ಸೀ. ಅವರು ಹೇಳುವುದು ಗಮನಾರ್ಹ:

ಅಂದಿನಾ ದೇವರುಗಳೆಲ್ಲ ಮಡಿದುರುಳಿಹರು
ಇಂದ್ರ ವರುಣರು ಧನದ ಮಿತ್ರ ಪೂಷಣರು....

ಹಳೆಯ ಕಾಲದ - ತಂದೆ ತಾತದಿರ ದೇವರುಗ
ಳಳಿದು ಹೋಗುವ ಕಡಿದು ಕಾಲ ಬರುತಿಹುದು

ಅಂತಹ ಕಾಲ ಬಂದಿದೆ. ಆದ್ದರಿಂದ, ಈಗ ಅಗತ್ಯವಾದುದು ಅಭಿನವ ದೇವತೆಯ ಆರಾಧನೆ!

''ಕ್ರಾಂತಿಯ ಪುತ್ರರೆ ಬಾಳಿ'' ಎಂಬ ಕುವೆಂಪು ಅವರ ಉಕ್ತಿ ಅರ್ಥಗರ್ಭಿತವಾದುದು; ಅದು ಯುಗವಾಣಿಯೂ ಹೌದು. ಆಧ್ಯಾತ್ಮಿಕ ಸ್ತರದಲ್ಲಿ ಮಾನವರೆಲ್ಲ 'ಅಮೃತ ಪುತ್ರರು' (''ಶೃಣ್ವಂತು ವಿಶ್ವೇ ಅಮೃತಸ್ಯ ಪುತ್ರಾಃ'' - ವಿಶ್ವದ ಅಮೃತಪುತ್ರರೇ, ನೀವು ಕೇಳಿರಿ ಎಂಬ ಉಪನಿಷದ್ವಾಕ್ಯವನ್ನು ನೆನೆಯಬೇಕು). ಅಂತೆಯೆ, ಅವರು ಸಾಮಾಜಿಕ ನೆಲೆಯಲ್ಲಿ 'ಕ್ರಾಂತಿ ಪುತ್ರ'ರೂ ಆಗಬೇಕು.

ನವತೇಜಸ್ಸು, ನವೋಲ್ಲಾಸ, ಆತ್ಮ ಪ್ರತ್ಯಯ, ಕಾಂತಿ, ಶಾಂತಿಗಳಿಗೊಯ್ಯುವ ಮತ್ತು ಎಲ್ಲರನ್ನೂ ಬದುಕಿಸುವ ಸಾಮಾಜಿಕ ಕ್ರಾಂತಿಯೊಂದು ಇಂದಿನ ಅಗತ್ಯ. ಅದನ್ನು 'ಅಮೃತ ಕ್ರಾಂತಿ'ಯೆಂದು ಬೇಕಾದರೂ ಕರೆಯಬಹುದು. (ಅದು ರಕ್ತ ಕ್ರಾಂತಿಯಾಗದಿರುವುದು ಅಪೇಕ್ಷಣೀಯ). ಅದೀಗ ಎಲ್ಲರ ಒಳಗಣ್ಣು ಹೊರಗಣ್ಣುಗಳ ಮುಂದಿನ ಧ್ಯೇಯವಾಗಬೇಕು; ಅದರಿಂದಲೆ ಭಾರತದ, ಕಡೆಗೆ ಭುವನದ ಶ್ರೇಯ. ಅದೇ ನವೋದಯ; ಸತ್ಯದ ಬೆಳಗು.

ಡಾ|| ಸಿ. ಪಿ. ಕೃಷ್ಣಕುಮಾರ್
೨೨೬೫/೧೯, 'ಭಾರತಿ', ೬ನೆಯ ತಿರುವು
ವಿನಾಯಕ ನಗರ, ಮೈಸೂರು - ೫೭೦ ೦೧೨

'ಗಾಂಧೀಜಿ ಪ್ರತಿಮೆಯನ್ನು
ದೇಶಾದ್ಯಂತ ನಿಲ್ಲಿಸಲಾಗಿದೆ:
ಏಕೆಂದರೆ
ಅವರ ಆದರ್ಶಗಳ ಪಾಲನೆಯ ನಿಲ್ಲಿಸಲಾಗಿದೆ.'
-ಡುಂಡಿರಾಜ್

ಪ್ರತಿಮೆಗಳು

ನಾವು ಪ್ರವಾಸ ಕೈಗೊಂಡಾಗ ಅಥವಾ ದಿನಂಪ್ರತಿ ಪತ್ರಿಕೆಗಳನ್ನು ತಿರುವಿದಾಗ ಥುತ್ತನೆ ಕಣ್ಣಿಗೆ ಕಾಣುವುದು ಈ ಪ್ರತಿಮೆಗಳು. ನಮ್ಮ ಸಾಂಸ್ಕೃತಿಕ ಸಂದರ್ಭಕ್ಕೆ ತೀರಾ ಅಗತ್ಯವೇನೊ ಎಂಬಷ್ಟು ಅದರ ಮಹತ್ವ ಮತ್ತು ವ್ಯಾಪಕತೆ. ವ್ಯಕ್ತಿಯ ಪ್ರತಿಮೆ ಜೊತೆಗೆ ದೇವರುಗಳ ಬೃಹದಾಕಾರದ ಪ್ರತಿಮೆಗಳೂ ಕಾಣಸಿಗುತ್ತವೆ. ಅವುಗಳನ್ನು ನಿಲ್ಲಿಸುವ ಮೂಲ ಉದ್ದೇಶಗಳೇನು? ನಿರ್ದಿಷ್ಟ ಉದ್ದೇಶಗಳು ಸಿಗದಿದ್ದರೂ ವ್ಯಕ್ತಿ ಗೌರವಕ್ಕೆ (ಪೂಜೆಗೆ!) ಜನರ ಮನಸ್ಸಿನಲ್ಲಿ ಅವರನ್ನು ಸದಾ ಹಸುರಾಗಿಸುವ ಪ್ರಯತ್ನವಿರಬೇಕು.

ನಮ್ಮ ನಡುವೆ ಆಗಿಹೋದ ಆದರ್ಶ ವ್ಯಕ್ತಿಗಳ ಬೃಹದಾಕಾರದ ಮೂರ್ತಿಗಳನ್ನು ನಿಲ್ಲಿಸಿ ಆ ಮೂಲಕ ಕೈ ತೊಳೆದುಕೊಂಡು ''ನಾವು ಅವರು ನಡೆದ ದಾರಿಯಲ್ಲಿ ನಡೆಯುತ್ತೇವೆ'' ಎಂಬ ಬೊಗಳೆದಾಸರ ಭಾಷಣಕ್ಕೆ ಹುಚ್ಚೆದ್ದು ಜನರು ಚಪ್ಪಾಳೆ ತಟ್ಟಿ ಗೌರವಿಸುವುದು ಒಂದೆಡೆಯಾದರೆ, ಯುವ ಜನಾಂಗದ ಕೆಲವು ಅಂಧರು ಅಥವಾ ಸ್ವಾರ್ಥ ತುಂಬಿದ ಜನರು ಅಂತಹ ಪ್ರತಿಮೆಗಳಿಗೆ ಚಪ್ಪಲಿಯ ಹಾರ ಹಾಕಿ ಆದರ್ಶಗಳನ್ನು ಗಾಳಿಗೆ ತೂರುತ್ತಿರುವುದು ದಿನನಿತ್ಯ ಕಂಡುಬರುವ ವಿಚಾರವಾಗಿದೆ. ಗೊಂದಲ ಎಬ್ಬಿಸುವುದಕ್ಕೆ ಇದು ಅತಿ ಸುಲಭವಾದ ಮಾರ್ಗವಾಗಿಬಿಟ್ಟಿದೆ.

ಪ್ರತಿಮೆಗಳನ್ನು ನಿಲ್ಲಿಸುವುದು ಎಷ್ಟು ಅಗತ್ಯ? ಅದರಿಂದಾಗುವ ಪ್ರಯೋಜನವೇನು? ಅದಕ್ಕಾಗಿ ತಗಲುವ ವೆಚ್ಚವೆಷ್ಟು? ಒಬ್ಬ ವ್ಯಕ್ತಿಯನ್ನು 'ಗೊಂಬೆ'ಯಾಗಿಸಿ ಊರಮಧ್ಯೆಯೋ ಅಥವಾ ಪಾರ್ಕಿನಲ್ಲೋ ನಿಲ್ಲಿಸುವ ಸಂಸ್ಕೃತಿ ಜನರ ಕೀಳುದೃಷ್ಟಿಗೆ ಈಡಾಗಿ 'ಉಚ್ಚೆ'ಯಿಂದ ಅಭಿಷೇಕ ಮಾಡಿಸಿಕೊಂಡ ಪ್ರಸಂಗ ನಮ್ಮಿಂದ ಇನ್ನೂ ಮಾಸಿಲ್ಲ. ಆದರೂ ಪ್ರತಿಮೆಗಳನ್ನು ನಿಲ್ಲಿಸಿ ಆದರ್ಶವನ್ನು ಪರಿಪಾಲಿಸುವ ನೆಪದ ಕಾರ್ಯಕ್ರಮಗಳು ನಡೆಯುತ್ತಲೇ ಇವೆ.

ಜಾತಿಗೊಬ್ಬ ವ್ಯಕ್ತಿಯಂತೆ ಕರ್ನಾಟಕದಾದ್ಯಂತ ಪ್ರತಿಮೆಗಳು ನಿಂತಿದ್ದಾವೆ. ಅದಕ್ಕೆ ಸಮನಾಗಿ ಅನುಯಾಯಿಗಳ ಸಂಖ್ಯೆಯೂ ಹೆಚ್ಚುತ್ತಿರುವುದು ಆಶ್ಚರ್ಯಕರ. ಆದರ್ಶ ರೂಢಿಸಿಕೊಂಡ ಹಾಗೂ ಹಾಗಿರುವ ವ್ಯಕ್ತಿಗೆ ಇದೊಂದು ಕಾಟಾಚಾರದ ವ್ಯವಸ್ಥೆ ಎಂದು ಅನ್ನಿಸಿದರೂ ಕೂಡ ಬಾಯಿ ಮುಚ್ಚಿ ಕುಳಿತಿರುವುದು ದುರಾದೃಷ್ಟಕರ. 'ರಾಷ್ಟ್ರ ಪಿತ'ನ ಪ್ರತಿಮೆಯಂತೂ ಎಲ್ಲಾ ಕಡೆ ಸಿಗುತ್ತಾ 'ಪಳೆಯುಳಿಕೆ' ರೀತಿಯಾಗಿ ಮೂಲೆಗುಂಪಾಗಿದೆ. ಆದರದು ಮುಷ್ಕರ ನಿರತರಿಗೆ, ಹಣ ಸಂಗ್ರಾಹಕರಿಗೆ, ಗೇಲಿ ಮಾಡುವವರಿಗೆ, ಪ್ರೇಮಿಗಳಿಗೆ, ದೀರ್ಘ ಸಮಾಲೋಚನೆಗೆ ತಾಣವಾಗಿ ಮಾರ್ಪಟ್ಟಿರುವುದು ಸ್ಪಷ್ಟವಿದೆ. ಅವರ ಚಿಂತನೆಗಳು ಪ್ರಸ್ತುತವಾಗಿಲ್ಲವೆಂಬ ವಾದವಿದ್ದರೂ 'ಪ್ರತಿಜ್ಞೆ ಕೈಗೊಳ್ಳಲು' ಗಾಂಧಿ ಬೇಕು, ತಪ್ಪೊಪ್ಪಿಕೊಳ್ಳಲು ಗಾಂಧಿ ಬೇಕು. ವ್ಯಕ್ತಿ ವ್ಯಕ್ತಿ ನಡುವಿನ ಜಾತಿ ಸಂಘರ್ಷವನ್ನು ದೂರಮಾಡಿ ಸೌಹಾರ್ದ ಮನಃಸ್ಥಿತಿಯನ್ನು ಕಾಪಾಡಲು ಯಾರಿಗೂ ಗಾಂಧಿ ಬೇಡ.

ಗುಂಪಿನ ಶ್ರೇಷ್ಠತೆ ಅಳಿದು ವ್ಯಕ್ತಿ ಶ್ರೇಷ್ಠತೆ ಪ್ರಾಮುಖ್ಯತೆ ಪಡೆದುಕೊಂಡ ಈ ಕಾಲದಲ್ಲಿ ವ್ಯಕ್ತಿ ದೇವರಾಗುತ್ತಿರುವುದು ಆಶ್ಚರ್ಯದ ಸಂಗತಿ. ಭಾರತದಂತಹ ಬಡ ರಾಷ್ಟ್ರದಲ್ಲಿ ಒಪ್ಪತ್ತಿನ ಗಂಜಿಗೆ ದಿಕ್ಕಿಲ್ಲವಾದರೂ ಜನರ ನಡುವೆ ತಮ್ಮ ವಿಚಾರದ ಭೋಳೆತನವನ್ನು ಪ್ರದರ್ಶಿಸಿ ಮುನ್ನಡೆದ ನಾಗರಿಕರಿಗೆ ಕಡಿಮೆಯೇನಿಲ್ಲ. ಇವರಿಗೆ ಸಾಮಾನ್ಯ ಜನರ ಕಷ್ಟ ಅರ್ಥವಾಗುವ ರೀತಿಯಾದರೂ ಹೇಗೆ! ಅವರಿಗೆ ಹಿಂದಿನ 'ಆದರ್ಶ ಪುರುಷರು' ಬೇಕು. ಆದರೆ ಅವರಲ್ಲಿನ ಕಲ್ಯಾಣ ಕಾರ್ಯಗಳು ಬೇಡ. ಅವರನ್ನೊಂದು ಪ್ರತಿಮೆಯಾಗಿಸಿ ಕಟ್ಟಿ ಹಾಕಿದರೆ ಅವರ ಕೆಲಸ ಮುಗಿಯಿತು. 'ವಿಶ್ವ ಮಾನವತೆಯ' ತತ್ವವನ್ನು ಹೃದಯಕ್ಕೆ ಇಳಿಸಿ ಶುದ್ಧಗೊಳಿಸಬೇಕು ಎಂಬ ಕಲ್ಪನೆಯ ಕುವೆಂಪುಗೆ 'ಮರಣೋತ್ತರ ಅವಮಾನದ ಪ್ರಶಸ್ತಿ' ಎಂಬಂತೆ ಕುವೆಂಪು ವಿಶ್ವವಿದ್ಯಾಲಯದ ಎದುರಿಗೆ ನಿಲ್ಲಿಸಿದ ಪ್ರತಿಮೆ ಅವರ ಆದರ್ಶ ಬುದ್ಧಿಮತ್ತೆ, ಶ್ರೇಷ್ಠತೆಯೆಲ್ಲವನ್ನೂ ನುಚ್ಚುನೂರಾಗಿಸಿದೆ. ಇಷ್ಟೇ ಆದರೆ ಚಿಂತೆ ಇರಲಿಲ್ಲ. ಎಷ್ಟೋ ಪ್ರತಿಮೆಗಳು ಇಂದು 'ಜಾತಿ'ಗಳಿಗೆ ಸೇರ್ಪಡೆಯಾಗಿ ಬೆಳವಣಿಗೆ ಕಾಣುತ್ತಿರುವುದು ಆರೋಗ್ಯಕರ ಮನಸುಗಳಿಗೆ, ಸಮಾಜಕ್ಕೆ ಹಿತಕಾರಿಯಾಗದು. ಇಂದು ಕನಕದಾಸರ ಪ್ರತಿಮೆ ನೆಟ್ಟ ಸರ್ಕಾರ ನಾಳಿನ ದಿನಗಳಲ್ಲಿ ಎಲ್ಲಾ ಜಾತಿಯವರ ವೀಳ್ಯಕ್ಕೆ ಕೈ ನೀಡಿ ಅವರ 'ಜಾತಿ ಪುರುಷ'ನ ಪ್ರತಿಮೆ ನಿಲ್ಲಿಸುವ ಭರವಸೆ ನೀಡಿದರೆ ಆಶ್ಚರ್ಯವಿಲ್ಲ. ಹೀಗೆ ಪ್ರತಿಮೆ ನಿಲ್ಲಿಸುವುದೇ ಮುನ್ನಡೆಯಾದರೆ ನಮ್ಮ ರಾಜ್ಯ 'ಪ್ರತಿಮಾ ರಾಜ್ಯ'ವಾಗುವುದರಲ್ಲಿ ಸಂದೇಹವಿಲ್ಲ. ಆಗ ಮೇಲಿನ ಡುಂಡಿರಾಜರ 'ಚುಟುಕು' ಪ್ರಸ್ತುತವಾಗದೆ ಇರದು.

ಶಿವರಾಮ ಕಾರಗಡಿ
ಪೋಸ್ಟ್ ಹನಿಯ - ೫೭೭೪೧೮, ಹೊಸನಗರ - ತಾ, ಶಿವಮೊಗ್ಗ - ಜಿಲ್ಲೆ


Registered with the Registrar of News Papers for India under No.11308/99. Postal REGISTERED CPMG/KA/BG-7/2000

ಇದೀಗ ಬಿಡುಗಡೆಯಾಗಿದೆ!

ಕನ್ನಡದಲ್ಲಿ ಮೊದಲ ಪ್ರಯತ್ನ, ಪ್ರತಿಯೊಂದು ಶಾಲೆಯ, ಪ್ರತಿಯೊಂದು ಮನೆಯ ಗ್ರಂಥ ಭಂಡಾರದಲ್ಲಿ ಇರಲೇಬೇಕಾದ ಕೃತಿ

ದೇಶ-ವಿದೇಶಗಳ ಪರಿಚಯ

ಡೆಮ್ಮಿ 1/4 ಆಕಾರದ
ಸುಮಾರು 160 ಪುಟಗಳು
ಬೆಲೆ : ರೂ. 135




ಕನ್ನಡದಲ್ಲಿ
ಮೊದಲ ಬಾರಿಗೆ
ಇಡೀಲೋಕದ ಮಾಹಿತಿ

ಉತ್ತಮ ಮುದ್ರಣ!
ಅಚ್ಚುಕಟ್ಟಾದ ಬೈಂಡಿಂಗ್!

ನಿಮ್ಮ ಬೇಡಿಕೆಯನ್ನು
ಇಂದೇ ಸಲ್ಲಿಸಿ

ಸುಮಾರು 190 ದೇಶಗಳ ಭೌಗೋಳಿಕ ನೆಲೆ, ಇತಿಹಾಸ, ರಾಜಕೀಯ ವ್ಯವಸ್ಥೆ, ಜನಸಂಖ್ಯೆ, ವಿಸ್ತೀರ್ಣ ಇತ್ಯಾದಿಗಳ ಸಂಕ್ಷಿಪ್ತ ಪರಿಚಯ - ನಕ್ಷೆಗಳ ಸಹಿತ. ವರ್ಣದಲ್ಲಿ ಎಲ್ಲ ದೇಶಗಳ ಬಾವುಟಗಳು. ಅಲ್ಲದೆ ಆರು ಖಂಡಗಳು, ಸಾಗರಗಳು, ಎತ್ತರದ ಪರ್ವತಗಳು, ದೊಡ್ಡ ನದಿಗಳು ಹಾಗೂ ಇತರ ಉಪಯುಕ್ತ ಮಾಹಿತಿಗಳು

ಹೊಸತು ಪತ್ರಿಕೆಯ ಮೂರು ವರ್ಷದ ಚಂದಾದಾರರಿಗೆ ಶೇ 20 ರ ರಿಯಾಯಿತಿ.
ರೂ. 108 ಮತ್ತು ಅಂಚೆ ವೆಚ್ಚ ರೂ. 15 ಪ್ರತ್ಯೇಕ



ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, 11, ಕ್ರೆಸೆಂಟ್ ರಸ್ತೆ, ಅಂಚೆ ಪೆಟ್ಟಿಗೆ 5159, ಬೆಂಗಳೂರು-560 001
ದೂರವಾಣಿ / ಫ್ಯಾಕ್ಸ್ : 2203580 / 81 / 82 email : nkp@bgl.vsnl.net.in
ಶಾಖೆಗಳು : ಮಂಗಳೂರು ✆ 441016 :: ಮೈಸೂರು ✆ 444094 :: ಗುಲ್ಬರ್ಗಾ ✆ 24032

Printed by R. S. Rajaram at Navakarnataka Printers, No. 167 & 168, 10th Main, III Phase, Peenya Industrial Area, Bangalore-560 058 and Published ... Publications (P) Ltd., Embassy Centre, Crescent Road, P. B. 5159, Bangalore-560 001. Chief Editor : Dr. G. Ramakrishna